ಜುಲೈ 2017 ಸಂಚಿಕೆ – 12 ಸಂಪುಟ – 32

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : kannada-yojana@gov.in

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .................... 2
ಹಿರಿಯರಿಗೆ ಸಾಮಾಜಿಕ ಭದ್ರತೆ .................... 3
* **ಪ್ರೊ. ಸುಮತಿ ಕುಲಕರ್ಣಿ**
ಸರ್ವರಿಗೂ ಆರೋಗ್ಯ .................... 8
* **ಪ್ರೊ. ಕೆ. ಸೀತಾ ಪ್ರಭು**
ವಿಶೇಷ ಚೇತನರ ಸಶಕ್ತೀಕರಣ .................... 12
* **ಸಂಧ್ಯಾ ಲಿಮಯೆ**
ರೈತರ ಕಲ್ಯಾಣ : ವಸ್ತುನಿಷ್ಠ ದೃಷ್ಟಿ .................... 18
* **ನೀಲಬ್ಜ ಘೋಷ್**
ಜೀವನದ ದ್ವಿತೀಯಾರ್ಧಕ್ಕೆ ರಕ್ಷಣೆ .................... 22
* **ಡಾ. ಬದ್ರಿ ಸಿಂಗ್ ಭಂಡಾರಿ**
ಸಾಮಾಜಿಕ ಭದ್ರತೆ : ಜಾಗತಿಕ ಚಿತ್ರಣ .................... 28
* **ಚಂದ್ರಕಾಂತ್ ಲಹರಿಯಾ**
ಬಡವರಿಗೆ ನೆರವು .................... 38
* **ಊರ್ಮಿ ಗೋಸ್ವಾಮಿ**
ಆಹಾರ ನೀತಿ : ಪೌಷ್ಟಿಕಾಂಶದ ಕೃಷಿ .................... 41
* **ಡಾ. ಮೌಸಮಿ ದಾಸ್**
ಮಧ್ಯಾಹ್ನದ ಬಿಸಿ ಊಟ ಯೋಜನೆ .................... 46
* **ಕಿರಣ ಭಟ್ಟಿ**
ಅಸಂಘಟಿತ ಕ್ಷೇತ್ರದ ಸವಾಲುಗಳು .................... 49
* **ಡಾ. ರೂಮಾ ಘೋಷ್**
ಉದ್ದಿಮೆಗಳ ಸಾಮಾಜಿಕ ಹೊಣೆಗಾರಿಕೆ .................... 52
* **ಜತೀಂದರ್**
ಎನ್‌ಪಿಎಸ್–ಸ್ವಾವಲಂಬನ–ಅಟಲ್ ಪಿಂಚಣಿ ಯೋಜನೆ ....... 55
ಮನ್ ಕೀ ಬಾತ್ .................... 59
ವಾಣಿಜ್ಯ ಸಂಸ್ಥೆಗಳ ಸಾಮಾಜಿಕ ಜವಾಬ್ದಾರಿ .................... 65
* **ಎಸ್.ಆರ್. ವಿಜಯಶಂಕರ**
ವಾರ್ತಾ ವಿಶೇಷ .................... 70
ನಿಮಗಿದು ತಿಳಿದಿದೆಯೇ? .................... 72

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**

*Log on to*
http://publicationsdivision.nic.in/,
*in collaboration with* bharatkosh.gov.in

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

# ಯೋಜನಾ

ಮುಖ್ಯ ಸಂಪಾದಕರ ಲೇಖನಿಯಿಂದ

## ಸಂಪಾದಕೀಯ




**ಭಾ**ರತದ ಜನಸಂಖ್ಯಾ ಬಾಹುಳ್ಯದ ಲಾಭ / ಪ್ರಯೋಜನ ಪಡೆಯುವ ಬಗ್ಗೆ ಚರ್ಚೆ, ವಿಚಾರ ವಿನಿಮಯ ಎಲ್ಲೆಡೆ ನಡೆದಿದೆ. ಬೆಳೆಯುತ್ತಿರುವ ಯುವ ಜನಸಂಖ್ಯೆ, ಭಾರತವನ್ನು ವಿಶ್ವದ ಆರ್ಥಿಕ ನಾಯಕ ಸ್ಥಾನಕ್ಕೆ ಹೇಗೆ ಮೇಲೇರಿಸಬಹುದು ಎಂಬುದರಿಂದ ಹಿಡಿದು ಸರಿಯಾದ ಉದ್ಯೋಗಾವಕಾಶ ಇಲ್ಲದಿದ್ದರೆ ಇದೇ ಯುವಜನಸಂಖ್ಯೆ ಆರ್ಥಿಕತೆಗೆ ಹೊರೆಯಾಗಬಲ್ಲದು ಎಂಬ ಅಂಶದವರೆಗೂ ಈ ಚರ್ಚೆ ವ್ಯಾಪಿಸಿದೆ.

ಯುವ ಜನಸಂಖ್ಯೆಯ ಲಾಭ ಪಡೆಯಬೇಕೆನ್ನುವ ಭರಾಟೆಯ ಮಧ್ಯೆ ನಮ್ಮ ಯೋಜಕರು, ಅರ್ಥಶಾಸ್ತ್ರಜ್ಞರು, ಸಾಮಾಜಿಕ ಚಿಂತಕರು ಗಮನದಲ್ಲಿಡಬೇಕಾದ ಮತ್ತೊಂದು ಅಂಶವೆಂದರೆ, ಬೆಳೆಯುತ್ತಿರುವ ಹಿರಿಯರ ಸಂಖ್ಯೆ. 2026ರ ವೇಳೆಗೆ ಭಾರತದಲ್ಲಿ ವೃದ್ಧರ ಸಂಖ್ಯೆ 17.3 ಕೋಟಿ ತಲುಪುವುದೆಂದು ಅಂದಾಜಿಸಲಾಗಿದೆ. ಇವರಲ್ಲಿ ಮಹಿಳೆಯರು, ಅವಕಾಶ ವಂಚಿತರು ಮತ್ತು ಬಡವರ ಸಂಖ್ಯೆಯೆ ಹೆಚ್ಚಿದ್ದು, ಇವರಿಗೆ ಆರ್ಥಿಕ ಮತ್ತು ಮಾನಸಿಕ ಬೆಂಬಲದ ಅಗತ್ಯವಿರುತ್ತದೆ. ಇದಲ್ಲದೆ ಮಹಿಳೆಯರು, ವಿಶೇಷ ಚೇತನರು, ಅವಕಾಶ ವಂಚಿತರು, ಅಸಂಘಟಿತ ಕಾರ್ಮಿಕರು ಮೊದಲಾದವರು ಜೀವನ ನಿರ್ವಹಣೆಗೆ ಸರ್ಕಾರದ ಮೇಲೆ ಅವಲಂಬಿತರಾಗಿರುತ್ತಾರೆ. ಸಮಾಜದ ಈ ದುರ್ಬಲ ವರ್ಗದವರಿಗೆಲ್ಲ ಸಾಮಾಜಿಕ ಭದ್ರತೆ, ಒಂದು ರೀತಿಯ ರಕ್ಷಾ ಕವಚವಾಗಿದೆ. ಅದೃಷ್ಟವಶಾತ್ ನಮ್ಮ ಸಂವಿಧಾನ ನಿರೂಪಕರು ಸಂವಿಧಾನದ 43ನೇ ಕಲಮಿನಡಿ, ಜನಸಂಖ್ಯೆಯ ವಿವಿಧ ವಿಭಾಗಗಳ ಜನತೆಗೆ ಸಾಮಾಜಿಕ ಭದ್ರತೆ ಒದಗಿಸಲು ಅವಕಾಶ ಕಲ್ಪಿಸಿದ್ದಾರೆ. ಈ ಕಲಮಿನ ಸ್ಫೂರ್ತಿ ಆಶೋತ್ತರಗಳನ್ನು ಸರ್ಕಾರ ಪಾಲಿಸುತ್ತಲೇ ಬಂದಿದೆ.

ಇಂದಿರಾಗಾಂಧಿ ವೃದ್ಧಾಪ್ಯ ಪಿಂಚಣಿ ಯೋಜನೆ ಮತ್ತು ಇಂದಿರಾಗಾಂಧಿ ರಾಷ್ಟ್ರೀಯ ವಿಧವಾ ಪಿಂಚಣಿ ಯೋಜನೆಗಳು ದುರ್ಬಲ ವರ್ಗದವರಿಗೆ ಸಾಮಾಜಿಕ ಭದ್ರತೆ ಒದಗಿಸುತ್ತವೆ. ಸೇವಾನಿವೃತ್ತಿ ನಂತರ ಪಿಂಚಣಿ ದೊರಕುವುದು ಸರ್ಕಾರಿ ಸೇವೆಯ ಆಕರ್ಷಕ ಅಂಶವಾಗಿದೆ. ಆದರೆ ಖಾಸಗಿ ಕ್ಷೇತ್ರ ಸೇವೆಗಳಲ್ಲಿ ಈ ಸೌಲಭ್ಯ ಇಲ್ಲ. ಖಾಸಗಿ ಕ್ಷೇತ್ರದ ಉದ್ಯೋಗಿಗಳು ಸೇವಾ ನಿವೃತ್ತಿ ನಂತರ ತಮ್ಮ ಅವಶ್ಯಕತೆಗಳಿಗಾಗಿ ತಮ್ಮ ಉಳಿತಾಯದ ಹಣವನ್ನೇ ಅವಲಂಬಿಸಬೇಕಾಗಿದೆ. ಮಕ್ಕಳ ಶಿಕ್ಷಣ, ಮದುವೆಗಳಂತಹ ವೆಚ್ಚಗಳು, ಉಳಿತಾಯದ ಹಣದಲ್ಲಿ ಬಹುತೇಕ ಮೊತ್ತವನ್ನು ಕಬಳಿಸಿದರೆ ಆರೋಗ್ಯ ಮತ್ತು ದಿನ ನಿತ್ಯದ ಖರ್ಚುಗಳು ಜೀವನವನ್ನೇ ದುರ್ಭರಗೊಳಿಸುತ್ತವೆ. ಇಂತಹ ಸಮಸ್ಯೆಗಳನ್ನು ನೀಗಲು, ನಿಗದಿತ ಆದಾಯ ಖಾತರಿಪಡಿಸಲು ಸರ್ಕಾರ ರಾಷ್ಟ್ರೀಯ ಪಿಂಚಣಿ ಯೋಜನೆ, ಅಟಲ್ ಪಿಂಚಣಿ ಯೋಜನೆ, ಸ್ವಾವಲಂಬನೆ ಮೊದಲಾದ ಕಾರ್ಯಕ್ರಮಗಳನ್ನು ಆರಂಭಿಸಿದೆ.

ಕೃಷಿ ಕ್ಷೇತ್ರ, ಸಕಾಲದಲ್ಲಿ ಸೂಕ್ತ ಪ್ರಮಾಣದ ಮಳೆ ನೀರಿನ ಲಭ್ಯತೆ, ಕೀಟ ಮುಕ್ತ ಪರಿಸರ – ಹೀಗೆ ಹಲವಾರು ಅಂಶಗಳನ್ನು ಅವಲಂಬಿಸಿದ್ದು ವ್ಯವಸಾಯ ಒಂದು ರೀತಿಯಲ್ಲಿ ಅನೇಕ ಅಸ್ಥಿರತೆಗಳಿಂದ ಕೂಡಿದೆ. ಆರ್ಥಿಕ ಸ್ಥಿರತೆಗೆ ಕೃಷಿಕರ ಕಲ್ಯಾಣ ಅಗತ್ಯವೆಂಬುದನ್ನು ಮನಗಂಡ ಸರ್ಕಾರ ರೈತರಿಗೆ ಬೀಜಕೊಳ್ಳಲು, ಗೊಬ್ಬರ, ಮೇವು ಖರೀದಿ ಮೊದಲಾದ ಚಟುವಟಿಕೆಗಳಿಗೆ ಸಹಾಯ ಮಾಡುತ್ತದೆ. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ, ಕೃಷಿ ಸಿಂಚಾಯಿ ಯೋಜನೆ, ಕಿಸಾನ್ ಸಾಲ ಚೀಟಿ ಮೂಲಕ ನೆರವಾಗುತ್ತಿದೆ. ಅನ್ನದಾತ ರೈತರಿಗೆ ಈ ಯೋಜನೆಗಳು ಸಾಕಷ್ಟು ಭದ್ರತೆ ಒದಗಿಸುತ್ತವೆ. ಮತ್ತೊಂದು ವಿಚಾರ, ಆಹಾರ ಭದ್ರತೆ – ಅಂದರೆ ಮಾರುಕಟ್ಟೆ ದರದಲ್ಲಿ ಧಾನ್ಯ, ಕಾಳು, ಬೇಳೆ ಕೊಳ್ಳಲಾಗದ ಲಕ್ಷಾಂತರ ಜನರಿಗೆ ಇವು ತಲುಪುವಂತೆ ಖಾತರಿಪಡಿಸುವುದು. ಮೂಲಭೂತವಾದ ಆಹಾರ ಧಾನ್ಯಗಳು ಧನ ಸಹಾಯದ ಕೈಗೆಟುಕುವ ಬೆಲೆಯಲ್ಲಿ ಜನರಿಗೆ ತಲುಪುವಂತೆ ಮಾಡಲು ಸಾರ್ವಜನಿಕ ವಿತರಣಾ ವ್ಯವಸ್ಥೆ ಆರಂಭಿಸಲಾಯಿತು. ಈಗ ಡಿಬಿಟಿ ಸಂಪರ್ಕ ಕಲ್ಪಿಸುವ ಮೂಲಕ ಅಗತ್ಯವಿರುವ ನೈಜ ವ್ಯಕ್ತಿಗೆ ಈ ವ್ಯವಸ್ಥೆಯ ಲಾಭ ದೊರೆಯುವಂತೆ ಮಾಡಲಾಗಿದೆ.

ವಿಶೇಷ ಚೇತನರು, ಮಹಿಳೆಯರು, ಅವಕಾಶ ವಂಚಿತರು, ಅಸಂಘಟಿತ ವರ್ಗದವರಿಗಾಗಿ ಸರ್ಕಾರ ವಿವಿಧ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ವಿಶೇಷ ಚೇತನರಿಗೂ ಕೊಡುಗೆ ನೀಡಲು ಅವಕಾಶ ಕಲ್ಪಿಸುವಂತೆ – ಒಳಗೊಂಡ ಭಾರತ ಕ್ರಮ, ಅಲ್ಪಸಂಖ್ಯಾತರು ಮತ್ತು ದುರ್ಬಲ ವರ್ಗದವರಿಗಾಗಿ ನಯೀ ಮಂಜಿಲ್, ಉಸ್ತಾದ್, ನಯೀ ರೋಶನಿ ಯೋಜನೆಗಳನ್ನು ಆರಂಭಿಸಲಾಗಿದೆ. ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಸಾಮಾಜಿಕ ಭದ್ರತೆ ಕುರಿತಾದ ನೀತಿ ಸಂಹಿತೆಯೊಂದನ್ನು ತರಲು ಸರ್ಕಾರ ಉದ್ದೇಶಿಸಿದೆ. ಹೆಣ್ಣು ಮಗುವಿನ ಶಿಕ್ಷಣ – ಭದ್ರತೆಗಾಗಿ ಬೇಟಿ–ಬಚಾವೊ, ಬೇಟಿ ಪಢಾವೊ, ಸುಕನ್ಯಾ ಸಮೃದ್ಧಿ ಯೋಜನೆಗಳನ್ನು ತರಲಾಗಿದೆ. ಗರ್ಭಿಣಿಯರ ಮತ್ತು ತಾಯಂದಿರಿಗೆ ನೆರವಾಗುವ ತಾಯ್ತನ ಪ್ರಯೋಜನ ಯೋಜನೆಗಳಿಗೆ ಸಚಿವ ಸಂಪುಟದ ಅನುಮೋದನೆ ದೊರೆತಿದೆ. ದುರ್ಬಲ ವರ್ಗದವರಿಗೆ ಆರೋಗ್ಯ ಭದ್ರತೆ ಒದಗಿಸಲು ಸರ್ಕಾರ ಆರೋಗ್ಯ ವಿಮಾ ಯೋಜನೆಗಳನ್ನು ಆರಂಭಿಸಿದೆ.

ಜನರ ಸಮಸ್ಯೆಗಳನ್ನು ಅಲಕ್ಷಿಸಲೇಬಾರದು ಎಂಬುದು ಪ್ರಜಾಪ್ರಭುತ್ವದ ಅಂತರ್ಗತ ತತ್ವವಾಗಿದೆ. ದುರ್ಬಲ ವರ್ಗದವರ ಬವಣೆಗಳಿಗೆ ಸ್ಪಂದಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಹೀಗಾಗಿ ಸಾಮಾಜಿಕ ಭದ್ರತೆ ಉತ್ತಮ ಆಡಳಿತದ ಅತ್ಯಗತ್ಯ ಲಕ್ಷಣಗಳಲ್ಲೊಂದು. ಜಾನ್‌ಎಫ್‌ಕೆನಡಿ ಹೇಳುವಂತೆ.... ಬಹಳಷ್ಟು ಸಂಖ್ಯೆಯಲ್ಲಿರುವ ಬಡಜನರಿಗೆ ಸಹಾಯ ಮಾಡಲಾಗದ ಮುಕ್ತ ಸಮಾಜಕ್ಕೆ ಕೆಲವೇ ಸಂಖ್ಯೆಯಲ್ಲಿರುವ ಶ್ರೀಮಂತರನ್ನು ರಕ್ಷಿಸಲಾಗುವುದಿಲ್ಲ. ಬಡತನ ನಿವಾರಣೆಯಲ್ಲಿ ನಂಬಿಕೆಯಿರುವ ಆಡಳಿತ / ಸರ್ಕಾರ ದುರ್ಬಲರ ಸಾಮಾಜಿಕ ಭದ್ರತೆಗಾಗಿ ಸೂಕ್ತ ನೀತಿ ನಿರೂಪಿಸಿ ಅರ್ಥವತ್ತಾಗಿ ಜಾರಿಗೊಳಿಸುತ್ತದೆ. ❑

# ಹಿರಿಯರಿಗೆ ಸಾಮಾಜಿಕ ಭದ್ರತೆ

* ಪ್ರೊ. ಸುಮತಿ ಕುಲಕರ್ಣಿ



ಬಡ ಹಿರಿಯ ನಾಗರಿಕರಿಗೆ,
ನೆರವನ್ನೇ ಅವಲಂಬಿಸಿದವರಿಗೆ
ಮತ್ತು
ಭದ್ರತೆಗಾಗಿ
ಯಾವುದೇ ಆಸ್ತಿ ಹೊಂದಿರದ
ವ್ಯಕ್ತಿಗಳಿಗೆ
ಭದ್ರತೆ ಒದಗಿಸುವುದು
ಬಹಳ ಮುಖ್ಯವಾಗುತ್ತದೆ.
ಸೂಕ್ತವಾದ ಫಲಾನುಭವಿಗಳಿಗೆ
ಈ ಯೋಜನೆಗಳ ಫಲವನ್ನು
ಸರಿಯಾಗಿ ತಲುಪಿಸುವಲ್ಲಿ,
ಫಲಾನುಭವಿಗಳನ್ನು
ಗುರುತಿಸುವುದು,
ಮಾನದಂಡಗಳು,
ಸುಲಭವಾಗಿ
ಅರ್ಜಿ ಸಲ್ಲಿಸುವುದು ಮತ್ತು
ದಕ್ಷವಾಗಿ
ಕಾರ್ಯಾಚರಣೆ ನಡೆಸುವುದು
ದೊಡ್ಡ ಸವಾಲಾಗಿದೆ.

ತಾತ್ಕಾಲಿಕ ಅಥವಾ ದೀರ್ಘಕಾಲದ ಸಮಸ್ಯೆಗಳಿಂದ ದುಡಿಯಲಾಗದೆ ಜೀವನ ಸಾಗಿಸಲು ಸಾಧ್ಯವಾಗದವರಿಗೆ ನೆಮ್ಮದಿಯ ಬದುಕನ್ನು ಕಲ್ಪಿಸುವುದೇ ಸಾಮಾಜಿಕ ಭದ್ರತೆಯ ಉದ್ದೇಶ. ಹೆಚ್ಚು ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಸಾಮಾಜಿಕ ಭದ್ರತೆಯನ್ನು ಒದಗಿಸುವುದು ಸರ್ಕಾರಗಳಿಗೆ ಹೊಣೆಗಾರಿಕೆಯ ಒಂದು ಭಾಗವಾಗಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ವ್ಯಾಪಕವಾದ ನಿರುದ್ಯೋಗ ಮತ್ತು ತೀರಾ ಬಡತನಗಳು ಸಮಾಜದ ಒಂದು ಭಾಗವಾಗಿರುವುದರಿಂದ ಅರ್ಹರಾದವರಿಗೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಒದಗಿಸುತ್ತಿರುವ ಪ್ರಮಾಣದಲ್ಲೇ ಸಾಮಾಜಿಕ ಭದ್ರತೆಯನ್ನು ಒದಗಿಸುವುದು ಬಹಳ ಕಷ್ಟದ ಕೆಲಸವಾಗುತ್ತದೆ.

ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಾಮಾಜಿಕ ಭದ್ರತೆ ಒದಗಿಸುವುದನ್ನು ಹೆಚ್ಚು ಅಭಿವೃದ್ಧಿ ಹೊಂದಿದ ದೇಶಗಳ ಸಾಮಾಜಿಕ ಭದ್ರತೆಗೆ ಹೋಲಿಕೆ ಮಾಡುವುದು ಸೂಕ್ತವಲ್ಲ. ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ಸಹಾ ಮಕ್ಕಳನ್ನು ಪಡೆಯುವ ಪ್ರಮಾಣ (ದುಡಿಯುವ ಕೈಗಳ) ಕಡಿಮೆಯಾಗುತ್ತಾ ಹಿರಿಯ ನಾಗರಿಕರ ಸಂಖ್ಯೆ ಹೆಚ್ಚುತ್ತಿರುವುದರಿಂದ ಸಾರ್ವಜನಿಕ ಪಿಂಚಣಿ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗುವುದು ಕಷ್ಟವಾಗುತ್ತಿದೆ. 21 ನೇ ಶತಮಾನದ ಮಧ್ಯದ ವೇಳೆಗೆ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಮೂರನೇ ಒಂದು ಭಾಗಕ್ಕಿಂತ ಹೆಚ್ಚಿನ ಜನಸಂಖ್ಯೆ 60 ವರ್ಷ ದಾಟಿರುತ್ತದೆ.

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ, ತೀರ ಬಡತನ, ನಿರುದ್ಯೋಗ, ಅರೆಬರೆ ಉದ್ಯೋಗ ಮತ್ತು ಅಸಂಘಟಿತ ವಲಯ ಹೆಚ್ಚಾಗಿರುವುದರಿಂದ ಸಾಮಾಜಿಕ ಭದ್ರತೆಯು ತನ್ನದೇ ಆದ ವಿಶಿಷ್ಟವಾದ ಆಯಾಮವನ್ನು ಪಡೆದುಕೊಂಡಿದೆ. ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವೇಗವಾಗಿ ವೃದ್ಧಿಯಾಗುತ್ತಿರುವ ಹಿರಿಯ ನಾಗರಿಕರ ಸಂಖ್ಯೆ ವೇಗವಾಗಿ ಹೆಚ್ಚುತ್ತಿರುವುದು ಸಾಮಾಜಿಕ ಭದ್ರತೆ ಒದಗಿಸುವುದು ಹೊಸ ಸಮಸ್ಯೆಯಾಗಿ ಪರಿಣಮಿಸುತ್ತಿದೆ. ಇದಕ್ಕೆ ಕಾರಣ ಹಿರಿಯ ನಾಗರಿಕರ ಸಂಖ್ಯೆ ಶೇಕಡಾ 7 ರಿಂದ ಶೇಕಡಾ 14 ಹೆಚ್ಚಿರುವುದೇ ಆಗಿದೆ. ಈ ಪ್ರಮಾಣದ ಹೆಚ್ಚಳಕ್ಕೆ ಯೂರೋಪಿನ ರಾಷ್ಟ್ರಗಳಿಗೆ 100 ರಿಂದ 120 ವರ್ಷಗಳು ಹಿಡಿದಿದ್ದರೆ, ಭಾರತ ಮತ್ತು ಚೀನಾ ಸೇರಿದಂತೆ ಏಶಿಯಾದ ದೇಶಗಳಲ್ಲಿ 40 ವರ್ಷಗಳಲ್ಲಿ ಆಗಿದೆ.

## 1) ಭಾರತದಲ್ಲಿ ಹಿರಿಯ ನಾಗರಿಕರ ಸಾಮಾಜಿಕ ಭದ್ರತೆಯ ಸ್ವರೂಪ

ಭಾರತದ ಜನಸಂಖ್ಯೆ ವಿಶ್ವದ ಜನಸಂಖ್ಯೆಯ ಶೇಕಡಾ 20 ರಷ್ಟಿದ್ದು, ಇದರಲ್ಲಿ ವಿಶ್ವದ ಬಡವರ ಸಂಖ್ಯೆಯಲ್ಲಿ ಮೂರನೇ ಒಂದು ಭಾಗವನ್ನು ಹೊಂದಿದೆ. ಇದರ ಜೊತೆಗೆ ವಿಶ್ವದ ಹಿರಿಯ ನಾಗರಿಕರ ಸಂಖ್ಯೆಯಲ್ಲಿ ಶೇಕಡಾ 12ಕ್ಕಿಂತ ಹೆಚ್ಚಿನ ಪಾಲನ್ನು ಭಾರತ ಹೊಂದಿದೆ. ನಮ್ಮಲ್ಲಿ ಇತ್ತೀಚಿನವರೆಗೆ ಕುಟುಂಬ ಮತ್ತು ವಯಸ್ಕ ಮಕ್ಕಳು ಹಿರಿಯರಿಗೆ ಭದ್ರತೆಯನ್ನು ಒದಗಿಸುವ ವ್ಯವಸ್ಥೆ ಇತ್ತು. ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆ, ಅವಿಭಕ್ತ

* ಮಾಜಿ ನಿರ್ದೇಶಕರು, ಅಭಿವೃದ್ಧಿ ಅಧ್ಯಯನ, ಜನಸಂಖ್ಯಾ ವಿಜ್ಞಾನ ಕುರಿತ ಅಂತಾರಾಷ್ಟ್ರೀಯ ಸಂಸ್ಥೆ, ಮುಂಬಯಿ. E-mail : Sumati2610@gmail.com

ಕುಟುಂಬ ನಿಧಾನವಾಗಿ ನಶಿಸುತ್ತಿರುವುದು, ಮಹಿಳೆಯರು ಮನೆಯಿಂದ ಹೊರಗೆ ದುಡಿಯಲು ತೊಡಗಿಕೊಂಡಿರುವುದು, ಯುವಕರು ದುಡಿಯಲು ಊರು ಕೇರಿ ಬಿಟ್ಟು ದೂರದ ಸ್ಥಳಗಳಿಗೆ ಹೋಗುತ್ತಿರುವುದು ಹಿರಿಯ ನಾಗರಿಕರಿಗೆ ಕುಟುಂಬ ವ್ಯವಸ್ಥೆಯಲ್ಲಿ ಸುರಕ್ಷತೆ ಮತ್ತು ಭದ್ರತೆ ದೊರೆಯುವುದು ಕಷ್ಟವಾಗುತ್ತಿದೆ. ಬಡ ಕುಟುಂಬಗಳ ಹಿರಿಯರಿಗೆ ಹೆಚ್ಚಿನ ಆರೋಗ್ಯ ಸಮಸ್ಯೆಗಳು ಕಾಡುತ್ತಿದ್ದು, ದುಡಿಯಲು ಸಾಧ್ಯವಾಗದೆ, ಉಳಿತಾಯಕ್ಕೆ ಹೆಚ್ಚಿನ ಆಸ್ಪದ ಇಲ್ಲದಿರುವುದು ಅವರ ಸ್ಥಿತಿಯನ್ನು ಶೋಚನೀಯವನ್ನಾಗಿಸಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ವರ್ಗದ ಹಿರಿಯ ನಾಗರಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ಕೆಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ. ಆದರೆ ಇದನ್ನು ಅಭಿವೃದ್ಧಿ ಹೊಂದಿದ ದೇಶಗಳು ಒದಗಿಸುತ್ತಿರುವ ಭದ್ರತೆಗಳಿಗೆ ಹೋಲಿಸಲು ಸಾಧ್ಯವಿಲ್ಲ.

### 2) ಬಿಕೆಪಿಎಐ ಸಮೀಕ್ಷೆ – ಬಿಕೆಪಿಎಐ (ಹಿರಿಯರ ಕುರಿತಾದ ಸಂವೇದನಾ ಜ್ಞಾನ ನಿರೂಪಣೆ)

ದೇಶದಲ್ಲಿ ಹಿರಿಯ ನಾಗರಿಕರ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸುವ ದೃಷ್ಟಿಯಿಂದ ಇತ್ತೀಚೆಗೆ ಬಿಕೆಪಿಎಐ ದೆಹಲಿಯ ಯುಎನ್‌ಎಫ್‌ಪಿಎ ಮತ್ತು ಆರ್ಥಿಕಾಭಿವೃದ್ಧಿಯ ಸಂಸ್ಥೆ (ಐಇಜಿ), ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆ (ಐಎಸ್‌ಇಸಿ), ಮತ್ತು ಮುಂಬೈನ ಸಾಮಾಜಿಕ ವಿಜ್ಞಾನಗಳ ಟಾಟಾ ಇನ್‌ಸ್ಟಿಟ್ಯೂಟ್ (ಟಿಐಎಸ್‌ಎಸ್) ಒಟ್ಟಿಗೆ ಸೇರಿ ಹಿರಿಯ ನಾಗರಿಕರ ಸ್ಥಿತಿಗತಿ ಬಗ್ಗೆ 2011 ರ ಮೇ–ಸೆಪ್ಟೆಂಬರ್ ಅವಧಿಯಲ್ಲಿ ಸಮೀಕ್ಷೆ ನಡೆಸಲಾಯಿತು. ಈ ಸಮೀಕ್ಷೆಗೆ ದೇಶದ ಸರಾಸರಿಗಿಂತ ಹೆಚ್ಚಿನ ಪ್ರಮಾಣದಲ್ಲಿ



ಹಿರಿಯ ನಾಗರಿಕರಿರುವ ರಾಜ್ಯಗಳಾದ ಹಿಮಾಚಲ ಪ್ರದೇಶ, ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ, ಮಹಾರಾಷ್ಟ್ರ, ಕೇರಳ ಮತ್ತು ತಮಿಳುನಾಡುಗಳನ್ನು ಆಯ್ಕೆ ಮಾಡಿಕೊಂಡು 8329 ಕುಟುಂಬಗಳ 9852 ಹಿರಿಯ ನಾಗರಿಕರ ಸಮೀಕ್ಷೆ ನಡೆಸಲಾಯಿತು.

ಈ ಸಮೀಕ್ಷೆಯಲ್ಲಿ ದೊರೆತಿರುವ ಮಾಹಿತಿಗಳ ಆಧಾರದಲ್ಲಿ

ಎ) ಹಿರಿಯ ನಾಗರಿಕರಿಗೆ ಸಾಮಾಜಿಕ ಭದ್ರತೆಯ ಆಳ ಮತ್ತು ಅಗಲ

ಬಿ) ಸಾಮಾಜಿಕ ಭದ್ರತೆ ಒದಗಿಸುವಲ್ಲಿ ಸರ್ಕಾರ ತೆಗೆದುಕೊಂಡಿರುವ ಪ್ರಮುಖ ಕಾರ್ಯಕ್ರಮಗಳು,

ಸಿ) ಭಾರತ ಸರ್ಕಾರ ಜಾರಿಗೆ ತಂದಿರುವ ಎರಡು ಪಿಂಚಣಿ ಯೋಜನೆಗಳ ಬಗ್ಗೆ ಜಾಗೃತಿ ಮತ್ತು ಅವುಗಳ ಬಳಕೆ,

ಡಿ) ಹಿರಿಯ ನಾಗರಿಕರು ಸೀಮಿತ ಪ್ರಮಾಣದಲ್ಲಿ ಈ ಯೋಜನೆಗಳನ್ನು ಬಳಸಿಕೊಳ್ಳಲು ಕಾರಣಗಳು,

ಇ) ಹಿರಿಯ ನಾಗರಿಕರಿಗೆ ಸಾರ್ವಜನಿಕ ಪಿಂಚಣಿ ಯೋಜನೆ ಅಳವಡಿಸುವಲ್ಲಿರುವ ಸಾಧ್ಯಾಸಾಧ್ಯತೆಗಳ ಪರಿಶೀಲನೆ

ಬಗ್ಗೆ ಈ ಲೇಖನದಲ್ಲಿ ಪರಾಮರ್ಶಿಸಲಾಗಿದೆ.

### 3) ಭಾರತದಲ್ಲಿ ಸಾಮಾಜಿಕ ಭದ್ರತೆಯ ಅಗಾಧತೆ

**ಎ) ಜನಗಣತಿಯ ಪ್ರಕಾರ**

ದೇಶದಲ್ಲಿ ನಡೆದ 2011 ರ ಜನಗಣತಿ ಪ್ರಕಾರ 60 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟವರ ಸಂಖ್ಯೆ 10.4 ಕೋಟಿ, ಈ ಸಂಖ್ಯೆ 2026 ರ ವೇಳೆಗೆ 17.3 ಕೋಟಿ ತಲುಪುತ್ತದೆ. 2000 ಮತ್ತು 2050 ರ ಅವಧಿಯಲ್ಲಿ ದೇಶದಲ್ಲಿ ಹಿರಿಯ ನಾಗರಿಕರ ಪ್ರಮಾಣ ಶೇಕಡಾ 360 ರಷ್ಟು ಹೆಚ್ಚಾಗುತ್ತದೆ.

2001 ರಲ್ಲಿ 60 ವರ್ಷ ವಯಸ್ಸಿನ ಮೇಲ್ಪಟ್ಟ ಒಬ್ಬ ವ್ಯಕ್ತಿಗೆ 15–59 ವರ್ಷ ವಯಸ್ಸಿನ 8.4 ಜನರಿದ್ದರೆ, 2011 ರಲ್ಲಿ ಈ ಪ್ರಮಾಣ7 ಕ್ಕೆ ಇಳಿದಿದೆ. ಮತ್ತು 2016 ರ ವೇಳೆಗೆ 5.2 ಕ್ಕೆ ಇಳಿಯಲಿದೆ. 2050 ರ ವೇಳೆಗೆ 60 ವರ್ಷ ವಯಸ್ಸಿನ ಪುರುಷರಿಗಿಂತ ಅದೇ ವಯಸ್ಸಿನ ಮಹಿಳೆಯರ ಸಂಖ್ಯೆ 180.4



ಲಕ್ಷ ದಷ್ಟು ಹೆಚ್ಚಾಗುತ್ತದೆ. 60–64 ವರ್ಷ ವಯಸ್ಸಿನ ವಿಧವೆಯರ ಸಂಖ್ಯೆ 445 ಲಕ್ಷ ದಿಂದ 868 ಲಕ್ಷಕ್ಕೆ ಹೆಚ್ಚಾಗುತ್ತದೆ. 60–64 ವರ್ಷಕ್ಕಿಂತ ಮೇಲಿರುವ 10 ಪುರುಷರಲ್ಲಿ 5 ಮಂದಿ ಮತ್ತು 80 ವರ್ಷಕ್ಕಿಂತ ಹೆಚ್ಚಿನವರಲ್ಲಿ ಮೂರನೇ ಒಂದು ಭಾಗ ವಿಧುರರಾಗಿರುತ್ತಾರೆ.

**ಬಿ) ಬಿಕೆಪಿಎಐ ಸಮೀಕ್ಷೆ ಪ್ರಕಾರ ಹಿರಿಯ ನಾಗರಿಕರ ಸಮಸ್ಯೆಗಳು ಮತ್ತು ಅದರ ಸ್ವರೂಪ**

ಹಿರಿಯ ನಾಗರಿಕರಲ್ಲಿ ಶೇಕಡಾ 45 ರಷ್ಟು ಮಂದಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಂದ ಬಂದವರು ಅಥವಾ ಅಂತ್ಯೋದಯ ಕಾರ್ಡು ಹೊಂದಿದ ಕುಟುಂಬದವರಾಗಿರುತ್ತಾರೆ. ಇವರಲ್ಲಿ ಮೂರನೇ ಒಂದು ಭಾಗ ತಿಂಗಳಿಗೆ 1000 ರೂಪಾಯಿಗಳಿಗಿಂತ ಕಡಿಮೆ ಖರ್ಚು ಮಾಡುವ ಕುಟುಂಬಗಳಿಗೆ ಸೇರಿರುತ್ತಾರೆ. ಅರ್ಧಕ್ಕಿಂತ ಹೆಚ್ಚು ಜನ ಆರ್ಥಿಕವಾಗಿ ಬೇರೆಯವರ ಮೇಲೆ ಅವಲಂಬಿತರಾಗಿದ್ದಾರೆ. ಶೇಕಡಾ 25 ರಷ್ಟು ಮಂದಿಗೆ ಬೇರೆ ಯಾವುದೇ ಭದ್ರತೆ ಇಲ್ಲದಿರುವುದರಿಂದ ಅವರಿಗೆ ಆರ್ಥಿಕ ಭದ್ರತೆ ಅಗತ್ಯವಾಗಿದೆ. ಈ ಅಂಕಿ ಅಂಶಗಳಿಂದ ತಿಳಿದುಬರುವುದೇನೆಂದರೆ, ಶೇಕಡಾ 40 ರಿಂದ 50 ರಷ್ಟು ಮಂದಿ ಆರ್ಥಿಕವಾಗಿ ದುರ್ಬಲರಾಗಿದ್ದಾರೆ, ಇದರ ಜೊತೆಗೆ ಶೇಕಡಾ 25 ರಷ್ಟು ಮಂದಿ ಆರೋಗ್ಯ ಮಾನದಂಡದ ತೀರಾ ಕೆಳಗಿದ್ದಾರೆ ಮತ್ತು ಅವರಿಗೆ ಯಾವುದೇ ರೀತಿಯ ಆರ್ಥಿಕ ಬೆಂಬಲವಿಲ್ಲದಿರುವುರಿಂದ ಅವರಿಗೆ ನೆರವಿನ ಅಗತ್ಯವಿದೆ ಎಂಬುದು.

ಹಿರಿಯ ಮಹಿಳೆಯರು ಅದರಲ್ಲೂ ವಿಧವೆಯರು ಪುರುಷರಿಗೆ ಹೋಲಿಸಿದರೆ ಆರ್ಥಿಕವಾಗಿ ತೀರಾ ದುರ್ಬಲರಾಗಿದ್ದಾರೆ. ಆದಾಯವಿಲ್ಲವರು (ಪುರುಷರು ಶೇಕಡಾ 26, ಮಹಿಳೆಯರು ಶೇಕಡಾ 59), ಯಾವುದೇ ಆಸ್ತಿ ಇಲ್ಲದವರು (ಪುರುಷರು ಶೇಕಡಾ 11,

ಮಹಿಳೆಯರು ಶೇಕಡಾ 34, ವಿಧವೆಯರು ಶೇಕಡಾ 28, ವಿಧುರರು ಶೇಕಡಾ 14), ಸಂಪೂರ್ಣವಾಗಿ ಬೇರೆಯವರನ್ನು ಆರ್ಥಿಕವಾಗಿ ಅವಲಂಬಿಸಿರುವವರು (ಪುರುಷರು ಶೇಕಡಾ 33, ಮಹಿಳೆಯರು ಶೇಕಡಾ 66), ಇದರಲ್ಲಿ ಒಂದು ಆಶಾದಾಯಕವಾದ ಅಂಶವೇನೆಂದರೆ, ಶೇಕಡಾ 70 ರಷ್ಟು ಹಿರಿಯರು ತಮ್ಮ ವಯಸ್ಕ ಮಕ್ಕಳೊಂದಿಗಿರುವುದು ಮತ್ತು ಕೇವಲ ಶೇಕಡಾ 6 ರಷ್ಟು ಮಾತ್ರ ಒಂಟಿಯಾಗಿ ಬದುಕುತ್ತಿದ್ದು ಅತ್ಯಂತ ಬಡವರಲ್ಲಿ ಶೇಕಡಾ 33 ರಷ್ಟು ಮಂದಿ ಒಬ್ಬಂಟಿಯಾಗಿದ್ದಾರೆ ಅಥವಾ ತಮ್ಮ ಸಂಗಾತಿಯೊಂದಿಗಿದ್ದು ಅವರಿಗೆ ಸಾಮಾಜಿಕ ಭದ್ರತೆ ಹೆಚ್ಚು ಅಗತ್ಯವಿದೆ. ಐದು ಮಂದಿ ಹಿರಿಯರಲ್ಲಿ ಒಬ್ಬರು ಹೇಳುವುದೇನೆಂದರೆ, ಹಿರಿಯರ ವಿಶ್ರಾಂತ ದಿನಗಳಲ್ಲಿ ಸರ್ಕಾರ ಅವರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕೆಂದು ಬಯಸುತ್ತಾರೆ.



### 4) ಸರ್ಕಾರದ ಕ್ರಮಗಳು

ಭಾರತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಿರಿಯ ನಾಗರಿಕರಿಗೆ ಸಾಮಾಜಿಕ ಭದ್ರತೆಯನ್ನು ನಗದು ರೂಪದಲ್ಲಿ ನೀಡುತ್ತಿವೆ. (ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆ (ಐಜಿಎನ್‌ಓಎಪಿಎಸ್) ಇಂದಿರಾ ಗಾಂಧಿ ರಾಷ್ಟ್ರೀಯ ವಿಧವಾ ಪಿಂಚಣಿ ಯೋಜನೆ (ಐಜಿಎನ್‌ಡಬ್ಲ್ಯುಪಿಎಸ್) ವಸ್ತುಗಳ ರೂಪದಲ್ಲಿ (ವಸ್ತುಗಳು ಮತ್ತು ಸೇವೆಗಳ ರೂಪದಲ್ಲಿ ಅಂದರೆ, ಹಿರಿಯರ ರಾಷ್ಟ್ರೀಯ ಯೋಜನೆ (ಎನ್‌ಪಿಹೆಚ್‌ಸಿಇ) ಯಡಿಯಲ್ಲಿ ಆಹಾರ ಭದ್ರತೆ, ಆರೋಗ್ಯ ಸೇವೆಗಳು, ರಿಯಾಯಿತಿಗಳು, ಸೌಲಭ್ಯಗಳು ಮತ್ತಿತರ ಸೇವೆಗಳನ್ನು ವಿವಿಧ ಇಲಾಖೆಗಳು ಒದಗಿಸುತ್ತಿವೆ. ಇದರ ಜೊತೆಗೆ ರಾಜ್ಯ ಸರ್ಕಾರಗಳು ಕಾರ್ಮಿಕ ಕ್ಷೇಮಾಭ್ಯುದಯ ಯೋಜನೆಯಡಿಯಲ್ಲಿ ಕೇರಳ ಮತ್ತು ತಮಿಳುನಾಡು ಸರ್ಕಾರಗಳು ನಿರ್ಗತಿಕರಿಗೆ, ಗಂಡ ಬಿಟ್ಟವರಿಗೆ ಪಿಂಚಣಿ ಯೋಜನೆಗಳು, ಪಶ್ಚಿಮ ಬಂಗಾಳದ ಮಧ್ಯಾಹ್ನದ ಊಟ, ಬ್ರಿದ್ದಾಶ್ರೀ ಮತ್ತು ಸಂಜಭಾಟಿ ಯೋಜನೆಗಳು, ಒಡಿಶಾದ ಮಧುಬಾಬು ಪಿಂಚಣಿ ಯೋಜನೆ, ಮಹಾರಾಷ್ಟ್ರದ ಶ್ರವಣಬಾಲಾ ಪಿಂಚಣಿ ಯೋಜನೆ ಮತ್ತು ಸಂಜಯಗಾಂಧಿ ನಿರ್ಗತಿಕ ಮಹಿಳಾ ಪಿಂಚಣಿ ಯೋಜನೆ, ಪಂಜಾಬಿನ ಅಟ್ಟ ದಲ್ ಯೋಜನೆ ಮತ್ತಿತರ ಕಾರ್ಯಕ್ರಮಗಳು ಜಾರಿಯಲ್ಲಿವೆ. ರಾಜ್ಯಗಳ ಅನೇಕ ಪಿಂಚಣಿ ಯೋಜನೆಗಳನ್ನು ಈಗ ಐಜಿಎನ್‌ಓಎಪಿಎಸ್ ಅಥವಾ ಐಜಿಎನ್‌ಡಬ್ಲ್ಯುಪಿಎಸ್ ಯೋಜನೆಗಳಲ್ಲಿ ವಿಲೀನಗೊಳಿಸಲಾಗಿದೆ.

### ಐಜಿಎನ್‌ಓಎಪಿಎಸ್

ಐಜಿಎನ್‌ಓಎಪಿಎಸ್‌ನ್ನು ಕೇಂದ್ರ ಸರ್ಕಾರ 1995 ರಲ್ಲಿ ಜಿಎನ್‌ಓಎಪಿಎಸ್ ರೂಪದಲ್ಲಿ ಹಿರಿಯ ನಿರ್ಗತಿಕರಿಗೆ ಪ್ರಾರಂಭಿಸಿತು ನಂತರ 2007 ರಲ್ಲಿ ಐಜಿಎನ್‌ಓಎಪಿಎಸ್ ಆಗಿ ಮರು ನಾಮಕರಣ ಮಾಡಲಾಯಿತು.

2011 ರ ಏಪ್ರಿಲ್ ನಲ್ಲಿ 60 ರಿಂದ 79 ವರ್ಷ ವಯಸ್ಸಿನ ಹಿರಿಯರಿಗೆ ಪಿಂಚಣಿಯ ಮೊತ್ತವನ್ನು 200 ರೂಪಾಯಿಗೆ ಮತ್ತು 80 ವರ್ಷಕ್ಕಿಂತ ಹೆಚ್ಚು ವಯಸ್ಸಿನ ಹಿರಿಯರಿಗೆ ಪಿಂಚಣಿಯನ್ನು 500 ರೂಪಾಯಿಗೆ ಹೆಚ್ಚಿಸಲಾಯಿತು. ಈ ಯೋಜನೆಗಳಿಗೆ ಬೇಕಾದ ಎಲ್ಲ ಹಣವನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿ ಹಣವನ್ನು ಬಡತನ ರೇಖೆಗಿಂತ ಕೆಳಗಿರುವ 60 ವರ್ಷಕ್ಕಿಂತ ಮೇಲ್ಪಟ್ಟವರಿಗೆ ವಿತರಿಸಲಾಗುತ್ತದೆ. ಫಲಾನುಭವಿಗಳನ್ನು ಗ್ರಾಮ ಪಂಚಾಯತಿಗಳು ಆಯ್ಕೆ ಮಾಡುತ್ತವೆ. ಪ್ರತಿಯೊಂದು ರಾಜ್ಯಕ್ಕೆ ಎಷ್ಟು ಜನರಿಗೆ ಈ ಯೋಜನೆಯ ಫಲ ದೊರಕಬೇಕು ಎಂಬುದನ್ನು ಕೇಂದ್ರ ಸರ್ಕಾರ ರೂಪಿಸಿದ ಸೂತ್ರದ ಪ್ರಕಾರ ನಿರ್ಧರಿಸಲಾಗುತ್ತದೆ.

2008 ರ ವೇಳೆಗೆ ದೇಶದಲ್ಲಿ ಈ ಯೋಜನೆಗಳ ಮೂಲಕ 65 ಲಕ್ಷ ಹಿರಿಯ ನಾಗರಿಕರು ಫಲಾನುಭವಿಗಳಾಗಿದ್ದರು. 2011 ರ ಹೊಸ ಹಿರಿಯ ನಾಗರಿಕರ ರಾಷ್ಟ್ರೀಯ ನೀತಿಯಂತೆ ಐಜಿಎನ್‌ಓಎಪಿಎಸ್‌ನಲ್ಲಿ ಪಿಂಚಣಿ ಹಣವನ್ನು 1000 ರೂಪಾಯಿಗಳಿಗೆ ಹೆಚ್ಚಿಸಲಾಯಿತು.



### ವಿಧವಾ ಪಿಂಚಣಿ

ಇಂದಿರಾ ಗಾಂಧಿ ರಾಷ್ಟ್ರೀಯ ಪಿಂಚಣಿ ಯೋಜನೆ (ಐಜಿಎನ್‌ಡಬ್ಲ್ಯುಪಿಎಸ್) ಯನ್ನು 2009 ರಲ್ಲಿ ಜಾರಿಗೆ ತರಲಾಗಿದ್ದು, 40 ರಿಂದ 64 (ನಂತರ 40–59 ನಿಗದಿಪಡಿಸಲಾಯಿತು) ವರ್ಷದ ವರೆಗಿನ ವಿಧವೆಯರಿಗೆ ತಿಂಗಳಿಗೆ 200 ರೂಪಾಯಿ ನಿಗದಿಪಡಿಸಲಾಯಿತು. ಈ ಫಲಾನುಭವಿಗಳಿಗೆ 60 ವರ್ಷ ತುಂಬಿದ ನಂತರ ಅವರಿಗೆ ಐಜಿಎನ್‌ಓಎಪಿಎಸ್ ಯೋಜನೆಯಲ್ಲಿ ಪಿಂಚಣಿ ದೊರೆಯುತ್ತದೆ.

### ತಿಳಿವಳಿಕೆ ಮತ್ತು ಬಳಕೆ

ಇಲ್ಲಿ ಮುಖ್ಯವಾದ ಪ್ರಶ್ನೆ ಏಳುವುದು, ಈ ಯೋಜನೆಗಳೆಲ್ಲಾ ಅರ್ಹರಾದ ಫಲಾನುಭವಿಗಳಿಗೆ ಎಷ್ಟರ ಮಟ್ಟಿಗೆ ತಲುಪುತ್ತವೆ ಎಂಬುದು. ಬಿಕೆಪಿಎಐ ಸಮೀಕ್ಷೆ ಪ್ರಕಾರ ಐಜಿಎನ್‌ಓಎಪಿಎಸ್ ಮತ್ತು ಐಜಿಎನ್‌ಡಬ್ಲ್ಯುಪಿಎಸ್ ಯೋಜನೆಗಳ ಬಗ್ಗೆ ಹಿರಿಯ ನಾಗರಿಕರಲ್ಲಿ ಕ್ರಮವಾಗಿ ಶೇಕಡಾ 79 ಮತ್ತು 72 ತಿಳಿವಳಿಕೆ ಇತ್ತು. ಆದರೆ ಐಜಿಎನ್‌ಓಎಪಿಎಸ್‌ರಲ್ಲಿ ಶೇಕಡಾ 13 ರಷ್ಟು ಮಂದಿ ಮತ್ತು ಐಜಿಎನ್‌ಡಬ್ಲ್ಯುಪಿಎಸ್ ಪ್ರಕಾರ ಶೇಕಡಾ 20 ರಷ್ಟು ಪಿಂಚಣಿ ದೊರೆತಿತ್ತು. ಬಡತನ ರೇಖೆಗಿಂತ ಕೆಳಗಿರುವ ಹಿರಿಯ ನಾಗರಿಕರಲ್ಲಿ ಪುರುಷರಲ್ಲಿ ಶೇಕಡಾ 81 ಮತ್ತು ಮಹಿಳೆಯರಲ್ಲಿ ಶೇಕಡಾ 71 ರಷ್ಟು ಮಂದಿಗೆ ಐಜಿಎನ್‌ಓಎಪಿಎಸ್ ಬಗ್ಗೆ ತಿಳಿವಳಿಕೆ ಇದ್ದರೂ ಪುರುಷರಲ್ಲಿ ಶೇಕಡಾ 22 ಮತ್ತು ಮಹಿಳೆಯರಲ್ಲಿ ಶೇಕಡಾ 15 ರಷ್ಟು ಮಂದಿಗೆ ಮಾತ್ರ ಪಿಂಚಣಿ ದೊರೆತಿತ್ತು.

ಐಜಿಎನ್‌ಡಬ್ಲ್ಯುಪಿಎಸ್ ಬಗ್ಗೆ ಹಿರಿಯ ವಿಧವೆಯರಲ್ಲಿ ಶೇಕಡಾ 70 ರಷ್ಟು ಮಂದಿಗೆ ತಿಳಿವಳಿಕೆ ಇದ್ದರೂ ಕೇವಲ ಶೇಕಡಾ 20 ರಷ್ಟು ಮಾತ್ರ ಅದರ ಫಲಾನುಭವಿಗಳಾಗಿದ್ದರು. ಈ ಯೋಜನೆಗಳು ಜಾರಿಗೊಳ್ಳುವಲ್ಲಿ ವಿವಿಧ ರಾಜ್ಯಗಳ ನಡುವೆ ಅನೇಕ ವ್ಯತ್ಯಾಸಗಳಿದ್ದರೂ, ಪಂಜಾಬು, ಒಡಿಶಾ ಮತ್ತು ಹಿಮಾಲಯ

ಪ್ರದೇಶಗಳಲ್ಲಿ ಐಜಿಎನ್‌ಓಎಪಿಎಸ್ ಉತ್ತಮವಾಗಿದೆ. ಒಡಿಶಾ, ಕೇರಳ, ಪಶ್ಚಿಮ ಬಂಗಾಳ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಐಜಿಎನ್‌ಡಬ್ಲ್ಯುಪಿಎಸ್ ಉತ್ತಮವಾಗಿದೆ.

### 5. ಕಡಿಮೆ ಬಳಕೆಗೆ ಕಾರಣಗಳು

ಬಿಕೆಪಿಎಐ ಸಮೀಕ್ಷೆ ಮತ್ತು ಇತರೆ ಸಣ್ಣಪುಟ್ಟ ಸಮೀಕ್ಷೆಗಳು ಸಂಗ್ರಹಿಸಿರುವ ಗುಣಾತ್ಮಕವಾದ ಮಾಹಿತಿಗಳ ಪ್ರಕಾರ ಈ ಯೋಜನೆಗಳನ್ನು ರಾಜ್ಯ ಸರ್ಕಾರಗಳು ಜಾರಿಗೆ ತರುವಾಗ ದೊರೆತಿರುವ ಅನುಭವಗಳು ಮುಂದಿನಂತೆ ಇವೆ.

* ಈ ಯೋಜನೆಗಳ ಪ್ರಕಾರ ಪಿಂಚಣಿ ಪಡೆಯಲು ಇರುವ ಅರ್ಹತೆಯನ್ನು ಸಾಬೀತು ಪಡಿಸಲು ಬೇಕಾದ ಗುರುತಿನ ಚೀಟಿ, ವಯಸ್ಸಿನ ಖಾತರಿ ಪತ್ರ, ಬಡತನ ರೇಖೆಗಿಂತ ಕಡಿಮೆ ಆದಾಯವಿದೆ ಎಂದು ತೋರಿಸುವ ದಾಖಲೆ, ಪಂಚಾಯಿತಿ ಸದಸ್ಯನ ಶಿಫಾರಸ್ಸು ಪತ್ರಗಳನ್ನು ತೆಗೆದುಕೊಳ್ಳಲು ತುಂಬಾ ಕಷ್ಟವಾಗಿರುವುದು. ಜೊತೆಗೆ ಮಧ್ಯವರ್ತಿಗಳ ಹಾವಳಿ, ಲಂಚ ಮತ್ತು ಜಾತಿ ಹಾವಳಿ.
* ಬಡತನ ರೇಖೆಗಿಂತ ಕಡಿಮೆ ಆದಾಯವಿರುವ ಕುಟುಂಬಗಳ ಪಟ್ಟಿ ನಕಲಿಯಾಗಿರುವುದು, ವಂಚನೆಗೊಳಗಾಗಿರುವುದು ಮತ್ತು ಕರಾರುವಕ್ಕಾಗಿರದೆ ಇರುವುದು.



* ಪಿಂಚಣಿ ಪಡೆಯಲು ಬಹಳ ಕಾಲ ಕಾಯಬೇಕಾಗಿರುವುದು.
* ಸಾಕಷ್ಟು ಪ್ರಮಾಣದಲ್ಲಿ ಪಿಂಚಣಿ ಮೊತ್ತ ಇಲ್ಲದಿರುವುದು.
* ಅರ್ಹ ಫಲಾನುಭವಿಗಳನ್ನು ಸರಿಯಾಗಿ ಗುರುತಿಸದೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ನಿಗದಿ ಪಡಿಸಿದ ಮೊತ್ತವನ್ನು ಬಳಸಿಕೊಳ್ಳಲು ಸಾಧ್ಯವಾಗದೆ ಇರುವುದು.



ಈ ಎಲ್ಲ ಕುಂದು ಕೊರತೆಗಳ ನಡುವೆಯೂ ಈ ಯೋಜನೆಗಳ ಕಾರ್ಯವೈಖರಿ ಮತ್ತು ಅದರ ಉಪಯೋಗದ ಬಗ್ಗೆ ಸಂಶೋಧಕರು ತಮ್ಮ ಆಶಾಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಒಡಿಶಾ ಮತ್ತು ತಮಿಳುನಾಡು ರಾಜ್ಯಗಳು ಉತ್ತಮವಾಗಿ ನಿರ್ವಹಣಾ ವಿಧಾನ ಮತ್ತು ಅರ್ಹ ಫಲಾನುಭವಿಗಳಿಗೆ ಪಿಂಚಣಿ ದೊರೆಯುವಂತೆ ಮಾಡಲು ಅನುಸರಿಸಿರುವ ಕೆಲವು ವಿಧಾನಗಳು ಬೆಳಕಿಗೆ ಬಂದಿವೆ.

ಒಂದು ಅಂದಾಜಿನ ಪ್ರಕಾರ, ಸುಮಾರು 60 ಲಕ್ಷ ಹಿರಿಯರು ವೃದ್ಧಾಪ್ಯ ಪಿಂಚಣಿ ಮತ್ತು ಸುಮಾರು 30 ಲಕ್ಷ ನಿರ್ಗತಿಕ ಮಹಿಳೆಯರು ವಿಧವಾ ಪಿಂಚಣಿ ಪಡೆಯುತ್ತಿದ್ದಾರೆ. ದೆಹಲಿಯ ಎನ್‌ಸಿಎಇಆರ್ ಮತ್ತು ಅಮೆರಿಕಾದ ಮೇರಿಲ್ಯಾಂಡ್ ವಿಶ್ವವಿದ್ಯಾಲಯಗಳ ಪ್ರಕಾರ ದೇಶದ ಹಿರಿಯ ನಾಗರಿಕರಲ್ಲಿ ಶೇಕಡಾ 7 ರಷ್ಟು ಮಂದಿ ವೃದ್ಧಾಪ್ಯ ವೇತನ ಪಡೆಯುತ್ತಿದ್ದಾರೆ.

### 6. ಸಾಮಾನ್ಯ ಪಿಂಚಣಿ ಯೋಜನೆ ಜಾರಿಗೆ ಆಗ್ರಹ

ಹಿರಿಯ ನಾಗರಿಕರ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ವಂತಿಕೆರಹಿತ ಸಾಮಾನ್ಯ ಪಿಂಚಣಿ ಯೋಜನೆಯನ್ನು 55 ವರ್ಷ ಮೀರಿದ ಪುರುಷರಿಗೆ ಮತ್ತು 50 ವರ್ಷ ಮೀರಿದ ಮಹಿಳೆಯರಿಗೆ ತಿಂಗಳಿಗೆ 2000 ರೂಪಾಯಿ ಅಥವಾ ಕನಿಷ್ಠ ವೇತನದ ಶೇಕಡಾ 50 ರಷ್ಟು ಅಥವಾ ಎರಡರಲ್ಲಿ ಯಾವುದು ಹೆಚ್ಚೋ ಅದನ್ನು ಜಾರಿಗೆ ತರಬೇಕೆಂದು ಪಿಂಚಣಿ ಪರಿಷತ್ ಒತ್ತಾಯಿಸಿದೆ. ಆದಾಯ ಮಿತಿಗಿಂತ ಹೆಚ್ಚಿಗೆ ಆದಾಯವಿರುವ ಹಾಗೂ ಬೇರೆ ಯಾವುದೇ ಮೂಲಗಳಿಂದ ಕನಿಷ್ಠ ಪಿಂಚಣಿಗಿಂತ ಹೆಚ್ಚಿನ ಆದಾಯ ಹೊಂದಿರುವವರನ್ನು ಈ ಪಿಂಚಣಿ ಯೋಜನೆಯಿಂದ ಹೊರಗಿಡಬೇಕು ಎಂದು ಪರಿಷತ್ ಒತ್ತಾಯಿಸಿದೆ.

ಸಾಮಾನ್ಯ ಲೆಕ್ಕಾಚಾರದ ಪ್ರಕಾರ 60 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲ ಹಿರಿಯ ನಾಗರಿಕರಿಗೆ ತಿಂಗಳಿಗೆ 2000 ರೂಪಾಯಿ ಪಿಂಚಣಿ ಕೊಡುವುದಾದರೆ ಸರ್ಕಾರಗಳ ಮೇಲೆ ವಾರ್ಷಿಕ 249238 ಕೋಟಿ ರೂಪಾಯಿ ಹೊರೆ ಆಗುತ್ತದೆ. ಈಗ ಕೊಡುತ್ತಿರುವ ಪಿಂಚಣಿಯನ್ನು ಲೆಕ್ಕಕ್ಕೆ ತೆಗೆದುಕೊಂಡು ಲೆಕ್ಕಹಾಕಿದರೆ ಹೊಸ ಹೊರೆ ಇನ್ನೂ ಕಡಿಮೆಯಾಗುತ್ತದೆ. ಜನಪ್ರಿಯ ಕಾರ್ಯಕ್ರಮಗಳ ವ್ಯಾಪ್ತಿಯನ್ನು ವಿಸ್ತರಿಸಿ ಹೆಚ್ಚು ಹಣವನ್ನು ಖರ್ಚು ಮಾಡುತ್ತಾ ಹೋದರೆ ಸರ್ಕಾರಗಳ ಸಂಪನ್ಮೂಲಗಳ ಮೇಲೆ ಹೊರೆ ಹೆಚ್ಚುತ್ತಾ ಹೋಗಿ, ಹೊರೆಯನ್ನು ಕಡಿಮೆ ಮಾಡಿಕೊಳ್ಳಲು ಹೊಸದಾಗಿ ತೆರಿಗೆ ಹಾಕಬೇಕಾಗುತ್ತದೆ. ಹಾಗೆ ಮಾಡದಿದ್ದರೆ ಹಣದುಬ್ಬರ ಹೆಚ್ಚುತ್ತಾ ಹೋಗಿ ಹಿರಿಯ ನಾಗರಿಕರ ಮೇಲೆ ಅದರ ಪರಿಣಾಮ ಬಿರುತ್ತದೆ. ಆದ್ದರಿಂದ ಪಿಂಚಣಿ ಯೋಜನೆಯಲ್ಲಿ ಯಾರನ್ನು ಸೇರಿಸಬಾರದು ಎಂಬ ಮಾನದಂಡ ಬಹಳ ಮುಖ್ಯವಾಗುತ್ತದೆ. ಆದ್ದರಿಂದ, ಸಾಮಾನ್ಯ ಪಿಂಚಣಿ ಯೋಜನೆಯಿಂದ ಆದಾಯ ತೆರಿಗೆಯ ವ್ಯಾಪ್ತಿಯಲ್ಲಿ ಬರುವವರನ್ನು ಹೊರಗಿಟ್ಟರೂ, ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುವ ಮತ್ತು ಕೃಷಿ ಕ್ಷೇತ್ರವನ್ನು ಅವಲಂಬಿಸಿರುವವರಿಗೆ ಯಾವ ರೀತಿಯ ಮಾನದಂಡ ವಿಧಿಸಿ ಅವರನ್ನು ಯೋಜನೆಯಿಂದ ಹೊರಗಿಡಬಹುದು ಎಂಬುದು ಬಹಳ ಕಷ್ಟದ ಕೆಲಸ. ಇದರ ಜೊತೆಗೆ ಆರ್ಥಿಕ ಭದ್ರತೆ ಬಹಳ ಮುಖ್ಯವಾದರೂ, ಅದು ಬಡವರಿಗೆ ಉಚಿತವಾಗಿ ಆರೋಗ್ಯ ಸೇವೆ ಮತ್ತು ಆಹಾರ ಭದ್ರತೆಗೆ ಪರ್ಯಾಯವಾಗುವುದಿಲ್ಲ ಎಂಬುದನ್ನು ಗಮನಿಸಬೇಕಾಗುತ್ತದೆ

### 7. ಪ್ರಸಕ್ತ ಸರ್ಕಾರದ ಇತ್ತೀಚಿನ ಕಾರ್ಯಕ್ರಮಗಳು


ಪ್ರಸ್ತುತ ಕೇಂದ್ರ ಸರ್ಕಾರ ಅಟಲ್ ಪಿಂಚಣಿ ಯೋಜನೆ (ಎಪಿವೈ), ಪ್ರಧಾನಮಂತ್ರಿ ಜನ ಧನ್ ಯೋಜನೆ, ಜೀವನ ಜ್ಯೋತಿ ಯೋಜನೆ, ಪ್ರಧಾನ ಮಂತ್ರಿ ಜನ ಸುರಕ್ಷಾ ವಿಮಾ ಯೋಜನೆಗಳನ್ನು ಜಾರಿಗೆ ತಂದಿದೆ. ಈಗ ಚರ್ಚಿಸಿರುವ ಯೋಜನೆಗಳು ವಂತಿಕೆ ನೀಡುವಂತಹ ಮತ್ತು ಹಿರಿಯರಿಗೆ

ಮಾತ್ರ ಸೀಮಿತವಾಗದೆ ಇರುವುದರಿಂದ ಅವುಗಳ ಜೊತೆ ಹೋಲಿಕೆ ಮಾಡಲಾಗದು. ಇವು ಹಿರಿಯರ ಭವಿಷ್ಯದ ಭದ್ರತೆಯ ಮೇಲೆ ಪರಿಣಾಮ ಬೀರುವುದರಲ್ಲಿ ಯಾವುದೇ ಸಂಶಯವಿಲ್ಲ.

ಅಟಲ್ ಪಿಂಚಣಿ ಯೋಜನೆಯು ಅಸಂಘಟಿತ ವರ್ಗಕ್ಕೆ ಸೀಮಿತವಾಗಿದ್ದು ಪಿಂಚಣಿ ತಿಂಗಳಿಗೆ ರೂ. 1000 ದಿಂದ 5000 ರೂಪಾಯಿ ವರೆಗೆ ದೊರೆಯುತ್ತದೆ. ಈ ಯೋಜನೆಗೆ ಒಳಪಡುವವರು ಮಾಸಿಕವಾಗಿ ತಮ್ಮ ವಂತಿಕೆಯನ್ನು ನೀಡಬೇಕಾಗುತ್ತದೆ. ಫಲಾನುಭವಿ ಕೊಡುವ ವಂತಿಕೆಯ ಶೇಕಡಾ 50 ರಷ್ಟು ಅಥವಾ ತಿಂಗಳಿಗೆ 1000 ರೂಪಾಯಿ ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಸರ್ಕಾರ ಭರಿಸುತ್ತದೆ. ಈ ಯೋಜನೆ ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡದವರಿಗೆ ಅನ್ವಯವಾಗುತ್ತದೆ. ಈ ಯೋಜನೆಗೆ 2015 ರ ಡಿಸೆಂಬರ್ 1 ರಿಂದ ಸೇರಿದವರಿಗೆ ಸರ್ಕಾರ ಐದು ವರ್ಷಗಳ ವರೆಗೆ ತನ್ನ ಪಾಲಿನ ವಂತಿಕೆಯನ್ನು ನೀಡುತ್ತದೆ.

ಜನ ಸುರಕ್ಷಾ ವಿಮಾ ಯೋಜನೆಯನ್ನು 2015 ರಲ್ಲಿ ಪ್ರಾರಂಭಿಸಲಾಗಿದ್ದು, ಇದಕ್ಕೆ ಸರ್ಕಾರ ಬೆಂಬಲ ನೀಡುತ್ತದೆ ಹಾಗೂ ಅಪಘಾತ ವಿಮಾ ಸೌಲಭ್ಯ ದೊರೆಯುತ್ತದೆ. 18 ರಿಂದ 70 ವರ್ಷ ವಯಸ್ಸಿನವರು ಬ್ಯಾಂಕ್ ಅಕೌಂಟ್ ಹೊಂದಿದ್ದರೆ ಈ ಯೋಜನೆಯ ಫಲಾನುಭವಿಗಳಾಗಬಹುದು. ವಾರ್ಷಿಕ ವಿಮಾ ಕಂತು 12 ರೂಪಾಯಿಗಳು. ಅಪಘಾತದಲ್ಲಿ ಮಡಿದರೆ ಅಥವಾ ಪೂರ್ಣ ಪ್ರಮಾಣದ ಅಂಗವಿಕಲತೆ ಉಂಟಾದರೆ ಎರಡು ಲಕ್ಷ ರೂಪಾಯಿ ಕೊಡಲಾಗುತ್ತದೆ. ಭಾಗಶಃ ಅಂಗವಿಕಲತೆಗೆ ಒಂದು ಲಕ್ಷ ರೂ. ನೀಡಲಾಗುತ್ತದೆ. ಈ ಯೋಜನೆಯನ್ನು 2014 ರಲ್ಲಿ ಪ್ರಾರಂಭವಾದ ಪ್ರಧಾನ ಮಂತ್ರಿ ಜನ ಧನ್ ಯೋಜನೆಗೆ ನಿಯೋಜಿಸಲಾಗಿದೆ. ಈ ಯೋಜನೆಯಲ್ಲಿ ಬ್ಯಾಂಕ್‌ನಲ್ಲಿ ಅಕೌಂಟ್ ಹೊಂದಿದವರಿಗೆ ಅವರ ಅಗತ್ಯಕ್ಕೆ ಅನುಗುಣವಾಗಿ ಸಾಲ, ವಿಮೆ, ಪಾವತಿ ಮಾಡುವುದು ಮತ್ತು ಓವರ್ ಡ್ರಾಫ್ಟ್ ಸೌಲಭ್ಯ ದೊರೆಯುತ್ತದೆ. ಈ ಖಾತೆ ಪ್ರಾರಂಭಿಸಲು ನಿಯಮಗಳನ್ನು ಸರಳೀಕರಿಸಲಾಗಿದೆ. ಇದಕ್ಕೆ ಒಂದು ಲಕ್ಷ ರೂಪಾಯಿ ವರೆಗೆ ಅಪಘಾತ ವಿಮೆ ಸೌಲಭ್ಯ ದೊರೆಯುತ್ತದೆ. ಜೊತೆಗೆ ರೂಪಾಯಿ 30000 ವಿಮಾ ಸೌಲಭ್ಯ ದೊರೆಯುತ್ತದೆ. ವ್ಯಕ್ತಿ ನಿಧನದ ನಂತರ ಅವನ ಕುಟುಂಬಕ್ಕೆ ರೂಪಾಯಿ 30000 ನೀಡಲಾಗುತ್ತದೆ. 2017 ರ ಫೆಬ್ರುವರಿ ವೇಳೆಗೆ ಈ ಯೋಜನೆಯಡಿ 12 ಕೋಟಿ ಖಾತೆಗಳನ್ನು ತೆರೆಯಲಾಗಿದ್ದು, 66500 ಕೋಟಿ ಠೇವಣಿ ಸಂಗ್ರಹಿಸಲಾಗಿದೆ. ಓವರ್ ಡ್ರಾಫ್ಟ್ ಮತ್ತು ಇತರೆ ಅನುಕೂಲಗಳನ್ನು ಪಡೆದುಕೊಳ್ಳುವುದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಖಾತೆಗಳನ್ನು ಈ ಯೋಜನೆಯಲ್ಲಿ ಪ್ರಾರಂಭಿಸಲಾಗಿದೆ ಎಂಬ ಟೀಕೆಯೂ ಕೇಳಿ ಬಂದಿದೆ. ಇದರಿಂದ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಮೇಲೆ ಹೆಚ್ಚಿನ ಹೊರೆ ಹೊರಿಸಲಾಗಿದೆ ಎಂಬ ಟೀಕೆಯೂ ಕೇಳಿ ಬಂದಿದೆ.

ಪ್ರಧಾನ ಮಂತ್ರಿ ಜೀವನ ಜ್ಯೋತಿ ವಿಮಾ ಯೋಜನೆಯನ್ನು 2015 ರಲ್ಲಿ ಪ್ರಾರಂಭಿಸಲಾಯಿತು. ಈ ಪಾಲಿಸಿಯನ್ನು ಹೊಂದಿರುವ ವ್ಯಕ್ತಿಗೆ ಎರಡು ಲಕ್ಷ ರೂಪಾಯಿ ವಿಮೆ ಒದಗಿಸಲಾಗುತ್ತದೆ. ಪಾಲಿಸಿದಾರರ ನಿಧನದ ನಂತರ ಅವನ ಕುಟುಂಬಕ್ಕೆ ಎರಡು ಲಕ್ಷ ವಿಮೆ ಕೊಡಲಾಗುತ್ತದೆ. ಈ ಪಾಲಿಸಿಯನ್ನು 18 ರಿಂದ 50 ವರ್ಷ ವಯಸ್ಸಿನವರು ತೆಗೆದುಕೊಳ್ಳಬಹುದು. ಈ ಪಾಲಿಸಿಗೆ ಪ್ರತಿ ವರ್ಷ ಮೇ ತಿಂಗಳ 31 ರೊಳಗೆ ರೂಪಾಯಿ 330 ವಿಮಾ ಕಂತು ಕಟ್ಟ ಬೇಕಾಗುತ್ತದೆ.



ಈ ಯೋಜನೆಗಳು ಜನರಿಗೆ ಎಷ್ಟರ ಮಟ್ಟಿಗೆ ಉಪಯೋಗವಾಗುತ್ತದೆ ಎಂಬುದರ ಬಗ್ಗೆ ಈಗಲೇ ಪರಾಮರ್ಶಿಸುವುದು ಅಷ್ಟೊಂದು ಸೂಕ್ತವಾಗಲಾರದು. ಈ ಯೋಜನೆಗಳಿಗೆ ಇತರೆಯವರು ಭಾಗವಹಿಸುವಂತೆ ಹಿರಿಯ ನಾಗರಿಕರು ಭಾಗವಹಿಸಬಹುದು. ಆದರೆ ಬಡ ಹಿರಿಯ ನಾಗರಿಕರಿಗೆ, ನೆರವನ್ನೇ ಅವಲಂಬಿಸಿದವರಿಗೆ ಮತ್ತು ಭದ್ರತೆಗಾಗಿ ಯಾವುದೇ ಆಸ್ತಿ ಇಲ್ಲದವರಿಗೆ ಭದ್ರತೆ ಒದಗಿಸುವುದು ಬಹಳ ಮುಖ್ಯವಾಗುತ್ತದೆ. ಸೂಕ್ತವಾದ ಫಲಾನುಭವಿಗಳಿಗೆ ಈ ಯೋಜನೆಗಳ ಫಲ ಸರಿಯಾಗಿ ದೊರೆಯಬೇಕಾದರೆ, ಫಲಾನುಭವಿಗಳನ್ನು ಗುರುತಿಸುವುದು, ಮಾನದಂಡಗಳು, ಸುಲಭವಾಗಿ ಅರ್ಜಿ ಸಲ್ಲಿಸುವುದು ಮತ್ತು ದಕ್ಷವಾಗಿ ಕಾರ್ಯಾಚರಣೆ ನಡೆಸುವುದು ದೊಡ್ಡ ಸವಾಲಾಗಿದೆ. ದಕ್ಷತೆಯಿಂದ ಕೂಡಿದ ಉಸ್ತುವಾರಿ ವ್ಯವಸ್ಥೆ ಇಲ್ಲದೆ ಇದ್ದರೆ, ಯಾವ ಯೋಜನೆಯಲ್ಲಿ ಹಣದ ಪಾಲು ಇರುವುದೋ, ಅದನ್ನು ಸದುದ್ದೇಶದಿಂದ ಜಾರಿಗೆ ತಂದಿದ್ದರೂ, ಕೊನೆಗೆ ಅದು ಭ್ರಷ್ಟಾಚಾರ, ಸಂಪನ್ಮೂಲದ ಅಪವ್ಯಯಕ್ಕೆ ದಾರಿ ಮಾಡಿಕೊಡುತ್ತದೆ. ❑


# ಯೋಜನಾ

## ಆಗಸ್ಟ್ 2017 ಸಂಚಿಕೆಯ ವಿಷಯ

# ಸರಕು ಮತ್ತು ಸೇವಾ ತೆರಿಗೆ

# ಸರ್ವರಿಗೂ ಆರೋಗ್ಯ

* ಪ್ರೊ. ಕೆ. ಸೀತಾ ಪ್ರಭು



**2030ರ ಸುಸ್ಥಿರ ಅಭಿವೃದ್ಧಿ ಗುರಿ ಪಟ್ಟಿಯಲ್ಲಿ ಸಾರ್ವತ್ರಿಕ ಆರೋಗ್ಯ 3.8ನೇ ಗುರಿಯಾಗಿ ಉಲ್ಲೇಖವಾಗಿದೆ. ಈ ಜಾಗತಿಕ ಗುರಿಯನ್ನು ಸಾಧಿಸುವಲ್ಲಿ ಭಾರತ, ಮಹತ್ವದ ಪಾತ್ರ ವಹಿಸಲಿದೆ. 2030ರ ವೇಳೆಗೆ ಎಲ್ಲರಿಗೂ ಆರೋಗ್ಯ ಭದ್ರತೆ ನೀಡಬೇಕೆನ್ನುವ ಭಾರತದ ದೀರ್ಘಾವಧಿ ಗುರಿ ಸಾಧಿಸುವಲ್ಲಿ 2017ರ ಆರೋಗ್ಯ ನೀತಿ ಮಹತ್ವದ್ದಾಗಿದೆ.**

ಆರ್ಥಿಕ ಅಸ್ಥಿರತೆ ಮತ್ತು ವಿಪತ್ತಿನ ಸಂದರ್ಭಗಳಲ್ಲೆಲ್ಲಾ ಸಾಮಾಜಿಕ ಭದ್ರತೆ ಗುರುತರವಾಗಿ ಮಹತ್ವ ಪಡೆದಿದೆ. ಸಾಮಾಜಿಕ ಭದ್ರತೆಯನ್ನು 'ಬೇಕುಗಳಿಂದ ಸ್ವಾತಂತ್ರ್ಯ' ಎಂದು 1942ರ ಬಿವಿರಿಡ್ಜ್ ಸಮಿತಿಯ ಮಹತ್ವದ ವರದಿ ವಿಶಾಲವಾಗಿ ವ್ಯಾಖ್ಯಾನಿಸಿತ್ತಾದರೂ ಈ ವಿವರಣೆಯನ್ನು ಅನುಸರಿಸಲಾಗಲಿಲ್ಲ. 1950ರ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಸಮ್ಮೇಳನದಲ್ಲಿ ಅನಿಶ್ಚಿತ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳಲ್ಲಿ ಸಾಮಾಜಿಕ ಭದ್ರತೆಗೆ ನೀಡಿದ ಲಘು ವ್ಯಾಖ್ಯಾನವೇ ಪ್ರಚಲಿತವಾಯಿತು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸ್ಥಿತಿಗೆ ಸಂಬಂಧಿಸಿದಂತೆ ಸಂಕುಚಿತ ವ್ಯಾಖ್ಯಾನವನ್ನು ವಿಸ್ತರಿಸುವ ಪ್ರಸ್ತಾವವನ್ನು 1989ರಲ್ಲಿ ಡ್ರೀಜ್ ಮತ್ತು ಸೆನ್ ನೀಡಿದರು. ಭಾರತದ ಪ್ರಸ್ತುತ ಸನ್ನಿವೇಶದ ಸಾಮಾಜಿಕ ಸಾಮರ್ಥ್ಯ ಮತ್ತು ಆರ್ಥಿಕ ಸ್ವಾತಂತ್ರ್ಯದ ಬಲವರ್ಧನೆಗೆ ಸಾಮಾಜಿಕ ಆರ್ಥಿಕ ಭದ್ರತೆ ಪರಿಕಲ್ಪನೆಗೆ ಡ್ರೀಜ್ ಮತ್ತು ಸೆನ್ ಪ್ರಸ್ತಾವ ಸೂಕ್ತ ಎಂದು ಪ್ರಭು (1. ಪ್ರಭು ಕೆ. ಸೀತಾ. 2001. ವ್ಯಾಪಕ ಬಡತನದ ಸಂದರ್ಭದಲ್ಲಿ ಸಾಮಾಜಿಕ ಆರ್ಥಿಕ ಭದ್ರತೆ : ಭಾರತದ ಒಂದು ಪ್ರಕರಣದ ಅಧ್ಯಯನ; ಜಿನಿವಾ : ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ) ಪುನರುಚ್ಚರಿಸಿದ್ದಾರೆ. ಆಹಾರ ಭದ್ರತೆ ಇಂತಹ ವಿಶಾಲಾರ್ಥದ ಸಾಮಾಜಿಕ ಭದ್ರತೆಯ ಸಮಗ್ರ ಭಾಗವಾಗಿದೆ.

### ಎಲ್ಲರಿಗೂ ಆರೋಗ್ಯ

ವಿಶ್ವ ಆರೋಗ್ಯ ಕಾಳಜಿ ಪರಿಕಲ್ಪನೆಯೊಂದಿಗೆ ಆಹಾರ ಭದ್ರತೆ ಬಿಡಿಸಲಾಗದ ಕೊಂಡಿ ಹೊಂದಿದೆ. 2000 ಇಸವಿಯ ವೇಳೆಗೆ ಎಲ್ಲರಿಗೂ ಆರೋಗ್ಯದ ಗುರಿ ಸಾಧಿಸುವ 1978ರ ಆಲ್ಮಾ ಅಟಾ ಘೋಷಣೆ ನಂತರ ಆರೋಗ್ಯ ಭದ್ರತೆಗೆ ಹೆಚ್ಚಿನ ಪ್ರಾಮುಖ್ಯತೆ ದೊರೆತಿದೆ. ಈ ಗುರಿಯಿಂದ ಮತ್ತು 1981 (2. ಐಸಿಎಸ್ಎಸ್ಆರ್ / ಐಸಿಎಮ್ಆರ್ – ಸರ್ವರಿಗೂ ಆರೋಗ್ಯ: ಪರ್ಯಾಯ ತಂತ್ರ . ಪೂನಾ : ಶಿಕ್ಷಣದ ಭಾರತೀಯ ಸಂಸ್ಥೆ, 1981) ರ ಐಸಿಎಸ್ಎಸ್ಆರ್ – ಐಸಿಎಮ್ಆರ್ ವರದಿಯಿಂದ ಪ್ರೇರೇಪಿತರಾಗಿ ಭಾರತ ಸರ್ಕಾರ 1983ರಲ್ಲಿ ರಾಷ್ಟ್ರೀಯ ಆರೋಗ್ಯ ನೀತಿ ಅನುಷ್ಠಾನಕ್ಕೆ ತಂದಿದ್ದು, ಪ್ರಸ್ತುತ ಅದರ ಬದಲಿಗೆ 2002ರ ರಾಷ್ಟ್ರೀಯ ಆರೋಗ್ಯ ನೀತಿ ಜಾರಿಯಲ್ಲಿದೆ. ಈ ನೀತಿ ಉಪಕ್ರಮಗಳ ಹೊರತಾಗಿಯೂ ಕಡಿಮೆ ಆದಾಯದ ದೇಶಗಳಾದ ಬಾಂಗ್ಲಾದೇಶ ಮೊದಲಾದವುಗಳಿಗಿಂತ (3. ಭಾರತಕ್ಕೆ ಮಧ್ಯಮ ಆದಾಯದ ಪಟ್ಟ ಇದೆಯಾದರೂ ಬಡತನದ ತೀವ್ರ ಹೊರೆ ಹಾಗೂ ಕಾಯಿಲೆಗಳಿಂದಾಗಿ ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ಸೂಚಕಗಳಲ್ಲಿ ಸೂಚಿತ ಸುಧಾರಣೆಗೆ ಬಹಳ ಅಂತರವಿದೆ. 4. ಎಮ್ಓಎಸ್ಪಿಐಸ್ ಎಮ್ಡಿಜಿ ರಿಪೋರ್ಟ್, ವಿಶ್ವ ಬ್ಯಾಂಕ್ ಮಾಹಿತಿ ಮತ್ತು ಎನ್ಎಚ್ಎಫ್ಎಸ್ 3 ವರದಿಯಂತೆ ಐದು ವರ್ಷದೊಳಗಿನ ಶಿಶುಮರಣ ಪ್ರಮಾಣ ಸಂಖ್ಯೆ 1992–93 ರಿಂದ 2014–15ರ ವೇಳೆಗೆ ಅರ್ಧದಷ್ಟು ಕಡಿಮೆಯಾಗಿದೆ, ಮೃತಶಿಶು ಜನನ 1000ದ ಪೈಕಿ 109 ರಿಂದ 50 ಕ್ಕೆ ಇಳಿದಿದೆ, ಆದಾಗ್ಯೂ ಎಮ್ಡಿಜಿಯ ಗುರಿ 27 ತಲುಪಲು ಈ ವೇಗ ಸಾಲದು. ಅಂತೆಯೇ ಒಂದು ಲಕ್ಷ ಜನನಗಳ ಪೈಕಿ 1990 ರಲ್ಲಿ 437 ರಷ್ಟಿದ್ದ ಎಮ್ಎಮ್ಆರ್ 2015ರಲ್ಲಿ 174 ಇದ್ದು, ಗುರಿ 109ಕ್ಕೆ ನಿಗದಿಯಾಗಿತ್ತು. 1990ರಲ್ಲಿ ಭಾರತದ ಸುಮಾರು ಅರ್ಧಕ್ಕೂ ಹೆಚ್ಚು ಮಕ್ಕಳು ಕಡಿಮೆ ತೂಕ ಹೊಂದಿದ್ದು, ಪ್ರಸ್ತುತ ಇರುವ ವೇಗ 2015ರ ವೇಳೆಗೆ ಶೇಕಡ 33 ರಷ್ಟು ಕಡಿಮೆಯಾಗುವ ನಿರೀಕ್ಷೆ ಇದ್ದು, ಇದೂ ಕೂಡ ಶೇಕಡ 26ರ ಗುರಿ ಸಾಧಿಸಲು ಸಾಧ್ಯವಾಗಿಲ್ಲ. 5. ಆದಾಯ ಅಸಮಾನತೆ ಇತರ ಆದಾಯಗಳ ಮಾನದಂಡದೊಂದಿಗೆ ಅಳೆದಾಗ (ಭೋಗ ವೆಚ್ಚ ಅಲ್ಲದೆ) 0.51 ರಷ್ಟಿದ್ದು ಲ್ಯಾಟಿನ್ ಅಮೆರಿಕನ್ ದೇಶಗಳಷ್ಟು ಅಥವಾ ಅದಕ್ಕೂ ಸ್ವಲ್ಪ ಹೆಚ್ಚಿದೆ. ಗಿನಿ ಮೌಲ್ಯ 0.70 ಇದ್ದು ಸಂಪತ್ತಿನ

* ಹಿರಿಯ ಸಲಹಾಕಾರರು, ಪ್ರಧಾನ ಮಂತ್ರಿಗಳ ಗ್ರಾಮೀಣ ಅಭಿವೃದ್ಧಿ ಫೆಲೊ ಯೋಜನೆ, ಭಾರತ ಸರ್ಕಾರ. E-mail : seeta.prabhu@tiss.edu

ಅಸಮಾನತೆ ಇನ್ನಷ್ಟು ಹೆಚ್ಚಿದೆ. 6. ವಿಶ್ವ ಆರೋಗ್ಯ ಸಂಸ್ಥೆ ದೇಶದ ಅಸಾಂಕ್ರಾಮಿಕ ರೋಗಗಳ ಕುರಿತು 2014ರಲ್ಲಿ ನೀಡಿದ ವರದಿ, ಜಾಲತಾಣ : http://www.who.int/nmh/countries/ind_en.pdf 7. ಅಧಿಕ ಆದಾಯ ಗುಂಪುಗಳಿಗಿಂತ ಪರಿಶಿಷ್ಟ ಜಾತಿ ಮತ್ತು ಪಂಗಡದಲ್ಲಿ ಶಿಶು ಮರಣ ಪ್ರಮಾಣ ಶೇಕಡ 14 ರಿಂದ 18 ರಷ್ಟು ಹೆಚ್ಚಾಗಿದೆ. ಕೇರಳದಲ್ಲಿ ಜನಿಸಿದ ಮಗು ಸರಾಸರಿ 74.8 ವರ್ಷ ಜೀವಿಸುವ ಸಾಧ್ಯತೆ ಇದ್ದರೆ, ಬಿಹಾರದಲ್ಲಿ ಕೇವಲ 67.8 ವರ್ಷ ಮಾತ್ರ ಜೀವಿಸಬಹುದು (ಎಸ್‌ಆರ್‌ಎಸ್ ಅಬ್ರಿಡ್ಜ್ ಲೈಫ್ ಟೇಬಲ್ಸ್ 2010–14). ಲಿಂಗ ಅಸಮಾನತೆ ವ್ಯಾಪಕವಾಗಿದ್ದು, ಶ್ರೀಮಂತರಲ್ಲೂ ಕೂಡ ಹೆಚ್ಚಿದ್ದು ಶ್ರೀಮಂತ ರಾಜ್ಯಗಳಾದ ಹರಿಯಾಣ ಮತ್ತು ಪಂಜಾಬ್‌ಗಳಲ್ಲಿ ಕ್ರಮವಾಗಿ ಸಾವಿರ ಬಾಲಕರಿಗೆ ಕೇವಲ 880 ಮತ್ತು 906 ಬಾಲಕಿಯರು ಇದ್ದಾರೆ. –2011ರ ಜನಗಣತಿ) ನಮ್ಮ ದೇಶದ ಸಾಮಾನ್ಯ ಆರೋಗ್ಯ ಸೂಚಕಗಳು ಕಡಿಮೆ ಇದ್ದು ಮತ್ತು ನಿರ್ಣಾಯಕ ಆರೋಗ್ಯ ವಿಚಾರಗಳು ಎಮ್‌ಡಿಜಿ (ಸಹಸ್ರಮಾನ ಅಭಿವೃದ್ಧಿ ಗುರಿ) ಯಲ್ಲಿ ಇಲ್ಲದಿರುವುದರಿಂದ ಸಾರ್ವತ್ರಿಕ ಆರೋಗ್ಯ ವ್ಯಾಪ್ತಿಯ ಗುರಿ ಪೂರ್ಣವಾಗಿ ಈಡೇರಿಲ್ಲ.



ದೇಶದ ಅಸಮತೋಲಿತ ಅಭಿವೃದ್ಧಿಗೆ ಭಾರತದ ಆರೋಗ್ಯ ವ್ಯವಸ್ಥೆ ಕನ್ನಡಿ ಹಿಡಿಯುತ್ತದೆ. ಹೆಚ್ಚು ಆದಾಯ ಮತ್ತು ಆರ್ಥಿಕ ಅಸಮಾನತೆಯಿಂದಾಗಿ ಆರೋಗ್ಯ ಕಾಳಜಿ ವ್ಯವಸ್ಥೆ ಬದಲಾಗಿ ಎರಡನೇ ಹಾಗೂ ಮೂರನೇ ಹಂತದ ರೋಗಗಳ ನಿವಾರಣೆಗೆ ಮಹತ್ವ ನೀಡಿ, ಬಡವರು ಜೀವಿಸಲು ಅತ್ಯಗತ್ಯವಾದ ಮೂಲ ಸಂರಕ್ಷಣೆ ಮತ್ತು ಪ್ರಾಥಮಿಕ ಆರೋಗ್ಯ ಕಾಳಜಿ ದೊರೆತಿಲ್ಲ. 2008 ರಲ್ಲಿ 52 ಲಕ್ಷ ಭಾರತೀಯರು ಸಾಂಕ್ರಾಮಿಕವಲ್ಲದ ರೋಗಗಳಿಂದ ಮೃತಪಟ್ಟಿದ್ದು ಇದು ದೇಶದಲ್ಲಿನ ಒಟ್ಟಾರೆ ಸಾವಿನ ಶೇಕಡ 53 ರಷ್ಟಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿಸಿದೆ. ಆದಾಯ ಮತ್ತು ಸಂಪತ್ತಿನ ಅಸಮಾನತೆಯನ್ನು ಗ್ರಾಮೀಣ ಭಾಗ, ನಗರ ಪ್ರದೇಶ, ರಾಜ್ಯ ಹಾಗೂ ಸಾಮಾಜಿಕ ಗುಂಪುಗಳಲ್ಲಿನ ಆರೋಗ್ಯ ವ್ಯತ್ಯಾಸಗಳಲ್ಲೂ ಕಾಣಬಹುದು. 2015 ರಲ್ಲಿ ಯುಎನ್‌ಡಿಪಿ **(8. http://hdr.undp.org/en/composite/IHDI)** ನೀಡಿದ ಸಮತೋಲನ ಸರಿಹೊಂದಿಸಿದ ಮಾನವ ಅಭಿವೃದ್ಧಿ ಮಾಪನದಲ್ಲಿ ಆರೋಗ್ಯ ಅಸಮಾನತೆಯಿಂದಾಗಿ ಆರೋಗ್ಯ ಮಾಪನದಲ್ಲಿ ಭಾರತ ಶೇಕಡ 24 ರಷ್ಟು ಇಳಿಕೆ ಕಂಡಿತು.

ಮುಂದುವರಿದಂತೆ, ಶಿಕ್ಷಣದಂತಲ್ಲದೆ ಪ್ರಾಥಮಿಕ ಆರೋಗ್ಯ ಮತ್ತು ಸಂರಕ್ಷಣೆ ಕುರಿತಾದ ಆರೋಗ್ಯ ಕಾಳಜಿ 'ಸರ್ವರಿಗೂ ಉತ್ತಮ ಆರೋಗ್ಯ' ಪ್ರಮುಖ ಚುನಾವಣಾ ಪ್ರಣಾಳಿಕೆಯಾಗಲಿಲ್ಲ. ಆಂಧ್ರಪ್ರದೇಶದಲ್ಲಿ (9. ಉದಾಹರಣೆಗೆ, ಆಂಧ್ರಪ್ರದೇಶದಲ್ಲಿ 2009ರ ಚುನಾವಣೆ ಗೆಲ್ಲಲು ಆರೋಗ್ಯ ಶ್ರೀ ಯೋಜನೆ ಕೇವಲ ಶೇಕಡ 5 ರಷ್ಟು ನೆರವಾಗಿರಬಹುದಷ್ಟೆ ಎಂದು ವರದಿ. 10. ರಾವ್ ಎಸ್.2017 . ನಾವು ಕಾಳಜಿ ಮಾಡುತ್ತೇವೆಯೇ: ಭಾರತದ ಆರೋಗ್ಯ ವ್ಯವಸ್ಥೆ, ನವದೆಹಲಿ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್) ಚುನಾವಣೆ ಗೆಲ್ಲಲು ಸಂಭಾವ್ಯ ಕ್ಷೇತ್ರವಾಗಿ ಕಂಡು ಬಂದಿದ್ದರೂ ಸಹ ಆರೋಗ್ಯ ವಲಯದಲ್ಲಿ ರಾಜಕೀಯ ಬದ್ಧತೆ ಕಡಿಮೆ ಇದೆ. ಆರ್ಥಿಕ ಪ್ರಗತಿ ಉತ್ತಮವಾಗಿದ್ದರೂ ಸಹ ಕಳೆದ ದಶಕದಲ್ಲಿ ಆರೋಗ್ಯ ವಲಯಕ್ಕೆ ಜಿಡಿಪಿಯ ಶೇಕಡ 1.5 ರಷ್ಟೂ ಸಹ ಬಳಕೆಯಾಗದಿರುವುದು, ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಕಡಿಮೆ ಹಂಚಿಕೆ ಆರೋಗ್ಯ ವಲಯಕ್ಕೆ ರಾಜಕೀಯ ನಿರಾಸಕ್ತಿಯನ್ನು ಪ್ರತಿಬಿಂಬಿಸುತ್ತದೆ. ಶೇಕಡ 75 ರಷ್ಟು ಆರೋಗ್ಯ ರಕ್ಷಣಾ ವೆಚ್ಚಗಳನ್ನು ಸಾಮಾನ್ಯ ವೆಚ್ಚದ ಹೊರತಾಗಿ ಭರಿಸಲಾಗುತ್ತಿದ್ದು, ಈ ವೈದ್ಯಕೀಯ ವೆಚ್ಚಗಳು ಅನೇಕರನ್ನು ಬಡತನ ರೇಖೆಗಿಂತ ಕೆಳಕ್ಕೆ ತಳ್ಳುತ್ತಿರುವುದು ದುರಂತ.

### ಭಾರತದಲ್ಲಿ ಆರೋಗ್ಯ ವಿಮೆ

ಬ್ರೆಜಿಲ್, ಬೊಲಿವಿಯಾ, ಇಂಡೊನೇಷಿಯಾ ಮತ್ತು ಥಾಯ್ಲೆಂಡ್ ದೇಶಗಳು ಬಹುಅಂತರದ ಅಸಮಾನತೆ ಹಾಗೂ ಆರೋಗ್ಯ ರಕ್ಷಣಾ ವ್ಯವಸ್ಥೆಗಳಿಗೆ ಸಮಾನ ಪ್ರವೇಶ ಅವಕಾಶ ಇಲ್ಲದ ಸಂದರ್ಭಗಳನ್ನು ಎದುರಿಸಿದ್ದು 1980ರಿಂದೀಚೆಗೆ ಸಾರ್ವತ್ರಿಕ ಆರೋಗ್ಯ ಕಾಳಜಿ ಸಂಬಂಧ ತಮ್ಮ ನೀತಿಗಳನ್ನು ಪರಿಷ್ಕರಿಸಿವೆ. ಒಟ್ಟು ಜನಸಂಖ್ಯೆಯ ಮೂಲ ಆರೋಗ್ಯ ಅಗತ್ಯಗಳನ್ನು ಪೂರೈಸಲು ಥಾಯ್ಲೆಂಡ್‌ನ 30 ಬಾಹ್ತ್ (ಥಾಯ್ಲೆಂಡ್ ಕರೆನ್ಸಿ) ಯೋಜನೆ, ಇಂಡೊನೇಷ್ಯಾದ



ವಿಕೇಂದ್ರೀಕರಣ ಸುಧಾರಣಾ ಕ್ರಮಗಳು ಹಾಗೂ ಸಾಮಾಜಿಕ ಆರೋಗ್ಯ ವಿಮೆ, ಬ್ರೆಜಿಲ್‌ನ ಏಕೀಕೃತ ಆರೋಗ್ಯ ವ್ಯವಸ್ಥೆ ಮಾದರಿಯಾಗಿದೆ. ಸಾರ್ವತ್ರಿಕ ಆರೋಗ್ಯ ವ್ಯಾಪ್ತಿ (11. ವಿಶ್ವ ಆರೋಗ್ಯ ಸಂಸ್ಥೆ 2003. ಸಾಮಾಜಿಕ ಆರೋಗ್ಯ ವಿಮೆ, ಪ್ರಾದೇಶಿಕ ತಜ್ಞ ಗುಂಪಿನ ಸಭೆಯ ವರದಿ, ನವದೆಹಲಿ, ವಿಶ್ವ ಆರೋಗ್ಯ ಸಂಸ್ಥೆ. 12. ಭಾರತದ ಯೋಜನಾ ಆಯೋಗ 2011: ಭಾರತದಲ್ಲಿ ಸಾರ್ವತ್ರಿಕ ಆರೋಗ್ಯ ಕುರಿತಾದ ಉನ್ನತ ಮಟ್ಟದ ತಜ್ಞರ ಗುಂಪಿನ ವರದಿ, ನವದೆಹಲಿ) ಸಾಧಿಸಲು ಪ್ರಾಥಮಿಕ ಆರೋಗ್ಯ ವ್ಯವಸ್ಥೆಯ ಬಲವರ್ಧನೆ ಅತ್ಯಗತ್ಯ ಎಂಬುದನ್ನು ಈ ದೇಶಗಳ ಉದಾಹರಣೆ ಸೂಚಿಸುತ್ತದೆ.

ಸರ್ಕಾರಿ ನೌಕರರ, ಮತ್ತವರ ಅವಲಂಬಿತರ ಅಗತ್ಯಗಳನ್ನು ಪೂರೈಸಲು ರಾಜ್ಯ ಉದ್ಯೋಗ ವಿಮಾ ಯೋಜನೆ (ಇಎಸ್‌ಐಎಸ್) ಹಾಗೂ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ ರೂಪುಗೊಂಡು ಭಾರತದಲ್ಲಿ ಆರೋಗ್ಯ ವಿಮೆಯ ಪರಿಕಲ್ಪನೆ ಆರಂಭವಾಯಿತು. ಈ ಯೋಜನೆಗಳು ಎರಡನೇ ಮತ್ತು ಮೂರನೇ ಹಂತದ ಆರೋಗ್ಯ ಕಾಳಜಿಯತ್ತ ಗಮನಹರಿಸಿದ್ದು, ಸಾರ್ವಜನಿಕ ಉದ್ಯಮ ವಲಯದಲ್ಲಿ (13. ಕುಮಾರ್ ಇಟಿ.ಎಲ್ 2011. 'ಎಲ್ಲರಿಗೂ ಆರೋಗ್ಯ ರಕ್ಷಣೆ : ಸವಾಲುಗಳು ಮತ್ತು ಅವಕಾಶಗಳು, ದಿ ಲ್ಯಾನ್ಸೆಟ್ 377) (14. ಸೆಲ್ವರಾಜ್ ಎಸ್ ಮತ್ತು ಕರನ್ ಎ.ಕೆ. 2012 : 'ಸಾರ್ವಜನಿಕ ಹೂಡಿಕೆಯ ಆರೋಗ್ಯ ವಿಮಾ ಯೋಜನೆಗಳು ಆರ್ಥಿಕ ಅಪಾಯದ ಭದ್ರತೆ ನೀಡುವಲ್ಲಿ ಪರಿಣಾಮಕಾರಿಯಾಗಿಲ್ಲ', ಎಕನಾಮಿಕ್ – ಪೊಲಿಟಿಕಲ್ ವೀಕ್ಲಿ ವಾರಪತ್ರಿಕೆಯ ಅಂಕಣ, 47(11): 60–68) ಕೆಲಸ ನಿರ್ವಹಿಸುತ್ತಿರುವ ಭಾರತೀಯರ ಒಟ್ಟಾರೆ ಶೇಕಡ 10 ರಷ್ಟಕ್ಕೂ ಕಡಿಮೆ ಜನರು ಮಾತ್ರ ಈ ಯೋಜನೆಯ ಫಲಾನುಭವಿಗಳಾಗಿದ್ದಾರೆ.

ಗ್ರಾಮೀಣ ಭಾಗಗಳಲ್ಲಿನ ಬಡ ಮಹಿಳೆಯರಿಗೆ ವೈದ್ಯಕೀಯ ನೆರವಿನ ಪ್ರಸವ ಪ್ರಕ್ರಿಯೆಯನ್ನು ಪ್ರೋತ್ಸಾಹಿಸಲು ಷರತ್ತುಬದ್ಧ ನಗದು ವರ್ಗಾವಣೆ ಯೋಜನೆ ಜನನಿ ಸುರಕ್ಷಾ ಯೋಜನೆ (ಜೆಎಸ್‌ವೈ) ಅನ್ನು 2005 ರಲ್ಲಿ ಜಾರಿಗೊಳಿಸಲಾಯಿತು. ಈ

ಯೋಜನೆ, ಶಿಶು ಮರಣ ಪ್ರಮಾಣವನ್ನು (15. ಲಿಮ್ ಎಸ್‌ಎಸ್, ದೋಂಡೋಣಾ ಎಲ್, ಹೋಯ್ಸಿಂಗ್‌ಟನ್ ಎಸ್‌ಎಲ್, ಹೋಗನ್ ಎಮ್‌ಸಿ ಇಟಿ.ಎಎಲ್ (2010) ಭಾರತದ 'ಜನನಿ ಸುರಕ್ಷಾ ಯೋಜನೆ' : ಷರತ್ತುಬದ್ಧ ಹಣವರ್ಗಾವಣೆ ಯೋಜನೆ, ಆರೋಗ್ಯ ಸುಧಾರಿಸಿ ಜನನ ಪ್ರಮಾಣ ಹೆಚ್ಚಿಸುವ ಯೋಜನೆ ಕುರಿತು ಒಂದು ಅವಲೋಕನ, ದಿ ಲ್ಯಾನ್ಸೆಟ್ 375(9730) : – 2009 2023) (16. ರಾಂದಿವೇ ಬಿ.ದಿವಾನ್ ಮತ್ತು ಡಿ ಕೋಸ್ಟಾ ಎ. 2013 : ಸಾಂಸ್ಥಿಕ ಜನನ ಹೆಚ್ಚಳಕ್ಕೆ ಭಾರತದ ಷರತ್ತುಬದ್ಧ ಹಣ ವರ್ಗಾವಣೆ ಯೋಜನೆ (ಜೆಎಸ್‌ವೈ); ಇಂತಹ ಜನನಕ್ಕೂ ಶಿಶು ಮರಣದ ನಡುವಿನ ನಂಟು. ಪಿಎಲ್‌ಓಎಸ್ ಒನ್, 8(6): ಇ67452) ಕಡಿಮೆ ಮಾಡಲು ನೆರವಾಗದಿದ್ದರೂ, ಪ್ರಮುಖವಾಗಿ ಬಡ ರಾಜ್ಯಗಳಲ್ಲಿ ಪ್ರಸವ ಪ್ರಕ್ರಿಯೆಯಲ್ಲಿ ಗಣನೀಯ ಸುಧಾರಣೆ ತರಲು ನೆರವಾಗಿದೆ.

ದುರ್ಬಲ ಗುಂಪುಗಳಿಗೆ ವಿಪರೀತ ವೈದ್ಯಕೀಯ ವೆಚ್ಚಗಳ ವಿರುದ್ಧ ಆರ್ಥಿಕ ರಕ್ಷಣೆ ನೀಡುವುದು ಮತ್ತು ಬಡತನ ರೇಖೆಗಿಂತ ಕೆಳಗಿರುವವರಿಗೆ ಉತ್ತಮ ವೈದ್ಯಕೀಯ ಸೇವೆ ಲಭಿಸುವಂತಾಗಲು 2008ರಲ್ಲಿ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಗೆ (ಆರ್‌ಎಸ್‌ಬಿವೈ)



ಚಾಲನೆ ನೀಡಲಾಯಿತು. ಪ್ರಾರಂಭದಲ್ಲಿ ಈ ಯೋಜನೆ ಕೇವಲ ಬಿಪಿಎಲ್ ಕುಟುಂಬಗಳಿಗೆ ಮಾತ್ರ ಅನ್ವಯವಾಗಿತ್ತು, ಈಗ ಅಸಂಘಟಿತ ವಲಯದ ಆಟೋ ರಿಕ್ಷಾ ಚಾಲಕರು, ಚಿಂದಿ ಆಯುವವರು ಮೊದಲಾದ ದುರ್ಬಲ ವರ್ಗದವರಿಗೂ ವಿಸ್ತರಿಸಲಾಗಿದೆ. ಈ ಯೋಜನೆಯಡಿ ವಾರ್ಷಿಕ ಮೂವತ್ತು ರೂಪಾಯಿಗಳ ನೊಂದಣಿ ಶುಲ್ಕಕ್ಕೆ ಅರ್ಜಿದಾರರ ಕುಟುಂಬಕ್ಕೆ ಸುಮಾರು 30 ಸಾವಿರ ರೂಪಾಯಿವರೆಗಿನ ಒಳರೋಗಿ ಚಿಕಿತ್ಸೆ ಲಭ್ಯವಿರುತ್ತದೆ. ಈ ವ್ಯಾಪ್ತಿಯನ್ನು ಈಗ ಒಂದು ಲಕ್ಷ ರೂಪಾಯಿಗೆ ವಿಸ್ತರಿಸಲಾಗಿದೆ. ಈ ಆರ್‌ಎಸ್‌ಬಿವೈ ಯೋಜನೆಗೆ 2016ರ ಮಾರ್ಚ್ ಅಂತ್ಯಕ್ಕೆ ಸುಮಾರು 72.8 ದಶಲಕ್ಷ ಕುಟುಂಬಗಳು (17. http://www.rsby.gov.in/Overview.aspx) ಅರ್ಹವಾಗಿದ್ದು, ಆ ಪೈಕಿ ಸುಮಾರು 41.3 ದಶಲಕ್ಷ ಕುಟುಂಬಗಳು ಈ ಯೋಜನೆ ವ್ಯಾಪ್ತಿಗೆ ಒಳಪಟ್ಟಿದ್ದವು. ಈ ಪೈಕಿ ಆಸ್ಪತ್ರೆಗೆ ದಾಖಲಾದ ಪ್ರಕರಣಗಳು ಕೇವಲ 11.8 ದಶಲಕ್ಷವಾಗಿದ್ದು, ಈ ಯೋಜನೆಯ ಸೌಲಭ್ಯಗಳ ಕಡಿಮೆ ಬಳಕೆ ಸೂಚಿಸುತ್ತದೆ. ಮುಂದುವರಿದಂತೆ, ಆರ್‌ಎಸ್‌ಬಿವೈನ ಮುಖ್ಯ ಉದ್ದೇಶವಾದ ಬಡವರ ಮೇಲಿನ ಆರೋಗ್ಯ ಸಂಬಂಧಿ ಖರ್ಚಿನ ಭಾರ ತಗ್ಗಿಸುವುದು ಈಡೇರಿದಂತೆ ಕ್ಷೇತ್ರದಲ್ಲಿನ ಲಭ್ಯವಿರುವ ಸಾಕ್ಷಿಗಳಂತೆ ತೋರುವುದಿಲ್ಲ. ಔಷಧಿ, ಡಯಾಗ್ನಸಿಸ್ ಮತ್ತು ಇತರ ಒಳರೋಗಿ ಸೇವೆಗಳು ಆರ್‌ಎಸ್‌ಬಿವೈ ಅಡಿ ಇಲ್ಲದಿರುವುದು ಹಾಗೂ ಪ್ರಯಾಣ ಮತ್ತಿತರ ವೆಚ್ಚಗಳಿಂದಾಗಿ ಬಡವರ ಮೇಲಿನ ಸಾಮಾನ್ಯ ಖರ್ಚಿನ ಹೊರತಾದ ಅಧಿಕ ವೆಚ್ಚದ ಹೊರೆ ತಗ್ಗಿಲ್ಲ (18. ಕರಣ್ ಎ., ಯಪ್. ಡಬ್ಲ್ಯು, ಮತ್ತು ಮಹಲ್ ಎ 2017: 'ಭಾರತದ ಬಡವರಿಗೆ ಆರೋಗ್ಯ ವಿಮೆ ವಿಸ್ತರಣೆ : ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆಯ ಪರಿಣಾಮ ಅನುಷ್ಠಾನ', ಸಮಾಜ ವಿಜ್ಞಾನ ಮತ್ತು ವೈದ್ಯಕೀಯ : 181 :83-92) ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಉತ್ತಮ ಆರೋಗ್ಯ ರಕ್ಷಣಾ ಸೌಕರ್ಯ ಹೊಂದಿರುವ ಕೇರಳದಂತಹ ರಾಜ್ಯಗಳಲ್ಲಿ ಆರ್‌ಎಸ್‌ಬಿವೈ ಯೋಜನೆಯ ಸಮರ್ಪಕ ಬಳಕೆಯಾಗುತ್ತಿದೆ.

ಕನಿಷ್ಠ ಎಂಟು ರಾಜ್ಯ ಸರ್ಕಾರಿ ವೈದ್ಯಕೀಯ ವಿಮಾ ಯೋಜನೆಗಳು ಜಾರಿಯಲ್ಲಿವೆ. ಕರ್ನಾಟಕದ ಬಿಪಿಎಲ್ ಕುಟುಂಬಗಳಿಗಾಗಿ ವಾಜಪೇಯಿ ಆರೋಗ್ಯಶ್ರೀ ಯೋಜನೆ (ವಿಎಎಸ್) ಮತ್ತು ಯಶಸ್ವಿನಿ ಸಹಕಾರಿ ರೈತ ಆರೋಗ್ಯ ರಕ್ಷಣಾ ಯೋಜನೆ; ಆಂಧ್ರಪ್ರದೇಶದ (ತೆಲಂಗಾಣ ಸೇರಿದಂತೆ) ರಾಜೀವ್ ಗಾಂಧಿ ಆರೋಗ್ಯ ಶ್ರೀ ಯೋಜನೆ (ಆರ್‌ಎಎಸ್), ತಮಿಳುನಾಡಿನ ಮುಖ್ಯಮಂತ್ರಿ ಆರೋಗ್ಯ ವಿಮಾ ಯೋಜನೆ, ಮಹಾರಾಷ್ಟ್ರದ ರಾಜೀವ್ ಗಾಂಧಿ ಜೀವನ್‌ದಾಯಿ ಆರೋಗ್ಯ ಯೋಜನೆ, ಗುಜರಾತ್‌ನ ಮುಖ್ಯಮಂತ್ರಿ ಅಮೃತಮ್ ಯೋಜನೆ, ಛತ್ತೀಸ್‌ಗಢದ ಸಂಜೀವಿನಿ ಕೋಶ್ ಮುಖ್ಯವಾದವು. ಇವುಗಳ ಪೈಕಿ



ಆಂಧ್ರಪ್ರದೇಶದ ಆರ್‌ಎಎಸ್ ಸುಮಾರು ಶೇಕಡ 85ರಷ್ಟು ವ್ಯಾಪ್ತಿ ಹೊಂದಿದ್ದು ಸಮಗ್ರ ಆರೋಗ್ಯ ವ್ಯವಸ್ಥೆಗೆ ಹತ್ತಿರದಲ್ಲಿದೆ. ಆದಾಗ್ಯೂ ಅದು ಎರಡನೇ ಮತ್ತು ಮೂರನೇ ಹಂತದ ಚಿಕಿತ್ಸೆಯತ್ತ ಹೆಚ್ಚು ಗಮನ ನೀಡುತ್ತಿರುವುದರಿಂದ ಹೃದ್ರೋಗ, ಕ್ಯಾನ್ಸರ್ ಮತ್ತು ಮೂತ್ರಪಿಂಡ ವೈಫಲ್ಯ ಚಿಕಿತ್ಸೆಗಳಿಗಾಗಿ ಸುಮಾರು ಅರ್ಧಕ್ಕೂ ಹೆಚ್ಚು ಹಣ ಪಾವತಿಗಳಾದವು. ಆದರೆ ಪ್ರಾಥಮಿಕ ಹಂತದಲ್ಲಿ (19. ರಾವ್, ಸುಜಾತಾ 2017 : ನಾವು ಕಾಳಜಿ ಮಾಡುವೆವೇ? ಭಾರತದ ಆರೋಗ್ಯ ವ್ಯವಸ್ಥೆ : ದೆಹಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಪ್ರೆಸ್) ಹೆಚ್ಚಿನ ಗಮನ ಹರಿಸಿ ಚಿಕಿತ್ಸೆ ನೀಡಬಹುದಾದ ಶಿಶುಮರಣ ಪ್ರಮಾಣ ಹೆಚ್ಚಳ, ಶ್ವಾಸಕೋಶದ ಸೋಂಕಿನಿಂದ ವೈಕಲ್ಯ, ಅತಿಸಾರ, ಡಯೇರಿಯಾ ರೋಗ, ಕ್ಷಯ ರೋಗ,



ಇಸ್ಕಿಮಿಕ್ (ರಕ್ತದ ಕೊರತೆಯ ಹೃದ್ರೋಗ) ಮೊದಲಾದವು ಸುಮಾರು ಶೇಕಡ 40ರಷ್ಟಿನ ಅತಿಬಡ ಜನಸಂಖ್ಯೆಯನ್ನು ಬಾಧಿಸುತ್ತಿವೆ. ಒಟ್ಟಾರೆಯಾಗಿ 2015ರಲ್ಲಿ 280 ದಶಲಕ್ಷಕ್ಕೂ ಹೆಚ್ಚು ಜನರಿಗೆ ಅಂದರೆ ದೇಶದ ನಾಲ್ಕನೇ ಒಂದು ಭಾಗಕ್ಕೆ ಸರ್ಕಾರಿ ಸ್ವಾಮ್ಯದ ವಿಮಾ ಯೋಜನೆ ಅಂದರೆ ಸಿಜಿಎಚ್‌ಎಸ್, ಇಎಸ್‌ಐಎಸ್, ರಾಜ್ಯ ವಿಮಾ ಯೋಜನೆ ಹಾಗೂ ಆರ್‌ಎಸ್‌ಬಿವೈಗಳ ಮೂಲಕ ಒಂದು ರೀತಿಯ ಆರೋಗ್ಯ ಭದ್ರತೆ ನೀಡಲಾಗುತ್ತಿದೆ. ಆದಾಗ್ಯೂ ಕೇಂದ್ರ ಅಥವಾ ರಾಜ್ಯ ಸರ್ಕಾರಿ ಮಟ್ಟದ ವಿಮಾ ಯೋಜನೆಗಳು ಪ್ರಾಥಮಿಕ ಆರೋಗ್ಯ ಕಾಳಜಿ ಒಳಗೊಳ್ಳುವುದಿಲ್ಲ. ಮೇಘಾಲಯದ ವಿಮಾ ಯೋಜನೆ ಪ್ರಾಥಮಿಕ ಆರೋಗ್ಯವನ್ನು ಭಾಗಶಃ ಒಳಗೊಂಡಿದೆ. ಈ ಎಲ್ಲ ಯೋಜನೆಗಳು ಎರಡನೇ ಅಥವಾ ಮೂರನೇ ಹಂತದ ಆರೋಗ್ಯ ಸಮಸ್ಯೆಯತ್ತ ಚಿತ್ತ ನೆಟ್ಟಿವೆ.

## ಮುಂದಿನ ದಾರಿ

ಸಮಗ್ರ ಪ್ರಾಥಮಿಕ ಆರೋಗ್ಯದೆಡೆಗೆ ಸರ್ಕಾರದ ನೀತಿ ಬದಲಾಗುತ್ತಿರುವುದಕ್ಕೆ



ಭಾರತದ ಹೊಸ ಆರೋಗ್ಯ ನೀತಿ 2017 ಮಾದರಿಯಾಗಿದೆ ಮತ್ತು ಎರಡು ಪ್ರಮುಖ ಕಾರಣಗಳಿಂದ ಮಹತ್ವ ಪಡೆದಿದೆ. ಮೊದಲನೆಯದಾಗಿ ಅದು ಆರೋಗ್ಯವನ್ನು ಕ್ಷೇಮದಿಂದ ಅಳೆಯುತ್ತಿದೆ ಹೊರತು ಕಾಯಿಲೆ ಇಲ್ಲದಿರುವುದಲ್ಲ ಮತ್ತು ಎರಡನೆಯದಾಗಿ ಪ್ರಾಥಮಿಕ ಆರೋಗ್ಯದತ್ತ ಗುರಿಯಿಟ್ಟು ಸಾರ್ವಜನಿಕ ವಲಯದ ಪ್ರಮುಖ ಪಾತ್ರವನ್ನು ಪ್ರತಿನಿಧಿಸುತ್ತದೆ. ಆರೋಗ್ಯ ವಲಯದಲ್ಲಿ ನಿರೀಕ್ಷೆಗಳು ಹೆಚ್ಚುತ್ತಿದ್ದರೂ ಆರೋಗ್ಯ ವಲಯಕ್ಕೆ ಜಿಡಿಪಿಯ ಶೇಕಡ 2.5ರಷ್ಟು ಪಾಲನ್ನು 2025ಕ್ಕೆ ಮುಂದೂಡಿರುವ ಸಾಧಾರಣ ಗುರಿ ಆಶ್ಚರ್ಯ ಮೂಡಿಸಿದೆ.

ಆರ್ಥಿಕ ವಿಪತ್ತಿನಿಂದ ಪಾರಾಗಲು ಖಾಸಗಿ – ಸಾರ್ವಜನಿಕ ಪಾಲುದಾರಿಕೆ ಅವಲಂಬಿಸಲಾಗುತ್ತಿದೆ. ಆದಾಗ್ಯೂ ಈ ನಿಟ್ಟಿನಲ್ಲಿ ಪ್ರೋತ್ಸಾಹಕ ಸಾಕ್ಷ್ಯಾಧಾರಗಳು ದೊರೆಯದಿರುವುದರಿಂದ ಅತ್ಯಂತ ಕಾಳಜಿಯಿಂದ ಯೋಜನೆಯ ರೂಪುರೇಷೆ ಸಿದ್ಧಪಡಿಸದಿದ್ದರೆ, ಸಾರ್ವಜನಿಕ ಸಬ್ಸಿಡಿಗಳ ಮೂಲಕ ಖಾಸಗಿ ವಲಯ ಶ್ರೀಮಂತಗೊಳ್ಳುತ್ತದೆ ಎಂಬುದನ್ನು ಸೂಚಿಸುತ್ತದೆ. ಪ್ರಾಥಮಿಕ ಆರೋಗ್ಯ ಸೌಲಭ್ಯ ಸೂಕ್ತವಾಗಿದ್ದು ಮತ್ತು ಕೇವಲ ಸರ್ಕಾರ ಮಾತ್ರ ಕಾರ್ಯನಿರ್ವಹಿಸಬಹುದಾದರೆ ಆರೋಗ್ಯ ವಿಮಾ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಸಾಧ್ಯ ಎಂಬುದನ್ನು ಅಂತಾರಾಷ್ಟ್ರೀಯ ಅನುಭವದಿಂದ ತಿಳಿಯಬಹುದು. ಸರ್ವರಿಗೂ ಆರೋಗ್ಯ ವಾಸ್ತವದಲ್ಲಿ ಕಾಣಬೇಕಾದರೆ, ಆರೋಗ್ಯ ವಲಯದ ವೆಚ್ಚ ಹೆಚ್ಚಿಸಲು ಸರ್ಕಾರ ಸೂಕ್ತ ಹಣಕಾಸು ಮೂಲಗಳನ್ನು ಕ್ರೋಢೀಕರಿಸುವುದರ ಜತೆಗೆ ವಲಯದ ಸಾಮರ್ಥ್ಯ ಹೆಚ್ಚಳಕ್ಕೆ ಸುಧಾರಣಾ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕಿದೆ.

ಈ ಉದ್ದೇಶಕ್ಕಾಗಿ ಅಗತ್ಯವಿರುವ ಹಣಕಾಸು ನೆರವಿನ ಬಗ್ಗೆ ರಾವ್ (2017) (20. ರಾವ್, ಸುಜಾತಾ 2017, ಐಜಿಐಡಿ) ಅಂದಾಜಿಸಿದ್ದಾರೆ. ಈ ಅಂದಾಜಿನಂತೆ, ವ್ಯವಸ್ಥೆಯನ್ನು ಬಲಗೊಳಿಸಲು ಸಮರ್ಪಕ ಆರೋಗ್ಯ ಮೂಲಸೌಕರ್ಯ ಒದಗಿಸಲು ಜಿಡಿಪಿಯ ಶೇಕಡ 1 ರಿಂದ 1.5 ರಷ್ಟನ್ನು ಬಂಡವಾಳ ಹೂಡಿಕೆಗೆ ಮೀಸಲಿರಿಸಬೇಕು ಮತ್ತು ಶೇಕಡ 1 ರಷ್ಟನ್ನು ಜನಸಂಖ್ಯೆಯ ಶೇಕಡ 60 ರಷ್ಟು ಜನರಿಗೆ ಸಮಗ್ರ ಪ್ರಾಥಮಿಕ



ಆರೋಗ್ಯ ಕಾಳಜಿ, ದ್ವಿತೀಯ ಮಟ್ಟದ ಮತ್ತು ಆಯ್ದ ಕೆಲವು ಮೂರನೇ ಹಂತದ ಚಿಕಿತ್ಸಾ ಕ್ರಮಗಳಿಗೆ ಉಚಿತ ಸಾರ್ವತ್ರಿಕ ಪ್ರವೇಶ ನೀಡಬೇಕು. ಸಾರ್ವಜನಿಕ ಶುಚಿತ್ವ, ತ್ಯಾಜ್ಯ ವಿಲೇವಾರಿ, ಪೋಷಣೆ ಮತ್ತು ವಸತಿ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚುವರಿಯಾಗಿ, ಜಿಡಿಪಿಯ ಕನಿಷ್ಠ ಶೇಕಡ 2 ರಷ್ಟನ್ನು ಬಂಡವಾಳ ಹೂಡಬೇಕಾದ ಅಗತ್ಯವಿದೆ.

2030ರ ಸುಸ್ಥಿರ ಅಭಿವೃದ್ಧಿ ಗುರಿ ಪಟ್ಟಿಯಲ್ಲಿ ಸಾರ್ವತ್ರಿಕ ಆರೋಗ್ಯ 3.8ನೇ ಗುರಿಯಾಗಿ ಉಲ್ಲೇಖವಾಗಿದೆ. ಈ ಜಾಗತಿಕ ಗುರಿಯನ್ನು ಸಾಧಿಸುವಲ್ಲಿ ಭಾರತ ಮಹತ್ವದ ಪಾತ್ರ ವಹಿಸಲಿದೆ. 2030ರ ವೇಳೆಗೆ ಎಲ್ಲರಿಗೂ ಆರೋಗ್ಯ ಭದ್ರತೆ ನೀಡಬೇಕೆನ್ನುವ ಭಾರತದ ದೀರ್ಘಾವಧಿ ಗುರಿ ಸಾಧಿಸುವಲ್ಲಿ 2017ರ ಆರೋಗ್ಯ ನೀತಿ ಅನುಷ್ಠಾನ ಮಹತ್ವದ್ದಾಗಿದೆ. ❑

## ಸುದ್ದಿ ತುಣುಕು

ಸರಕು ಮತ್ತು ಸೇವೆಗಳ ತೆರಿಗೆ – ಜಿಎಸ್‌ಟಿ ಜಾರಿಯಿಂದ ಭಾರತದಲ್ಲಿ ಧನಾತ್ಮಕ ಪರಿಣಾಮ ಉಂಟಾಗಲಿದೆ ಎಂದು ಮಾರುಕಟ್ಟೆ ಸಂಶೋಧನೆ ಮಾಡುವ ಮೂಡಿಯ ಹೂಡಿಕೆ ಸೇವಾ ಸಂಸ್ಥೆ ವರದಿ ತಿಳಿಸಿದೆ. ಸರಕು ಮತ್ತು ಸೇವೆಗಳ ತೆರಿಗೆಯಿಂದಾಗಿ ದೇಶದ ಒಟ್ಟು ದೇಶೀಯ ಉತ್ಪನ್ನ – ಜಿಡಿಪಿ ಹೆಚ್ಚಾಗಲಿದೆ. ಜೊತೆಗೆ ತೆರಿಗೆ ಸಂಗ್ರಹಣೆಯಿಂದಾಗಿ ಉಂಟಾಗುವ ಆದಾಯವೂ ಹೆಚ್ಚಲಿದೆ. ಹೊಸ ತೆರಿಗೆ ಪದ್ಧತಿ ಜಾರಿಯಿಂದಾಗಿ ವ್ಯಾಪಾರ ಮತ್ತು ವಹಿವಾಟು ನಡೆಸುವ ವಾತಾವರಣ ಉಂಟಾಗಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ದೇಶಾದ್ಯಂತ ಒಂದೇ ಮಾರುಕಟ್ಟೆ ರೂಪಿತವಾಗಲಿದೆ. ಇದರಿಂದಾಗಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಮತ್ತಷ್ಟು ಆಕರ್ಷಣೆ ಪರಿಸರ ಸಾಧ್ಯವಾಗಲಿದೆ ಎಂದು ಮೂಡಿಸ್‌ನ ಸವರಿನ್ ರಿಸ್ಕ್‌ನ ಉಪಾಧ್ಯಕ್ಷ ಶ್ರೀ ವಿಲಿಯಂ ಫಾಸ್ಟರ್ ತಿಳಿಸಿದ್ದಾರೆ.

ಸದ್ಯ ಮಾರುಕಟ್ಟೆ ಸಂಶೋಧನಾ ಸಂಸ್ಥೆ ದೇಶದ ಅರ್ಥ ವ್ಯವಸ್ಥೆಗೆ ಬಿಎಎ3 ಎಂಬ ರೇಟಿಂಗ್ ನೀಡಿದೆ. ಇದರಿಂದಾಗಿ ದೇಶದ ಅರ್ಥ ವ್ಯವಸ್ಥೆ ಧನಾತ್ಮಕ ಬೆಳವಣಿಗೆ ಹೊಂದುತ್ತಿದೆ ಎಂದು ಸೂಚಿಸಲಾಗಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒಂದೇ ರೀತಿಯ ಮಾಹಿತಿ ತಂತ್ರಜ್ಞಾನ ಹೊಂದಿರುವುದರಿಂದ ಸರಳ ತೆರಿಗೆ ವ್ಯವಸ್ಥೆ, ಭಾರತದಾದ್ಯಂತ ಸಮಾನ ವ್ಯವಸ್ಥೆ ಇರುವುದು ಅಭಿವೃದ್ಧಿಗೆ ಪೂರಕವಾಗಿರಲಿದೆ ಎಂದು ಅವರು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ವಿಕ್ರಮ

# ವಿಶೇಷ ಚೇತನರ ಸಶಕ್ತೀಕರಣ

* ಸಂಧ್ಯಾ ಲಿಮಯೆ



**ಭಾರತದಲ್ಲಿ ಸಾಮಾಜಿಕ ಸುಭದ್ರತಾ ಕಾರ್ಯಕ್ರಮಗಳು ಸಮರ್ಪಕವಾಗಿ ವಿಶೇಷ ಚೇತನರನ್ನು ತಲುಪುತ್ತಿಲ್ಲ. ಹಲವಾರು ಸಂಸ್ಥೆಗಳು ಅಥವಾ ಇಲಾಖೆಗಳು ಭದ್ರತಾ ಪ್ರಯೋಜನಗಳನ್ನು ನಿರ್ವಹಿಸುವ ಬದಲಾಗಿ ಒಂದು ಸಂಸ್ಥೆಯ ಅಡಿಯಲ್ಲಿ ಒಬ್ಬ ಮುಖ್ಯ ನಿರ್ವಾಹಕ ಅಧಿಕಾರಿಯೊಂದಿಗೆ ಇವನ್ನೆಲ್ಲಾ ಸಮಗ್ರೀಕರಿಸುವ ಕಾರ್ಯ ಜರೂರಾಗಿ ಆಗಬೇಕಾಗಿದೆ.**

ಸಾಂಪ್ರದಾಯಿಕವಾಗಿ ಭಾರತದಲ್ಲಿ ಕುಟುಂಬವು ಒಂದು ಔಪಚಾರಿಕ ಸಾಮಾಜಿಕ ವ್ಯವಸ್ಥೆಯಾಗಿದೆ. ಈ ಹಿಂದೆ ಎಲ್ಲರೂ ಒಟ್ಟಿಗೆ ಬಾಳುವ, ಕುಟುಂಬ ಸದಸ್ಯರು ಕೈಲಾಗದವರ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿದ್ದ ಒಟ್ಟು ಕುಟುಂಬಗಳಿದ್ದವು. ಕೈಗಾರಿಕಾ ಕ್ರಾಂತಿ, ಆಧುನೀಕರಣ ಮತ್ತು ನಗರೀಕರಣಗಳ ಪ್ರಭಾವ ಹಾಗೂ ನಗರಗಳಲ್ಲಿ ಉದ್ಯೋಗಾವಕಾಶಗಳು ಈ ಜಂಟಿಕುಟುಂಬ ವ್ಯವಸ್ಥೆಯು ಕುಸಿಯುವುದಕ್ಕೆ ಕಾರಣವಾದವು; ಅಷ್ಟೇ ಅಲ್ಲದೆ ಇವು ಸಾಮಾಜಿಕ ಸುರಕ್ಷತೆಯ ಈ ಸಂಸ್ಥೆಯನ್ನು ಅಸ್ಥಿರಗೊಳಿಸಿದವು. ಆದ್ದರಿಂದಲೇ ಇಂದು ಸರ್ಕಾರಗಳು ತಮ್ಮ ನಾಗರಿಕರ ರಕ್ಷಣೆಗಾಗಿ ಕ್ರಮಗಳನ್ನು ಕೈಗೊಳ್ಳಬೇಕಾದ ಪರಿಸ್ಥಿತಿ ಬಂದಿದೆ.

ಜನಸಮುದಾಯದ ಕಲ್ಯಾಣಕ್ಕಾಗಿ ಸರ್ಕಾರವು ತೆಗೆದುಕೊಳ್ಳುವ ಕ್ರಿಯಾ ಕಾರ್ಯಕ್ರಮವೇ ಸಾಮಾಜಿಕ ಸುಭದ್ರತೆ. ಹೀಗಾಗಿ ಮಕ್ಕಳು, ವೃದ್ಧರು ಮತ್ತು ವಿಶೇಷ ಚೇತನರಾಗಿರುವ ಜನರಂತಹ ತೊಂದರೆಗೆ ತುತ್ತಾಗಬಲ್ಲವರಿಗೆ ತಮ್ಮ ಜೀವನ ಮಟ್ಟವನ್ನು ಸುಧಾರಿಸಲು ಹಲವಾರು ರೀತಿಗಳಲ್ಲಿ ಬೆಂಬಲಗಳು ಮತ್ತು ಸಂಪನ್ಮೂಲಗಳನ್ನು ಒದಗಿಸುವುದೇ ಸಾಮಾಜಿಕ ಸುಭದ್ರತೆಯ ಉದ್ದೇಶವಾಗಿದೆ. ಭಾರತದಲ್ಲಿ ಸಾಮಾಜಿಕ ಸುಭದ್ರತೆಯೆಂದರೆ ಸಾಮಾಜಿಕ ವಿಮೆ, ರಾಷ್ಟ್ರೀಯ ಭವಿಷ್ಯನಿಧಿ, ಸಾಮಾಜಿಕ ನೆರವು, ಮಾಲಿಕ ಹೊಣೆಗಾರಿಕೆ ಯೋಜನೆ, ಸಾಮಾಜಿಕ ಸುಭದ್ರತೆಗಾಗಿ ಸಾರ್ವತ್ರಿಕ ಯೋಜನೆಗಳು (ಮಾರುತಿ ಮತ್ತು ಮಸ್ಪಿಯರಿ ಬೇಗಂ, 2011).

ದೇಶದ ನಾಗರಿಕರ ಸಾಮಾಜಿಕ ಸುಭದ್ರತೆಯನ್ನು ನೋಡಿಕೊಳ್ಳುವುದು ಸರ್ಕಾರಗಳ ಜವಾಬ್ದಾರಿಯೆಂದು ಭಾರತ ಸಂವಿಧಾನದ ವಿಧಿ 43ರಲ್ಲಿ ಉಲ್ಲೇಖಿಸಲಾಗಿದೆ. ಕಾನೂನಿನ ಪ್ರಕಾರ ಯಾವ ವ್ಯಕ್ತಿಗೂ ಸಮಾನತೆಯನ್ನು ನಿರಾಕರಿಸಲಾಗದೆಂದು ವಿಧಿ 14 (ಏಳನೆಯ ತಪ್ಸೀಲು) ಖಚಿತಪಡಿಸುತ್ತದೆ. ಈ ನಿಟ್ಟಿನಲ್ಲಿ ವಿಶೇಷ ಚೇತನರು ಮತ್ತು ಉದ್ಯೋಗಕ್ಕೆ ಅನರ್ಹರಾದ ವ್ಯಕ್ತಿಗಳಿಗೆ ಪರಿಹಾರ ಮತ್ತು ಸಹಾಯವನ್ನು ಒದಗಿಸುವಂತೆ ಸರ್ಕಾರಗಳಿಗೆ ನಿರ್ದೇಶಿಸಲಾಗಿದೆ. ನಿರುದ್ಯೋಗ, ವೃದ್ಧಾಪ್ಯ, ಕಾಯಿಲೆ ಮತ್ತು ವಿಶೇಷ ಚೇತನರಿರುವ ಸಂದರ್ಭದಲ್ಲಿ ಅಂತಹವರಿಗೆ ಕೆಲಸದ ಹಕ್ಕು, ಶಿಕ್ಷಣದ ಹಕ್ಕುಗಳನ್ನು ಖಚಿತಪಡಿಸುವ ಪರಿಣಾಮಕಾರಿ ಅವಕಾಶಗಳನ್ನು ಸರ್ಕಾರ ತನ್ನ ಆರ್ಥಿಕ ಸಾಮರ್ಥ್ಯದ ಮತ್ತು ಬೆಳವಣಿಗೆಯ ಮಿತಿಯಲ್ಲಿ ಒದಗಿಸಿಕೊಡಬೇಕೆಂದು ವಿಧಿ 41 ನಿರ್ದೇಶಿಸಿದೆ (ಶಂಕರ್ 2006). ಕಾಯ್ದೆಯು (ವಿಶೇಷ ಚೇತನ ವ್ಯಕ್ತಿ ಕಾಯ್ದೆ, 1995 ಮತ್ತು 2016ರ ವಿಶೇಷ ಚೇತನ ವ್ಯಕ್ತಿಗಳ ಹಕ್ಕುಗಳು) ಪ್ರಸವ ಪೂರ್ವ ಮತ್ತು ಪ್ರಸವೋತ್ತರ ಆರೈಕೆಗಾಗಿ ತಾಯಿ ಮತ್ತು ಮಗುವಿಗೆ ಸಾಮಾಜಿಕ ಸುಭದ್ರತೆ ಅವಕಾಶವನ್ನು ಒದಗಿಸುತ್ತದೆ. ನಿರುದ್ಯೋಗ ಭತ್ಯೆ ಮತ್ತು ವಿಮೆಗಳಂತಹ ಸಾಮಾಜಿಕ ಸುಭದ್ರತಾ ಅವಕಾಶಗಳನ್ನು ಉಲ್ಲೇಖಿಸುತ್ತದೆ ಮತ್ತು ವಿಶೇಷ ಚೇತನರಾಗಿರುವ ಹೆಂಗಸರು ಹಾಗೂ ಮಕ್ಕಳನ್ನೂ ಸೇರಿದಂತೆ ವಿಶೇಷ ಚೇತನರನ್ನು ಎಲ್ಲ ರೀತಿಗಳ ಶೋಷಣೆ ಇತ್ಯಾದಿಗಳಿಂದ ರಕ್ಷಿಸುತ್ತಾ ಅವರು ಸ್ವತಂತ್ರ ಜೀವನವನ್ನು ನಡೆಸಲು ಬೆಂಬಲ ನೀಡುತ್ತದೆ.

### ಸಾಮಾಜಿಕ ಸುಭದ್ರತಾ ಯೋಜನೆ

ಪ್ರತಿಯೊಂದು ರಾಜ್ಯವು ಬಡವರಾದ ಅಥವಾ ತಮ್ಮನ್ನು ತಾವು

* ಪ್ರಾಧ್ಯಾಪಕರು, ವಿಶೇಷ ಚೇತನರ ಅಧ್ಯಯನ ಮತ್ತು ಕ್ರಿಯಾಶಾಲೆ, ಟಾಟಾ ಸಾಮಾಜಿಕ ವಿಜ್ಞಾನ ಸಂಸ್ಥೆ, ಮುಂಬಯಿ.
E-mail : limaye.sandhya@gmail.com / slimaye@tiss.edu



ನೋಡಿಕೊಳ್ಳಲಾಗದಂತಹ ವಿಭಿನ್ನ ಸಾಮರ್ಥ್ಯದ ಜನರಿಗಾಗಿ ಸಾಮಾಜಿಕ ಸುಭದ್ರತಾ ಯೋಜನೆಯನ್ನು ಹೊಂದಿದೆ ಮತ್ತು ಸರ್ಕಾರವು ಆಯಾ ರಾಜ್ಯಗಳ ಮಾರ್ಗದರ್ಶನಗಳ ಮತ್ತು ಅರ್ಜಿದಾರರ ವಾರ್ಷಿಕ ಆದಾಯದ ಅನುಸಾರವಾಗಿ ತಿಂಗಳ ನಿರ್ವಹಣಾ ಭತ್ಯೆಯನ್ನು ಒದಗಿಸುತ್ತದೆ.

ಇಂದಿರಾಗಾಂಧಿ ರಾಷ್ಟ್ರೀಯ ವಿಶೇಷ ಚೇತನರ ಪಿಂಚಣಿ ಯೋಜನೆ, ವಿಶೇಷ ಚೇತನರಾದ ವ್ಯಕ್ತಿಗಳ ಸಶಕ್ತೀಕರಣಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಗಳು, ವಿಶೇಷ ಚೇತನ ವಿದ್ಯಾರ್ಥಿಗಳಿಗಾಗಿ ಸ್ಕಾಲರ್‌ಷಿಪ್, ಮುಖ್ಯಮಂತ್ರಿ ಸಶಕ್ತೀಕರಣ ಶಿಕ್ಷಣ ಯೋಜನಾ, ಸಹಾಯಕ ವಸ್ತುಗಳು ಮತ್ತು ಉಪಕರಣಗಳನ್ನು ಖರೀದಿಸಲು ನೆರವು ಹಾಗೂ ಉದ್ಯೋಗದಲ್ಲಿ ಮೀಸಲಾತಿ ಹೀಗೆ ಸಾಮಾಜಿಕ ಸುಭದ್ರತಾ ಯೋಜನೆಯ ಅಡಿಯಲ್ಲಿ ಹಲವಾರು ಕಾರ್ಯಕ್ರಮಗಳಿವೆ.

* **ಮುನ್ನೆಚ್ಚರಿಕೆ ಸಾಮಾಜಿಕ ಸುಭದ್ರತಾ ಯೋಜನೆಗಳು :** ಸಾಮಾಜಿಕ ನೆರವಿನ ಗುರಿಯುಳ್ಳ ಯೋಜನೆಗಳಾಗಿದ್ದು, ಆರೋಗ್ಯ ಆರೈಕೆ, ರೋಗಗಳಿಗೆ ನಿರೋಧಕತೆ, ತಾಯಿ ಮತ್ತು ಮಗುವಿನ ಪ್ರಸವ ಪೂರ್ವ ಮತ್ತು ಪ್ರಸವೋತ್ತರ ವಿಪತ್ತುಗಳನ್ನು ತಡೆಯುವ ಗುರಿಯನ್ನು ಹೊಂದಿರುವ ಯೋಜನೆಗಳು.

* **ಪ್ರೋತ್ಸಾಹಕ ಸಾಮಾಜಿಕ ಸುಭದ್ರತಾ ಯೋಜನೆಗಳು :** ಆರೋಗ್ಯ, ಶಿಕ್ಷಣ, ಪುನರ್ವಸತಿ ಸೇವೆಗಳು ಮತ್ತು ಮೀಸಲಾತಿಗಳನ್ನು ಉತ್ತೇಜಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವಾರು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ವಿಶೇಷ ಚೇತನರಾಗಿರುವ ಜನರಿಗೆ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಮಾಡಲು ನೆರವನ್ನು ಒದಗಿಸುವ ಯೋಜನೆಗಳು.

* **ತೆರಿಗೆ :** ವಿಶೇಷ ಚೇತನರಾದ ವ್ಯಕ್ತಿಗಳು ವಿಭಾಗ 80 ಯು ರ ಅಡಿಯಲ್ಲಿ ವೃತ್ತಿ ತೆರಿಗೆ ಮತ್ತು ಆದಾಯ ತೆರಿಗೆ ಕಡಿತಕ್ಕೆ ಅರ್ಹರು. ಅವಲಂಬಿತರಾದ ವಿಶೇಷ ಚೇತನತೆಯುಳ್ಳ ವ್ಯಕ್ತಿಗಳ ಕಾನೂನು ಪಾಲಕರು ವಿಭಾಗ 80 ಡಿಡಿ ಅಡಿಯಲ್ಲಿ ಆದಾಯ ತೆರಿಗೆ ಕಡಿತಕ್ಕೆ ಅರ್ಹರು. ಈ ಕಡಿತವು ವ್ಯಕ್ತಿಯ ವಿಶೇಷ ಚೇತನತೆಯ ಮಟ್ಟದ ಆಧಾರಲ್ಲಿರುತ್ತದೆ.

* **ಶಿಕ್ಷಣ :**

ಅ. ಒಂದು ವರ್ಷಕ್ಕಿಂತ ಹೆಚ್ಚು ಕಾಲ ಹತ್ತನೆಯ ತರಗತಿ(ಮೆಟ್ರಿಕ್)/ ವೃತ್ತಿಪರ/ ತಾಂತ್ರಿಕ ಕೋರ್ಸುಗಳಲ್ಲಿ ಓದುತ್ತಿರುವ ವಿಶೇಷ ಚೇತನ ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ವಿದ್ಯಾರ್ಥಿವೇತನ (ಸ್ಕಾಲರ್‌ಷಿಪ್) ಗಳನ್ನು ಒದಗಿಸಲಾಗುತ್ತದೆ.



ಸ್ವಮಗ್ನತೆ(ಆಟಿಸಂ), ಮಸ್ತಿಷ್ಕ ಲಕ್ವ ಪೀಡಿತ (ಸೆರೆಬ್ರಲ್ ಪಾಲ್ಸಿ) / ಮನೋವೈಕಲ್ಯ /ಬಹುರೂಪಿ ವಿಶೇಷ ಚೇತನತೆಯುಳ್ಳ ವಿದ್ಯಾರ್ಥಿಗಳಿಗೆ 9ನೆಯ ತರಗತಿಯ ನಂತರ ಸ್ಕಾಲರ್‌ಷಿಪ್ ಒದಗಿಸಲಾಗುತ್ತದೆ. ಇಂತಹ ಸ್ಕಾಲರ್‌ಷಿಪ್‌ಗಳಿಗೆ ಅರ್ಹರಾಗಲು ವಿದ್ಯಾರ್ಥಿಗಳ ವಿಶೇಷ ಚೇತನತೆಯು 40%ಗಿಂತ ಹೆಚ್ಚಿರಬೇಕು ಮತ್ತು ಅವರ ಕುಟುಂಬದ ತಿಂಗಳ ಆದಾಯ ರೂ 15000ಕ್ಕಿಂತ ಹೆಚ್ಚಿರಬಾರದು.

ಆ. ಪದವಿ/ಸ್ನಾತಕ ಪದವಿ ವೃತ್ತಿಪರ ಕೋರ್ಸುಗಳಲ್ಲಿ ಓದುತ್ತಿರುವ ದೃಷ್ಟಿಮಾಂದ್ಯರು/ಶ್ರವಣಶಕ್ತಿ ಮಾಂದ್ಯ ವಿದ್ಯಾರ್ಥಿಗಳಿಗೆ ಎಡಿಟಿಂಗ್ ಸಾಫ್ಟ್‌ವೇರ್ ಹೊಂದಿರುವ ಕಂಪ್ಯೂಟರನ್ನು ಪಡೆಯಲು ಹಣಕಾಸು ನೆರವು ಮತ್ತು ಮಸ್ತಿಷ್ಕ ಲಕ್ವ ಹೊಂದಿರುವ ವಿದ್ಯಾರ್ಥಿಗಳಿಗೆ ಸಪೋರ್ಟ್ ಆಕ್ಸೆಸ್ ಸಾಫ್ಟ್‌ವೇರನ್ನು ನೀಡಲಾಗುತ್ತದೆ.

ಇ. ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಶೇಕಡ ಮೂರರಷ್ಟು ಮೀಸಲಾತಿಯನ್ನು ವಿಶೇಷ ಚೇತನ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ.

ಈ. ವಿಶೇಷ ಚೇತನ ಮಕ್ಕಳಿಗೆ ಸಮಗ್ರ ಶಿಕ್ಷಣ ಯೋಜನೆ: ಈ ಯೋಜನೆಯು ವಿಶೇಷ ಚೇತನತೆಯುಳ್ಳ ವಿದ್ಯಾರ್ಥಿಗಳಿಗೆ ಕೈಗೆಟಕುವ ಮತ್ತು ಪ್ರತಿಬಂಧಕರಹಿತವಾದ ಅಂತರ್ ರಚಿತ ಮೂಲಭೂತ ರಚನೆ ಮತ್ತು ಸಾರಿಗೆ ಸೌಲಭ್ಯಗಳು, ಪುಸ್ತಕಗಳು, ಸಮವಸ್ತ್ರಗಳು ಮತ್ತು ಪಠ್ಯ ಪರಿಕರಗಳು, ವಿಶೇಷ ಕಲಿಕಾ ಸಹಾಯಕ ವಸ್ತುಗಳು ಮತ್ತು ಸ್ಕಾಲರ್‌ಷಿಪ್‌ಗಳನ್ನು ಒದಗಿಸುತ್ತದೆ.

ಈ ಯೋಜನೆಯಲ್ಲಿನ ಇತರೆ ಒದಗಣೆಗಳೆಂದರೆ ದೃಷ್ಟಿ ಮಾಂದ್ಯ ವಿದ್ಯಾರ್ಥಿಗಳನ್ನು ಗಣಿತ ಮತ್ತು ಚಿತ್ರ ಮುಖೇನ ಪ್ರಶ್ನೆಗಳಿಂದ ಹೊರತುಪಡಿಸುವುದು, ದೃಷ್ಟಿ ಮಾಂದ್ಯ / ಮೂಳೆ ವಿಕಲತೆಯಿರುವ ವಿದ್ಯಾರ್ಥಿಗಳಿಗೆ ಬರೆಹಗಾರರ/ ಓದುವವರ ನೆರವು ನೀಡುವುದು, ವಿಶೇಷ ಚೇತನತೆಯುಳ್ಳ ವಿದ್ಯಾರ್ಥಿಗಳಿಗೆ ಪರೀಕ್ಷೆಗಳಲ್ಲಿ ಹೆಚ್ಚುವರಿ ಸಮಯಾವಕಾಶ ಒದಗಿಸುವುದು ಮತ್ತು ಅವರಿಗಾಗಿ ಒಟ್ಟಾರೆ ಎಲ್ಲವನ್ನೂ ಒಳಗೊಂಡ ಸಮಗ್ರ ಶಿಕ್ಷಣವನ್ನು ಒದಗಿಸಲು ಪಠ್ಯಕ್ರಮದ ಮಾರ್ಪಾಡು ಮಾಡಲಾಗುತ್ತದೆ.

ಉ. ವಿಶೇಷ ಚೇತನರಿಗೆ ಸೆಕೆಂಡರಿ ಹಂತದಲ್ಲಿ ಸಮಗ್ರ ಶಿಕ್ಷಣ (IEDSS) – ಈ ಯೋಜನೆಯು 14 ವರ್ಷ ಮತ್ತು ಮೇಲ್ಪಟ್ಟ ವಿಶೇಷ ಚೇತನ ಮಕ್ಕಳು ತರಗತಿ 9ರಿಂದ 12ವರೆಗೆ ತಮ್ಮ ಸೆಕೆಂಡರಿ ಶಿಕ್ಷಣವನ್ನು



ಸರ್ಕಾರಿ, ಸ್ಥಳೀಯ ಮಂಡಳಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಮುಗಿಸಿದ ಪಕ್ಷದಲ್ಲಿ ಅಂತಹವರಿಗೆ ಬೆಂಬಲವನ್ನು ನೀಡುತ್ತದೆ.

ಈ ಯೋಜನೆಯು ಪ್ರಾಥಮಿಕ ಹಂತದಿಂದ ಸೆಕೆಂಡರಿ ಶಾಲೆಗೆ ಹೋಗುವ ವಿಶೇಷ ಚೇತನ ಮಕ್ಕಳನ್ನು ಗುರುತಿಸುವುದು ಮತ್ತು ಅವರು ನ್ಯೂನತೆಯಿಂದ ಹೊರಬರಲು ಸಹಾಯವಾಗುವಂತೆ ಅವರಿಗೆ ಸಹಾಯಕ ಪರಿಕರಗಳು ಮತ್ತು ವಿಶೇಷ ಉಪಕರಣಗಳು, ಕಲಿಕಾ ವಸ್ತುಗಳ ಸೌಲಭ್ಯಗಳು, ಸಾರಿಗೆ ಸೌಲಭ್ಯಗಳು, ವಿದ್ಯಾರ್ಥಿನಿಲಯ ಸೌಲಭ್ಯಗಳು, ಸ್ಕಾಲರ್‌ಷಿಪ್, ಪುಸ್ತಕಗಳು, ಸಹಾಯಕ ತಂತ್ರಜ್ಞಾನಗಳು ಮತ್ತು ಓದುಗರು ಮತ್ತು ಬರೆಹಗಾರರ ನೆರವನ್ನು ಒದಗಿಸುತ್ತದೆ.

ಊ. ರಾಜೀವ್‌ಗಾಂಧಿ ಫೆಲೋಷಿಪ್ ಯೋಜನೆ: ಎಂಫಿಲ್/ಪಿಎಚ್ ಡಿ ಮೊದಲಾದ ಉನ್ನತ ಶಿಕ್ಷಣ ವ್ಯಾಸಂಗಮಾಡಲು ವಿಶೇಷ ಚೇತನರಿಗೆ ಈ ಯೋಜನೆಯು ಐದು ವರ್ಷಗಳ ಕಾಲ ಸ್ಕಾಲರ್‌ಷಿಪ್‌ಗಳನ್ನು ಒದಗಿಸುತ್ತದೆ. ಈ ಯೋಜನೆಯು ಪ್ರತಿವರ್ಷ 200 ಫೆಲೋಷಿಪ್‌ಗಳನ್ನು ನೀಡುತ್ತದೆ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದ ಅಡಿಯಲ್ಲಿ ಬರುವ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳು ಈ ಸೌಲಭ್ಯವನ್ನು ಪಡೆಯಬಹುದಾಗಿದೆ.

* **ಉದ್ಯೋಗ :**

ಅ. ಸರ್ಕಾರವು ತನ್ನ ಸರ್ಕಾರಿ ಸೇವೆಗಳು, ಸಾರ್ವಜನಿಕ ವಲಯ ಬ್ಯಾಂಕುಗಳು ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಎ, ಬಿ, ಸಿ ಮತ್ತು ಡಿ ಗುಂಪಿನ ಹುದ್ದೆಗಳಲ್ಲಿ ಶೇಕಡ ಐದರಷ್ಟು ಮೀಸಲಾತಿಯನ್ನು ವಿಶೇಷ ಚೇತನರಾಗಿರುವ ವ್ಯಕ್ತಿಗಳಿಗಾಗಿ ನಿಗದಿಪಡಿಸಿದೆ.

ಆ. ಸರ್ಕಾರಿ ಹುದ್ದೆಗಳಲ್ಲಿ ನೇಮಕಾತಿಗಾಗಿ ಹತ್ತು ವರ್ಷದವರೆಗೆ ವಯೋಮಿತಿಯನ್ನು ವಿಶೇಷ ಚೇತನ ವ್ಯಕ್ತಿಗಳಿಗೆ ಸಡಿಲಗೊಳಿಸಲಾಗಿದೆ. ಅವರನ್ನು ಅರ್ಜಿ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳನ್ನು ಪಾವತಿಸುವುದರಿಂದ ಹೊರತುಪಡಿಸಲಾಗಿದೆ.

ಇ. ಹಲವಾರು ಇಲಾಖೆಗಳು ಮತ್ತು ವಿಭಾಗಗಳಲ್ಲಿ ಸರ್ಕಾರವು ವಿಶೇಷ ಚೇತನ ವ್ಯಕ್ತಿಗಳಿಗಾಗಿ ಮೀಸಲು ಮಾಡಬೇಕಾದ ಹುದ್ದೆಗಳನ್ನು ಗುರುತಿಸಿದೆ. ಈ ಹುದ್ದೆಗಳನ್ನು ಆ ಹುದ್ದೆಯಲ್ಲಿ ಕೆಲಸ ಮಾಡಬಲ್ಲ ಅವರ ಸಾಮರ್ಥ್ಯ ಆಧಾರದಲ್ಲಿ ಆರಿಸಲಾಗುತ್ತದೆ.

ಈ. ಸರ್ಕಾರವು ಪ್ರಾದೇಶಿಕ ಆಧಾರದಲ್ಲಿ ಸಿ ಮತ್ತು ಡಿ ಗುಂಪಿಗೆ ನೇಮಕಾತಿ ಪಡೆದ ವಿಶೇಷ ಚೇತನ ವ್ಯಕ್ತಿಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಆಡಳಿತ ಇತಿಮಿತಿಗಳನ್ನು ಪರಿಗಣಿಸಿ ಅವರ ಊರಿನ ಅತಿ ಸಮೀಪವಿರುವ ಪ್ರದೇಶದೊಳಗೆ ನೇಮಿಸುವ ಅವಕಾಶವನ್ನು ಒದಗಿಸುತ್ತದೆ.

ತಮ್ಮ ಊರಿನಲ್ಲಿ ಅಥವಾ ಅದರ ತೀರಾ ಹತ್ತಿರವಿರುವ ಸ್ಥಳಕ್ಕೆ ವರ್ಗಾಯಿಸಬೇಕೆನ್ನುವ ವಿಶೇಷ ಚೇತನ ಉದ್ಯೋಗಿಗಳ ಮನವಿಗೆ ಕೂಡ ಆದ್ಯತೆಯನ್ನು ಕೊಡಬೇಕಾಗುತ್ತದೆ.

ಉ. ಸರ್ಕಾರವು ಎಲ್ಲ ರಾಜ್ಯಗಳ ರಾಜಧಾನಿಗಳಲ್ಲಿ ವಿಶೇಷ ಚೇತನ ವ್ಯಕ್ತಿಗಳಿಗೆ ವಿಶೇಷ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪಿಸಿದೆ. ವಿಶೇಷ ಚೇತನ ವ್ಯಕ್ತಿಗಳಿಗಾಗಿ ಮೀಸಲಾಗಿರುವ ಸರ್ಕಾರಿ ಹುದ್ದೆಗಳ ನೇಮಕಾತಿಗಾಗಿ ಎಲ್ಲ ಜಿಲ್ಲಾ ಮುಖ್ಯಾಲಯಗಳಲ್ಲಿ ವಿಶೇಷ ಉದ್ಯೋಗ ಕೋಶಗಳನ್ನು ಆರಂಭಿಸಲಾಗಿದೆ. ವಿಶೇಷ ಉದ್ಯೋಗ ವಿನಿಮಯಗಳನ್ನು ಸ್ಥಾಪಿಸದಿರುವ ಸ್ಥಳಗಳಲ್ಲಿ ನಿಯತ ಉದ್ಯೋಗ ವಿನಿಮಯಗಳಲ್ಲಿಯೇ ವಿಶೇಷ ಉದ್ಯೋಗ ಕೋಶಗಳನ್ನು ಆರಂಭಿಸಲಾಗಿದೆ

ಊ. ಮೀಸಲಾತಿಯ ಅಡಿಯಲ್ಲಿ ಸರ್ಕಾರಿ ಉದ್ಯೋಗಗಳಿಗೆ ಅರ್ಹರಾಗಲು ವಿಶೇಷ ಚೇತನವ್ಯಕ್ತಿಗಳು ವಿಶೇಷ ಉದ್ಯೋಗ ವಿನಿಮಯ/ಕೋಶಗಳಲ್ಲಿ ತಮ್ಮ ಹೆಸರು ನೊಂದಾಯಿಸಿಕೊಳ್ಳಬೇಕಾಗುತ್ತದೆ.

ಋ. ವಿಶೇಷ ಚೇತನ ವ್ಯಕ್ತಿಗಳು 17 ವೃತ್ತಿಪುನರ್ವಸತಿ ಕೇಂದ್ರಗಳಲ್ಲಿ ಕೂಡ ವಿಶೇಷ ಉದ್ಯೋಗ ನೊಂದಣಿಗಳನ್ನು ಮಾಡಿಸಬಹುದು.

ಎ. ಉದ್ದಿಮೆಪತಿಗಳಿಗೆ ಪ್ರೋತ್ಸಾಹನ ಗಳನ್ನು ನೀಡುವ ಮೂಲಕ ಸರ್ಕಾರವು ಖಾಸಗಿ ವಲಯಗಳಲ್ಲಿ ವಿಶೇಷ ಚೇತನ ವ್ಯಕ್ತಿಗಳಿಗೆ ಉದ್ಯೋಗವನ್ನು ಒದಗಿಸುತ್ತದೆ.

ಏ. ಸರ್ಕಾರವು ವಿಶೇಷ ಚೇತನ ಉದ್ಯೋಗಿ ಭವಿಷ್ಯ ನಿಧಿಯ ಮಾಲಿಕ



ಕೊಡುಗೆಯನ್ನು ತಾನೇ ನೀಡುತ್ತದೆ ಮತ್ತು ತಿಂಗಳಿಗೆ ಕನಿಷ್ಠ ರೂ. 25,000 ಸಂಬಳ ಬರುವ ವಿಶೇಷ ಚೇತನ ವ್ಯಕ್ತಿಗಳ ಉದ್ಯೋಗಕ್ಕಾಗಿ ಉದ್ಯೋಗಿ ರಾಜ್ಯ ವಿಮೆಯನ್ನು(ಎಎಸ್‌ಐ) ಮೂರು ವರ್ಷಗಳ ಕಾಲದವರೆಗೆ ಒದಗಿಸುತ್ತದೆ.

ಐ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಸಾರ್ವಜನಿಕ ವಲಯ ತೈಲ ಕಂಪನಿಗಳ ಎಲ್ಲ ರೀತಿಯ ಡೀಲರ್‌ಷಿಪ್ ಏಜೆನ್ಸಿಗಳಲ್ಲಿ ಶೇಕಡ 7.5ರಷ್ಟು ಉದ್ಯೋಗಗಳನ್ನು



ದೈಹಿಕ ವಿಶೇಷ ಚೇತನ ವ್ಯಕ್ತಿಗಳಿಗಾಗಿ ಮೀಸಲಿಟ್ಟಿದೆ.

ಒ. ಸ್ವಯಂ ಉದ್ಯೋಗಕ್ಕಾಗಿ ರಾಷ್ಟ್ರೀಯ ಅಂಗವಿಕಲ ಹಣಕಾಸು ಮತ್ತು ಅಭಿವೃದ್ಧಿ ನಿಗಮವು ವಿಶೇಷ ಚೇತನ ವ್ಯಕ್ತಿಗಳಿಗೆ ಸಾಲ ಒದಗಿಸುತ್ತದೆ.

ಓ. ಈ ಯೋಜನೆಯಲ್ಲಿ ಸೇವೆ/ ವ್ಯಾಪಾರ/ ಕೈಗಾರಿಕಾ ಘಟಕಗಳಲ್ಲಿ ಸಣ್ಣ ವ್ಯಾಪಾರ ಆರಂಭಿಸಲು, ಉನ್ನತ ಶಿಕ್ಷಣಕ್ಕೆ/ವೃತ್ತಿಪರ ತರಬೇತಿಗೆ, ವಿಶೇಷ ಚೇತನ ವ್ಯಕ್ತಿಗಳಿಗಾಗಿ ಸಹಾಯಕ ಉಪಕರಣಗಳನ್ನು ತಯಾರಿಸುವ/ ಉತ್ಪಾದನೆ ಮಾಡುವವರಿಗೆ, ಕೃಷಿ ಚಟುವಟಿಕೆಗಳಿಗೆ, ಮಾನಸಿಕ ಕುಂಠಿತ, ಮಸ್ತಿಷ್ಕ ಲಕ್ವ ಪೀಡಿತ ಮತ್ತು ಸ್ವಮಗ್ನತೆಯುಳ್ಳವರಿಗೆ ಸ್ವಯಂ ಉದ್ಯೋಗಕ್ಕಾಗಿ ಸಾಲವನ್ನು ಒದಗಿಸಲಾಗುತ್ತದೆ.

ಔ. ಸಾರ್ವಜನಿಕ ವಲಯ ಬ್ಯಾಂಕುಗಳು 'ಅನಾಥರು, ಮಹಿಳಾ ಗೃಹಗಳು ಮತ್ತು ಅಂಗವಿಕಲರಾದ ವ್ಯಕ್ತಿಗಳಿಗಾಗಿ ಸಾರ್ವಜನಿಕ ವಲಯ ಬ್ಯಾಂಕುಗಳ ಯೋಜನೆ' ಅಡಿಯಲ್ಲಿ ಅಂಗವಿಕಲರು ಹಾಗೂ ವಿಶೇಷ ಚೇತನರ ಕಲ್ಯಾಣಕ್ಕಾಗಿ ಕೆಲಸ ಮಾಡುವ ಸಂಸ್ಥೆಗಳಿಗೆ ಸಾಂದರ್ಭಿಕ ಬಡ್ಡಿ ದರಗಳ ಲಾಭವನ್ನು ಒದಗಿಸುತ್ತವೆ. ಇಲ್ಲಿ ಸಾಮಾಜಿಕ ಉದ್ದೇಶಗಳ ದೃಷ್ಟಿಯಿಂದ ಬಡ್ಡಿ ದರವನ್ನು ವಾರ್ಷಿಕವಾಗಿ ಶೇಕಡ 4 ಎಂದು ಸಮರೂಪವಾಗಿ ನಿಗದಿಪಡಿಸಲಾಗುತ್ತದೆ.

ಸಣ್ಣ ಕೈಗಾರಿಕೆಗಳಿಗೆ ಹಣಕಾಸು ಒದಗಿಸುವ ಯೋಜನೆಯ ಅಡಿಯಲ್ಲಿ 2,00,000 ರೂಪಾಯಿಗಳವರೆಗೆ ಬಂಡವಾಳವನ್ನು ಅಂಗವಿಕಲರು ಪಡೆಯಲು ಕಡಿಮೆ ಬಡ್ಡಿದರ (0.5% ರಿಯಾಯಿತಿ) ವಿಶೇಷ ಅವಕಾಶವನ್ನು ಒದಗಿಸಲಾಗಿದೆ.

* **ವಿಶೇಷ ಚೇತನ ವ್ಯಕ್ತಿಗಳಿಗೆ ಸಹಾಯಕಗಳು ಮತ್ತು ಉಪಕರಣಗಳ ಖರೀದಿ/ಅಳವಡಿಕೆಗೆ ನೆರವು:** ಈ ಯೋಜನೆಯ ಮುಖ್ಯ ಉದ್ದೇಶವೆಂದರೆ ವಿಶೇಷ ಚೇತನ ವ್ಯಕ್ತಿಗಳಿಗೆ ಬಾಳಿಕೆ ಬರುವ, ಆಧುನಿಕವಾದ ವೈಜ್ಞಾನಿಕವಾಗಿ ತಯಾರಿಸಿದ ಪ್ರಮಾಣಿತ ಸಹಾಯಕಗಳು ಮತ್ತು ಪರಿಕರಗಳನ್ನು ಪಡೆಯಲು ನೆರವು ನೀಡುವುದು. ಅವರ ವಿಕಲತೆಯ ಪರಿಣಾಮಗಳನ್ನು ತಗ್ಗಿಸಿ ಅವರ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸುವಂತಹ ಈ ವಸ್ತುಗಳು



ಅವರ ದೈಹಿಕ, ಸಾಮಾಜಿಕ ಮತ್ತು ಮಾನಸಿಕ ಪುನರುಜ್ಜೀವನವನ್ನು ಖಚಿತಪಡಿಸುವವು.

* **ಇಂದಿರಾ ಆವಾಸ್ ಯೋಜನೆ :** ಇದು ಕೇಂದ್ರ ಪ್ರಾಯೋಜಿತ ಗೃಹ ಯೋಜನೆಯಾಗಿದೆ. ಇಲ್ಲಿ ಬಡತನದ ಕೆಳರೇಖೆಯಲ್ಲಿರುವ ಗ್ರಾಮೀಣ ಬಡಜನರಿಗೆ ವಾಸಸ್ಥಳ ಘಟಕಗಳನ್ನು ಒದಗಿಸಲು ಬಯಲು ಪ್ರದೇಶಗಳಲ್ಲಿ ರೂ 20000 ಮತ್ತು ರೂ ಬೆಟ್ಟ/ ಕಷ್ಟಕರ ಪ್ರದೇಶಗಳಲ್ಲಿ ರೂ. 22,000 ಉಚಿತವಾಗಿ ನೀಡಲಾಗುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಬಡತನದ ಕೆಳರೇಖೆಯಲ್ಲಿ ಬದುಕುತ್ತಿರುವ ವಿಶೇಷ ಚೇತನರಿಗೆ ಈ ಯೋಜನೆಯ ಶೇಕಡ ಮೂರರಷ್ಟು ಹಣವನ್ನು ಮೀಸಲಾಗಿಡಲಾಗಿದೆ.

* **ವಿಶೇಷ ಚೇತನ ವ್ಯಕ್ತಿಗಳ ಸಶಕ್ತೀಕರಣಕ್ಕಾಗಿ ರಾಷ್ಟ್ರೀಯ ಪುರಸ್ಕಾರ ಯೋಜನೆ :** ವಿಶೇಷ ಚೇತನ ವ್ಯಕ್ತಿಗಳ ಶ್ರಮ ಹಾಗೂ ಪ್ರಯತ್ನಗಳನ್ನು ಗುರುತಿಸಲು ಮತ್ತು ಈ ವಲಯದಲ್ಲಿ ಅತ್ಯುತ್ತಮತೆಯನ್ನು ಸಾಧಿಸಲು ಇತರೆ ವಿಶೇಷ ಚೇತನರಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಅತ್ಯಂತ ಸಮರ್ಥ/ ಅತ್ಯುನ್ನತ ಉದ್ಯೋಗಿ, ಅತ್ಯುತ್ತಮ ಮಾಲಿಕರು, ಅತ್ಯುತ್ತಮ ಉದ್ಯೋಗಾವಕಾಶ ಏಜೆನ್ಸಿಗಳು / ಅಧಿಕಾರಿಗಳು, ಅತ್ಯುತ್ತಮ ವ್ಯಕ್ತಿಗಳು, ಅತ್ಯುತ್ತಮ ಸಂಸ್ಥೆಗಳು, ಆದರ್ಶವ್ಯಕ್ತಿಗಳು, ಸೃಜನಶೀಲ ವಿಶೇಷ ಚೇತನ ವ್ಯಕ್ತಿಗಳು ಮತ್ತು ಅತ್ಯುನ್ನತ ತಂತ್ರಜ್ಞಾನ ಆವಿಷ್ಕಾರ ಮತ್ತು ಮಿಗುತಾಯ ತಂತ್ರಜ್ಞಾನ ಒದಗಿಸಲು ಸೃಜನಶೀಲತೆಯನ್ನು ತೋರಿಸಿರುವುದಕ್ಕೆ ವಿಶೇಷ ಪುರಸ್ಕಾರಗಳನ್ನು ನೀಡಲಾಗುತ್ತದೆ.

ವಿಶೇಷ ಚೇತನ ವ್ಯಕ್ತಿಗಳಿಗೆ ಅಡೆತಡೆ ಇಲ್ಲದ ಪರಿಸರ ಸೌಲಭ್ಯ ಕಲ್ಪಿಸುವ ಸರ್ಕಾರಿ ವಲಯ, ಸಾರ್ವಜನಿಕ ವಲಯ ಮತ್ತು ಖಾಸಗಿ ಉದ್ದಿಮೆಗಳಿಗೂ ಕೂಡ ಪುರಸ್ಕಾರಗಳನ್ನು ನೀಡಲಾಗುತ್ತದೆ. ವಿಶೇಷ ಚೇತನ ಪುನರ್ವಸತಿ ಕ್ಷೇತ್ರದ ಅತ್ಯುತ್ತಮ ಜಿಲ್ಲೆ, ರಾಷ್ಟ್ರೀಯ ಟ್ರಸ್ಟ್‌ನ ಅತ್ಯುತ್ತಮ ಸ್ಥಳೀಯ ಮಟ್ಟದ ಸಮಿತಿ ಮತ್ತು ರಾಷ್ಟ್ರೀಯ ಅಂಗವಿಕಲತೆ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಅತ್ಯುತ್ತಮ ರಾಜ್ಯ ನಿರ್ದೇಶನ ಏಜೆನ್ಸಿಗಳಿಗೆ ಪುರಸ್ಕಾರಗಳನ್ನು ನೀಡಲಾಗುತ್ತದೆ. ಗ್ರಾಮೀಣ ಮತ್ತು ಸ್ವಯಂ ಉದ್ಯೋಗಿ ವಿಶೇಷ ಚೇತನ ಮಹಿಳೆಯರಿಗೆ ಉದ್ಯೋಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತದೆ.

* **ವಿಶೇಷ ಚೇತನ ವ್ಯಕ್ತಿಗಳ ಸಶಕ್ತೀಕರಣಕ್ಕೆ ಟ್ರಸ್ಟ್ ನಿಧಿ :** ಎರವಲುದಾರರಿಂದ ಪಡೆದ ತೆರಿಗೆ ಬಡ್ಡಿಯನ್ನು ವಾರ್ಷಿಕವಾಗಿ ಇಡಿ ಸಂಖ್ಯೆಯಾಗಿ ಮಾಡುವ ಮೂಲಕ ಸಂಗ್ರಹಿಸಿದ ರೂ723.79 ಕೋಟಿ ಹೆಚ್ಚುವರಿ ಮೊತ್ತವನ್ನು ವಿಶೇಷ

ಚೇತನ ವ್ಯಕ್ತಿಗಳ ಕಲ್ಯಾಣಕ್ಕಾಗಿ ಕೆಲಸ ಮಾಡುವ ಟ್ರಸ್ಟ್‌ಗೆ ಬಳಸಲು ವರ್ಗಾಯಿಸತಕ್ಕದ್ದು ಎಂದು ಉಚ್ಚನ್ಯಾಯಾಲಯವು ನಾಗರಿಕ ಮನವಿಗಳು ಸಂ. 4655 ಮತ್ತು 2000ದ 5218ರ ತನ್ನ 16 ಏಪ್ರಿಲ್ 2004ರ ಆದೇಶದಲ್ಲಿ ನಿರ್ದೇಶಿಸಿದೆ.

ಸಚಿವಾಲಯವು ಈ ನಿಧಿಯನ್ನು ಸ್ವಮಗ್ನತೆ(ಆಟಿಸಂ), ಮಸ್ತಿಷ್ಕ ಲಕ್ವ (ಸೆರೆಬ್ರಲ್ ಪಾಲ್ಸಿ) / ಮನೋವೈಕಲ್ಯತೆ, ಮತ್ತು ಬಹು ರೂಪಿ ವಿಶೇಷ ಚೇತನತೆಗಳಿಗೆ ಒಳಗಾಗಿರುವ ವ್ಯಕ್ತಿಗಳ ಕಲ್ಯಾಣದ ರಾಷ್ಟ್ರೀಯ ಟ್ರಸ್ಟಿಗೆ ಈ ನಿಧಿಯನ್ನು ವರ್ಗಾಯಿಸಲು ಸರ್ವೋಚ್ಚ ನ್ಯಾಯಾಲಯದ ನಿರ್ದೇಶನವನ್ನು ಕೋರಿದೆ. ಸರ್ವೋಚ್ಚ ನ್ಯಾಯಾಲಯವು ಸಚಿವಾಲಯದ ಕೋರಿಕೆಯನ್ನು ಇನ್ನೂ ಪರಿಗಣಿಸಬೇಕಾಗಿದೆ. ಆದರೆ ಈ ಮಧ್ಯೆ ಒಂದು ಟ್ರಸ್ಟ್ ರಚಿಸಲಾಗಿದ್ದು ಹಣಕಾಸು ಸಚಿವಾಲಯದ ಬ್ಯಾಂಕ್ ವಹಿವಾಟು ವಿಭಾಗವು ಬ್ಯಾಂಕುಗಳಿಗೆ ಟ್ರಸ್ಟ್‌ನ ಅಕೌಂಟಿಗೆ ಹೆಚ್ಚುವರಿ ಮೊತ್ತವನ್ನು ಠೇವಣಿ ಮಾಡಲು ಸಲಹೆ ನೀಡಿದೆ.



* **ಕ್ಷಿಪ್ರ ವಿಧಾನದಲ್ಲಿ ತಂತ್ರಜ್ಞಾನ ಅಭಿವೃದ್ಧಿ ಯೋಜನೆಗಳು** : ತಂತ್ರಜ್ಞಾನ ಅಳವಡಿಕೆ ಮೂಲಕ ಸೂಕ್ತ ಮತ್ತು ಮಿಗುತಾಯದ ಸಹಾಯಕಗಳು ಮತ್ತು ಉಪಕರಣಗಳನ್ನು ವಿಶೇಷ ಚೇತನರಿಗೆ ಒದಗಿಸಲು ಮತ್ತು ದೈಹಿಕ ವಿಶೇಷ ಚೇತನರ ಉದ್ಯೋಗಾವಕಾಶ ಅವಕಾಶಗಳನ್ನು ಹೆಚ್ಚಿಸಲು ಹಾಗೂ ಅವರನ್ನು ಸಮಾಜದಲ್ಲಿ ಸಮಗ್ರೀಕರಿಸಲು ಮೇಲಿನ ಯೋಜನೆಯನ್ನು 1990–91ರಲ್ಲಿ ಆರಂಭಿಸಲಾಯಿತು.

ಈ ಯೋಜನೆಯಲ್ಲಿ ಸೂಕ್ತ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಗುರುತಿಸಲಾಗಿದೆ ಮತ್ತು ಅಭಿವೃದ್ಧಿ ಸಹಾಯಕಗಳು ಮತ್ತು ಪರಿಕರಗಳಿಗಾಗಿ ಹಣವನ್ನು ಒದಗಿಸಲಾಗಿದೆ.

ರಕ್ಷಣಾತ್ಮಕ ಸಾಮಾಜಿಕ ಸುಬದ್ರತಾ ಕಾರ್ಯಕ್ರಮಗಳನ್ನು ಸಂಭವನೀಯ ಬಡತನ ಅಥವಾ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ವ್ಯಾಖ್ಯಾನಿಸಿದ ಸಂಭವನೀಯತೆಗಳ ಪರಿಹಾರದ ಹಿತದೃಷ್ಟಿಯಿಂದ ರೂಪಿಸಲಾಗಿದೆ. ಈ ಕಾರ್ಯಕ್ರಮಗಳು ವೃದ್ಧಾಪ್ಯ ಪಿಂಚಣಿ, ವೈದ್ಯಕೀಯ ವಿಮೆ, ನಷ್ಟ ಪರಿಹಾರಗಳ ಕುರಿತಾಗಿವೆ.

**ಅ. ಇಂದಿರಾಗಾಂಧಿ ರಾಷ್ಟ್ರೀಯ ವಿಶೇಷ ಚೇತನರ ಪಿಂಚಣಿ ಯೋಜನೆ:** ಈ ಯೋಜನೆಯನ್ನು ಗ್ರಾಮೀಣ ಅಭಿವೃದ್ಧಿಯ ಸಚಿವಾಲಯದ ಕಾರ್ಯದರ್ಶಿಗಳು ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮದ ಒಂದು ಅಂಗವಾಗಿ 17 ಫೆಬ್ರವರಿ 2009ರಂದು ಸೇರಿಸಿದರು.

ಈ ಯೋಜನೆಯ ಅಡಿಯಲ್ಲಿ, 18–79 ವರ್ಷದ ವಯೋಗುಂಪಿನ ತೀವ್ರ ಅಥವಾ ಬಹು ನ್ಯೂನತೆಗಳನ್ನು ಹೊಂದಿರುವರು ಭಾರತ ಸರ್ಕಾರವು ನಿಗದಿ ಮಾಡಿದ ಮಾನದಂಡದ ಪ್ರಕಾರ ಬಡತನರೇಖೆಯ ಕೆಳಗೆ ವಾಸಿಸುತ್ತಿರುವ ಕುಟುಂಬಕ್ಕೆ ಸೇರಿರುವವರಾದರೆ ಕೇಂದ್ರವು ಅಂತಹ ಪ್ರತಿ ಫಲಾನುಭವಿಗಳಿಗೆ ಪ್ರತಿತಿಂಗಳು ರೂ 300 ನೆರವು ನೀಡುತ್ತದೆ.

**ಆ. ಅಂಗವಿಕಲತೆ ಸೌಲಭ್ಯ :** ಈ ಹಿಂದೆ **'**ಕೆಲಸಗಾರರ ಪರಿಹಾರ ಕಾಯಿದೆ 1923**'** ಎಂಬ ಹೆಸರಿದ್ದ ಉದ್ಯೋಗಿ ಪರಿಹಾರ ಕಾಯ್ದೆ 1923ಯ ಪ್ರಕಾರ, ಸಾವು ಅಥವಾ ಅಂಗವಿಕಲತೆಗಳಿಗೆ ಎಡೆಮಾಡಿಕೊಡುವ ಉದ್ಯೋಗ ಸಂಬಂಧಿ ಘಾಸಿಗಳಾಗುವ ಸಂದರ್ಭಗಳಲ್ಲಿ ಉದ್ಯೋಗಿಗಳಿಗೆ ಅಥವಾ ಅವರ ಕುಟುಂಬಗಳಿಗೆ ಮಾಲಿಕರು ಪರಿಹಾರ ನೀಡಲು ಒದಗಿಸುತ್ತದೆ.



ಔದ್ಯೋಗಿಕ ರೋಗದಿಂದ ಬಳಲುವ ಕಾರ್ಮಿಕನನ್ನು ತನ್ನ ಉದ್ಯೋಗದಿಂದಾಗಿ ಮತ್ತು ಉದ್ಯೋಗದ ಸಮಯದಲ್ಲಿ ಪಡೆದಿರುವ ಒಂದು ಅಪಘಾತ ಎಂದು ಪರಿಗಣಿಸಲಾಗುತ್ತದೆ. ಇಲ್ಲಿ ಮಾಲಿಕನು ಅದಕ್ಕಾಗಿ ಪರಿಹಾರವನ್ನು ನೀಡಬೇಕಾಗುತ್ತದೆ. ಪೂರ್ಣ ಅಥವಾ ಅರೆಪ್ರಮಾಣದ ಶಾಶ್ವತ ಅಂಗ ಊನತೆಗೆ ಎಡೆ ಮಾಡಿಕೊಡುವ ಗಾಯಗಳನ್ನು ಉದ್ಯೋಗಿ ಪರಿಹಾರ ಕಾಯಿದೆಯ ತಪ್ಸೀಲು 1, ಭಾಗ 1 ಮತ್ತು ಭಾಗ 11 ರಲ್ಲಿ ಪಟ್ಟಿ ಮಾಡಲಾಗಿದ್ದು, ಔದ್ಯೋಗಿಕ ರೋಗಗಳನ್ನು ಉದ್ಯೋಗಿ ಪರಿಹಾರ ಕಾಯಿದೆಯ ತಪ್ಸೀಲು 3ರ ಎ, ಬಿ ಮತ್ತು ಸಿ ಭಾಗಗಳಲ್ಲಿ ಪಟ್ಟಿ ಮಾಡಲಾಗಿದೆ. ಆದರೆ ಇದು ಸಂಘಟಿತ ವಲಯದಲ್ಲಿ ಮಾತ್ರ ಅನ್ವಯವಾಗುತ್ತದೆ.

### ಸವಾಲುಗಳು ಮತ್ತು ಮುಂದಿನ ಹಾದಿ

ಭಾರತದಲ್ಲಿ ಸಾಮಾಜಿಕ ಸುಭದ್ರತಾ ಕಾರ್ಯಕ್ರಮಗಳು ಸಮರ್ಪಕವಾಗಿ ವಿಶೇಷ ಚೇತನ ಜನರನ್ನು ತಲುಪುತ್ತಿಲ್ಲ. ಭಾರತದಲ್ಲಿ ಬಹಳಷ್ಟು ಅಭಿವೃದ್ಧಿ ಕಾರ್ಯಕ್ರಮಗಳು ವಿಶೇಷ ಚೇತನ ಜನರಿಗೆ ಕೈಗೆಟಕುವುದಿಲ್ಲ. ಏಕೆಂದರೆ ವಿಶೇಷ ಚೇತನ ಜನರ ಸಾಮಾಜಿಕ ಅಥವಾ ದೈಹಿಕ ಅಡ್ಡಿಗಳು ಮತ್ತು ತಡೆಗಳು ಇದಕ್ಕೆ ಬಹುಪಾಲು ಕಾರಣ.

ನಮ್ಮ ದೇಶದಲ್ಲಿ ಹಲವಾರು ವಿಶೇಷ ಚೇತನತೆ ವಿಶೇಷ ಸಹಾಯಕ ಕಾರ್ಯಕ್ರಮಗಳು ಲಭ್ಯ. ಆದರೆ ಈ ಪ್ರಯೋಜನಗಳು ಎಲ್ಲೆಡೆ ಸಮಾನವಾಗಿ ಹಾಗೂ ಸಮಗ್ರವಾಗಿ ಸಿಗುತ್ತಿಲ್ಲ. ಅಷ್ಟೇ ಅಲ್ಲದೇ ಈ ಯೋಜನೆಗಳು ವಿಭಿನ್ನ ಸಮರ್ಥರಾಗಿರುವ ಈ ಜನರ ಸಮಸ್ಯೆಯನ್ನು ಸಮಗ್ರವಾಗಿ ಪರಿಹರಿಸುವ ನಿಟ್ಟಿನಲ್ಲಿ ಕೂಡ ಇಲ್ಲ.

ಮಾಹಿತಿ ಮತ್ತು ಪ್ರಸರಣ ಅಭಾವ ಮತ್ತು ಒಂದೇ ಕೇಂದ್ರದ ಅಡಿಯಲ್ಲಿ ಎಲ್ಲವೂ ಸಿಗುವ ಕಾರ್ಯಕ್ರಮವಿಲ್ಲದಿರುವುದು ಬಹಳಷ್ಟು ಸಲ ವಿಶೇಷ ಚೇತನ ವ್ಯಕ್ತಿಗಳಿಗೆ

ತಮಗಾಗಿ ಯಾವ ಪ್ರಯೋಜನಗಳು ಮತ್ತು ಯೋಜನೆಗಳು ಲಭ್ಯ ಎಂದು ತಿಳಿಯದಂತೆ ಮಾಡುತ್ತದೆ.

ವಿಶೇಷ ಚೇತನ ಜನರಿಗೆ ಬೆಂಬಲ ಮತ್ತು ಪ್ರಯೋಜನಗಳನ್ನು ತಲುಪಿಸಲು ಪ್ರಸಕ್ತ ಆಡಳಿತ ವ್ಯವಸ್ಥೆಯು ಒಂದೆಡೆಯಿಲ್ಲದೆ ಸಾಕಷ್ಟು ಚದುರಿದೆ. ವಾಸ್ತವಾಗಿ ಇಂದು ಈ ಕುರಿತು ಒಂದು ಸಮರೂಪಿ ಪ್ರಯೋಜನ ಸೂತ್ರವೂ ಇಲ್ಲ ಅಥವಾ ಸಮಗ್ರವಾಗಿ ಕಾರ್ಯಕ್ರಮವನ್ನು ಮುನ್ನಡೆಸುವ ಅಥವಾ ಮಾರ್ಗದರ್ಶನ ನೀಡುವ ಒಂದು ಸಂಸ್ಥೆಯಿಲ್ಲ.



ಹಲವಾರು ಸಂಸ್ಥೆಗಳು ಅಥವಾ ಇಲಾಖೆಗಳು ಈಗ ವಿಶೇಷ ಚೇತನತೆ ಪ್ರಯೋಜನಗಳನ್ನು ನೋಡಿಕೊಳ್ಳುತ್ತಿರುವ ಸಂದರ್ಭದಲ್ಲಿ ಒಂದು ಸಂಸ್ಥೆಯ ಅಡಿಯಲ್ಲಿ ಒಬ್ಬ ಮುಖ್ಯ ನಿರ್ವಾಹಕ ಅಧಿಕಾರಿಯೊಂದಿಗೆ ಇವನ್ನೆಲ್ಲಾ ಸಮಗ್ರೀಕರಿಸುವ ಒಂದು ಸಮಗ್ರ ರೂಪುರೇಷೆ ಮತ್ತು ಅನುಷ್ಠಾನ ನೀತಿಯನ್ನು ಜರೂರಾಗಿ ಆಗಬೇಕಾಗಿದೆ.

ವಿಶೇಷ ಚೇತನ ಜನರ ಸಶಕ್ತೀಕರಣಕ್ಕಾಗಿ ಯೋಜನೆಗಳ ಹಣದ ನಿಯತ ಹರಿವನ್ನು ಖಚಿತಗೊಳಿಸಲು ಹತ್ತನೆಯ ವಾರ್ಷಿಕ ಯೋಜನೆಯು ಎಲ್ಲ ಸಂಬಂಧಿತ ಸಚಿವಾಲಯಗಳ ಬಜೆಟಿನಲ್ಲಿ ಅಸಮರ್ಥರಿಗೆ ಒಂದು ಅಂಗ ಯೋಜನೆಯ ಪ್ರಸ್ತಾವನೆಯನ್ನು ಪ್ರತಿಪಾದಿಸಿತು.

ಆದರೆ ಎಂ.ಎಸ್.ಜೆ.ಇ. ಈ ಸಲಹೆಯನ್ನು ಜಾರಿಗೊಳಿಸಲು ಏನೂ ಮಾಡಿಲ್ಲ ಎಂಬುದನ್ನು ಮಧ್ಯಂತರ ವಿಮರ್ಶಾ ದಾಖಲೆಯು ಸ್ಪಷ್ಟವಾಗಿ ತೋರಿಸುತ್ತದೆ.

ಇದರೊಂದಿಗೆ ಹತ್ತನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಂಗೀಕೃತವಾದ ಹಲವಾರು ನೀತಿಗಳ ಅಡಿಯಲ್ಲಿ ಕೇವಲ ಶೇಕಡ 31ರಷ್ಟು ಮಾತ್ರ ಖರ್ಚುಮಾಡಲಾಗಿದೆ. ಇದು ವಿಶೇಷಚೇತನಜನರ ಕುರಿತ ನಿರ್ಲಕ್ಷ್ಯ ಭಾವನೆಯನ್ನು ವ್ಯಕ್ತಪಡಿಸುತ್ತದೆ. (ಶಂಕರ್ 2006)

ವಿಶೇಷ ಚೇತನತೆಯ ಚಲನಶೀಲತೆಯನ್ನು ಅರಿತು ಸಮಗ್ರ ಯೋಜನೆ ಮತ್ತು ವಿನ್ಯಾಸಗಳ ಅಗತ್ಯವಿದೆಯೆಂದು ಈಗ ಅರಿಯಲಾಗಿದೆ. ವಿಶೇಷ ಚೇತನ ಜನಸಮುದಾಯಕ್ಕೆ ಸಮಗ್ರ ಉತ್ತೇಜನಾ ಮತ್ತು ಪ್ರತಿಬಂಧಕ ಸಾಮಾಜಿಕ ಸುಭದ್ರತಾ ಯೋಜನೆಗಳನ್ನು ರೂಪಿಸಲು ಮೊಟ್ಟಮೊದಲ ಹಂತದಲ್ಲಿ ವಿಶೇಷ ಚೇತನ ಸಮುದಾಯದ ಸಂಖ್ಯೆ, ಬಡತನದ ಕೆಳ ರೇಖೆಯಲ್ಲಿರುವ ವಿಶೇಷ ಚೇತನ ಮಕ್ಕಳಿರುವ ಪೋಷಕರು, ಉದ್ಯೋಗ ಮಾಡಬಹುದಾದ ಶಿಕ್ಷಿತ ನಿರುದ್ಯೋಗಿ ವಿಶೇಷ ಚೇತನ ವ್ಯಕ್ತಿಗಳು, ನಿರಂತರ ಬೆಂಬಲ ಅಗತ್ಯವಿರುವ ತೀವ್ರ ನ್ಯೂನತೆಗೆ ಒಳಗಾದವರು, 60 ವರ್ಷ ಮೀರಿದ ವಿಶೇಷ ಚೇತನ ಜನರು, ವಿಶೇಷ ಚೇತನ ಮಹಿಳೆಯರು, ಅನೌಪಚಾರಿಕ ವಲಯದಲ್ಲಿ ಕೆಲಸಮಾಡುವ ವಿಶೇಷ ಚೇತನ ಜನರು ಇತ್ಯಾದಿ ಎಲ್ಲ ಪೀಡಿತರ ಸವಿವರವಾದ ಮಾಹಿತಿ ಬೇಕಾಗುತ್ತದೆ.



ಸಮಗ್ರ ಆಡಳಿತ ವ್ಯವಸ್ಥೆಗಳು, ಹಲವಾರು ಮೂಲಗಳಿಂದ ಹಣವನ್ನು ಕ್ರೋಢೀಕರಿಸುವುದು ಮತ್ತು ವೃತ್ತಿಪರ ಮೇಲ್ವಿಚಾರಣೆಯಲ್ಲಿ ಪ್ರಯೋಜನವನ್ನು ರವಾನಿಸುವುದು ಮತ್ತು ನಿಯಂತ್ರಣ, ಇವು ತಕ್ಷಣವೇ ಜರುಗಬೇಕಾದ ಮುಖ್ಯ ಕ್ರಮಗಳು.

ಇದರೊಂದಿಗೆ ಇಂತಹ ಪ್ರಯೋಜನಗಳು ವಿಭಿನ್ನ ಸಮರ್ಥಜನರಿಗೆ ತಲುಪುವಂತೆ ಮಾಡಲು ಸ್ಥಳೀಯ ಸಂಸ್ಥೆಗಳು, ರಾಜ್ಯ, ರಾಷ್ಟ್ರೀಯ ಸಂಸ್ಥೆಗಳು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ಹೆಚ್ಚು ಸಂಪನ್ಮೂಲಗಳನ್ನು ಸಂಗ್ರಹಿಸಬೇಕಾಗುತ್ತದೆ. ❑

## ಯೋಜನಾ ಚಂದಾದಾರರಲ್ಲಿ ಕೋರಿಕೆ

ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ತಮ್ಮ **ಇ-ಮೇಲ್, ಫೋನ್ ನಂಬರ್ ಸೇರಿದಂತೆ, ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಒಳಗೊಂಡ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು.** ಚಂದಾದಾರರು, ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಸರಿ ಇದೆಯೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. **ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ.** ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ-ಅಂಚೆ : kannada-yojana@gov.in ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ – ಶುಕ್ರವಾರ. ವೇಳೆ 2.00 ರಿಂದ 4.00)

# ರೈತರ ಕಲ್ಯಾಣ : ವಸ್ತುನಿಷ್ಠ ದೃಷ್ಟಿ

* ನೀಲಬ್ಜ ಘೋಷ್




**ದೂರ ದೃಷ್ಟಿಯಿಂದ ಯೋಚಿಸುವುದಾದರೆ ಕೃಷಿ ಕ್ಷೇತ್ರ ಭವಿಷ್ಯದಲ್ಲಿ ಉದ್ಯಮವಾಗಿ ಪರಿವರ್ತನೆಯಾಗಬಹುದು. ಹಾಗಾಗಿ ಬೆಳೆಯುತ್ತಿರುವ ಬೇರೆ ಕ್ಷೇತ್ರಗಳ ಸಹಯೋಗದೊಂದಿಗೆ ಕೃಷಿ ಕ್ಷೇತ್ರ ಹೆಜ್ಜೆ ಹಾಕಬೇಕು. ರಾಜ್ಯ ಸರ್ಕಾರ ನಿರ್ವಹಣೆ ಮಾಡುವುದಕ್ಕೆ ಹಲವಾರು ಸವಾಲುಗಳಿವೆ. ಈ ಸವಾಲುಗಳನ್ನು ಮುಂದುವರಿದ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಮೂಲಕ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆಗಳನ್ನು ತರುವ ಮೂಲಕ ಸಮರ್ಥವಾಗಿ ಎದುರಿಸಬಹುದು.**

ಕೇಂದ್ರ ಸರ್ಕಾರ 2015ರಲ್ಲಿ ಕೃಷಿ ಸಚಿವಾಲಯವನ್ನು ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವನ್ನಾಗಿ ಹೆಸರು ಬದಲಾಯಿಸಿತು. ಈ ಮೊದಲು ಕೃಷಿ ಸಚಿವಾಲಯವನ್ನು ಹೆಚ್ಚು ಆಹಾರ ಉತ್ಪಾದಿಸುವ ಗುರಿಯುಳ್ಳ ಸಂಸ್ಥೆ ಎಂದಷ್ಟೇ ಗುರುತಿಸಲಾಗುತ್ತಿತ್ತು. ಆದರೆ, ಈಗ ಆಹಾರ ಉತ್ಪಾದನೆ ಜತೆಗೆ, ಉತ್ಪಾದಿಸುವವರ (ರೈತರ) ಜೀವನ ನಿರ್ವಹಣೆ, ಸುಧಾರಣೆಗೆ ವ್ಯಾಪ್ತಿ ವಿಸ್ತರಿಸಲಾಗಿದೆ.

1960ಕ್ಕೂ ಮುನ್ನ ದೇಶದಲ್ಲಿ ಆಹಾರ ಉತ್ಪಾದನೆ ಕಡಿಮೆ ಇತ್ತು. ಹಸಿರು ಕ್ರಾಂತಿಯ ನಂತರ ರೂಪಿಸಿದ ತಂತ್ರಜ್ಞಾನಗಳು, ಕೃಷಿ ನೀತಿಗಳಿಂದಾಗಿ ಆಹಾರ ಉತ್ಪಾದನೆ ಹೆಚ್ಚಳವಾಯಿತು. ನಂತರದ ದಿನಗಳಲ್ಲಿ ಅಕ್ಕಿ ಮತ್ತು ಹಾಲು ಉತ್ಪಾದನೆ ಪಟ್ಟಿಯಲ್ಲಿ ಭಾರತವನ್ನು ವಿಶ್ವದ ಎರಡನೇ ರಾಷ್ಟ್ರ ಎಂದು ಗುರುತಿಸಲಾಯಿತು. ಹಂತ ಹಂತವಾಗಿ ಈ ತಂತ್ರಜ್ಞಾನ, ನೀತಿ ನಿರೂಪಣೆಗಳು ವಿವಿಧ ಆಹಾರ ಧಾನ್ಯಗಳು, ಹಣ್ಣು ಮತ್ತು ತರಕಾರಿಗೂ ವಿಸ್ತರಿಸಿತು.

ಆಹಾರ ಉತ್ಪಾದನೆಯಲ್ಲಿ ಹೆಚ್ಚಳವಾದರೂ ರೈತರ ಆರ್ಥಿಕ ಮಟ್ಟ ಮಾತ್ರ ಸುಧಾರಿಸಲಿಲ್ಲ. ಆಹಾರ ಉತ್ಪಾದಿಸುವ ಆರ್ಥಿಕ ಸ್ಥಿತಿಗತಿ ಕುಸಿಯುತ್ತಿದೆ. ಕೆಲವು ಕಡೆ ರೈತರು ಜೀವನದ ಅಭದ್ರತೆ ಎದುರಿಸುತ್ತಿದ್ದಾರೆ. 2003–04ರಲ್ಲಿ ನಡೆಸಿದ ರಾಷ್ಟ್ರೀಯ ಮಾದರಿ ಸಮೀಕ್ಷೆ ಪ್ರಕಾರ ಶೇ 40ರಷ್ಟು ರೈತರು ಕೃಷಿ ಬಿಟ್ಟು ಜೀವನಕ್ಕಾಗಿ ಬೇರೆ ಬೇರೆ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದೇ ಸಮೀಕ್ಷೆಯಲ್ಲಿ, ರೈತರು ತಮ್ಮ ಜೀವನ ನಿರ್ವಹಣೆಗಾಗಿ ಕೃಷಿ ಜತೆಗೆ ಬೇರೆ ಬೇರೆ ಮೂಲಗಳನ್ನು ಆಶ್ರಯಿಸಿದ್ದರು ಎಂದು ಹೇಳಲಾಗಿತ್ತು. ಹಾಗಾದರೆ, ಆಹಾರ ಉತ್ಪಾದನೆ ಹೆಚ್ಚಳವಾದರೂ ಏಕೆ ರೈತರು ಬಡತನ ಅನುಭವಿಸುತ್ತಿದ್ದಾರೆ. ಜೀವನ ನಿರ್ವಹಣೆಗಾಗಿ ಬೇರೆ ಬೇರೆ ಕ್ಷೇತ್ರದ ಮೇಲೆ ಅವಲಂಬಿತವಾಗಿದ್ದಾರೆ. ಏತಕ್ಕಾಗಿ ರೈತರ ಜೀವನ ಸ್ಥಿತಿ ಸುಧಾರಣೆಯಾಗಲಿಲ್ಲ? ಎಂಬುದು ಈಗಿರುವ ಪ್ರಶ್ನೆಯಾಗಿದೆ.

### ರೈತರ ಆದಾಯ ಮತ್ತು ದುರ್ಬಲತೆ

ಕೇಂದ್ರ ಸರ್ಕಾರ 2022 ರ ಹೊತ್ತಿಗೆ ಕೃಷಿಕರ ಆದಾಯವನ್ನು ದ್ವಿಗುಣಗೊಳಿಸುವ ಗುರಿ ಹೊಂದಿದೆ. ಕೃಷಿ ಕ್ಷೇತ್ರದ ಆದಾಯ ಹಲವು ಅಂಶಗಳ ಮೇಲೆ ಅವಲಂಬಿತವಾಗಿದೆ. ಅದರಲ್ಲಿ ಉತ್ಪಾದನೆ, ಭೂಮಿ ಫಲವತ್ತತೆ ಮತ್ತು ನೀರಿನ ನಿರ್ವಹಣೆಯೂ ಸಮರ್ಪಕವಾಗಿರಬೇಕು. ಆದರೆ, ನೀರಿನ ಕೊರತೆ ಮತ್ತು ರಸಗೊಬ್ಬರದ ಬೆಲೆ ದುಬಾರಿಯಾಗಿದ್ದು, ಉತ್ಪಾದನೆ ಮೇಲೆ ಪರಿಣಾಮ ಬೀರುತ್ತಿದೆ. ಮಾತ್ರವಲ್ಲ, ಮಾರುಕಟ್ಟೆಯಲ್ಲಾಗುತ್ತಿರುವ ಏರಿಳಿತಗಳು, ಬೆಳೆ ನಷ್ಟವೂ ಇದಕ್ಕೆ ಕಾರಣವಾಗುತ್ತದೆ. ಸುಧಾರಿತ ತಂತ್ರಜ್ಞಾನ ಮತ್ತು ಬೆಲೆಯಿಂದಾಗಿ ಉತ್ಪಾದನೆ ಮತ್ತು ರೈತರ ಕಾರ್ಯಕ್ಷಮತೆಯನ್ನು ಹೆಚ್ಚಿಸಬಹುದು.

ಭಾರತದಲ್ಲಿ ವೈವಿಧ್ಯ ಕೃಷಿ ವಲಯಗಳಿವೆ. ಸರ್ಕಾರದ ನೀತಿಗಳು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಭಿನ್ನವಾಗಿವೆ. ಕೃಷಿ ಉತ್ಪನ್ನಗಳ ಬೆಲೆ, ಮೂಲ ಸೌಕರ್ಯ ಮತ್ತು ಅನೂಚಾನವಾಗಿ ನಡೆಸಿಕೊಂಡು ಬರುತ್ತಿರುವ ಸಾಂಪ್ರದಾಯಿಕ ಪದ್ಧತಿಗಳು ವಿಭಿನ್ನವಾಗಿವೆ. ಸಣ್ಣ ಹಿಡುವಳಿದಾರರು ಆರ್ಥಿಕವಾಗಿ ಹಿಂದುಳಿದಿದ್ದಾರೆ. ಜನಸಂಖ್ಯಾ ಹೆಚ್ಚಳ, ಇದರ ಜೊತೆಗೆ ಔದ್ಯೋಗಿಕವಾಗಿ ಹಿಂದುಳಿದಿರುವುದು, ಇವುಗಳಿಂದಾಗಿ ಬೆಳೆ ಉತ್ಪಾದಕತೆಯಲ್ಲಿ ಹಿನ್ನಡೆಯಾಗಿದೆ.

* ಪ್ರಾಧ್ಯಾಪಕರು, ಆರ್ಥಿಕ ಅಭಿವೃದ್ಧಿ ಸಂಸ್ಥೆ, ನವದೆಹಲಿ. E-mail : nila@iegindiaorg

ಹಾಗಾಗಿ ಹೊಸ ಹೊಸ ಯೋಜನೆಗಳು, ಪ್ರಾವಿಣ್ಯತೆ ಅವಶ್ಯವಾಗಿದೆ. ಕೃಷಿ ಕ್ಷೇತ್ರ ಆರ್ಥಿಕವಾಗಿ ಸದೃಢವಾಗಲು ಕೃಷಿಯೇತರ ಕ್ಷೇತ್ರಗಳು ಕೈಜೋಡಿಸಬೇಕು.

ಕೃಷಿ ಕ್ಷೇತ್ರದಲ್ಲಾಗುತ್ತಿರುವ ಏರಿಳಿತಗಳಿಗೆ ಹವಾಮಾನ ವೈಪರೀತ್ಯದ ಕೊಡುಗೆ ಹೆಚ್ಚು. ಅದರಲ್ಲಿ ಮುಂಗಾರು ವ್ಯತ್ಯಾಸವಾದರೆ, ಅದರ ಪರಿಣಾಮ ಕೃಷಿ ಚಟುವಟಿಕೆಗಳ ಜತೆಗೆ, ಬೇರೆ ಬೇರೆ ಹವಾಮಾನ ವ್ಯತ್ಯಾಸಕ್ಕೂ ಕಾರಣವಾಗುತ್ತದೆ.

2014–15ರಲ್ಲಿ ಮುಂಗಾರು ವ್ಯತ್ಯಾಸವಾಗಿದ್ದಕ್ಕೆ ಕೃಷಿಕರು ಹಾಕಿದ ಬಂಡವಾಳವೆಲ್ಲ ಹಾಳಾಯಿತು. ಒಂದು ಕಡೆ ಮುಂಗಾರು ವ್ಯತ್ಯಾಸವಾಗಿದ್ದು, ಬೇರೆ ಬೇರೆ ಕಡೆಗೂ ಅದರ ಪರಿಣಾಮ ವಿಸ್ತರಿಸಿತು. ಕೆಲವು ಕಡೆ ಅತೀವೃಷ್ಟಿ, ಮತ್ತೆ ಕೆಲವು ಕಡೆ ಅನಾವೃಷ್ಟಿ. ಈ ಎರಡರಿಂದಲೂ ಕೃಷಿ ಕ್ಷೇತ್ರದ ಉತ್ಪಾದನೆ ಮೇಲೆ ತೀವ್ರ ಪರಿಣಾಮ ಬೀರಿರುವುದನ್ನು ಗಮನಿಸಬಹುದು.

2016 ರಲ್ಲಿ ಮುಂಗಾರು ಸಾಧಾರಣವಾಗಿತ್ತು, ಆದರೆ, 9 ರಾಜ್ಯಗಳಲ್ಲಿ ಅಧಿಕ ಪ್ರಮಾಣದಲ್ಲಿ ಮಳೆ ಬಂದು ಕೃಷಿ ಭೂಮಿ ನಾಶವಾಯಿತು. ಬಿಹಾರದಲ್ಲಿ ನದಿ ನೀರಿನ ಮಟ್ಟ ಹೆಚ್ಚಾದ ಪರಿಣಾಮದಿಂದಾಗಿ 3 ಲಕ್ಷ ಹೆಕ್ಟೇರ್ ಕೃಷಿ ಭೂಮಿ ನಷ್ಟವಾಯಿತು. ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ಸಿಗದಿರುವುದು ರೈತರ ಆರ್ಥಿಕ ದುರ್ಬಲತೆಗೆ ಕಾರಣವಾಗುತ್ತಿದೆ. ಇದಕ್ಕೆ ಕಾರಣ ಸಾಧಾರಣ ಉತ್ಪಾದನೆ ವೇಳೆಯಲ್ಲೂ ಉತ್ಪನ್ನಗಳಿಗೆ ಬೆಲೆ ಸಿಕ್ಕಿಲ್ಲ. ಉತ್ಪನ್ನಗಳಿಗೆ ಸಾಮಾನ್ಯ ಬೆಲೆ ಸಿಕ್ಕಿದರೂ ಹೇಗೊ ಒಂದಷ್ಟು ಜೀವನ ಮಾಡಬಹುದು. ಆದರೆ, ಏನಾಗುತ್ತಿದೆಯೆಂದರೆ ರೈತರು ಕೂಡ ದುಬಾರಿ ಹಣ ಕೊಟ್ಟು ಆಹಾರ ಧಾನ್ಯ ಖರೀದಿಸುವ ಪರಿಸ್ಥಿತಿ ಇದೆ.

ಸರ್ಕಾರ ಬೆಳೆಗಳಿಗೆ ಬೆಂಬಲ ಬೆಲೆ ನೀಡುತ್ತಿರುವುದರಿಂದ ರೈತರು ದೇಶಕ್ಕೆ ಅಗತ್ಯವಾಗಿರುವಷ್ಟು ಆಹಾರ ಧಾನ್ಯಗಳನ್ನು ಬೆಳೆದುಕೊಡಲು ಹಾಗೂ ಸ್ಪರ್ಧಾತ್ಮಕ ಬೆಲೆಯಲ್ಲಿ ಗ್ರಾಹಕರಿಗೆ ತಲುಪಿಸಲು ಉತ್ತೇಜನ ನೀಡಿದಂತಾಗಿದೆ. ಆದರೆ, ಸರ್ಕಾರ ನಿರಂತರವಾಗಿ ಬೆಂಬಲ ಬೆಲೆ ನೀಡಿ ಖರೀದಿಸುವಂತಾದರೆ, ರೈತರು ಹೀಗೆ ಬೆಳೆಯುತ್ತಾರೆ. ಸ್ಪರ್ಧಾತ್ಮಕ ಬೆಲೆಯಲ್ಲೇ ಮಾರಾಟ ಮಾಡುತ್ತಾರೆ.



2016–17ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಾಯಿತು. ಆದರೆ, ದರ ಕುಸಿಯಿತು. ಬೆಂಬಲ ಬೆಲೆ ನೀಡಿದರೂ, ರೈತರಿಗೆ ಬೆಳೆದ ಖರ್ಚು ಸಿಗಲಿಲ್ಲ. ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧೆ ಏರ್ಪಟ್ಟಿದ್ದರಿಂದ ಬೆಲೆ ಅನಿಶ್ಚತತೆಗೆ ಕಾರಣವಾಯಿತು. ಇವೆಲ್ಲ ಗಮನಿಸಬೇಕಾದ ಅಂಶಗಳು.

**ಗ್ರಾಮೀಣ ಸವಲತ್ತುಗಳು**

ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ ಮತ್ತು ಬೆಲೆಯ ವ್ಯಾಪ್ತಿಯಲ್ಲೇ ರೈತರ ಮತ್ತು ಕೃಷಿ ಕ್ಷೇತ್ರದ ಕಲ್ಯಾಣವನ್ನು ಅಳೆಯುವುದು ಸರಿಯಾದ ಮಾರ್ಗವಲ್ಲ. ಇದು ಖಂಡಿತಾ ದಾರಿತಪ್ಪಿಸಿಬಿಡುತ್ತದೆ. ಇದರ ಜತೆಗೆ ಕೃಷಿಕರಿಗೆ ನಿತ್ಯ ಜೀವನಕ್ಕೆ ಬೇಕಾಗುವ ಸೌಕರ್ಯ ಕಲ್ಪಿಸುವುದು, ಕೃಷಿ ಕ್ಷೇತ್ರಗಳಲ್ಲಿ ಹೊಸ ಹೊಸ ಅವಕಾಶಗಳನ್ನು ಕಲ್ಪಿಸಲು ಮುಂದಾಗಬೇಕಿದೆ (ಸೆನ್, 2005). ಇಂಥ ಕ್ರಮಗಳಿಂದ ತಂತ್ರಜ್ಞಾನ ಸುಧಾರಣೆಯಾಗುತ್ತದೆ.

ವಿಪರ್ಯಾಸವೆಂದರೆ ಈ ಎಲ್ಲ ಕ್ರಮಗಳು 'ನಗರ ಕೇಂದ್ರೀಕೃತವಾಗಿ' (ಲಿಪ್ಟನ್, 1977) ಅಭಿವೃದ್ಧಿಯಾಗುತ್ತಿದ್ದು, ರೈತರು ಒಂದು ರೀತಿ ಸಂತ್ರಸ್ತರಾಗಿ ಉಳಿಯುತ್ತಿದ್ದಾರೆ.

ನಮ್ಮ ದೇಶದಲ್ಲಿ ಬಹಳ ವರ್ಷಗಳ ಕಾಲ ದೇಶದ ಗ್ರಾಮೀಣ ಭಾಗದ ಬಡವರ, ಮಾನವ ಸಂಪನ್ಮೂಲ ಅಭಿವೃದ್ಧಿಯ ಕಡೆಗೆ ಹೆಚ್ಚು ಒತ್ತುಕೊಟ್ಟಿಲ್ಲ. ಪರಿಣಾಮವಾಗಿ ಹಳ್ಳಿಗಳಲ್ಲಿ ಪರಿಸ್ಥಿತಿ ಇಂದೂ ಸುಧಾರಣೆಯಾಗಿಲ್ಲ.

ಶಿಕ್ಷಣ ಕ್ಷೇತ್ರ ಪ್ರಾಮುಖ್ಯತೆ ಪಡೆದುಕೊಂಡರೂ, ಗುಣಮಟ್ಟ ಮತ್ತು ವೃತ್ತಿಪರ ಕೌಶಲ್ಯ ಅಭಿವೃದ್ಧಿ ಶಿಕ್ಷಣದಲ್ಲಿ ಅಷ್ಟಾಗಿರಲಿಲ್ಲ. ಇದಕ್ಕೆ ಕಾರಣ ಹಣಕಾಸಿನ ಕೊರತೆ, ದುರ್ಬಲ ನೀತಿಗಳ ಅನುಷ್ಠಾನ ಮತ್ತು ಭ್ರಷ್ಟಾಚಾರ. ಶಿಕ್ಷಣ ಮಾತ್ರವಲ್ಲ, ಬಹುದೊಡ್ಡ ರೈತ ಸಮುದಾಯ ಅವಲಂಬಿಸಿರುವ ಸಾರ್ವಜನಿಕ ಆರೋಗ್ಯ ಸೇವೆಗಳೂ ಸುಧಾರಿಸಿರಲಿಲ್ಲ. ಆರೋಗ್ಯ ಸುಧಾರಿಸುವಂತಹ ಪೌಷ್ಟಿಕಾಂಶ, ಪರಿಸರ ಕ್ಷೇತ್ರಗಳನ್ನು ಸುಧಾರಿಸಲು ಸಾಧ್ಯವಿತ್ತು. ಆದರೆ ಮುಂದುವರಿಯಲಿಲ್ಲ.

ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆ ದೇಶವ್ಯಾಪಿ ಜಾರಿಯಾಯಿತಾದರೂ, ನಂತರದ ದಿನಗಳಲ್ಲಿ ಈ ವ್ಯವಸ್ಥೆಯಲ್ಲಿ ಬಡ ವರ್ಗವನ್ನೂ ಗುರಿಯಾಗಿ ಇಟ್ಟುಕೊಳ್ಳಲಾಯಿತು. ಆಹಾರ ಉತ್ಪಾದನೆ ಕಡಿಮೆಯಾದಾಗ ರೈತರನ್ನು ಈ ಪಡಿತರ ವ್ಯವಸ್ಥೆಯಲ್ಲಿ ಸೇರಿಸಲಾಯಿತು. 1980ರ ದಶಕದಿಂದಲೂ ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆ ಯೋಜನೆಗೆ ಸಾಕಷ್ಟು ತಿದ್ದುಪಡಿ ತರುತ್ತಲೇ ಇರಲಾಗಿದೆ.

ಕೃಷಿ ಕ್ಷೇತ್ರ ಇಷ್ಟೆಲ್ಲ ಸಮಸ್ಯೆಗಳನ್ನು ಎದುರಿಸುತ್ತಲೇ ಇದೆ. ಹಲವು ದಶಕಗಳಿಂದ ದೇಶದಲ್ಲಿ ಭೌತಿಕ ಸಂವಹನಕ್ಕೆ ನೆರವಾಗುವಂತಹ ರಸ್ತೆ, ರೈಲು, ಮೆಟ್ರೊ ರೈಲುಗಳ ಅನುಷ್ಠಾನಕ್ಕೆ ಗಮನಹರಿಸಲಾಯಿತು. ಇಷ್ಟಾದರೂ ಇವತ್ತಿಗೂ ಭಾರತದ ಶೇ 16ರಷ್ಟು ಹಳ್ಳಿಗಳಲ್ಲಿ ರಸ್ತೆ ಸಂಪರ್ಕ ವ್ಯವಸ್ಥೆ ಇಲ್ಲ (ಅಶರ್ ಮತ್ತು ನವೊಸದ್, 2017). ಸಾಮಾಜಿಕ

ಮತ್ತು ಆರ್ಥಿಕವಾಗಿ ಬದುಕನ್ನು ಬೆಳಕಿನತ್ತ ಕೊಂಡೊಯ್ಯಬೇಕಾದ ವಿದ್ಯುತ್ ಸಂಪರ್ಕ ವ್ಯವಸ್ಥೆ ಬೇಡಿಕೆಯನ್ನು ಇನ್ನೂ ಸಂಪೂರ್ಣ ನೀಗಿಸಲು ಸಾಧ್ಯವಾಗಿಲ್ಲ.

ಮನುಷ್ಯನಿಗೆ ಜೀವಿಸಲು ಬೇಕಾದ ಆರೋಗ್ಯ ಮತ್ತು ಉತ್ತಮ ಪರಿಸರ ಹಾಗೂ ಕನಿಷ್ಠ ಸೌಲಭ್ಯಗಳಾದ ವಸತಿ, ನೀರು, ಚರಂಡಿ ವ್ಯವಸ್ಥೆಯಲ್ಲೂ ಸುಧಾರಣೆ ಕಾಣಲಿಲ್ಲ. ಗಣತಿ ವಿಶ್ಲೇಷಣೆ ಪ್ರಕಾರ ಶೇ 45 ರಿಂದ ಶೇ 70ರಷ್ಟು ಹಳ್ಳಿಗಳಲ್ಲಿ ವಿದ್ಯುತ್ ಸಂಪರ್ಕವಿಲ್ಲ. ಶೇ 18ರಷ್ಟು ಜನರಿಗೆ ನೀರಿನ ಪೂರೈಕೆ, ಶೌಚಾಲಯ ವ್ಯವಸ್ಥೆ ಇಲ್ಲ. (ಮಿಶ್ರಾ ಮತ್ತು ಶುಕ್ಲಾ, 2013).



ಇಂಥ ಇಲ್ಲಗಳ ನಡುವೆ ತ್ವರಿತ ಸಂವಹನಕ್ಕಾಗಿ ಮೊಬೈಲ್ ಫೋನ್‌ಗಳು, ಅಂತರ್ಜಾಲ ವ್ಯವಸ್ಥೆ, ಬಾಹ್ಯಾಕಾಶ ತಂತ್ರಜ್ಞಾನಗಳು ಮೂಲಭೂತ ಸೌಲಭ್ಯಗಳ ಪಟ್ಟಿಯಲ್ಲಿ ಸೇರಿಕೊಂಡಿವೆ. ಭೌತಿಕ ಮೂಲ ಸೌಲಭ್ಯಗಳು ಕೃಷಿ ಕ್ಷೇತ್ರದ ಸಾಮಾಜಿಕ ಜೀವನವನ್ನು ಸುಧಾರಿಸುವ ಜತೆಗೆ, ಕೃಷಿ ಉತ್ಪನಗಳ ಉತ್ಪಾದನೆಯನ್ನೂ ಹೆಚ್ಚಿಸುತ್ತವೆ. ಮಾರುಕಟ್ಟೆ, ಉತ್ಪಾದನೆಯಲ್ಲಾಗುವ ನಷ್ಟವನ್ನು ತಡೆಯುವುದು, ಮೌಲ್ಯವರ್ಧನೆಗೆ ಉತ್ತೇಜನ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಾಯವಾಗುತ್ತದೆ.

ಕೃಷಿ ವಲಯದಲ್ಲಿ ಮಹಿಳೆಯರು ಪುರುಷರಿಗೆ ಸರಿ ಸಮನಾಗಿ ಕೆಲಸ ಮಾಡುವ ಚೈತನ್ಯವಿದ್ದರೂ ಹೊಲ ಗದ್ದೆಗಳಲ್ಲಿ ಕೆಲಸ ಮಾಡುವವರಿಗೆ ಕೆಲಸಕ್ಕೆ ತಕ್ಕ ವೇತನ ನೀಡುತ್ತಿಲ್ಲ. ಅವರನ್ನು ಸಣ್ಣಪುಟ್ಟ ಕೆಲಸಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ (ಘೋಷ್, 2010). ಸಮೀಕ್ಷೆಯಲ್ಲಿ ದೊರೆತ ಸಾಕ್ಷ್ಯಾಧಾರದ ಪ್ರಕಾರ ಆಧುನಿಕ ತಂತ್ರಜ್ಞಾನಗಳನ್ನು ಕೃಷಿಯಲ್ಲಿ ಅಳವಡಿಸಿಕೊಂಡು, ಮಹಿಳಾ ಕಾರ್ಮಿಕರನ್ನು ಕೈಬಿಡುವ ಪ್ರಯತ್ನಗಳೂ ನಡೆಯುತ್ತಿವೆ (ಬೋಸರಪ್, 1970). ಈ ಹಂತದಲ್ಲಿ ಬಡವರ್ಗದ ಮಹಿಳೆಯರಿಗೆ ಕೃಷಿ ಕ್ಷೇತ್ರದಲ್ಲಿ ಕಡ್ಡಾಯವಾಗಿ ಅವಕಾಶ ಕೊಡುವ ಪ್ರಕ್ರಿಯೆಗಳು ನಡೆಯಬೇಕು. ಅಳವಡಿಸುವ ಹೊಸ ತಂತ್ರಜ್ಞಾನಗಳ ಜತೆ ಕೆಲಸ ಮಾಡಲು ಅವರಿಗೆ ತರಬೇತಿ ನೀಡಬೇಕು. ಕೌಶಲ್ಯ ಅಭಿವೃದ್ಧಿಗೊಳಿಸಬೇಕು. ಅವರಿಗೆ ಆರೋಗ್ಯ, ಮಕ್ಕಳನ್ನು ಪೋಷಿಸುವುದಕ್ಕೆ ನೆರವು, ಮಹಿಳೆಯರ ಶಕ್ತಿ ಸಾಮರ್ಥ್ಯಕ್ಕೆ ಅನುಸಾರವಾಗಿ ನಡೆಯುವ ಯಂತ್ರಗಳನ್ನು ಅಳವಡಿಸಬೇಕು. ಕೃಷಿ ಮಹಿಳಾ ಕಾರ್ಮಿಕರ ಕಲ್ಯಾಣಕ್ಕಾಗಿ ಬೇಕಾಗುವ ಮಾಹಿತಿ ಅವರಿಗೆ ತಲುಪುವಂತೆ ನೋಡಿಕೊಳ್ಳಬೇಕು (ಜಿಗ್ಗಿನ್ಸ್, 1998) ಎಂದು ಸಮೀಕ್ಷೆಯಲ್ಲಿ ಅಭಿಪ್ರಾಯಪಡಲಾಗಿದೆ.

### ಕೃಷಿ ಕಾರ್ಮಿಕರ ಕಲ್ಯಾಣಕ್ಕೆ ಹೊಸ ಬೆಳಕು

ಬಹಳ ವರ್ಷಗಳ ಕಾಲ ಭಾರತದ ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ಸುಧಾರಿತ ಬಿತ್ತನೆ ಬೀಜಗಳ ವಿತರಣೆ, ಕಡಿಮೆ ದರದಲ್ಲಿ ರಸಗೊಬ್ಬರಗಳ ಪೂರೈಕೆ, ಕಡಿಮೆ ದರದಲ್ಲಿ ಇಂಧನ ಪೂರೈಕೆ ಮತ್ತು ದಾಸ್ತಾನು ಸೌಲಭ್ಯ ಬೆಂಬಲ ಬೆಲೆ ಮೂಲಕ ಕೃಷಿಕರು ಬೆಳೆದ ಧಾನ್ಯಗಳನ್ನು ಖರೀದಿಸುವಂತಹ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿತ್ತು. ದೇಶದ ಆಹಾರ ಭದ್ರತೆಗೆ ಸಹಕರಿಸುವ ಕೃಷಿ ಕ್ಷೇತ್ರಕ್ಕೆ ಅಭಿವೃದ್ಧಿಗಾಗಿ ಈ ನೆರವು ನೀಡಲಾಗುತ್ತಿತ್ತು. ಈ ಯೋಜನೆಗಳು ಅನುಷ್ಠಾನವಾಗುತ್ತಿದ್ದಂತೆ ಹೆಚ್ಚು ಆಹಾರ ಉತ್ಪಾದಿಸುವ ಪ್ರದೇಶಗಳಿಗೆ ನೀಡುತ್ತಿದ್ದ ನೆರವನ್ನು ಬೇರೆಡೆ ಹರಿಸಲಾಯಿತು. ಸರ್ಕಾರ ತನ್ನ ದೃಷ್ಟಿಕೋನವನ್ನು ಬೇರೆ ಬೆಳೆಗಳ ಅಭಿವೃದ್ಧಿ, ಆಹಾರ ದಾಸ್ತಾನು, ಮಳೆಯಾಶ್ರಿತ ಪ್ರದೇಶಗಳತ್ತ ಗಮನಹರಿಸಿತು. BGREI, ISOPOM, NFSM, RKVY, WDRA ನಂತಹ ಕಾರ್ಯಕ್ರಮಗಳ ಅನುಷ್ಠಾನದ ಮೂಲಕ ಸ್ಥಳೀಯ ಕೃಷಿ ಕ್ಷೇತ್ರದ ಅಗತ್ಯಗಳನ್ನು ಪೂರೈಸಲು ಮುಂದಾಯಿತು. ಕೃಷಿ ಕ್ಷೇತ್ರಕ್ಕೆ ಮಾರಕವಾಗಿರುವ ಹವಾಮಾನ ವೈಪರೀತ್ಯ ಮತ್ತು ಪ್ರಕೃತಿವಿಕೋಪದ ವಿರುದ್ಧ ಹೋರಾಡಲು ಸಜ್ಜಾಯಿತು. ಪ್ಯಾರಿಸ್ ಒಪ್ಪಂದದಲ್ಲಿನ ಮಾರ್ಗಸೂಚಿಯ ಪಾಲನೆ





ಜತೆಗೆ, ಸುಸ್ಥಿರ ಪದ್ಧತಿಗಳ ಅನುಷ್ಠಾನಕ್ಕೆ ಒತ್ತು ನೀಡಿತು. ಹವಾಮಾನ ವೈಪರೀತ್ಯದ ಪರಿಣಾಮಗಳ ಕುರಿತು ರೈತರಿಗೆ ಅರಿವು ಮೂಡಿಸುವ ಕೆಲಸವೂ ನಡೆಯಿತು.

'ಕೃಷಿ ಕ್ಷೇತ್ರದಲ್ಲಿನ ಸಮಸ್ಯೆಗಳನ್ನು ನಿರ್ವಹಿಸುವುದಕ್ಕಾಗಿ ಇರುವ ಸ್ವಾಭಾವಿಕ ಪರಿಹಾರವೆಂದರೆ ಬೆಳೆ ವಿಮೆ. ದಶಕಗಳ ಹಿಂದೆ ಬೆಳೆ ವಿಮೆ ಅನುಷ್ಠಾನಗೊಂಡಿದ್ದರೂ, ಜನಪ್ರಿಯವಾಗಿರಲಿಲ್ಲ. ಹಲವು ಕಾರಣಗಳಿಂದ ಸಮರ್ಪಕವಾಗಿ ಚಾಲನೆಯಲ್ಲಿರಲಿಲ್ಲ. 1999–2000ನೇ ಇಸವಿಯಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆ (ಎನ್‌ಎಐಎಸ್) ಆರಂಭವಾಯಿತು. ಆದರೆ, ದತ್ತಾಂಶಗಳ ಸಂಗ್ರಹದ ಕೊರತೆಯಿಂದ ಯಶಸ್ವಿಯಾಗಲಿಲ್ಲ. ಹೀಗಾಗಿ ಬೆಳೆ ವಿಮೆ ಯೋಜನೆಗೆ ಹಲವು ಮಾರ್ಪಾಡುಗಳನ್ನು ತರಲಾಯಿತು. ಅಂತಿಮವಾಗಿ ಜನವರಿ 2016ರಂದು 'ಏಕಗವಾಕ್ಷಿ' ಅಥವಾ ಒಂದೇ ಸೂರಿನಡಿ ಕೃಷಿ ಕ್ಷೇತ್ರದ ಎಲ್ಲ ಸಮಸ್ಯೆಗಳನ್ನು ಒಳಗೊಳ್ಳುವಂತಹ ವಿಮಾ ಯೋಜನೆಯನ್ನು ಕೇಂದ್ರ ಸರ್ಕಾರ ರೂಪಿಸಿತು. ಅದೇ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ (ಪಿಎಂಎಫ್‌ಬಿಐ). ಹವಾಮಾನ ವೈಪರೀತ್ಯ, ಕೀಟ–ರೋಗ ಬಾಧೆ, ಬಿತ್ತನೆ, ಕೊಯ್ಲು ಮತ್ತು ಕೊಯ್ಲೋತ್ತರದಲ್ಲಿ ಆಗುವ ಹಾನಿಯನ್ನು ಈ ಯೋಜನೆ ವ್ಯಾಪ್ತಿಗೆ ಒಳಪಡಿಸಲಾಯಿತು. ಇದರ ಜತೆಗೆ ರೈತರು ರಿಯಾಯ್ತಿ ದರದಲ್ಲಿ ವಿಮಾ ಕಂತು ಪಾವತಿಸಲು ಸರ್ಕಾರ ಅವಕಾಶ ಕಲ್ಪಿಸಿತು. ಖಾಸಗಿ ವಿಮಾ ಕಂಪೆನಿಗಳನ್ನು ಸ್ಪರ್ಧಾತ್ಮಕ ವಿಮಾ ದರ ನೀಡಲು ಉತ್ತೇಜಿಸಿತು. ಹೀಗಾಗಿ ಖಾಸಗಿ ವಿಮಾ ಕಂಪೆನಿಗಳು ಈ ಯೋಜನೆಯಲ್ಲಿ ಕೈ ಜೋಡಿಸಿದವು. ಆಧುನಿಕ ತಂತ್ರಜ್ಞಾನದ ಮೂಲಕ ಬೆಳೆ ಇಳುವರಿ ದತ್ತಾಂಶವನ್ನು ಸಂಗ್ರಹಿಸಿ, ಭವಿಷ್ಯದಲ್ಲಿ ಇನ್ನಷ್ಟು ಮತ್ತಷ್ಟು ನಿಖರವಾಗಿ ವಿಮಾ ಯೋಜನೆ ಅನುಷ್ಠಾನಕ್ಕೂ ಸಿದ್ಧತೆ ಮಾಡಿಕೊಳ್ಳಲಾಯಿತು.

ಬೆಳೆ ವಿಮೆ, ಹವಾಮಾನ ವೈಪರೀತ್ಯ–ಗಳಿಂದ ಉಂಟಾಗುವ ಅನಾಹುತಗಳಿಗೆ ಪರಿಹಾರ ರಕ್ಷಣೆ ಒದಗಿಸುವಷ್ಟು ಶಕ್ತವಾಗಿದೆ. ಆದರೆ, ಹಾನಿ ಪ್ರಮಾಣ ವಿಸ್ತಾರ ಹೆಚ್ಚಿದಾಗ, ಸ್ವಲ್ಪ ಕಷ್ಟವಾಗುತ್ತಿದೆ. ಈಗಿರುವ ವ್ಯವಸ್ಥೆಯ ಸುಧಾರಣೆಗೆ ಹಾಗೂ ಹಾನಿ ಮುನ್ಸೂಚನೆ ನೀಡುವುದಕ್ಕಾಗಿ ಉಪಗ್ರಹದ ನೆರವು ಪಡೆಯಲಾಗುತ್ತಿದೆ. ಬೆಳೆ ನಷ್ಟ ಪರಿಹಾರಕ್ಕೆ ಮುಂದಾಗಿದೆ. ಇದಕ್ಕಾಗಿ 2005 ರಲ್ಲಿ ವಿಪತ್ತು ನಿರ್ವಹಣಾ ಕಾಯಿದೆಯ ಭಾಗವಾಗಿ ಕೇಂದ್ರದ ಕೇಂದ್ರೀಯ ಕಾರ್ಯಪಡೆ ನಿಯೋಜಿಸಲಾಗಿದೆ. ಅಗತ್ಯಬಿದ್ದಾಗ ಈ ಕಾರ್ಯಪಡೆಯೂ ನೆರವು ನೀಡುತ್ತದೆ. ರಾಜ್ಯ ಸರ್ಕಾರಗಳ ಮನವಿ ಮೇರೆಗೆ ಬರಗಾಲದ ಸಂದರ್ಭದಲ್ಲಿ ನೀರಾವರಿ ವ್ಯವಸ್ಥೆಗೆ ವಿಶೇಷ ಪ್ರೋತ್ಸಾಹ ಧನ ನೀಡುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.

ಬೆಳೆ ರಕ್ಷಣೆ ಜತೆಗೆ, ರೈತರು ಬೆಳೆದ ಬೆಳೆಗೆ ಉತ್ತಮ ಮಾರುಕಟ್ಟೆ ಒದಗಿಸಬೇಕಾದದ್ದು ಪ್ರಮುಖ ಘಟ್ಟ. ಸಂಬಂಧ ಸರ್ಕಾರ ಪ್ರಸ್ತುತ ಚಾಲ್ತಿಯಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಕಾಯ್ದೆಗೂ ತಿದ್ದುಪಡಿ ತಂದಿತು. ಬೆಲೆ ನಿಯಂತ್ರಣ, ಪರಿಣಾಮಕಾರಿಯಾಗಿ ಮಾರಾಟ ಸವಾಲುಗಳನ್ನು ಎದುರಿಸಿ, ರೈತ ಸ್ನೇಹಿ ಕಾಯಿದೆಯಾಗಿಸುವ ಪ್ರಯತ್ನ ಇದಾಯಿತು.

ಗ್ರಾಮಾಭಿವೃದ್ಧಿ ಮತ್ತು ರೈತರ ಜೀವನೋಪಾಯಕ್ಕಾಗಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಜೀವನೋಪಾಯ ಅಭಿವೃದ್ಧಿಗೆ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (ಎನ್‌ಆರ್‌ಎಲ್‌ಎಂ), ಬೆಳೆಗೆ ವೈಜ್ಞಾನಿಕ ಬೆಲೆ ನೀಡಲು ಇ–ನಾಮ್, ಸಾಮಾಜಿಕ ಸಹಕಾರಕ್ಕಾಗಿ ರಾಷ್ಟ್ರೀಯ ಸಾಮಾಜಿಕ ಸಹಾಯ ಕಾರ್ಯಕ್ರಮ (ಎನ್‌ಎಸ್‌ಎಪಿ), ವಸತಿ ನೀಡಲು ಇಂದಿರಾ ಆವಾಸ್ ಯೋಜನೆ (ಐಎವೈ), ಸಾರಿಗೆ



ಅಭಿವೃದ್ಧಿಗಾಗಿ ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆ (ಪಿಎಂಜಿಎಸ್ ವೈ), ಆರೋಗ್ಯ ರಕ್ಷಣೆಗಾಗಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (ಎನ್‌ಆರ್‌ಎಚ್‌ಎಂ) ನಂತಹ ಯೋಜನೆಗಳನ್ನು ಸರ್ಕಾರ ಅನುಷ್ಠಾನಗೊಳಿಸಿದೆ.

ಬರ ನಿರ್ವಹಣೆಗಾಗಿ ಸಮರ್ಪಕ ನೀರಾವರಿ ವ್ಯವಸ್ಥೆಗಾಗಿ ವಿಶೇಷ ಯೋಜನೆ ರೂಪಿಸಲಾಗಿದೆ. 2005ರಲ್ಲಿ ಆರಂಭವಾದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (MGNREGA) ಮತ್ತು ಸಾರ್ವಜನಿಕ ಸೇವಾ ಕಾರ್ಯಕ್ರಮಗಳು (PWP) ಗ್ರಾಮೀಣ ಜನರಿಗೆ ನಿಗದಿತ ಆದಾಯ ಕೊಡುವ ಯೋಜನೆಗಳಾಗಿವೆ.



ಉದ್ಯೋಗ ಖಾತ್ರಿ ಯೋಜನೆ ಗ್ರಾಮೀಣ ಹಾಗೂ ಕಾರ್ಮಿಕರ ಕಾನೂನಾತ್ಮಕ ಹಕ್ಕು ಎಂದು ಹೇಳಬಹುದಾಗಿದೆ. ಈ ಯೋಜನೆಗಳು ಸರ್ಕಾರದ ಪ್ರಮುಖ ಮೈಲಿಗಲ್ಲು. ಆದರೂ ಈ ಯೋಜನೆಗಳ ಕುರಿತು ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಯೋಜನೆಗಳ ಅನುಷ್ಠಾನದಲ್ಲಿ ಕಳಪೆ ಕಾಮಗಾರಿಗಳು ನಡೆದಿವೆ. ಆದರೆ, ಗ್ರಾಮೀಣ ಭಾಗದಲ್ಲಿ ಸಂಪತ್ತು ಸೃಷ್ಟಿಗೊಳಿಸಲು ಈ ಯೋಜನೆಗಳು ಸಹಕಾರಿಯಾಗಿವೆ.

2015 ರಲ್ಲಿ ಜಾರಿಗೆ ತರಲಾದ ರಾಷ್ಟ್ರೀಯ ಪ್ರಧಾನಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆ ಮೂಲಕ ದೇಶದಾದ್ಯಂತ ಉದ್ಯೋಗ ಸೃಷ್ಟಿಸಲಾಗುತ್ತಿದೆ. ಉದ್ಯಮಗಳ ಸ್ಥಾಪನೆಗೆ ಅವಕಾಶ ಕಲ್ಪಿಸುವ ಮೂಲಕ, ಗುಣಮಟ್ಟದ ಕೌಶಲ್ಯಗಳಿಗೆ ಆದ್ಯತೆ ನೀಡಲಾಗುತ್ತಿದೆ.

**ಉಪ ಸಂಹಾರ**

ಬಹು ದೀರ್ಘ ಕಾಲ ರೈತನ ಆದಾಯ ಉತ್ಪನ್ನ ಗ್ರಾಹಕ ಕೇಂದ್ರೀಕೃತವಾಗಿತ್ತು. ಆದರೆ, ಈಗ ಮಾರುಕಟ್ಟೆ ಸುಧಾರಣೆ ನಂತರದ ಕಾಲದಲ್ಲಿ ಈ ವ್ಯವಸ್ಥೆ ಬದಲಾಗಿದೆ. ಹೀಗಾಗಿ



ಸಾಮಾಜಿಕ ಸುರಕ್ಷತೆ ಅನ್ನುವುದು ಹಕ್ಕಾಗಿ ಮೂಡುತ್ತಾ ಇದೆ. ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ಸರ್ಕಾರ ವ್ಯವಸ್ಥಿತವಾದ ಮಾರುಕಟ್ಟೆ ನಿರ್ಮಿಸಬಹುದೇ ಹೊರತು ಸರಕಿನ ಬೆಲೆ ಮತ್ತು ನಾಗರಿಕರ ಆದಾಯದ ಮೇಲೆ ಸರ್ಕಾರ ಹತೋಟಿ ಇಡಲು ಸಾಧ್ಯವಿಲ್ಲ.

ಜನರಿಗಾಗಿ ರೈತ ಬೆಳೆ ಬೆಳೆಯುತ್ತಾನೆ. ಆ ಆಹಾರ ಉತ್ಪಾದಿಸುವ ರೈತರ ರಕ್ಷಣೆ ಸರ್ಕಾರದ ಜವಾಬ್ದಾರಿ. ರೈತರಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಆದ್ಯ ಕರ್ತವ್ಯ ಆಗಿದೆ. ಈ ನಿಟ್ಟಿನಲ್ಲಿ ಕೃಷಿ ಕ್ಷೇತ್ರಕ್ಕೆ ಮೂಲ ಸೌಕರ್ಯ ಒದಗಿಸುವುದು. ರೈತರನ್ನು ನೈಸರ್ಗಿಕ ಹಾನಿಯಿಂದ ರಕ್ಷಿಸಬೇಕು. ರೈತರ ಜ್ಞಾನಾಭಿವೃದ್ಧಿಗೆ ಮಾಹಿತಿ ನೀಡುವುದು. ಅವರಿಗೆ ತರಬೇತಿ ನೀಡಬೇಕು. ಈ ಜವಾಬ್ದಾರಿ ಕೇವಲ ಸರ್ಕಾರದ್ದಾಗದೇ, ರೈತರಿಂದ ನೆರವು ಪಡೆಯುವ ಎಲ್ಲ ಕ್ಷೇತ್ರಗಳ ಹಾಗೂ ತೆರಿಗೆ ಪಾವತಿಸುವ ನಾಗರಿಕರ ಕರ್ತವ್ಯವಾಗಿರುತ್ತದೆ.

ದೂರ ದೃಷ್ಟಿಯಿಂದ ಯೋಚಿಸುವುದಾದರೆ ಕೃಷಿ ಕ್ಷೇತ್ರ ಭವಿಷ್ಯದಲ್ಲಿ ಉದ್ಯಮವಾಗಿ ಪರಿವರ್ತನೆಯಾಗಬಹುದು. ಹಾಗಾಗಿ ಬೆಳೆಯುತ್ತಿರುವ ಬೇರೆ ಕ್ಷೇತ್ರಗಳ ಸಹಯೋಗದೊದಿಗೆ ಕೃಷಿ ಕ್ಷೇತ್ರ ಹೆಜ್ಜೆ ಹಾಕಬೇಕು. ರಾಜ್ಯ ಸರ್ಕಾರ ನಿರ್ವಹಣೆ ಮಾಡುವುದಕ್ಕೆ ಹಲವಾರು ಸವಾಲುಗಳಿವೆ. ಈ ಸವಾಲಗಳನ್ನು ಮುಂದುವರಿದ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಮೂಲಕ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸೂಕ್ತ ಬದಲಾವಣೆಗಳನ್ನು ತರುವ ಮೂಲಕ ಸವಾಲುಗಳನ್ನು ಎದುರಿಸಬಹುದು. ಅಂತಿಮವಾಗಿ ಈ ನಾಗರಿಕ ಸಮಾಜದಲ್ಲಿ ರೈತನೂ ಒಳಗೊಂಡಂತೆ ಪ್ರತಿಯೊಬ್ಬ ನಾಗರಿಕನಿಗೂ ಉತ್ತಮ ಜೀವನವನ್ನು ನಡೆಸುವ ಹಕ್ಕು ಇದೆ.. ಅವನೂ ಕೂಡ ಸ್ಪರ್ಧಾತ್ಮಕವಾಗಿ ಇರಲು ಬಯಸುತ್ತಾನೆ. ❑

# ಜೀವನದ ದ್ವಿತೀಯಾರ್ಧಕ್ಕೆ ರಕ್ಷಣೆ

* ಡಾ. ಬದ್ರಿ ಸಿಂಗ್ ಭಂಡಾರಿ



**ಭಾರತದಲ್ಲಿ ಶೇ 84ರಷ್ಟಿರುವ ಅಸಂಘಟಿತ ವಲಯಕ್ಕೆ ಪಿಂಚಣಿ ಯೋಜನೆಯ ಸೌಲಭ್ಯ ದೊರಕುತ್ತಿಲ್ಲವೆಂಬ ಆತಂಕವನ್ನು ಪರಿಣಿತರೆಲ್ಲರೂ ವ್ಯಕ್ತ ಪಡಿಸುತ್ತಲೇ ಬಂದಿದ್ದಾರೆ. ಎನ್.ಪಿ.ಎಸ್ ವಿಶಾಲ ವ್ಯಾಪ್ತಿಯ ಯೋಜನೆಯಾಗಿದ್ದು ಗ್ರಾಹಕರ ಆಯ್ಕೆ ಮತ್ತು ನೊಂದಣಿ, ವಾರ್ಷಿಕ ಪಿಂಚಣಿ ಕಂತುಗಳ ಸಂಗ್ರಹ, ವ್ಯಕ್ತಿಗತ ವಿವರಗಳ ದಾಖಲಾತಿ, ಗ್ರಾಹಕರ ಕಂತುಗಳ ಸಂಗ್ರಹ, ಹಣಕಾಸು ಮಾರುಕಟ್ಟೆಯಲ್ಲಿ ಹಣವನ್ನು ತೊಡಗಿಸುವುದು, ಗ್ರಾಹಕರ ಖಾತೆಗಳ ನಿರ್ವಹಣೆ ಮೊದಲಾದವನ್ನು ನಿರ್ವಹಿಸುತ್ತದೆ.**

ಪಿಂಚಣಿ ಅಥವಾ ವೃದ್ಧಾಪ್ಯದ ಆರ್ಥಿಕ ಸಂರಕ್ಷಣೆಯ ಯೋಜನೆ ಸಾಮಾಜಿಕ ಭದ್ರತೆಯ ಬಹಳ ಮುಖ್ಯ ಅಂಶವಾಗಿದೆ. ಇದು ವೃದ್ಧಾಪ್ಯದಲ್ಲಿ ತಲೆದೋರಬಹುದಾದ ಬಡತನವನ್ನು ದೂರ ಮಾಡಿ ನಿವೃತ್ತಿಯ ನಂತರ ಕೂಡ ಸಹಜ ಜೀವನವನ್ನು ನಡೆಸಲು ನೆರವು ನೀಡುತ್ತದೆ. ಪಿಂಚಣಿ ಯೋಜನೆಯು ಎಲ್ಲಾ ಅರ್ಹರಿಗೆ ಸುಲಭವಾಗಿ ದೊರಕುವಂತಿರಬೇಕು. ಜಗತ್ತಿನ ಅನೇಕ ದೇಶಗಳಲ್ಲಿ ಪಿಂಚಣಿ ಸೌಲಭ್ಯವು ಎಲ್ಲಾ ಔದ್ಯೋಗಿಕ ರಂಗದಲ್ಲಿರವವರಿಗೂ ಲಭ್ಯವಾಗುವಂತಿರಬೇಕು; ಎಲ್ಲಾ ಜನಜೀವನದ ವಲಯವನ್ನು ತಲುಪುವುದರ ಜೊತೆಗೆ ಅಸಂಘಟಿತ / ಅನೌಪಚಾರಿಕ ವಲಯವನ್ನು ತಲುಪಬೇಕು ಎನ್ನುವ ಬಗ್ಗೆ ಮೂರು ದಶಕಗಳಿಂದ ವ್ಯಾಪಕ ಪ್ರಯತ್ನಗಳು ನಡೆಯುತ್ತಿವೆ.

ಸಾಂಪ್ರದಾಯಿಕವಾಗಿ ಭಾರತದಲ್ಲಿ ಒಟ್ಟು ಕುಟುಂಬಗಳೇ ವೃದ್ಧಾಪ್ಯಕ್ಕೆ ದೊರಕುತ್ತಿದ್ದ ಬಹಳ ದೊಡ್ಡ ಬೆಂಬಲವಾಗಿದ್ದವು. ಆದರೆ ಕ್ರಮೇಣ ಸಾಂಪ್ರದಾಯಿಕ ಒಟ್ಟು ಕುಟುಂಬಗಳು ಔದ್ಯೋಗಿಕ ಕ್ಷೇತ್ರದಲ್ಲಾದ ಬದಲಾವಣೆಯ ಕಾರಣದಿಂದ ಮರೆಯಾಗುತ್ತಾ ಬಂದವು.ನಗರೀಕರಣವು ಚಿಕ್ಕ ಕುಟುಂಬಗಳ ಹುಟ್ಟಿಗೆ ಕಾರಣವಾದವು. ಮುಂದೆ ಜನನ ಮತ್ತು ಮರಣ ಪ್ರಮಾಣಗಳು ಕಡಿಮೆಯಾಗುತ್ತಾ ಬಂದವು.ವೈದ್ಯಕೀಯ ಕ್ಷೇತ್ರದಲ್ಲಿನ ಪ್ರಗತಿ, ಹೆಚ್ಚಿದ ಆದಾಯದ ಪ್ರಮಾಣ ಜೀವನ ನಿರೀಕ್ಷೆಯಲ್ಲಿನ ಹೆಚ್ಚಳ ನಿವೃತ್ತಿಯ ನಂತರದ ಬದುಕಿನ ವರ್ಷಗಳನ್ನು ಕೆಲವು ದಶಕಗಳ ಹಿಂದೆ ಇದ್ದ ಪ್ರಮಾಣಕ್ಕಿಂತಲೂ ಹೆಚ್ಚಿಸಿದವು. ಹೆಚ್ಚುತ್ತಿರುವ ಜನಸಂಖ್ಯೆಯ ಪ್ರಮಾಣ ಒಂದು ಕಡೆ ಪಿಂಚಣಿ ಯೋಜನೆಯಿಂದ ಬೀಳುವ ಆರ್ಥಿಕ ಹೊರೆ ಇನ್ನೊಂದು ಕಡೆ ಹೀಗೆ ಬಹುತೇಕ ದೇಶಗಳಲ್ಲಿ ಪಿಂಚಣಿಯ ಯೋಚನೆ ತೊಡಕಿನಲ್ಲಿ ಸಿಲುಕಲು ಕಾರಣವಾಯಿತು.

ಪಿಂಚಣಿ ಅಥವಾ ಪ್ರಾವಿಡೆಂಟ್ ಫಂಡ್ ಅಥವಾ ಜೀವ ರಕ್ಷಕ ಆದಾಯ ಅಥವಾ ನಿವೃತ್ತಿಯ ನಂತರದ ಸೌಲಭ್ಯ ಹೀಗೆ ಹಲವು ಹೆಸರುಗಳಿಂದ ಕರೆಯಲ್ಪಡುವ ನಿವೃತ್ತಿ ವೇತನವು ಬಹಳ ಹಿಂದಿನಿಂದಲೂ ಸರ್ಕಾರಿ ಸೇವೆಯಲ್ಲಿದ್ದವರಿಗೆ, ಸಾರ್ವಜನಿಕ ರಂಗದ ಉದ್ಯಮಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ, ಖಾಸಗಿ ಕ್ಷೇತ್ರದ ದೊಡ್ಡ ಉದ್ಯಮಗಳಲ್ಲಿ ಕಾರ್ಯ ನಿರ್ವಹಿಸುವವರಿಗೆ ಮಾತ್ರ ದೊರಕುತ್ತಿತ್ತು. 2004ಕ್ಕೆ ಮುಂಚೆ ಭಾರತದಲ್ಲಿನ ನಿವೃತ್ತಿ ವೇತನದ ಯೋಜನೆಯು ಮುಂದಿನ ಅಂಶಗಳನ್ನು ಒಳಗೊಂಡಿತ್ತು.

(ಅ) ತೆರಿಗೆ ಸೌಲಭ್ಯದಿಂದ ರೂಪಿತವಾದ ಸಾಮಾಜಿಕ ಪಿಂಚಣಿ ಯೋಚನೆಯು ಬಡತನದ ರೇಖೆಗಿಂತಲೂ ಕೆಳಗಿರುವ ಅರವತ್ತು ವರ್ಷ ದಾಟಿರುವ ನಾಗರಿಕರಿಗೆ, ಅಂಗವಿಕಲರಿಗೆ, ವಿಧವೆಯರಿಗೆ ರಾಷ್ಟ್ರೀಯ ಸಾಮಾಜಿಕ ಸಂರಕ್ಷಣೆಯ ಕಾರ್ಯಕ್ರಮದ ಅಡಿ ಬರುವವರಿಗೆ ದೊರಕುತ್ತಿತ್ತು.

(ಆ) ಕೇಂದ್ರ ಸೇವೆಯ ಪಿಂಚಣಿ ಯೋಜನೆ 1972ರ ಲಾಭವು 2004ಕ್ಕೆ ಮೊದಲು ಕೇಂದ್ರ ಸರ್ಕಾರದ ಸೇವೆಗೆ ಸೇರಿದ ಉದ್ಯೋಗಿಗಳಿಗೆ ಅನ್ವಯವಾಗುತ್ತದೆ. ಇಂತಹದೇ ಪಿಂಚಣಿ ಯೋಜನೆಯನ್ನು ಅನೇಕ ಸಾರ್ವಜನಿಕ ಸಂಸ್ಥೆಗಳು/ ಬ್ಯಾಂಕ್‌ಗಳು/ ಇನ್ಶೂರೆನ್ಸ್ ಕಂಪನಿಗಳು ಹೊಂದಿವೆ.

* ಪೂರ್ಣಾವಧಿ ಸದಸ್ಯರು (ಅರ್ಥಶಾಸ್ತ್ರ), ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ. E-mail : badris.bhandari@pfrda.org.in

(ಇ) ಇ.ಪಿ.ಎಫ್ ಅಂಡ್ ಮಿಸಲೇನಿಯಸ್ ಆಕ್ಟ್ (1952) ಇದರ ಅನ್ವಯ ನೌಕರರ ಭವಿಷ್ಯ ನಿಧಿ (ಇಪಿಎಫ್) ಮತ್ತು ಎಂಪ್ಲಾಯರ್ಸ್ ಪೆನ್ಷನ್ ಸ್ಕೀಂ (ಇಪಿಎಸ್) ಯೋಜನೆಗಳನ್ನು ಎಂಪ್ಲಾಯರ್ಸ್ ಪ್ರಾವಿಡೆಂಟ್ ಫಂಡ್ ಅರ್ಗನೈಜೇಷನ್ (ಇಪಿಎಫ್ಓ) ನಿರ್ವಹಿಸುತ್ತಲಿದ್ದು ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರದ 20ಕ್ಕೂ ಅಥವಾ ಅದಕ್ಕಿನ ಹೆಚ್ಚಿನ ಉದ್ಯೋಗಿಗಳು ಈ ಯೋಜನೆಯಡಿ ಬರುತ್ತಾರೆ.

(ಈ) ಇದಲ್ಲದೆ ಕೋಲ್ ಮೈನ್ಸ್ ಪಿ.ಎಫ್, ಸೀಮನ್ಸ್ ಪಿ.ಎಫ್, ಅಸ್ಸಾಂ ಟೀ ಪ್ಲಾಂಟರ್ಸ್ ಪಿ.ಎಫ್ ಮೊದಲಾದ ಕೆಲವು ನಿಗದಿತ ಪಿಂಚಣಿ ಯೋಜನೆಗಳೂ ಕೂಡ ಇವೆ.

(ಉ) ಜೀವ ವಿಮಾ ನಿಗಮದಂತಹ ಸಂಸ್ಥೆಗಳು, ಸಹಕಾರಿ ಸಂಘಗಳು, ಸ್ವತ: ಭಾರತ ಸರ್ಕಾರ ಪಬ್ಲಿಕ್ ಪ್ರಾವಿಡೆಂಟ್ ಫಂಡ್‌ನ ಸೌಲಭ್ಯವನ್ನು ಬ್ಯಾಂಕ್ ಅಥವಾ ಪೋಸ್ಟ್ ಆಫೀಸ್‌ಗಳ ಮೂಲಕ ನೀಡಿರುವುದು ಎಲ್ಲವೂ ವ್ಯಕ್ತಿಗಳು ತೆರಿಗೆ ವಿನಾಯತಿ ಪಡೆಯುವ ಉದ್ದೇಶದಿಂದಲಾದರೂ ಈ ಯೋಜನೆಯ ಸೌಲಭ್ಯವನ್ನು ಪಡೆಯುವ ಅವಕಾಶವನ್ನು ಕಲ್ಪಿಸುತ್ತದೆ.

ಆದರೆ ಭಾರತದಲ್ಲಿ ಶೇ 84ರಷ್ಟಿರುವ ಅಸಂಘಟಿತ ವಲಯಕ್ಕೆ ಪಿಂಚಣಿ ಯೋಜನೆಯ ಸೌಲಭ್ಯ ದೊರಕುತ್ತಿಲ್ಲವೆಂಬ ಆತಂಕವನ್ನು ಪರಿಣಿತರೆಲ್ಲರೂ ವ್ಯಕ್ತ ಪಡಿಸುತ್ತಲೇ ಬಂದಿದ್ದಾರೆ. ಓಲ್ಡ್ ಏಜ್ ಸೋಷಿಯಲ್ ಅಂಡ್ ಇನ್‌ಕಂ ಸೆಕ್ಯೂರಿಟಿ (ಓಎಎಸ್‌ಐಎಸ್), ಭಟ್ಟಾಚಾರ್ಯ, ರಂಗಾಚಾರಿ ಮೊದಲಾದ ಸಮಿತಿಯ ವರದಿಗಳು ತೆರಿಗೆಯ ಅಧಿಕಾರ ಮತ್ತು ಜನಸಂಖ್ಯೆಯ ಬೆಳವಣಿಗೆಗೆ ತಕ್ಕಂತೆ ಪಿಂಚಣಿ ಯೋಜನೆಯಲ್ಲಿ ಬದಲಾವಣೆಗಳಾಗ ಬೇಕಾಗಿದ್ದನ್ನು ಸೂಚಿಸಿವೆ. ಭಾರತವು



ಯೋಜಿತ ಹಣವಿಲ್ಲದೆ ಸಾಗುತ್ತಿದ್ದ ಪಿಂಚಣಿ ಪದ್ಧತಿಯನ್ನು ನಿಗದಿತ ಹಣದಿಂದ ಕೂಡಿದ ಪಿಂಚಣಿ ಯೋಜನೆಯಾಗಿ ಬದಲಾಯಿಸಲು ನಿರ್ಧರಿಸಿ ಅದನ್ನು ನ್ಯೂ ಪೆನ್ಷನ್ ಸ್ಕೀಂ (ಎನ್‌ಪಿಎಸ್) ಎಂದು ಕರೆದಿದೆ. ಈ ಹೊಸ ಪಿಂಚಣಿ ಯೋಜನೆಯನ್ನು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ – ಪಿಎಫ್‌ಆರ್‌ಡಿಎ ನಿರ್ವಹಿಸುತ್ತದೆ.

ಎನ್.ಪಿ.ಎಸ್ ಯೋಜನೆಯು ಆರಂಭಿಕ ಹಂತದಲ್ಲಿ ಸೈನ್ಯವನ್ನು ಹೊರತು ಪಡಿಸಿದ 1ನೇ ಜನವರಿ 2004 ಅಥವಾ ಅದರ ನಂತರ ಉದ್ಯೋಗಕ್ಕೆ ಸೇರಿದವರಿಗೆ ಅನ್ವಯವಾಗುವಂತೆ ಆರಂಭವಾಯಿತು. ನಂತರ ರಾಜ್ಯ ಸರ್ಕಾರಗಳು ಅಧಿಸೂಚನೆ ಮೂಲಕ ಈ ಯೋಜನೆಯನ್ನು ಅಳವಡಿಸಿಕೊಂಡವು. ಕೊನೆಗೆ 1ನೇ ಮೇ 2009ರ ನಂತರ ಸರ್ಕಾರಿ ಅಥವಾ ಖಾಸಗಿ ಕ್ಷೇತ್ರ ಸೇರಿದಂತೆ ಅಸಂಘಟಿತ ವಲಯದ ಕಾರ್ಮಿಕರೂ ಸೇರಿದಂತೆ ಎಲ್ಲಾ ಭಾರತದ ನಾಗರಿಕರಿಗೆ ಲಭಿಸಿತು.ಈಗ ಎನ್.ಪಿ.ಎಸ್ ಯೋಜನೆಯು 18 ರಿಂದ 60 ವರ್ಷದೊಳಗಿನ ಎಲ್ಲಾ ನಾಗರಿಕರು ತಮ್ಮ ಸೇವಾವಧಿಯಲ್ಲಿ ಮಾಡುವ ನಿಗದಿತ ಉಳಿತಾಯದಿಂದ ಪಿಂಚಣಿ ಸೌಲಭ್ಯವನ್ನು ಪಡೆಯುವಂತೆ ರೂಪುಗೊಂಡಿದೆ.

ಎನ್.ಪಿ.ಎಸ್. ಸರ್ಕಾರಿ ನೌಕರರಿಗೆ ಕಡ್ಡಾಯವಾಗಿದೆ. ಅವರ ಸಂಬಳದ ಶೇ 10ರಷ್ಟು (ಮೂಲ ವೇತನ ಮತ್ತು ವಿಶೇಷ ಭತ್ಯೆ) ಇಷ್ಟೇ ಮೊತ್ತವನ್ನು ಅವರ ಉದ್ಯೋಗದಾತರು ಪರ್ಮನೆಂಟ್ ರಿಟೈರ್‌ಮೆಂಟ್ ಅಕೌಂಟ್ ನಂಬರ್ (ಪಿಆರ್‌ಎಎನ್)ಗೆ ದಾಖಲಿಸಲಾಗುತ್ತದೆ.

ಸ್ವ ಇಚ್ಛೆಯಿಂದ ಎನ್.ಪಿ.ಎಸ್ ಯೋಜನೆಗೆ ಸೇರಿದವರು ಕನಿಷ್ಠ ರೂ. 1,000ವನ್ನು ಈ ಖಾತೆಯಲ್ಲಿ ಉಳಿತಾಯ ಮಾಡಬಹುದು.ತಮ್ಮ ಆದಾಯದ ಮೊತ್ತಕ್ಕೆ ತಕ್ಕಂತೆ ಇದನ್ನು ಪ್ರತಿವರ್ಷ ಹೆಚ್ಚಿಸುತ್ತಾ ಹೋಗ ಬಹುದು. ಪಿಎಫ್‌ಆರ್‌ಡಿಎ ನಿಗದಿ ಪಡಿಸಿದ ನಿಯಮಗಳಂತೆ ಸರ್ಕಾರದ ಖಾತ್ರಿ, ಕಾರ್ಪೊರೇಟ್ ಡಿಬೆಂಚರ್ಸ್, ಬಾಂಡ್‌ಗಳು, ಈಕ್ವಿಟಿಗಳು ರೂಪುಗೊಂಡಿರುತ್ತವೆ. ವೃತ್ತಿಪರ ಸಂಸ್ಥೆಗಳು ಪಿಎಫ್‌ಆರ್‌ಡಿಎದಲ್ಲಿ ನೊಂದಾಯಿಸಿ ಕೊಂಡು ಪಿಂಚಣಿಯನ್ನು ನಿರ್ವಹಿಸುತ್ತವೆ. ಯೋಜನೆಯ ಲಾಭವನ್ನು ಪಡೆಯಲು ಬಯಸುವವನು ತನ್ನ ಅಗತ್ಯ



ಮತ್ತು ತೊಂದರೆಗಳನ್ನು ಗಮನದಲ್ಲಿರಿಸಿ ಆಯ್ಕೆಯನ್ನು ಮಾಡಿಕೊಳ್ಳಬಹುದು.

ಎನ್.ಪಿ.ಎಸ್ ವಿಶಾಲ ವ್ಯಾಪ್ತಿಯ ಯೋಜನೆಯಾಗಿದ್ದು ಗ್ರಾಹಕರ ಆಯ್ಕೆ ಮತ್ತು ನೊಂದಣಿ, ವಾರ್ಷಿಕ ಪಿಂಚಣಿ ಕಂತುಗಳ ಸಂಗ್ರಹ, ವ್ಯಕ್ತಿಗತ ವಿವರಗಳ ದಾಖಲಾತಿ, ಗ್ರಾಹಕರ ಕಂತುಗಳ ಸಂಗ್ರಹ, ಹಣಕಾಸು ಮಾರುಕಟ್ಟೆಯಲ್ಲಿ ಹಣವನ್ನು ತೊಡಗಿಸುವುದು, ಗ್ರಾಹಕರ ಖಾತೆಗಳ ನಿರ್ವಹಣೆ ಮೊದಲಾದವನ್ನು ನಿರ್ವಹಿಸುತ್ತದೆ. ಇದರ ಆಯ್ಕೆಯಲ್ಲಿ ಎನ್.ಪಿ.ಎಸ್‌ನ ಕಾರ್ಯ ನಿರ್ವಹಣೆ ಮಾಡುವ ಸರ್ಕಾರಿ ಕಚೇರಿಗಳ ಒಡನಾಟ, ಸರ್ಕಾರಿ ಉದ್ಯೋಗಿಗಳ ಕಾರ್ಯ ನಿರ್ವಹಣೆ, ಖಾತೆಗಳನ್ನು ತೆರೆಯುವ ಅಧಿಕಾರವನ್ನು ಪಾಯಿಂಟ್ಸ್ ಆಫ್ ಪ್ರೆಸೆನ್ಸ್ (ಪಿಓಪಿ), ಎಂದು ಕರೆಯಲ್ಪಡುವ ಬ್ಯಾಂಕ್ ಮತ್ತು ಬ್ಯಾಂಕೇತರ ಸಂಸ್ಥೆಗಳು ಎಲ್ಲವೂ ಮುಖ್ಯ ಪಾತ್ರ ವಹಿಸುತ್ತವೆ. ಸೆಂಟ್ರಲ್ ರೆಕಾರ್ಡ್‌ಕೀಪಿಂಗ್ ಏಜನ್ಸಿ (ಸಿಆರ್‌ಎ) ದಾಖಲೆಗಳನ್ನು ಸಂಗ್ರಹಿಸುವ ನಿರ್ವಹಿಸುವ ಬಹಳ ಮುಖ್ಯವಾದ ಕೆಲಸವನ್ನು ಮಾಡುತ್ತದೆ. ಪ್ರತಿಯೊಬ್ಬ ಖಾತೆದಾರನಿಗೂ ಪರ್ಮನೆಂಟ್ ರಿಟೈರ್‌ಮೆಂಟ್ ಅಕೌಂಟ್ ನಂಬರ್ (ಪಿಆರ್‌ಎಎನ್) ನೀಡಲಾಗುತ್ತದೆ. ಎಲ್ಲರ ವಿವರಗಳನ್ನು ದಾಖಲಿಸಿ ಎನ್.ಪಿ.ಎಸ್ ಟ್ರಸ್ಟ್ ಮತ್ತು ಇತರ ಸರ್ಕಾರದ ನಿರ್ವಹಣಾ ಸಂಸ್ಥೆಗಳಾದ PAOs, DDOs, POPs, Aggregators, Retirement Advisors, Trustee Bank, Pension Funds, Custodian, Annuity Service Providers ಜೊತೆಗೆ ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತದೆ.

ಶಾಶ್ವತ ಖಾತೆಯ ಸಂಖ್ಯೆಯು ದೇಶದಲ್ಲಿ ಎಲ್ಲೇ ಇದ್ದರೂ ಗ್ರಾಹಕರಿಗೆ ಲಭ್ಯವಿದ್ದು ಮಾಹಿತಿಪೂರ್ಣವಾಗಿರುತ್ತದೆ.

ಎನ್.ಪಿ.ಎಸ್‌ನ ನಿರ್ವಹಣೆ ಕೂಡ ತಾಂತ್ರಿಕ ಸೌಲಭ್ಯದಿಂದ ಅತ್ಯಂತ ವೇಗವಾಗಿ ಅನುಕೂಲಕರವಾಗಿಯೂ ನಿರ್ವಹಿಸ ಬಲ್ಲದಾಗಿದೆ. ಪಿ.ಎಫ್ ಸೌಲಭ್ಯವು ಪಿಎಫ್‌ಆರ್‌ಡಿಎದಲ್ಲಿ ನೊಂದಣಿಯಾಗುತ್ತದೆ. ಪಿಎಫ್‌ಆರ್‌ಡಿಎವು ಇಂತಹ ನಿರ್ವಹಣೆಗೆ ಅಧಿಕಾರಯುತ ಸಂಸ್ಥೆಯಾಗಿರುವುದರ ಜೊತೆಗೆ ತನ್ನದೇ ಆದ ಸ್ಪಷ್ಟ ಕಾರ್ಯನಿರ್ವಹಣಾ ಸೂತ್ರವನ್ನೂ ಹೊಂದಿದೆ.

ಸರ್ಕಾರಿ ಕ್ಷೇತ್ರದಲ್ಲಿರುವವರು ಎನ್.ಪಿ.ಎಸ್ ಸಂಖ್ಯೆಯನ್ನು ಆದಾಯ ನಿರ್ವಹಣಾಧಿಕಾರಿಗಳಿಂದ ಮತ್ತು ಅಕೌಂಟ್ಸ್ ಅಫೀಸರ್‌ಗಳಿಂದ ಪಡೆಯ ಬಹುದು. ಕಾರ್ಪೊರೇಟ್ ಅಥವಾ ಅಸಂಘಟಿತ ವಲಯದಲ್ಲಿರುವವರು ದೇಶದಾದ್ಯಂತ ಅರವತ್ತು ಸಾವಿರಕ್ಕೂ ಹೆಚ್ಚಿರುವ ಸಾರ್ವಜನಿಕ ಅಥವಾ ಖಾಸಗಿ ಬ್ಯಾಂಕ್‌ಗಳು, ಪೋಸ್ಟ್ ಆಫೀಸ್‌ಗಳು, ಇತರೆ ಅಧಿಕೃತ ಹಣಕಾಸು ಸಂಸ್ಥೆಗಳ ಮೂಲಕ ನಿರ್ವಹಿಸಬಹುದು. ನಿಗದಿತ ನೊಂದಣಿ ಅರ್ಜಿಯೊಂದಿಗೆ ಗುರುತು ದೃಢೀಕರಣ ಪತ್ರವನ್ನು ನೀಡುವ ಮೂಲಕ ಪಡೆಯಬಹುದು. ಅನೇಕ ಪಿಓಪಿ ಅಥವಾ ನೊಂದಣಿ ಸಂಸ್ಥೆಗಳು ವಿದೇಶದಲ್ಲಿ ಕೂಡ ಇರುವುದು ಅನುಕೂಲಕರವಾಗಿದೆ. ಪಿಓಪಿಗಳ ಇಂತಹ ವಿವರ www.pfrda.org.in ಮತ್ತು www.npscra.nsdl.co.in ನಲ್ಲಿ ದೊರಕುತ್ತದೆ. ಎನ್.ಪಿ.ಎಸ್‌ನ ವೆಬ್‌ಸೈಟ್‌ನ www.npstrust.org.in. ಮೂಲಕವೂ ವಿವರಗಳನ್ನು ಪಡೆಯಬಹುದು.

ಗುರುತು ದೃಢೀಕರಣಕ್ಕೆ ಇಲ್ಲಿ ಆಧಾರ್ ಅಥವಾ ಪ್ಯಾನ್ ಸಂಖ್ಯೆಯನ್ನು ಬಳಸಬಹುದಾಗಿದೆ. ಎನ್.ಪಿ.ಎಸ್ ಸೇರಿದ ನಂತರ ಪಿಂಚಣಿದಾರನಿಗೆ ಶಾಶ್ವತ ಸಂಖ್ಯೆಯೊಂದನ್ನು ನೀಡಲಾಗುತ್ತದೆ. ಇದನ್ನು ಎಲ್ಲೆಡೆಯೂ ಖಾತರಿಪಡಿಸಿ ಕೊಳ್ಳಬಹುದಾಗಿದೆ. ಸಕಲ ತಾಂತ್ರಿಕ





ಸೌಲಭ್ಯಗಳಿಂದ ಕೂಡಿದ ಇದನ್ನು ಗ್ರಾಹಕರು ಎನ್.ಪಿ.ಎಸ್‌ನ ಮೊಬೈಲ್ ಅಪ್ ಮೂಲಕ ಕೂಡ ಗಮನಿಸಬಹುದಾಗಿದೆ.

ಕೇಂದ್ರ ಸರ್ಕಾರದ ಉದ್ಯೋಗಿಗಳಿಗೆ ಎನ್.ಪಿ.ಎಸ್ ಸೌಲಭ್ಯ ಒದಗಿಸಲು ಭಾರತ ಸರ್ಕಾರವು ಡಿಸೆಂಬರ್ 2003ರಂದು ಅಧಿಸೂಚನೆಯನ್ನು ಹೊರಡಿಸಿತು. ಜನವರಿ, 2004ರಂದು ಕಂಟ್ರೋಲರ್ ಅಂಡ್ ಅಡಿಟರ್ ಜನರಲ್ ಕಚೇರಿ ಸುತ್ತೋಲೆಯನ್ನು ಹೊರಡಿಸಿದರು. ಜನವರಿ 2004ರಿಂದ ಮಾರ್ಚ್ 2009ರವರೆಗಿನ ಉದ್ಯೋಗಿಗಳ ಎನ್.ಪಿ.ಎಸ್ ಕಂತುಗಳನ್ನು ಕೇಂದ್ರ ಪೆನ್ಷನ್ ಅಕೌಂಟಿಂಗ್ ಆಫೀಸ್‌ನ ಸಾರ್ವಜನಿಕ ಖಾತೆಯಲ್ಲಿ ಇಡಲಾಗಿತ್ತು.

ಮಾರ್ಚ್ 2008ರ ನಂತರ ಕೇಂದ್ರ ಸರ್ಕಾರ ರೂಪಿಸಿದ ಉಳಿತಾಯ ಸೂತ್ರದಂತೆ ಈ ಹಣವನ್ನು ಪ್ರೇಡಾ ನಿಗದಿಪಡಿಸಿದ ಬ್ಯಾಂಕಿನ ಖಾತೆಯಲ್ಲಿ ಇರಿಸಲಾಯಿತು. ಬ್ಯಾಂಕ್ ಅದನ್ನು ನಿಯಮ ಬದ್ಧಗೊಳಿಸುವವರರೆಗೂ ಸರ್ಕಾರವೇ ವಾರ್ಷಿಕ ಶೇ 8ರ ಬಡ್ಡಿಯನ್ನು ನೀಡಿತು. ಆಫೀಸ್ ಆಫ್ ಕಂಟ್ರೋಲರ್ ಅಫ್ ಅಕೌಂಟ್ಸ್, ಡಿಪಾರ್ಟ್‌ಮೆಂಟ್ ಅಫ್ ಎಕ್ಸಪೆಂಡಿಚರ್ ಈ ಕುರಿತು ವಿವರವಾದ ಕಾರ್ಯಸೂತ್ರವನ್ನು ರೂಪಿಸಿತು.

ಸೆಪ್ಟಂಬರ್ 2008ರ ನಂತರ ನಿಯಮ ಬದ್ಧ ಕಾರ್ಯವೂ ಮುಂದುವರೆಯಿತು. ಸೆಪ್ಟೆಂಬರ್ 2009ರ ನಂತರ ಎಲ್ಲಾ ಭಾರತೀಯ ಸೇವೆಯ ಅಧಿಕಾರಿಗಳು, ಕೇಂದ್ರ ಸರ್ಕಾರದ ಅಧಿಸೂಚನೆಗೆ ಒಳ ಪಡುವವರೂ ಇದರ ಕಾರ್ಯ ವ್ಯಾಪ್ತಿಗೆ ಬಂದರು.

ಎನ್.ಪಿ.ಎಸ್ ಖಾತೆಯ ಎರಡು ಮಾದರಿಗಳನ್ನು ಒದಗಿಸುತ್ತದೆ. ಇದನ್ನು ಹಂತ ಒಂದು ಮತ್ತು ಹಂತ ಎರಡು ಎಂದು ಕರೆಯಲಾಗುತ್ತದೆ. ಮೊದಲನೆಯದು ಪಿಂಚಣಿ ಖಾತೆಯನ್ನು ಆರಂಭಿಸುವುದು ಇದು ಎರಡನೇ ಹಂತಕ್ಕೆ ಆಧಾರ. ಎರಡನೇ ಹಂತವು ಐಚ್ಛಿಕ ಉಳಿತಾಯ ಖಾತೆಯು. ಮೊದಲನೆಯ ಹಂತವು ಶೇ 25ರಷ್ಟು ಭಾಗಾಂಶದಷ್ಟು ಹಣವನ್ನು ಹಿಂಪಡೆಯುವ ಸೌಲಭ್ಯವನ್ನು ಹೊಂದಿದೆ. ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸ, ಮಕ್ಕಳ ಮದುವೆ, ಮನೆಯನ್ನು ಕೊಳ್ಳುವುದು ಇಲ್ಲವೆ ಕಟ್ಟಿಸುವುದು ಸ್ವಂತಕ್ಕೆ ಅಥವಾ ಮಡದಿ, ಮಕ್ಕಳು, ಅವಲಂಬಿತ ಪೋಷಕರ ವೈದ್ಯಕೀಯ ವೆಚ್ಚಕ್ಕಾಗಿ ಹಣವನ್ನು ಹಿಂದಕ್ಕೆ ಪಡೆಯುವ ಅನುಕೂಲತೆಗಳು ಇವೆ. ಎನ್.ಪಿ.ಎಸ್ ಸೇರಿದ ದಿನದ ನಂತರ ಅತಿ ಹೆಚ್ಚು ಎಂದರೆ ಮೂರು ಸಲ ಹೀಗೆ ಹಣವನ್ನು ಹಿಂದಕ್ಕೆ ಪಡೆಯುವ ಅವಕಾಶ ದೊರಕುತ್ತದೆ.

ಮೊದಲ ಹಂತದಲ್ಲಿ ಹೀಗೆ ಹಿಂದೆ ಪಡೆದ ಹಣಕ್ಕೆ ಸಂಪೂರ್ಣ ತೆರಿಗೆಯ ವಿನಾಯತಿ ಇರುತ್ತದೆ.ಎರಡನೇ ಹಂತವು ಐಚ್ಛಿಕ ಉಳಿತಾಯವನ್ನು ಹೊಂದಿರುವುದರಿಂದ ಇಲ್ಲಿ ಹಣ ತೊಡಗಿಸುವಿಕೆ ಮತ್ತು ಹಿಂಪಡೆಯುವಿಕೆಗೆ ಯಾವುದೇ ಮಿತಿ ಇರುವುದಿಲ್ಲ. ಈ ಹಂತದಲ್ಲಿ ಕೂಡ ಹಣ ತೊಡಗಿಸುವಿಕೆ ಮತ್ತು ಹಿಂಪಡೆಯುವಿಕೆ ತೆರಿಗೆಯಿಂದ ಹೊರತಾಗಿರುತ್ತದೆ.

ನಿವೃತ್ತಿಯ ವಯಸ್ಸಾದ ಅರವತ್ತನ್ನು ತಲುಪಿದಾಗ ಖಾತೆದಾರನು ಒಟ್ಟು ಮೊತ್ತದ ಶೇ. 40ರಷ್ಟನ್ನು ಮಾಸಿಕ ಪಿಂಚಣಿಗಾಗಿ ಕಡ್ಡಾಯವಾಗಿ ಉಳಿಸಬೇಕು. ಇನ್ನುಳಿದ ಶೇ. 60 ರಷ್ಟನ್ನು ಒಟ್ಟಾಗಿ ಹಿಂಪಡೆಯುವ ಅನುಕೂಲವಿದೆ. ಇದರ ಶೇ. 40ರಷ್ಟು ತೆರಿಗೆ ವಿನಾಯತಿಯನ್ನು ಪಡೆಯುತ್ತದೆ. ಅರವತ್ತು ವರ್ಷಕ್ಕೆ ಮೊದಲೇ ಖಾತೆದಾರನು ಉದ್ಯೋಗದಿಂದ ನಿವೃತ್ತನಾದರೆ ಶೇ. 80ರಷ್ಟನ್ನು ಹಣದ ಉನ್ನತಿಗಾಗಿ ಖಾತೆಯಲ್ಲಿಯೇ ಬಿಟ್ಟು ಇನ್ನುಳಿದ ಶೇ 20ರಷ್ಟನ್ನು ಮಾತ್ರ ಹಿಂಪಡೆಯ ಬಹುದಾಗಿದೆ.

ದುರದೃಷ್ಟವಶಾತ್ ಖಾತೆದಾರರು ಅರವತ್ತು ವರ್ಷ ತಲುಪುವ ಮೊದಲೇ ಮೃತರಾದರೆ ಅವರ ನಾಮಕರಣಗೊಂಡ ಹಕ್ಕದಾರರು ಪೂರ್ಣ ಹಣವನ್ನು ತೆರಿಗೆಯ ವಿನಾಯಿತಿಯೊಂದಿಗೆ ಹಿಂಪಡೆಯಬಹುದು. ಮಾರುಕಟ್ಟೆಯ ಏರಿಳಿತಗಳಿಗೆ ಅನುಗುಣವಾಗಿ ಹಣವನ್ನು ಎಪ್ಪತ್ತು ವರ್ಷದವರೆಗೂ

ಖಾತೆದಾರನು ಹಾಗೆಯೇ ಬಿಟ್ಟು ಲಾಭವನ್ನು ಪಡೆಯಬಹುದು. ನಿವೃತ್ತಿ ನಂತರ ಮೂರು ವರ್ಷಗಳ ಮೂರು ಅವಧಿಯವರೆಗೂ ಹಿಂಪಡೆಯುವಿಕೆಯನ್ನು ಮುಂದೆ ಹಾಕಲು ಅವಕಾಶವಿದೆ. ಈ ಅವಧಿಯಲ್ಲಿ ಖಾತೆಗೆ ಇನ್ನಷ್ಟು ಹಣ ಸೇರಿಸುವುದು ಐಚ್ಛಿಕವಾದ ಅವಕಾಶವಾಗಿರುತ್ತದೆ.

### ಅನಿವಾಸಿ ಭಾರತೀಯರಿಗೆ ಎನ್.ಪಿ.ಎಸ್. ಸೌಲಭ್ಯ

ಅನಿವಾಸಿ ಭಾರತೀಯರು ಸ್ವದೇಶಕ್ಕೆ ಹಿಂದಿರುಗುವ ಉದ್ದೇಶವಿದ್ದವರೂ ಇಲ್ಲದವರೂ ಕೂಡ ತಮ್ಮ NRE/FCNR/ NRO ಖಾತೆಗಳ ಮೂಲಕ ಎನ್.ಪಿ.ಎಸ್ ಖಾತೆಗಳನ್ನು ಆರಂಭಿಸಬಹುದು. ಸ್ವದೇಶಕ್ಕೆ ಹಿಂದಿರುಗುವ ಉದ್ದೇಶವಿಲ್ಲದ ಅನಿವಾಸಿ ಭಾರತೀಯರ ವಿಷಯದಲ್ಲಿ ಖಾತೆಯ ವಾಯದೆ ತುಂಬಿದ ನಂತರ ಅಥವಾ ಭಾಗಶ: ಹಣವನ್ನು ಹಿಂಪಡೆಯುವ ಸಂದರ್ಭದಲ್ಲಿ ಖಾತೆದಾರರ ಎನ್.ಆರ್.ಓ ಖಾತೆಗೆ ಹಣವನ್ನು ಭರ್ತಿ ಮಾಡಲಾಗುವುದು. ಎನ್.ಪಿ.ಎಸ್ ಖಾತೆಯನ್ನು ಖಾತೆದಾರರೇ ನಿರ್ವಹಿಸಬೇಕು ಇಲ್ಲಿ ಪವರ್ ಆಫ್



ಅಟರ್ನಿ ಬಳಸುವ ಅಧಿಕಾರವಿಲ್ಲ. ಪಿ.ಓ.ಪಿ ಮೂಲಕ ಆರಂಭವಾದ ಅಕೌಂಟ್ ಮೊದಲ ಹಂತದ್ದಾದರೆ ಕನಿಷ್ಠ ರೂ. 6,000/–ವನ್ನು ಎರಡನೇ ಹಂತದ್ದಾದರೆ ಕನಿಷ್ಠ ರೂ. 2,000/ ವನ್ನು ಇರಿಸಬೇಕು. ಮುಂದಿನ ಕಂತುಗಳನ್ನು ವಾರ್ಷಿಕ ಅಥವಾ ಅದಕ್ಕಿಂತಲೂ ಕಿರಿದಾದ ಸಮಾನ ಕಂತುಗಳಲ್ಲಿ ಖಾತೆದಾರನು ತನ್ನ ಅನುಕೂಲಕ್ಕೆ ತಕ್ಕಂತೆ ತುಂಬಬಹುದು. ಖಾತೆದಾರನ ನೊಂದಣಿಗೆ ಪಿ.ಓ.ಪಿ ಸರ್ವಿಸ್ ಚಾರ್ಜ್ ಯು.ಎಸ್$8 ಅಥವಾ ಅದಕ್ಕೆ ಸಮಾನವಾದ ಸ್ಥಳೀಯ ಕರೆನ್ಸಿಯ ಮೂಲಕ ಸಮಾನವಾದ ಮೊತ್ತವಾಗಿರುತ್ತದೆ. ಮುಂದಿನ ಕಂತುಗಳಿಗೆ ತುಂಬಿದ ಹಣದ

**ಪಟ್ಟಿ 1 : ಶೇವಣಿದಾರರು ಎ.ಯು.ಎಂ ಅಡಿಯಲ್ಲಿ ಎನ್.ಪಿ.ಎಸ್ ಕೊಡುಗೆ**

| ವಲಯ | ಒಟ್ಟು ಶೇವಣಿದಾರರು | | ಒಟ್ಟು ಸಂಗ್ರಹ | | ನಿರ್ವಹಣೆಯಲ್ಲಿನ ಹೂಡಿಕೆ | |
|---|---|---|---|---|---|---|
| | ಒಟ್ಟು | (%) | ರೂ (ಕೋಟಿಗಳಲ್ಲಿ) | (%) | ರೂ (ಕೋಟಿಗಳಲ್ಲಿ) | (%) |
| ಕೇಂದ್ರ ಸರ್ಕಾರ | 1,819,457 | 17.0 | 51,332 | 36.1 | 70,965 | 38.4 |
| ರಾಜ್ಯ ಸರ್ಕಾರ | 3,412,486 | 31.8 | 72,331 | 50.8 | 91,595 | 49.5 |
| ಮೊತ್ತ | 5,231,943 | 48.8 | 123,663 | 86.9 | 162,561 | 87.9 |
| ಕಾರ್ಪೊರೇಟ್ | 608,434 | 5.7 | 12,950 | 9.1 | 16,091 | 8.7 |
| ಅಸಂಘಟಿತ | 460,468 | 4.3 | 3,387 | 2.4 | 3,520 | 1.9 |
| ಮೊತ್ತ | 1,068,902 | 10.0 | 16,337 | 11.5 | 19,610 | 10.6 |
| ಎನ್.ಪಿ.ಎಸ್.ಲೈಟ್ | 4,424,806 | 41.3 | 2,263 | 1.6 | 2,777 | 1.5 |
| ಮೊತ್ತ | 10,725,651 | 100.0 | 142,263 | 100.0 | 184,948 | 100.0 |
| ಎ.ಪಿ.ಐ | 5,372,618 | | 2,077 | | 2,203 | |
| **ಒಟ್ಟು ಮೊತ್ತ** | **16,098,269** | | **144,340** | | **187,151** | |

ಶೇ. 1ರಷ್ಟು ಅಥವಾ ಯು.ಎಸ್. $ 8 ಅಥವಾ ಅದಕ್ಕೆ ಸಮನಾದ ಸ್ಥಳೀಯ ಕರೆನ್ಸಿ ಮೂಲಕ ಶುಲ್ಕವನ್ನು ತುಂಬ ಬೇಕಾಗುತ್ತದೆ. ಭಾರತದಲ್ಲಿ ಖಾತೆಯು ಆರಂಭವಾದರೆ ಮೊದಲ ಹಂತದ ಖಾತೆಗೆ ರೂ 500/– ಮತ್ತು ರೂ 1,000/–ವನ್ನು ಕ್ರಮವಾಗಿ ತುಂಬ ಬೇಕಾಗುತ್ತದೆ. ಭಾರತದಲ್ಲೇ ಆರಂಭವಾದ ನಿರ್ವಹಿಸಲ್ಪಟ್ಟ ಖಾತೆಯಾದರೆ ಭಾರತದಲ್ಲೇ ಇರುವ ನಾಗರಿಕರಿಗೆ ಇರುವ ನಿಯಮಗಳೇ ಅಂದರೆ ಕನಿಷ್ಠ ರೂ. 20/– ರಿಂದ ಗರಿಷ್ಠ ರೂ. 25,000/– ಕ್ಕೆ ರೂ. 125/– ಅಥವಾ ದಾಖಲಿತ ಮೊತ್ತದ ಶೇ 0.25ರಷ್ಟು ಬಡ್ಡಿ ಬೀಳುತ್ತದೆ.ಪ್ರತಿ ಹಣಕಾಸೇತರ ನಿರ್ವಹಣೆಗೆ ಪ್ರತಿ ನಿರ್ವಹಣೆಗೂ ರೂ 20/– ಮೊತ್ತ ಬೀಳುತ್ತದೆ.

### ಎನ್.ಪಿ.ಎಸ್. ನಿಂದ ದೊರಕುವ ತೆರಿಗೆ ಲಾಭಗಳು

ತಮ್ಮ ವೇತನದ (ಮೂಲವೇತನ ಮತ್ತು ವಿಶೇಷ ಭತ್ಯೆ) ಕೊಡುಗೆ ಶೇ 10ರಷ್ಟನ್ನು ಎನ್.ಪಿ.ಎಸ್‌ಗೆ ನೀಡುವ ಉದ್ಯೋಗಿಗಳು ಆದಾಯ ತೆರಿಗೆಯ ಸೆಕ್ಷನ್ 80 ಸಿಸಿಡಿ (1) ರಂತೆ ತೆರಿಗೆ ವಿನಾಯತಿಯನ್ನು ಪಡೆಯುತ್ತಾರೆ. ಸೆಕ್ಷನ್ 80 ಸಿಸಿಇಯಂತೆ ಇದು ರೂ 1.50.000/– ರ ಮಿತಿಯಲ್ಲಿರ ಬೇಕಾಗುತ್ತದೆ. ಉದ್ಯೋಗಿಯ ಕಾಣಿಕೆಗೆ ಕೂಡ ಈ ತೆರಿಗೆ ವಿನಾಯಿತಿ ಲಭಿಸುತ್ತದೆ. ಸೆಕ್ಷನ್ 80 ಸಿಸಿಡಿ (2) ರಂತೆ ಯಾವುದೇ ಹಣಕಾಸಿನ ಮಿತಿ ಇಲ್ಲದೆ ಶೇ 10ರ ಕೊಡುಗೆಗೆ ಈ ವಿನಾಯತಿ ದೊರಕುತ್ತದೆ. ಸೆಕ್ಷನ್ 80CCD (1B) ಯಂತೆ ಮುಂದಿನ ರೂ 50,000ದ ಕೊಡುಗೆಗೂ ಕೂಡ ಒಟ್ಟು ರೂ 2,00,000ದ ಮಿತಿಯವರೆಗೂ



ಈ ವಿನಾಯತಿ ಮುಂದುವರೆಯುತ್ತದೆ. ಉದ್ಯೋಗಿಗಳಿಗೂ ಸ್ವ ಉದ್ಯೋಗಿಗಳಿಗೂ ವ್ಯತ್ಯಾಸ ತರುವ ಉದ್ದೇಶದಿಂದ ಹಣಕಾಸು ಕಾಯಿದೆ 2017ರಂತೆ ಸ್ವ ಉದ್ಯೋಗಿಗಳಿಗೆ ಶೇ 20ರಷ್ಟು ತೆರಿಗೆ ಬೀಳಲಿದೆ. ಎನ್.ಪಿ.ಎಸ್‌ಗೆ ಕೊಡುಗೆಯಾಗಿ ನೀಡಿದ ಉದ್ಯೋಗಿಗಳ ಶೇ 10ರಷ್ಟು ಮೂಲವೇತನ ಮತ್ತು ವಿಶೇಷ ಭತ್ಯೆಗೂ ಕೂಡ ಸೆಕ್ಷನ್ 36(1) (iv) (a) ರಂತೆ ವಿನಾಯತಿ ಹೆಚ್ಚಿನ ತೆರಿಗೆ ಇಲ್ಲದೆ ದೊರಕಲಿದೆ.

### ಎನ್.ಪಿ.ಎಸ್. ನಲ್ಲಿನ ಶುಲ್ಕ ಮತ್ತು ವೆಚ್ಚ

ರಾಷ್ಟ್ರಿಯ ಪಿಂಚಣಿ ಯೋಜನೆಯಲ್ಲಿ ತೊಡಗಿಸುವ ಹಣಕ್ಕೆ ಅಕೌಂಟ್

| ಪಟ್ಟಿ 2 : ವಿವಿಧ ಯೋಜನೆ ಮತ್ತು ಪಿ.ಎಫ್‌ನಂತೆ ಆದಾಯದ ವಿವರ | | | | | | | | |
|---|---|---|---|---|---|---|---|---|
| | | | | | | | | ಏಪ್ರಿಲ್ 29–2017 ರಲ್ಲಿದ್ದಂತೆ |
| ಪೆನ್‌ಷನ್ ಯೋಜನೆ | | ಎಸ್.ಬಿ.ಐ | ಯುಟಿಐ | ಎಲ್.ಐ.ಸಿ | ಕೊಟಕ್ | ರಿಲಯನ್ಸ್ | ಐಸಿಐಸಿಐ | ಎಚ್.ಡಿ.ಎಫ್.ಸಿ |
| ಸಿ.ಜಿ | | 10.43 | 10.06 | 10.13 | | | | |
| ಎಸ್.ಜಿ | | 10.04 | 10.11 | 10.23 | | | | |
| ಕಾರ್ಪೊರೇಟ್ ಸಿ.ಜಿ | | 10.61 | | 10.79 | | | | |
| ಟೇರ್ರಿ | ಇ | 9.69 | 11.81 | 13.89 | 10.94 | 11.01 | 11.84 | 16.80 |
| | ಅ | 11.14 | 9.79 | 11.61 | 11.06 | 9.67 | 11.11 | 11.65 |
| | ಉ | 10.06 | 8.75 | 12.44 | 8.96 | 8.63 | 9.03 | 11.04 |
| ಟೇರ್ರಿ 2 | ಇ | 9.33 | 9.64 | 8.91 | 10.08 | 9.59 | 9.31 | 12.31 |
| | ಅ | 10.80 | 9.99 | 9.94 | 9.80 | 9.44 | 11.04 | 9.90 |
| | ಉ | 10.29 | 9.86 | 12.63 | 8.82 | 8.95 | 9.20 | 11.65 |
| ಎನ್.ಪಿ.ಎಸ್.ಸ್ವಾವಲಂಬನ್ | | 11.10 | 10.96 | 10.92 | 11.18 | | | |

ಆಧಾರ: www.npst.org.in

ಕೇಂದ್ರಸರ್ಕಾರ 1 ಎಪ್ರಿಲ್, 2008:

ರಾಜ್ಯಸರ್ಕಾರ 25 ಜೂನ್ 2009

ಸ್ವಾವಲಂಬನ (SBI, LIC, UTI,): 4-Oct-10, (Kotak PF): 31-Jan-12

ಕಾರ್ಪೊರೇಟ್ (ಕೇಂದ್ರ ಸರ್ಕಾರದ ಮಾದರಿ) 5 ನವಂಬರ್ 12

ಸ್ಕೀಂ – [E, C, G] (Tier-I) - (SBI, UTI, ICICI, RELIANCE, KOTAK): 1-May-09, (LIC): 23-Jul-13, (HDFC PF): 1-Aug-13

ಸ್ಕಿಂ – [E, C, G] (Tier-II) - (SBI, UTI, ICICI, RELIANCE, KOTAK): 14-Dec-09, (LIC): 12-Aug-13, (HDFC PF): 1-Aug-13

ಆರಂಭಿಸುವ, ನಿರ್ವಹಿಸುವ, ಚಲಾವಣೆಯ, ಅಗತ್ಯ ಮೌಲ್ಯದ, ಪಿಂಚಣಿ ಯೋಜನೆಯ ನಿರ್ವಹಣೆಯ, ಎನ್.ಪಿ.ಎಸ್ ಖಾತೆಯ ನಿರ್ವಹಣೆ, ಉಳಿತಾಯದ ನಿರ್ವಹಣೆ ಎಲ್ಲವೂ ಸೇರಿ ಒಟ್ಟು ಮೌಲ್ಯದ ಶೇ 0.5ರಷ್ಟು ಬಡ್ಡಿ ಬೀಳುತ್ತದೆ. ಇದು ಬಹುತೇಕ ಎಲ್ಲಾ ಉಳಿತಾಯ ಯೋಜನೆ, ಮ್ಯೂಚ್ಯುವಲ್ ಫಂಡ್‌ಗಳಿಗೆ ಹೋಲಿಸಿದರೆ ಅತಿ ಕಡಿಮೆ ಮೊತ್ತವಾಗಿದೆ.

### ಎನ್.ಪಿ.ಎಸ್. ನ ಉಳಿತಾಯ ಖಾತೆಯ ನಿರ್ವಹಣೆ ಮತ್ತು ಮರುಪಾವತಿ

ಸರ್ಕಾರಿ ಕ್ಷೇತ್ರದ ಉಳಿತಾಯದಾರರಿಗೆ ಉಳಿತಾಯ ಯೋಜನೆಯ ಮಾದರಿ ಹೀಗಿದೆ. ಸರ್ಕಾರಿ ಉದ್ಯೋಗಿಗಳ ಎನ್.ಪಿ.ಎಸ್ ಖಾತೆ ನಿರ್ವಹಣೆಯನ್ನು ಮೂರು ಪೆನ್‌ಷನ್ ಫಂಡ್‌ಗಳಿಗೆ ನೀಡಲಾಗಿದೆ. ಅವೆಂದರೆ ಎಸ್.ಬಿ.ಐ ಪೆನ್‌ಷನ್ ಫಂಡ್ಸ್, ಯು.ಟಿ.ಐ ಪೆನಷನ್ ಫಂಡ್ಸ್ ಮತ್ತು ಎಲ್.ಐ.ಸಿ ಪೆನ್‌ಷನ್ ಫಂಡ್ಸ್. ಕಳೆದ ವರ್ಷದ ನಿರ್ವಹಣೆಯನ್ನು ಗಮನಿಸಿ ಈ ಯೋಜನೆಗಳಲ್ಲಿ ಸಮಾನವಾಗಿ ಹಂಚಿಕೆಯನ್ನು ಮಾಡಲಾಗುತ್ತದೆ. ಪಿಎಫ್‌ಆರ್‌ಡಿಎದ ನಿಯಮದಂತೆ ಈ ಯೋಜನೆಗಳಲ್ಲಿ ಠೇವಣಿಯ ವರ್ಗೀಕರಣ ಮತ್ತು ಹಂಚಿಕೆಯ ಸ್ವರೂಪವನ್ನು ನಿರ್ಧರಿಸಲಾಗುತ್ತದೆ.

ಅ. ಶೇ 50ರವರೆಗೆ ಸರ್ಕಾರಿ ಭದ್ರತಾ ಠೇವಣಿ ಮತ್ತು ಸಂಬಂಧಿಸಿದ ಸೇವೆಗಳು

ಆ. ಶೇ 40ರವರೆಗೆ ಸಾಲ ನಿರ್ವಹಣೆ ಮತ್ತು ಸಂಬಂಧಿಸಿದ ಸೇವೆಗಳು

ಇ. ಶೇ 15ರವರೆಗೆ ಈಕ್ವಿಟಿ ಮತ್ತಿತರ ಸೇವೆಗಳು

ಈ. ಶೇ. 5ರಷ್ಟು ಸಣ್ಣ ಪ್ರಮಾಣದ ಸಾಲ ಮತ್ತು ಸಂಬಂಧಿಸಿದ ಸೇವೆಗಳು



ಉ. ಶೇ. ರಷ್ಟು ಠೇವಣಿಯ ಆಧಾರದ ಟ್ರಸ್ಟ್‌ಗೆ ಸಂಬಂಧಿಸಿದ ಇತರ ಸೇವೆಗಳು

ಸರ್ಕಾರಿ ನೌಕರರಲ್ಲದಿದ್ದ ಠೇವಣಿದಾರರು ಅಧಿಕೃತ ಎಂದು ಪಟ್ಟಿ ಮಾಡಲ್ಪಟ್ಟ ಎಂಟು ಕಂಪನಿಗಳಲ್ಲಿ ಯಾವುದನ್ನಾದರೂ ಆರಿಸಿಕೊಳ್ಳಬಹುದು. ಅವೆಂದರೆ ಎಚ್.ಡಿ.ಎಫ್.ಸಿ ಪೆನ್‌ಷನ್ ಮ್ಯಾನೇಜ್‌ಮೆಂಟ್ ಕಂಪನಿ ಲಿಮಿಟೆಡ್, ಐ.ಸಿ.ಐ.ಸಿ.ಐ ಪ್ರುಡೆನ್ಷಿಯಲ್ ಪೆನ್‌ಷನ್ ಫಂಡ್ ಮ್ಯಾನೇಜ್‌ಮೆಂಟ್ ಕಂಪನಿ ಲಿಮಿಟೆಡ್, ಕೊಟಕ್ ಮಹೇಂದ್ರ ಪೆನ್‌ಷನ್ ಫಂಡ್ ಲಿಮಿಟೆಡ್, ಎಲ್.ಐ.ಸಿ ಪೆನ್‌ಷನ್ ಫಂಡ್ ಲಿಮಿಟೆಡ್, ರಿಲಯನ್ಸ್ ಕ್ಯಾಪಿಟಲ್ ಪೆನ್‌ಷನ್ ಫಂಡ್ ಲಿಮಿಟೆಡ್, ಎಸ್.ಬಿ.ಐ. ಪೆನ್‌ಷನ್ ಫಂಡ್ಸ್ ಪ್ರೈವೇಟ್ ಫಂಡ್ಸ್ ಲಿಮಿಟೆಡ್, ಯ.ಟಿ.ಐ ರಿಟೈರ್‌ಮೆಂಟ್ ಸಲ್ಯೂಷನ್ಸ್ ಲಿಮಿಟೆಡ್ ಮತ್ತು ಬಿರ್ಲಾ ಸನ್ ಲೈಫ್ ಪೆನ್‌ಷನ್ ಮ್ಯಾನೇಜ್‌ಮೆಂಟ್ ಲಿಮಿಟೆಡ್. ತಮ್ಮ ಅನುಕೂಲಕ್ಕೆ ತಕ್ಕಂತೆ ಇವುಗಳಲ್ಲಿ ಠೇವಣಿದಾರರು ಆಯ್ಕೆಯನ್ನು ಮಾಡಿ ಕೊಳ್ಳಬಹುದಾಗಿದೆ. ಈಕ್ವಿಟಿ

ಷೇರುಗಳು, ಸರ್ಕಾರದ ಶ್ಯೂರಿಟಿ ಮತ್ತು ಕಾರ್ಪೊರೇಟ್ ಬಾಂಡ್‌ಗಳಲ್ಲಿ ಶೇ. 50ರಷ್ಟು ಹಣವನ್ನು ತೊಡಗಿಸಲು ಅವಕಾಶವಿದ್ದರೆ, ಸರ್ಕಾರದ ಸೆಕ್ಯೂರಿಟಿ, ಕಾರ್ಪೊರೇಟ್ ಬಾಂಡ್‌ಗಳು, ಡಿಬೆಂಚರ್‌ಗಳಲ್ಲಿ ಶೇ. 100ರಷ್ಟು ಹಣವನ್ನು ತೊಡಗಿಸ ಬಹುದಾಗಿದೆ. ಇದಲ್ಲದೆ ಠೇವಣಿದಾರರು ಜೀವನ ಚಕ್ರ ಯೋಜನೆಯಲ್ಲಿ ನಿಯಮಿತವಾಗಿ ಹಣವನ್ನೂ ತೊಡಗಿಸ ಬಹುದು. ಇದು ಠೇವಣಿದಾರನ ವಯಸ್ಸನ್ನು ಅವಲಂಬಿಸಿರುತ್ತದೆ. 35ನೇ ವಯಸ್ಸಿನವರೆಗೆ ನಿಧಾನದ ಜೀವನ ಚಕ್ರದ ನಂತರ ತೀವ್ರಗತಿಯ ಜೀವನ ಚಕ್ರ ಹಣ ಹೂಡಿಕೆಗೆ ಲಭಿಸಲಿದೆ.

ಜೂನ್ 3, 2017ಕ್ಕೆ ಅನ್ವಯವಾಗುವಂತೆ 10.7 ಮಿಲಿಯನ್ ಠೇವಣಿದಾರರು ಎನ್.ಪಿ.ಎಸ್ ಯೋಜನೆಯ ಅನ್ವಯ 1,42,263 ಕೋಟಿ ಹಣವನ್ನು ತೊಡಗಿಸಿದ್ದಾರೆ. ಒಟ್ಟು ನಿರ್ವಹಣೆಯಲ್ಲಿ ಇದರ ಮೊತ್ತ 1,84,948/– ಆಗುತ್ತದೆ. ಇದರಲ್ಲಿ ಸರ್ಕಾರಿ ನೌಕರರ ಕೊಡುಗೆ ಶೇ 49ರಷ್ಟಾಗಿದ್ದು, ಎ.ಯು.ಎಂನ



ಶೇ 88ರಷ್ಟಾಗಿದೆ. ಅಟಲ್ ಪೆನ್ಷನ್ ಯೋಜನೆಯ ಕೊಡುಗೆಯನ್ನೂ ಸೇರಿಸಿದರೆ 16.1 ಮಿಲಿಯನ್ ಠೇವಣಿದಾರರು ರೂ. 1,44,340 ಕೋಟಿ ರೂಪಾಯಿಗಳನ್ನು ತೊಡಗಿಸಿದ್ದು ಎ.ಯು.ಎಂನಲ್ಲಿ ಅದು 1,87,151 ಕೋಟಿಯಾಗುತ್ತದೆ. ಪಟ್ಟಿ 1 ರಲ್ಲಿ ವಿವರಗಳನ್ನು ನೀಡಲಾಗಿದೆ.

ಎನ್.ಪಿ.ಎಸ್‌ನ ಒಟ್ಟು ಬಂಡವಾಳ ಬಂಡವಾಳ ಮತ್ತು ಸೆಕ್ಯೂರಿಟಿಗಳ ನಡುವೆ ಸಮತೋಲನದಿಂದ ಹಂಚಿಕೆಯಾಗಿದೆ. ಪ್ರಸ್ತುತ ಶೇ 13.5ರಷ್ಟು ಒಟ್ಟು ಎನ್.ಪಿ.ಎಸ್. ಪೋರ್ಟ್‌ಫೋಲಿಯೊ ಈಕ್ವಿಟಿ ಷೇರುಗಳಲ್ಲಿ ತೊಡಗಿಸಲ್ಪಟ್ಟಿದ್ದರೆ ಶೇ 48ರಷ್ಟು ಸರ್ಕಾರಿ ಸೆಕ್ಯೂರಿಟಿಗಳಲ್ಲಿ ಶೇ 35.5ರಷ್ಟು ಕಾರ್ಪೊರೇಟ್ ಬಾಂಡ್‌ಗಳಲ್ಲಿ ಉಳಿದವು ಕಡಿಮೆ ವ್ಯಾಪ್ತಿಯ ಇಲ್ಲವೆ ಮಾರುಕಟ್ಟೆಯ ನಿರ್ವಹಣೆಯಲ್ಲಿ ತೊಡಗಿಸಲ್ಪಟ್ಟಿವೆ.

ಮುಂದುವರೆದು ಹೇಳುವುದಾದರೆ ಶೇ 98ರಷ್ಟು ಕಾರ್ಪೊರೇಟ್ ಬಾಂಡ್‌ಗಳು ಎ.ಎ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತದ ಸೆಕ್ಯೂರಿಟಿಗಳಲ್ಲಿ ತೊಡಗಿಲ್ಪಟ್ಟಿವೆ. ಎನ್.ಪಿ.ಎಸ್ – ಸಿ.ಜಿ ಮತ್ತು ಎಸ್.ಜಿ ಯೋಜನೆಯಲ್ಲಿ ಎಪ್ರಿಲ್ 2017ರವರೆಗೆ ವಾರ್ಷಿಕ ಸರಾಸರಿ ಆದಾಯ ಶೇ 10ಕ್ಕಿಂತ ಹೆಚ್ಚಾಗಿದ್ದು ಅದರ ವಿವರಗಳನ್ನು ಪಟ್ಟಿ 2 ರಲ್ಲಿ ನೀಡಲಾಗಿದೆ. ರೂ. 50,000 ದ ವರೆಗಿನ ಆದಾಯ ತೆರಿಗೆ ಕಡಿತವನ್ನು ಹೊರತುಪಡಿಸಿಯೂ ಸರಳ ಮಾದರಿ, ಪಾರದರ್ಶಕತೆ, ನಿರ್ವಹಣೆಯ ಅನುಕೂಲ, ಆಯ್ಕೆಯ ಅನುಕೂಲ, ಬಂಡವಾಳ ತೊಡಗಿಸುವಿಕೆಯಲ್ಲಿನ ಅನುಕೂಲ ಮೊದಲಾದವು ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಆಕರ್ಷಕ ನಿವೃತ್ತಿ ವೇತನ ಯೋಜನೆಯನ್ನಾಗಿ ಮಾಡಿವೆ. ❑


"ಹೂ ಗುಚ್ಛದ ಬದಲಾಗಿ ಪುಸ್ತಕ ನೀಡಿ......
ಇಂತಹ ನಡೆ ಬಹಳಷ್ಟು ಬದಲಾವಣೆ ತರಬಲ್ಲದು"

– ಮಾನ್ಯ ಪ್ರಧಾನ ಮಂತ್ರಿ

ಪ್ರಕಾಶನ ವಿಭಾಗ ಕಲೆ, ಸಂಸ್ಕೃತಿ, ಸ್ವಾತಂತ್ರ್ಯ ಹೋರಾಟ, ಇತಿಹಾಸ, ಜೀವನ ಚರಿತ್ರೆ, ಗಾಂಧಿ ಸಮಗ್ರ ಸಾಹಿತ್ಯದಿಂದ ಹಿಡಿದು...... ಮಕ್ಕಳ ಸಾಹಿತ್ಯದವರೆಗೆ ಎಲ್ಲ ಬಗೆಯ ಪುಸ್ತಕಗಳ ಶ್ರೀಮಂತ ಭಂಡಾರವಾಗಿದೆ.



ನಿಮ್ಮ ಆತ್ಮೀಯರಿಗೆ
ನಮ್ಮ ಪುಸ್ತಕಗಳನ್ನು
ಉಡುಗೊರೆಯಾಗಿ ನೀಡಿ
ಏಕೆಂದರೆ
"ಪುಸ್ತಕದಷ್ಟು ಉತ್ತಮ ಸ್ನೇಹಿತರು ಇನ್ನೊಬ್ಬರಿಲ್ಲ"

ಪ್ರಕಾಶನ ವಿಭಾಗ
ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ

ಪುಸ್ತಕಗಳ ಖರೀದಿಗಾಗಿ ಸಂಪರ್ಕಿಸಿ : ಯೋಜನಾ–ಕನ್ನಡ
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು – 560 034.
ದೂರವಾಣಿ : 080 – 25537244.
E-mail : kannada-yojana@gov.in
ಇ–ಪುಸ್ತಕಗಳಿಗಾಗಿ kobo.com, play.google.com, amazon.in

# ಸಾಮಾಜಿಕ ಭದ್ರತೆ : ಜಾಗತಿಕ ಚಿತ್ರಣ

* ಚಂದ್ರಕಾಂತ್ ಲಹರಿಯಾ



**ಕಳೆದ ಕೆಲವು ದಶಕಗಳಿಂದೀಚೆಗೆ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಾಕಷ್ಟು ಬೆಳವಣಿಗೆಯಾಗಿದೆ. ಹಲವು ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯ ಭಾಗವಾಗಿರುವ ಈ ಯೋಜನೆಗಳ ಬಗ್ಗೆ ಸಾಕಷ್ಟು ಕಲಿಯಲಾಗಿದೆ. ಸಾಮಾಜಿಕ ಭದ್ರತೆ ಎನ್ನುವುದು ಭಾರತೀಯ ಸಂವಿಧಾನದ ಒಂದು ಭಾಗವಾಗಿದ್ದು, ಸರ್ಕಾರಗಳು ಅದನ್ನು ನಾನಾ ವ್ಯಾಪ್ತಿಯಲ್ಲಿ ಆದ್ಯತೆಯನ್ನಾಗಿ ಮಾಡಿಕೊಂಡಿವೆ.**

'ಸಾಮಾಜಿಕ ಭದ್ರತೆ' ಎನ್ನುವ ಪದವನ್ನು ಬೇರೆ ಬೇರೆ ಆಯಾಮಗಳಲ್ಲಿ ಹಾಗೂ ವಿಭಿನ್ನ ಸನ್ನಿವೇಶಗಳಲ್ಲಿ ವಿಭಿನ್ನ ರೀತಿಯಲ್ಲಿ ನೋಡಬಹುದು. ಅದನ್ನು 'ಸಾಮಾಜಿಕ ರಕ್ಷಣೆ' 'ಸಾಮಾಜಿಕ ಕಲ್ಯಾಣ' ಮತ್ತಿತರ ಸಾಮಾನ್ಯ ಕಲ್ಪನೆಗಳಂತೆ ಬೇರೆ ಬೇರೆ ರೀತಿಯಲ್ಲೂ ಬಳಕೆ ಮಾಡಬಹುದು. ಅದೆಲ್ಲಾ ಏನೇ ಇರಲಿ, 'ಸಾಮಾಜಿಕ ಭದ್ರತೆ' ಎನ್ನುವ ಪದವನ್ನು ಸಾಮಾನ್ಯವಾಗಿ ಎಲ್ಲ ಕಡೆ ಬಳಸುವುದು ಮುಂದುವರಿದಿದೆ. ಸಾಮಾಜಿಕ ಭದ್ರತೆ ಎನ್ನುವ ಪರಿಕಲ್ಪನೆ, ಮಾನವ ಹಕ್ಕುಗಳ ಕುರಿತಾದ ಜಾಗತಿಕ ಘೋಷಣೆಯಲ್ಲಿ ಪರಿಚ್ಛೇದ 22ರಲ್ಲಿ ಸೇರ್ಪಡೆಯಾಗಿದೆ. 1948ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದಲ್ಲಿ 21ಎ ನಿರ್ಣಯವಾಗಿ ಇದನ್ನು ಅಂಗೀಕರಿಸಲಾಗಿದ್ದು, ಅದು ಹೀಗೆ ಹೇಳುತ್ತದೆ "ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಸಾಮಾಜಿಕ ಭದ್ರತೆಯ ಹಕ್ಕಿದೆ ಮತ್ತು ಅದನ್ನು ಸಾಕಾರಗೊಳಿಸಲು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಹಕಾರ ಅಗತ್ಯ, ಅದಕ್ಕಾಗಿ ಸಂಘಟನೆಗಳನ್ನು ಬಳಸಿಕೊಳ್ಳಬೇಕು ಮತ್ತು ರಾಜ್ಯಗಳ ಸಂಪನ್ಮೂಲ ಉಪಯೋಗಿಸಿಕೊಳ್ಳಬೇಕು. ವ್ಯಕ್ತಿಗೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ದೊರಕಿಸಿಕೊಟ್ಟು ಆತ ಗೌರವಯುತವಾಗಿ ಬಾಳ್ವೆ ನಡೆಸಲು ಮತ್ತು ತನ್ನ ವ್ಯಕ್ತಿತ್ವವನ್ನು ಸ್ವತಂತ್ರವಾಗಿ ರೂಪಿಸಿಕೊಳ್ಳುವಂತೆ ಮಾಡಬೇಕಾಗಿದೆ". ಆ ಘೋಷಣೆಯ 23ನೇ ಪರಿಚ್ಛೇದದಲ್ಲಿ "ದುಡಿಯುವ ಪ್ರತಿಯೊಬ್ಬರಿಗೂ ಅಗತ್ಯಬಿದ್ದರೆ ಸಾಮಾಜಿಕ ಭದ್ರತೆಯನ್ನು ಕಲ್ಪಿಸಿಕೊಡಬೇಕು"ಎಂದಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳ ಕುರಿತಾದ ಜಾಗತಿಕ ಘೋಷಣೆಯ 22ನೇ ವಿಧಿಯನ್ನು ಸಾಮಾಜಿಕ ಭದ್ರತೆಯ ತಳಹದಿ ಎಂದು ಪರಿಗಣಿಸಲಾಗುತ್ತದೆ.

**ಸಾಮಾಜಿಕ ಭದ್ರತೆಯ ಬೆಳವಣಿಗೆ**

ಇತಿಹಾಸಕಾರರು ದಾಖಲಿಸಿರುವಂತೆ ಎಲ್ಲ ನಾಗರಿಕತೆಗಳ ರಾಜ ಮಹಾರಾಜರು ಮತ್ತು ದೊರೆಗಳ ಕಾಲದಲ್ಲಿ ಸಾಮಾಜಿಕ ಭದ್ರತೆಯ ಕಲ್ಪನೆ ಇತ್ತು. ಪುರಾತನ ಹಾಗೂ ಮಧ್ಯಕಾಲೀನ ಯುಗದಲ್ಲೂ ಅದು ಸಮಾಜದಲ್ಲಿತ್ತು. ಆದರೆ ಆಧುನಿಕ ಕಾಲದಲ್ಲಿ ಈ ಸಾಮಾಜಿಕ ಭದ್ರತೆಯ ಪರಿಕಲ್ಪನೆ 19ನೇ ಶತಮಾನದಲ್ಲಿ ಆರಂಭವಾಯಿತು. ಸಾಮಾಜಿಕ ಭದ್ರತಾ ವ್ಯವಸ್ಥೆ ಅಳವಡಿಕೆಯಲ್ಲಿ ಜರ್ಮನಿ ಮುಂಚೂಣಿಯಲ್ಲಿತ್ತು ಎಂದು ಹೇಳಲಾಗಿದೆ, ಜರ್ಮನ್ ಚಾನ್ಸೆಲರ್ ಒಟ್ಟೊ ವೂನ್ ಬಿಸ್ಮಾರ್ಕ್ ನಾಯಕತ್ವದಲ್ಲಿ, ಆ ದೇಶದಲ್ಲಿ ಕಾರ್ಮಿಕರ ಪರಿಹಾರ ಕಾರ್ಯಕ್ರಮ (1884), ಕಾಯಿಲೆ ವಿಮಾ ಕಾರ್ಯಕ್ರಮ (1888) ಮತ್ತು ಸಾಮಾಜಿಕ ವಿಮಾ ಕಾರ್ಯಕ್ರಮ (1889) ಸೇರಿದಂತೆ ಹಲವು ಸರಣಿ ಭದ್ರತಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿತ್ತು. ಇಪ್ಪತ್ತನೇ ಶತಮಾನದ ಆರಂಭದಲ್ಲಿ, ಜರ್ಮನಿಯಲ್ಲಿ ಸಮಗ್ರ ಸಾಮಾಜಿಕ ಭದ್ರತಾ ವ್ಯವಸ್ಥೆ ಇತ್ತು. ಅದೇ ವೇಳೆಗೆ, 1897ರಲ್ಲಿ ಯುನೈಟೆಡ್ ಕಿಂಗ್‌ಡಂನಲ್ಲಿ ಕಾರ್ಮಿಕರ ಪರಿಹಾರ ಕಾಯ್ದೆ ಜಾರಿಗೊಳಿಸಲಾಯಿತು. ತದನಂತರ, 1911ರಲ್ಲಿ ರಾಷ್ಟ್ರೀಯ ವಿಮಾ ಕಾಯ್ದೆ ಬಂತು. 2ನೇ ಜಾಗತಿಕ ಮಹಾಯುದ್ಧ ಮುಕ್ತಾಯವಾದ ಕೂಡಲೇ ಬ್ರಿಟನ್ ಸರ್ಕಾರ ಮೊದಲ ಸಮಗ್ರ ಸಾಮಾಜಿಕ ಭದ್ರತಾ ವ್ಯವಸ್ಥೆ ರೂಪಿಸಿತು. ಈ ಸುಧಾರಣೆಗಳ ಎಲ್ಲ ಬಹುದೊಡ್ಡ ಕೀರ್ತಿ ಬ್ರಿಟಿಷ್ ಆರ್ಥಿಕ ತಜ್ಞ,

* ರಾಷ್ಟ್ರೀಯ ವೃತ್ತಿ ಅಧಿಕಾರಿ, ವಿಶ್ವ ಆರೋಗ್ಯ ಸಂಸ್ಥೆ ನವದೆಹಲಿ ಕಚೇರಿ. E-mail : c.lahariya@gmail.com; lahariyac@who.int

ಪ್ರಗತಿಪರ ಮತ್ತು ಸಾಮಾಜಿಕ ಸುಧಾರಕ ವಿಲಿಯಂ ಹೆನ್ರಿ ಬೇವರಿಡ್ಜ್ ಅವರಿಗೆ ಸಲ್ಲಬೇಕು. ಅವರು ಸರ್ಕಾರಕ್ಕೆ ಸಲ್ಲಿಸಿದ ಯೋಜನೆ ಬೇವರಿಡ್ಜ್ ಯೋಜನೆ ಎಂದೇ ಕರೆಯಲ್ಪಟ್ಟಿತ್ತು. ಅವರ ಯೋಜನೆ ಆಧರಿಸಿ ಯುನೈಟೆಡ್ ಕಿಂಗ್‌ಡಂನಲ್ಲಿ ಜಾರಿಗೊಳಿಸಿದ ರಾಷ್ಟ್ರೀಯ ಆರೋಗ್ಯ ಯೋಜನೆ (ಎನ್‌ಎಚ್‌ಎಸ್) ಅತ್ಯಂತ ಹೆಸರಾಂತ ಯೋಜನೆಯಾಗಿದ್ದಷ್ಟೇ ಅಲ್ಲದೆ, ಅದನ್ನು ಆಧುನಿಕ ಕಾಲದಲ್ಲಿ ಮಾದರಿ ಆರೋಗ್ಯ ಸೇವಾ ವ್ಯವಸ್ಥೆ ಎಂದು ಪರಿಗಣಿಸಲಾಗಿತ್ತು.

1900 ರಿಂದ 1920ರ ಅವಧಿಯಲ್ಲಿ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕ (ಯುಎಸ್‌ಎ) ದಲ್ಲಿ ಆರ್ಥಿಕ ಭದ್ರತೆ ಮತ್ತು ಅಂತಿಮವಾಗಿ ಸಾಮಾಜಿಕ ಭದ್ರತೆ (ಸಾಮಾಜಿಕ ವಿಮೆ ಜೊತೆಗೆ ಆರ್ಥಿಕ ಭದ್ರತೆ) ಒದಗಿಸಲು ವೃದ್ಧಾಪ್ಯ ಸಹಾಯಧನ ಯೋಜನೆ (ಪಿಂಚಣಿ) ಕಲ್ಪನೆ ಬೆಳೆಯಿತು. ಅಮೆರಿಕದಲ್ಲಿ ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟ್ ಅವಧಿಯಲ್ಲಿ 1935ರಲ್ಲಿ ಸಾಮಾಜಿಕ ಭದ್ರತಾ ಕಾಯ್ದೆ ಜಾರಿಗೊಳಿಸಲಾಯಿತು, ಆ ಮೂಲಕ 1943ರಲ್ಲಿ ಏಕೀಕೃತ ರಾಷ್ಟ್ರೀಯ ಸಾಮಾಜಿಕ ವಿಮಾ ಯೋಜನೆ ಆರಂಭಿಸಲಾಯಿತು. ಫ್ರಾನ್ಸ್‌ನಲ್ಲಿ 1946ರಲ್ಲಿ ಪೀರೆ ಲಾರೋಕ್ಯೂ ನೇತೃತ್ವದಲ್ಲಿ ರಾಷ್ಟ್ರೀಯ ಭದ್ರತಾ ಯೋಜನೆ ವ್ಯವಸ್ಥೆ ವಿನ್ಯಾಸಗೊಳಿಸಲಾಗಿದ್ದು, ಅದರಡಿ ಎಲ್ಲ ಜನರನ್ನೂ ಸಾಮಾಜಿಕ ಭದ್ರತಾ ವ್ಯಾಪ್ತಿಗೆ ಒಳಪಡಿಸಲಾಯಿತು. ಇದೇ ಸಮಯದಲ್ಲಿ, ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ) ಮತ್ತು ವಿಶ್ವಸಂಸ್ಥೆ ಅಂತಾರಾಷ್ಟ್ರೀಯ ಕಾನೂನುಗಳಲ್ಲಿ ಹಾಗೂ ಸಮಾವೇಶಗಳಲ್ಲಿ ಸಾಮಾಜಿಕ ಭದ್ರತೆಯನ್ನು ಪದೇ ಪದೇ ಪ್ರತಿಪಾದಿಸಿತು ಮತ್ತು ಉತ್ತೇಜಿಸಿತು. 1944ರ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ಘೋಷಣೆಯಂತೆ, ಸಾಮಾಜಿಕ ಭದ್ರತಾ ಸಂಸ್ಥೆಗಳ ನಡುವೆ ಪರಿಣಾಮಕಾರಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರಿಯೆ, ಸಹಕಾರ ಮತ್ತು ಜ್ಞಾನ ವಿನಿಮಯಕ್ಕೆ ಒತ್ತು ನೀಡಲಾಗಿದೆ. ಇದು ಮಹತ್ವದ ಮೈಲಿಗಲ್ಲಾಯಿತು. ಆ ಘೋಷಣೆ ಅನ್ವಯ, ರಾಷ್ಟ್ರಗಳು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಬೆಂಬಲಿಸಬೇಕು ಮತ್ತು ಸಮಗ್ರ ವೈದ್ಯಕೀಯ ರಕ್ಷಣೆ ಮತ್ತು ಸಾಮಾಜಿಕ ಭದ್ರತೆ ಒದಗಿಸುವುದು ಅತ್ಯಗತ್ಯ. 1952ರಲ್ಲಿ ಐಎಲ್‌ಒ, ಸಾಮಾಜಿಕ ಭದ್ರತಾ ಕನಿಷ್ಠ ಮಾನದಂಡಗಳನ್ನು ಒಪ್ಪಿಕೊಂಡಿತು (ಎನ್‌ಆರ್ 102), ಆ ಪ್ರಕಾರ ಯಾವ್ಯಾವ ಸಂದರ್ಭಗಳಲ್ಲಿ ಸಾಮಾಜಿಕ ಭದ್ರತೆಗಳು ಒಳಪಡುತ್ತವೆ (ಪಟ್ಟಿ–1 ನೋಡಿ) ಎಂಬುದನ್ನು ಗಮನಿಸಬಹುದು. ಅದು ಎಲ್ಲ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಸಾಮಾಜಿಕ ಭದ್ರತಾ ಒಪ್ಪಂದದಲ್ಲಿ ಅತ್ಯಂತ ಮಹತ್ವದ್ದಾಗಿದ್ದು, ಅದು ಸಾಮಾಜಿಕ ಭದ್ರತಾ ಮೂಲ ಸಿದ್ಧಾಂತಗಳನ್ನು ಆಧರಿಸಿದೆ ಮತ್ತು ಅದರಲ್ಲಿ ಸಾಮಾಜಿಕ ಭದ್ರತೆಗಳ ಕನಿಷ್ಠ ಮಾನದಂಡಗಳನ್ನು ವಿಶ್ವವ್ಯಾಪಿ ಎಲ್ಲ ರಾಷ್ಟ್ರಗಳು ಒಪ್ಪಿವೆ.



**ಪಟ್ಟಿ 1 : ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ಒಪ್ಪಂದ 1952ರ ಪ್ರಕಾರ ಸಾಮಾಜಿಕ ಭದ್ರತೆ ಸವಾಲುಗಳು**

* ವೃದ್ಧಾಪ್ಯ ಪಿಂಚಣಿ: ನಿಗದಿತ ವಯಸ್ಸು ಮೀರಿದ ನಂತರವೂ ಬದುಕುಳಿದವರ ಆರೋಗ್ಯ ರಕ್ಷಣಾ ವ್ಯಾಪ್ತಿ.
* ಬದುಕುಳಿದವರಿಗೆ ಅನುಕೂಲ: ಕುಟುಂಬಕ್ಕೆ ಜೀವನಾಧಾರವಾದ ವ್ಯಕ್ತಿ ಸಾವಿನಿಂದ ನಷ್ಟಕ್ಕೆ ಒಳಗಾಗಿರುವ ವಿಧವಾ ವ್ಯಕ್ತಿಗೆ ಅಥವಾ ಮಕ್ಕಳಿಗೆ ನೆರವು ನೀಡುವುದು.
* ಕಾಯಿಲೆ ರಜಾ ಕೆಲಸ: ಅಸ್ವಾಸ್ಥ್ಯದಿಂದ ದುಡಿಯುವ ಸಾಮರ್ಥ್ಯವಿಲ್ಲದಾಗ, ಕೆಲಸವನ್ನು ಅಮಾನತ್ತಿನಲ್ಲಿಡುವುದು.
* ಉದ್ಯೋಗಿ ಗಾಯಗೊಂಡಾಗ: ಕರ್ತವ್ಯದಲ್ಲಿದ್ದಾಗ ಗಾಯಗೊಂಡರೆ ಅಥವಾ ಕಾಯಿಲೆಗೆ ಒಳಗಾದರೆ ಅಂತಹ ಸಂದರ್ಭಗಳಲ್ಲಿ ಕುಟುಂಬಕ್ಕೆ ಜೀವನಾಧಾರವಾಗಿರುವ ಉದ್ಯೋಗಿಗೆ ವೈದ್ಯಕೀಯ ರಕ್ಷಣೆ, ಕಾಯಿಲೆ ರಜಾ ಮತ್ತಿತರ ನಷ್ಟ ಹಾಗೂ ವೆಚ್ಚಗಳನ್ನು ಭರಿಸಿಕೊಡುವುದು.
* ವಿಕಲತೆ ಅನುಕೂಲ: ದುಡಿಯುವ ವ್ಯಕ್ತಿ ಶಾಶ್ವತ ಅಥವಾ ಅರೆ ವಿಕಲನಾದರೆ ಅಂಥವರನ್ನು ಇತರೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು.
* ನಿರುದ್ಯೋಗಿಗೆ ಅನುಕೂಲ: ಅಧಿಕ ಸಾಮರ್ಥ್ಯ ಹೊಂದಿರುವ ವ್ಯಕ್ತಿಗಳು ಅದಕ್ಕೆ ತಕ್ಕ ಉದ್ಯೋಗ ಸಿಗದೆ, ಲಭ್ಯವಿರುವ ಕೆಲಸವನ್ನೇ ಮಾಡಿಕೊಂಡಿರುವಂತಹ ಉದ್ಯೋಗಿಗಳಿಗೆ ಸೂಕ್ತ ಉದ್ಯೋಗ ಒದಗಿಸಿ ಕೊಡುವುದು.
* ಕುಟುಂಬಕ್ಕೆ ಅನುಕೂಲ: ಕುಟುಂಬದ ಮಕ್ಕಳ ನಿರ್ವಹಣೆ ಹೊಣೆಯನ್ನು ನಿಭಾಯಿಸುವುದು.
* ವೈದ್ಯಕೀಯ ರಕ್ಷಣೆ: ಬಸುರಿ ಹಾಗೂ ಅಸ್ವಾಸ್ಥ್ಯದ ಹಲವು ಸಂದರ್ಭಗಳಲ್ಲಿ ಅಗತ್ಯ ವೈದ್ಯಕೀಯ ನೆರವನ್ನು ಒದಗಿಸಿ ಕೊಡುವುದು.
* ತಾಯ್ತನದ ಅನುಕೂಲ: ಮಹಿಳಾ ಸಿಬ್ಬಂದಿ ತಾಯ್ತನಕ್ಕಾಗಿ ರಜೆಯ ಮೇಲೆ ತೆರಳಿದ ಸಂದರ್ಭದಲ್ಲಿ ಅವರಿಗೆ ರಜೆ ಅವಧಿಯ ವೇತನ ಹಾಗೂ ಇನ್ನಿತರ ಭತ್ಯೆ ಒದಗಿಸಿ ಕೊಡುವುದು.
* ಹಲವು ಕಾರಣಗಳಿಂದಾಗಿ ಸಾಮಾನ್ಯ ಕನಿಷ್ಠ ಆರೋಗ್ಯ ಸೇವೆ ಲಭ್ಯವಾಗದಂತಹ ಜನರಿಗೆ ಸಾಮಾಜಿಕ ನೆರವು ನೀಡುವುದು.

### ಅಂತಾರಾಷ್ಟ್ರೀಯ ಅನುಭವಗಳಿಂದ ಕಲಿಕೆ

ಸಾಮಾಜಿಕ ಭದ್ರತಾ ಕಾರ್ಯತಂತ್ರಗಳನ್ನು ಹೆಚ್ಚಾಗಿ ತೊಂದರೆ ನಿವಾರಕ ಎಂದು ಪರಿಗಣಿಸಲ್ಪಟ್ಟಿದ್ದು, ಇವು ಜನರ ಮೇಲಾಗುವ ದೌರ್ಜನ್ಯಗಳನ್ನು ನಿಯಂತ್ರಿಸಲು ಹಾಗೂ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಿ, ಬಡತನ ಮತ್ತು ಹಸಿವನ್ನು ನಿರ್ಮೂಲನೆ ಮಾಡುವ ಜತೆಗೆ ಮನುಷ್ಯರ ಗೌರವ ಮತ್ತು ಸಾಮಾಜಿಕ ಬಲವರ್ಧನೆಗೊಳಿಸುವ ಜತೆಗೆ ಸಾಮಾಜಿಕ ಸಂಬಂಧ ಮತ್ತು ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವುದಾಗಿದೆ. ಈ ಕಾರ್ಯತಂತ್ರಗಳನ್ನು ಸದಾ

ಅಂತಾರಾಷ್ಟ್ರೀಯ ಗುರಿಗಳು ಮತ್ತು ಸಮಾವೇಶಗಳಲ್ಲಿ ಪ್ರಸ್ತಾಪಿಸಲಾಗುತ್ತದೆ. ಇತ್ತೀಚೆಗೆ ಮುಕ್ತಾಯಗೊಂಡ ಸಮಾವೇಶದಲ್ಲಿ ಸಹಸ್ರಮಾನದ ಅಭಿವೃದ್ಧಿ ಗುರಿ (ಎಂಡಿಜಿ) ಹಾಗೂ ಈಗ ಪ್ರಸ್ತಾಪವಾಗುತ್ತಿರುವ ಸುಸ್ಥಿರ ಅಭಿವೃದ್ಧಿ ಗುರಿ (ಎಸ್‌ಡಿಜಿ) ಗಳನ್ನು ಅಂತಾರಾಷ್ಟ್ರೀಯ ಬದ್ಧತೆ ಮತ್ತು ಏಕತೆಯಿಂದಾಗಿ ಮಾತ್ರ ಸಾಧಿಸಲು ಸಾಧ್ಯ.

ಕೆಲವು ಆಯ್ದ ರಾಷ್ಟ್ರಗಳಲ್ಲಿ ಸಾಮಾಜಿಕ ಭದ್ರತೆ ಕಾಯಲು ಹಲವು ಕ್ರಮಗಳನ್ನು ಕೈಗೊಂಡಿದ್ದರೂ, ಕಡಿಮೆ ಮತ್ತು ಮಧ್ಯಮ ಆದಾಯವಿರುವ ರಾಷ್ಟ್ರಗಳಲ್ಲಿ ಸಾಮಾಜಿಕ ಭದ್ರತಾ ಕ್ರಮಗಳ ಪ್ರಗತಿ ನಿಧಾನವಾಗಿಯೇ ಸಾಗಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ 2014ರಲ್ಲಿ ಪ್ರಕಟಿಸಿದ ವರದಿಯಂತೆ ಒಟ್ಟಾರೆ ವಿಶ್ವದ ಜನಸಂಖ್ಯೆಯ ಶೇಕಡ 27ರಷ್ಟು ಜನಕ್ಕೆ ಮಾತ್ರ ಸಮಗ್ರ ಸಾಮಾಜಿಕ ಭದ್ರತೆ ಸಿಕ್ಕಿದೆ. ಸಾಮಾಜಿಕ ಭದ್ರತಾ ಕ್ರಮಗಳ ಅನುಷ್ಠಾನಕ್ಕೆ ಹಲವು ಸವಾಲುಗಳಿವೆ. ಅಂತಹ ಎರಡು ಪ್ರಮುಖ ಸವಾಲುಗಳೆಂದರೆ ಸುಸ್ಥಿರತೆ ಕಾಯ್ದುಕೊಳ್ಳುವುದು ಮತ್ತು ಏಕರೂಪ ಪದ್ಧತಿ ಅನುಸರಿಸುವುದು.



ಬಹುತೇಕ ರಾಷ್ಟ್ರಗಳಲ್ಲಿ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಆರಂಭಿಸಿದ್ದು, ಆಯ್ದ ಜನರಿಗೆ ಮಾತ್ರ ಕೆಲವೇ ಕೆಲವು ಫಲಾನುಭವಿಗಳಿಗೆ ಆರಂಭಿಸಿದ ಯೋಜನೆಗಳನ್ನು ಕಾಲಾನುಕ್ರಮವಾಗಿ ವಿಸ್ತರಿಸಲಾಗಿದ್ದು, ಕೆಲವು ರಾಷ್ಟ್ರಗಳಲ್ಲಿ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಏಕರೂಪಗೊಳಿಸಲಾಗಿದೆ. ಆದರೆ ಸವಾಲು ಇರುವುದು ಕಡಿಮೆ ಮತ್ತು ಮಧ್ಯಮ ಆದಾಯವಿರುವ ರಾಷ್ಟ್ರಗಳಲ್ಲಿ, ಅಲ್ಲಿ ಸಣ್ಣ ನಿರ್ದಿಷ್ಟ ಜನರ ಗುಂಪಿಗೆ ಮಾತ್ರ ಸೀಮಿತ ಅಂಶಗಳಿರುವ ಭದ್ರತಾ ಯೋಜನೆಗಳನ್ನು ರೂಪಿಸಲಾಗಿರುತ್ತದೆ. ಈ ಯೋಜನೆಗಳು ಕಾಗದದ ಮೇಲೆ ಚೆನ್ನಾಗಿ ಕಾಣುತ್ತವೆ, ಆದರೆ ಬಹುತೇಕ ಜನರು ಅದರ ವ್ಯಾಪ್ತಿಗೆ



ಒಳಪಡುವುದಿಲ್ಲ. ಅಲ್ಲದೆ ನಿಗದಿತ ಜನಸಂಖ್ಯೆಯನ್ನು ಗುರುತಿಸುವುದು ಕೂಡ ದೊಡ್ಡ ಸವಾಲೇ ಆಗಿರುತ್ತದೆ. ಹಾಗಾಗಿ ಈ ಯೋಜನೆಗಳು ಎಲ್ಲ ರೀತಿಯಲ್ಲೂ ಏಕರೂಪದಿಂದ ದೂರ ಉಳಿಯುತ್ತವೆ. ಇಂತಹ ಯೋಜನೆಗಳು ರಾಜಕೀಯವಾಗಿ ಗಮನ ಸೆಳೆದಾಗ ಮಾತ್ರ ಸತತವಾಗಿ ಅವುಗಳು ವಿಸ್ತರಣೆಯಾಗುವುದಲ್ಲದೆ ಅವುಗಳ ಬಗ್ಗೆ ಆಗಿಂದಾಗ್ಗೆ ಪುನರ್ ಪರಿಶೀಲನೆ ನಡೆಸಿ, ಜನರ ನಿರೀಕ್ಷೆಗಳು ಮತ್ತು ದೇಶದ ಆರ್ಥಿಕ ಸಾಮರ್ಥ್ಯಕ್ಕೆ ಹೊಂದಾಣಿಕೆಯಾಗುವಂತೆ ಅವುಗಳನ್ನು ಪುನರ್ ರೂಪಿಸಬಹುದು.

ಇನ್ನು ಸ್ಥಿರತೆ ಕಾಯ್ದುಕೊಳ್ಳುವ ಬಗ್ಗೆ ಹೇಳುವುದಾದರೆ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು ದೇಶದೇಶದ ನಡುವೆ ಭಿನ್ನವಾಗಿರುತ್ತವೆ ಮತ್ತು ಜನಸಂಖ್ಯೆ ಹಾಗೂ ಆರ್ಥಿಕ ಅಂದಾಜುಗಳನ್ನು 2050ರ ವೇಳೆಗೆ ಪ್ರಮುಖವಾಗಿರಿಸಿಕೊಂಡು ರೂಪಿಸಲಾಗಿರುತ್ತದೆ. ಹಲವು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜಿಡಿಪಿಯ 1ನೇ 5ರಷ್ಟು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲಾಗುತ್ತದೆ. ಈ ಸಂದರ್ಭದಲ್ಲಿ ಹೇಳುವುದಾದರೆ ಇದರಿಂದಾಗಿ ಜನರ ಜೀವಿತಾವಧಿ ಹೆಚ್ಚಳವಾಗುತ್ತಿದೆ ಮತ್ತು ದುಡಿಯುವ ವರ್ಗದ ನಿವೃತ್ತಿ ವಯಸ್ಸು ಕೂಡ ಏರಿಕೆಯಾಗುತ್ತಿದೆ. ಇದರಿಂದಾಗಿ ಮುಂದಿನ ದಿನಗಳಲ್ಲಿ ನಿವೃತ್ತಿಯಾಗುತ್ತಿರುವವರ ವೆಚ್ಚ ಜಿಡಿಪಿಗೆ ಇನ್ನಷ್ಟು ಹೆಚ್ಚಾಗಲಿದೆ ಮತ್ತು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ವೆಚ್ಚವೂ ಹೆಚ್ಚಲಿದೆ. ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ವ್ಯಾಪ್ತಿ ಹಾಗೂ ಅವುಗಳ ಬೆಳವಣಿಗೆಯನ್ನು ಗಮನಿಸಿದರೆ ರಾಷ್ಟ್ರೀಯ ಸರ್ಕಾರಗಳು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಿಗಾಗಿ ತನ್ನದೇ ಆದ ವಿತ್ತೀಯ ಯೋಜನೆಗಳನ್ನು ರೂಪಿಸಬೇಕು. ಇಲ್ಲವಾದರೆ ಬದಲಾಗುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಪ್ರತಿಕೂಲ ಪರಿಣಾಮಗಳುಂಟಾಗುವ ಸಾಧ್ಯತೆ ಇದೆ.

ಗುರುತಿಸಲ್ಪಟ್ಟಿರುವ ಮತ್ತೊಂದು ಸಮಸ್ಯೆ ಎಂದರೆ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಸಮರ್ಪಕ ಅನುಷ್ಠಾನ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಈ ಕಾರ್ಯಕ್ರಮಗಳ ಪ್ರಯೋಜನಗಳನ್ನು ಅರ್ಹರಿಗೆ ತಲುಪಿಸುವ ಸಾಂಸ್ಥಿಕ ಸಾಮರ್ಥ್ಯದ ಕೊರತೆ ಕಂಡುಬರುತ್ತದೆ. ಬಹುತೇಕ ಫಲಾನುಭವಿಗಳು ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವುದರಿಂದ ಅವರು ಈ ಯೋಜನೆಗಳಿಗೆ ವಂತಿಗೆ ನೀಡಲು ಮತ್ತು ಅವುಗಳಲ್ಲಿ ಭಾಗವಹಿಸುವ ಶಾಸನಾತ್ಮಕ ಪರಿಧಿ ವ್ಯಾಪ್ತಿಯಿಂದ ದೂರ ಉಳಿಯುತ್ತಾರೆ. ನಿಗದಿತ ಫಲಾನುಭವಿಗಳ ಗುರಿಯನ್ನು ತಲುಪಲು ವಿನೂತನ ಪರಿಹಾರಗಳನ್ನು ಕಂಡುಕೊಳ್ಳಬೇಕಿದೆ ಮತ್ತು ಯಾರು ಈ ಯೋಜನೆಗಳ ವ್ಯಾಪ್ತಿಗೆ ಸೇರಲು ವಂತಿಗೆ ನೀಡುವುದಿಲ್ಲವೊ ಅವರನ್ನೂ ಸಹ ಯೋಜನೆಗೆ ಸೇರಿಸಿಕೊಂಡು ಅನುಷ್ಠಾನಗೊಳಿಸುವ ಅಗತ್ಯವಿದೆ. ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಅಧಿಕೃತಗೊಳಿಸಲು ಪ್ರಮುಖ ಅಸ್ತ್ರವೆಂದರೆ ಅದನ್ನು ದೇಶದ ಸಂವಿಧಾನದಲ್ಲಿ ಅಳವಡಿಸಿ ಕಡ್ಡಾಯಗೊಳಿಸುವುದು. ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು ಬಹುತೇಕ ರಾಷ್ಟ್ರಗಳಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಂವಿಧಾನದಡಿಯಲ್ಲಿಯೇ ಬರುತ್ತವೆ. ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಸಂವಿಧಾನದಡಿ ಉಲ್ಲೇಖಿಸಿರುವ ಹಲವು ರಾಷ್ಟ್ರಗಳು ಅವುಗಳ ಅನುಷ್ಠಾನದಲ್ಲಿ ಮುಂಚೂಣಿಯಲ್ಲಿವೆ. ಜಾಗತಿಕ ಮಟ್ಟದಲ್ಲಿ ಸಾಮಾಜಿಕ ಭದ್ರತಾ ವ್ಯವಸ್ಥೆಗಳು ಬೆಳವಣಿಗೆ ಹೊಂದುತ್ತಿರುವ ಕೆಲವು ಉದಾಹರಣೆಗಳು ಇಲ್ಲಿವೆ. ಫಿನ್‌ಲ್ಯಾಂಡ್ ಅತ್ಯಂತ ಮುಂದುವರಿದ ರಾಷ್ಟ್ರ ಎಂದು ಪರಿಗಣಿಸಲ್ಪಟ್ಟಿದ್ದು, ಅಲ್ಲಿ ಇಡೀ ವಿಶ್ವದಲ್ಲೇ ಅತ್ಯಂತ ಸಮಗ್ರ ಸಾಮಾಜಿಕ ಭದ್ರತಾ ವ್ಯವಸ್ಥೆ ಇದೆ. ಆ ದೇಶದಲ್ಲಿನ ಎಲ್ಲ ನಿವಾಸಿಗಳು ಸಾಮಾಜಿಕ ಭದ್ರತಾ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡುತ್ತಾರೆ ಮತ್ತು ಅಲ್ಲಿ ನಿಗದಿತ ಜನಸಂಖ್ಯೆಗೆ ಬೇರೆ ಬೇರೆ ರೀತಿಯ ಸಾಮಾಜಿಕ ಭದ್ರತಾ ವ್ಯವಸ್ಥೆಗಳನ್ನು ಪಾಲಿಸಲಾಗುತ್ತಿದೆ. ಅಲ್ಲಿನ ನಿವಾಸಿ ಆಧಾರಿತ ಸಾಮಾಜಿಕ ಭದ್ರತಾ ಯೋಜನೆಗಳಿಗೆ ತೆರಿಗೆ ವಿಧಿಸಲಾಗುತ್ತಿದ್ದು, ಅದನ್ನು ಸ್ವಾಯತ್ತ ಸಂಸ್ಥೆಯೊಂದು ನಿರ್ವಹಿಸುತ್ತಿದೆ. ಉದ್ಯೋಗಿ ಆಧರಿತ ಗಳಿಕೆ ಸಂಬಂಧಿ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಿಗೆ

**ಪಟ್ಟಿ 2 : ಆಯ್ದ ರಾಷ್ಟ್ರಗಳಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳ ಕುರಿತ ಸಾರಾಂಶ**




**ಆಸ್ಟ್ರೇಲಿಯಾ :** ಇಲ್ಲಿ ಪ್ರತಿಯೊಬ್ಬ ಅರ್ಹ ವ್ಯಕ್ತಿ ಅಥವಾ ಕುಟುಂಬಕ್ಕೆ ಯಾವುದೇ ಹಣ ಪಾವತಿ ಇಲ್ಲದಿದ್ದರೆ ಅವರಿಗೆ ಸಾಮಾಜಿಕ ಭದ್ರತೆಯ ಮೂಲಕ ವೇತನ ನೀಡಲಾಗುವುದು. ಆಸ್ಟ್ರೇಲಿಯಾದ ಕಲ್ಯಾಣ ಕಾರ್ಯಕ್ರಮ ಅತ್ಯಂತ ವಿಸ್ತಾರವಾದುದು. ಅದರ ಜತೆಗೆ ಅಲ್ಲಿ ನಿವೃತ್ತರು, ಮಹಿಳೆಯರು, ಮಕ್ಕಳು, ವಿಕಲಚೇತನರು, ನಿರುದ್ಯೋಗಿಗಳು, ರೋಗಿಗಳು, ಹೊಸದಾಗಿ ಜನಿಸಿದ ತಮ್ಮ ಮಕ್ಕಳ ಬಗ್ಗೆ ನಿಗಾವಹಿಸುವ ಪೋಷಕರಿಗೆ ನೆರವು ನೀಡಲಾಗುವುದು. ವೇತನ ಪಾವತಿ, ವಿದ್ಯಾರ್ಥಿಗಳಿಗೆ ಮತ್ತು ರೋಗಿಗಳ ಆರೈಕೆಯಲ್ಲಿ ತೊಡಗಿರುವವರಿಗೂ ಅನ್ವಯ. ಅಲ್ಲಿ ಹೆಚ್ಚುವರಿ ಪೂರಕ ಪಾವತಿಗೂ ಅವಕಾಶವಿದೆ.



**ಚೀನಾ :** ಈ ರಾಷ್ಟ್ರದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳನ್ನು ಪ್ರಾಂತೀಯ ಮಟ್ಟದಲ್ಲಿ ಏಕೀಕೃತಗೊಳಿಸಲಾಗಿದೆ. ಕೇಂದ್ರ ಸರ್ಕಾರ ನಿಯಮಗಳನ್ನು ಹೊರಡಿಸಿದರೆ, ಸ್ಥಳೀಯ ಸರ್ಕಾರಗಳು ಅದರ ಆಡಳಿತ ಮತ್ತು ಅನುಷ್ಠಾನವನ್ನು ನಿರ್ಧರಿಸುತ್ತವೆ. ಕಳೆದ ನಾಲ್ಕು ದಶಕಗಳಲ್ಲಿ ಯೋಜನೆಗಳಲ್ಲಿ ಮಹತ್ವದ ಬದಲಾವಣೆಗಳಾಗಿವೆ. ಹಲವು ಪ್ರಾಂತ್ಯಗಳಲ್ಲಿ ಹಲವು ಬಗೆಯ ಯೋಜನೆಗಳಿವೆ. ಕೆಲವು ಉದ್ಯೋಗಿಗಳು ಮತ್ತು ಉದ್ಯೋಗ ಒದಗಿಸುತ್ತಿರುವ ಸಂಸ್ಥೆಗಳ ದೇಣಿಗೆಯಿಂದಾಗಿ ನಡೆಯುತ್ತಿದ್ದರೆ, ಇನ್ನು ಕೆಲವು ಕಂಪನಿಗಳೇ ನೀಡುವ ಹಣದಿಂದ ನಡೆಯುತ್ತಿವೆ. ಈ ಎಲ್ಲ ವಿಮಾ ಯೋಜನೆಗಳಿಗೆ ಮಿತಿ ಅಳವಡಿಸಲಾಗಿದೆ. ವ್ಯಕ್ತಿಗಳ ಹಿಂದಿನ ವರ್ಷದ ಆದಾಯವನ್ನು ಆಧರಿಸಿ ಮಿತಿ ಹೇರಲಾಗಿದೆ. ಅವರು ಸಾಮಾಜಿಕ ಭದ್ರತೆಗೆ ನೀಡುವ ವಂತಿಗೆಗೂ ಮಿತಿ ಇರುತ್ತದೆ.



**ಕ್ಯೂಬಾ :** ಕ್ಯೂಬಾದಲ್ಲಿ ಸಾಮಾಜಿಕ ಭದ್ರತಾ ವ್ಯವಸ್ಥೆ ಬಹುತೇಕ ಏಕರೂಪವಾಗಿದ್ದು, ಅದರ ಆರ್ಥಿಕ ಹೊರೆಯನ್ನು ಬಹುಪಾಲು ಸರ್ಕಾರವೇ ಭರಿಸುತ್ತದೆ. ಹಲವು ಅಭಿವೃದ್ಧಿ ರಾಷ್ಟ್ರಗಳಿಗೆ ಹೋಲಿಸಿದರೆ, ಇಲ್ಲಿನ ಸಾಮಾಜಿಕ ಭದ್ರತಾ ವ್ಯವಸ್ಥೆಯ ವ್ಯಾಪ್ತಿ ವಿಸ್ತಾರವಾದುದು. ಕ್ಯೂಬಾದಲ್ಲಿ ಸಮಗ್ರ ಉಚಿತ ಆರೋಗ್ಯ ರಕ್ಷಣಾ ವ್ಯವಸ್ಥೆ ಇದೆ. ಅಲ್ಲಿ ಇತರೆ ರಾಷ್ಟ್ರಗಳಿಗೆ ಹೋಲಿಸಿದರೆ, ಕಡಿಮೆ ವೆಚ್ಚದಲ್ಲಿ ಅತಿ ಶೀಘ್ರವೇ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಗುರಿ ಸಾಧನೆ ಮಾಡಲಾಗಿದೆ.



**ಜಪಾನ್ :** ಜಪಾನ್‌ನಲ್ಲೂ ಸಹ ಸಾಮಾಜಿಕ ಭದ್ರತಾ ವ್ಯವಸ್ಥೆ ಬಹುತೇಕ ಏಕರೂಪವಾಗಿದೆ. ಅಲ್ಲಿ ಪ್ರತಿಯೊಬ್ಬರೂ ಈ ವ್ಯವಸ್ಥೆಯಲ್ಲಿ ತಾತ್ವಿಕವಾಗಿ ಭಾಗವಹಿಸುವುದು ಕಡ್ಡಾಯವಾಗಿದೆ. ಜೊತೆಗೆ ಜೀವನವೆಚ್ಚ, ಗೃಹವೆಚ್ಚ, ಕಡ್ಡಾಯ ಶಿಕ್ಷಣ ಮತ್ತು ಕೌಶಲ್ಯ ತರಬೇತಿ ವೆಚ್ಚ, ಆರೋಗ್ಯ ವಿಮೆ ಮತ್ತು ಅಂತ್ಯಸಂಸ್ಕಾರ ವೆಚ್ಚ ಮತ್ತಿತರ ಮೂಲ ವೆಚ್ಚಗಳಿಗೆ ಸಾರ್ವಜನಿಕ ಸಹಾಯ ಪಡೆಯುವ ಕಾರ್ಯಕ್ರಮಗಳಿವೆ. ಈ ವ್ಯವಸ್ಥೆ ಹಲವು ವರ್ಷಗಳಲ್ಲಿ ಸಾಕಷ್ಟು ಗಮನಾರ್ಹ ರೀತಿಯಲ್ಲಿ ಬೆಳವಣಿಗೆ ಹೊಂದಿದ್ದು, ಹಲವು ರಾಷ್ಟ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ವೃದ್ಧರ ಜನಸಂಖ್ಯೆ ಜಾಸ್ತಿ ಇರುವ ದೇಶಗಳಲ್ಲಿ ಇದನ್ನು ಉದಾಹರಿಸಲಾಗುತ್ತಿದೆ.



**ಫಿಲಿಪೈನ್ಸ್ :** ಫಿಲಿಪೈನ್ಸ್‌ನಲ್ಲಿ ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಸರ್ಕಾರ ನಡೆಸುತ್ತಿದ್ದು, ಅಲ್ಲಿ ಖಾಸಗಿ, ವೃತ್ತಿಪರ ಮತ್ತು ಅಸಂಘಟಿತ ವಲಯದ ಕಾರ್ಮಿಕರಿಗೆ ಸಾಮಾಜಿಕ ವಿಮಾ ಕಾರ್ಯಕ್ರಮ ಜಾರಿಗೊಳಿಸಲಾಗಿದೆ. ಈ ಸಾಮಾಜಿಕ ಭದ್ರತಾ ವ್ಯವಸ್ಥೆಯಡಿ ಮೂರು ಪ್ರಮುಖ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುತ್ತಿದೆ. ಅವುಗಳೆಂದರೆ ಎ) ಸಾಮಾಜಿಕ ಭದ್ರತಾ ಕಾರ್ಯಕ್ರಮ ಬಿ) ವೈದ್ಯಕೀಯ ರಕ್ಷಣೆ ಕಾರ್ಯಕ್ರಮ ಮತ್ತು ಸಿ) ನೌಕರರ ಪರಿಹಾರ ಕಾರ್ಯಕ್ರಮ. ಸರ್ಕಾರಿ ನೌಕರರನ್ನು ಪ್ರತ್ಯೇಕ ನಿಧಿ ಸರ್ಕಾರಿ ಸೇವೆ ವಿಮಾ ವ್ಯವಸ್ಥೆ (ಜಿಎಸ್‌ಐಎಸ್) ವ್ಯಾಪ್ತಿಗೆ ಒಳಪಡಿಸಲಾಗಿದೆ.

ಖಾಸಗಿ ವಿಮಾ ಯೋಜನೆಗಳು ಮತ್ತು ಪಿಂಚಣಿ ನಿಧಿಗಳಿಂದ ಹಣಕಾಸಿನ ನೆರವು ಒದಗಿಸಲಾಗುತ್ತದೆ ಮತ್ತು ಈ ಯೋಜನೆಗಳ ಬಗ್ಗೆ ಫಿನಿಶ್ ಸೆಂಟರ್ ಫಾರ್ ಫೈನಾನ್ಸ್ ನಿಗಾವಹಿಸುತ್ತದೆ. ಈ ಸಾಮಾಜಿಕ ವಿಮಾ ಕಾರ್ಯಕ್ರಮಗಳಲ್ಲಿ ಕಲ್ಯಾಣ ಅಂಶಗಳು ಸೇರಿವೆ. ಫಿನ್‌ಲ್ಯಾಂಡ್‌ನಲ್ಲಿ ಸಾಮಾಜಿಕ ಭದ್ರತಾ ಕಾರ್ಯತಂತ್ರಗಳ ಭಾಗವಾಗಿ ಸಮಗ್ರ ಆರೋಗ್ಯ ರಕ್ಷಣಾ ವ್ಯವಸ್ಥೆಯೂ ಇದೆ. ವಿಶ್ವದ ನಾನಾ ಭಾಗಗಳಲ್ಲಿನ ಐದು ರಾಷ್ಟ್ರಗಳಲ್ಲಿ ಚಾಲ್ತಿಯಲ್ಲಿರುವ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು ಮತ್ತು ಕಾರ್ಯತಂತ್ರಗಳ ವಿವರಗಳನ್ನು ಪಟ್ಟಿ–2 ರಲ್ಲಿ ಇವೆ.

ಹಲವು ರಾಷ್ಟ್ರಗಳಲ್ಲಿ ಜಾರಿಯಲ್ಲಿರುವ ಸಾಮಾಜಿಕ ಭದ್ರತಾ ವ್ಯವಸ್ಥೆಯಲ್ಲಿ ಕೆಲವು ಸಾಮಾನ್ಯ ಅಂಶಗಳಿವೆ. ಅವುಗಳನ್ನು ಈ ಮುಂದಿನಂತೆ ಪಟ್ಟಿ ಮಾಡಬಹುದು.

* ಬಹುತೇಕ ಎಲ್ಲ ರಾಷ್ಟ್ರಗಳು ವೃದ್ಧಾಪ್ಯ ಪಿಂಚಣಿ ಮತ್ತು ನಿವೃತ್ತಿ



ಪ್ರಯೋಜನಗಳನ್ನು ಸಂಘಟಿತ ವಲಯದ ಎಲ್ಲ ಉದ್ಯೋಗಿಗಳಿಗೆ ಒದಗಿಸಿವೆ ಮತ್ತು ಕನಿಷ್ಠ ವೇತನ ಮತ್ತಿತರ ಅಂಶಗಳನ್ನು ಪಾಲಿಸುತ್ತಿವೆ. ಹಲವು ರಾಷ್ಟ್ರಗಳು ಹೆಚ್ಚುವರಿ ಜನಸಂಖ್ಯೆಯನ್ನು ಸಾಮಾಜಿಕ ಭದ್ರತಾ ವ್ಯಾಪ್ತಿಗೆ ತಂದು ಅದರ ಪ್ರಯೋಜನಗಳನ್ನು ಈ ಯೋಜನೆಗಳಿಂದ ಕಲ್ಪಿಸುತ್ತಿದೆ.

* ಹೆಚ್ಚುವರಿ ಜನಸಂಖ್ಯೆಯನ್ನು ಈ ಯೋಜನೆಗಳ ವ್ಯಾಪ್ತಿಗೆ ತರುವ ಪ್ರಯತ್ನಗಳು ನಡೆದಿವೆ ಮತ್ತು ಪ್ರಸ್ತುತ ಲಭ್ಯವಿರುವ ಪ್ರಯೋಜನಗಳು ಸಮಗ್ರ ಮತ್ತು ಏಕರೂಪದ ವ್ಯವಸ್ಥೆಗಳಿಗಿಂತ ಕಡಿಮೆ ವ್ಯಾಪ್ತಿಯಲ್ಲಿವೆ.

* ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಭಾಗವಾಗಿ ಆರೋಗ್ಯ ಸೇವೆಗಳನ್ನು ಸೇರ್ಪಡೆಗೊಳಿಸುವ ಸಾಮಾನ್ಯ ಒಪ್ಪಂದ ಕಾಣಬಹುದು. ಆದರೆ ಕೆಲವೇ ಕೆಲವು ರಾಷ್ಟ್ರಗಳಲ್ಲಿ ಮಾತ್ರ ಏಕರೂಪದ ಆರೋಗ್ಯ ರಕ್ಷಣಾ ಕಾರ್ಯತಂತ್ರ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಗತಿ ಸಾಧಿಸಿವೆ.

* ಬಹುತೇಕ ರಾಷ್ಟ್ರಗಳಲ್ಲಿ ಈ ನಿಟ್ಟಿನಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದು, ಆ ರಾಷ್ಟ್ರಗಳು ಹಲವು ಯೋಜನೆಗಳನ್ನು ಏಕರೂಪ ವ್ಯವಸ್ಥೆಗೆ ತಂದು ಜಾರಿಗೊಳಿಸುತ್ತಿವೆ. ಈ ವ್ಯವಸ್ಥೆಯಲ್ಲಿ ಸೇವೆಗಳನ್ನು ಖರೀದಿಸುವವರನ್ನು ಮತ್ತು ಸ್ವತಂತ್ರ ಹಾಗೂ ಸ್ವಾಯತ್ತ ಸಂಸ್ಥೆಗಳನ್ನು ಪ್ರತ್ಯೇಕಿಸಲಾಗಿದೆ. ಅವುಗಳು ಸರ್ಕಾರದ ಪರವಾಗಿ ಯೋಜನೆಗಳ ಅನುಷ್ಠಾನವನ್ನು ನಿರ್ವಹಿಸುತ್ತವೆ.

* ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಾದೇಶಿಕ ಮತ್ತು ರಾಜ್ಯಗಳು ಯೋಜನೆಗಳನ್ನು ವಿನ್ಯಾಸಗೊಳಿಸಿ, ಅವುಗಳನ್ನು ಅನುಷ್ಠಾನಗೊಳಿಸುತ್ತವೆ. ಅವುಗಳಿಗೆ ರಾಷ್ಟ್ರಮಟ್ಟದ ನೀತಿ ಮಾರ್ಗದರ್ಶನ, ನಿಯಮ ಮತ್ತು ನಿಯಂತ್ರಣಗಳ ನಡುವೆ ಸಮನ್ವಯತೆ ಸಾಧಿಸುವ ಅಗತ್ಯವಿದೆ.

* ಈ ವಿಭಾಗದಲ್ಲಿ ಹಲವು ವಿನೂತನ ಬದಲಾವಣೆಗಳು ಕಂಡುಬರುತ್ತಿವೆ. ಈ ಸೇವೆಗಳನ್ನು ಗರಿಷ್ಠ ಮಟ್ಟದಲ್ಲಿ ನೀಡಲು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನವನ್ನು ಉತ್ತಮ, ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಅದರ ಜತೆಗೆ ಅಗತ್ಯ ಸಂದರ್ಭಗಳಲ್ಲಿ ಸೂಕ್ತ ಶಾಸನಾತ್ಮಕ ಮತ್ತು ಕಾನೂನುಗಳ ಮೂಲಕ ನೆರವು ನೀಡಲಾಗುತ್ತದೆ.

**ಭಾರತ ಮುನ್ನೆಡೆಯಲು ಸಪ್ತ ಮಾರ್ಗಗಳು**

ಭಾರತ ಸ್ವಾತಂತ್ರಗಳಿಸಿ 70 ವರ್ಷಗಳಾಗಿವೆ. ಜನಸಂಖ್ಯಾ ಗಾತ್ರವನ್ನು ಗಮನಿಸಿದರೆ ದೇಶ ಯುವ ಜನಸಂಖ್ಯೆಯಿಂದ ತುಂಬಿದ್ದು, ಇಲ್ಲಿ ಅತ್ಯಂತ ವೇಗವಾಗಿ ಆರ್ಥಿಕ ಪ್ರಗತಿ ಸಾಧಿಸಲಾಗುತ್ತಿದೆ. ಜಾಗತಿಕ ಆರ್ಥಿಕ ಹಿಂಜರಿತದ ನಡುವೆಯೂ ಉತ್ತಮ ಪ್ರಗತಿ ಕಂಡುಬರುತ್ತಿದ್ದು, ಹಾಗಾಗಿ ಭಾರತದಲ್ಲಿ ಹಾಲಿ ಇರುವ ಸಾಮಾಜಿಕ ಭದ್ರತಾ ವ್ಯವಸ್ಥೆಗಳನ್ನು ಬಲವರ್ಧನೆಗೊಳಿಸಲು ಇದು ಸಕಾಲ. ಭಾರತದಲ್ಲಿನ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಒಂದು ಶಕ್ತಿ ಎಂದರೆ ಭಾರತೀಯ ಸಂವಿಧಾನದ ನಾಲ್ಕನೇ ಭಾಗದ 41 ಮತ್ತು 42ನೇ ಕಲಂನಲ್ಲಿ ದುಡಿಯುವ ಹಕ್ಕು, ಶಿಕ್ಷಣ, ನಿರುದ್ಯೋಗಿಗಳಿಗೆ ಸಹಾಯ, ವೃದ್ಧಾಪ್ಯ ಕಾಯಿಲೆ ಮತ್ತು ವಿಕಲಚೇತನರಿಗೆ ನೆರವು ಅಂಶಗಳನ್ನು ಪ್ರಸ್ತಾಪಿಸಿರುವುದು. ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ



ವ್ಯಾಪ್ತಿಯನ್ನು ವಿಸ್ತರಿಸಲು ಈ ಕಾನೂನು ಚೌಕಟ್ಟು ಅತ್ಯಂತ ದೊಡ್ಡ ಕೊಡುಗೆಯಾಗಿದೆ. ಹಲವು ವಿಭಾಗಗಳಲ್ಲಿ ಸಾಮಾಜಿಕ ಭದ್ರತಾ ಅಂಶಗಳನ್ನು ಮೊದಲೇ ಆರಂಭಿಸಿದ ಕೀರ್ತಿ ಭಾರತಕ್ಕೆ ಇದೆ. ದೇಶದಲ್ಲಿ 1923ರಲ್ಲೇ ದುಡಿಯುವ ವರ್ಗದ ಪರಿಹಾರ ಕಾಯ್ದೆ ಜಾರಿಗೊಳಿಸಲಾಗಿತ್ತು. ಅಲ್ಲಿಂದೀಚೆಗೆ ಹೆಚ್ಚುವರಿ ನಿಗದಿತ ಜನಸಂಖ್ಯೆಯನ್ನು ಅದರ ವ್ಯಾಪ್ತಿಗೆ ತಂದು ಸಾಕಷ್ಟು ಬದಲಾವಣೆಗಳನ್ನು ಮಾಡಲಾಗಿದೆ. ಒಟ್ಟಾರೆ ಸ್ಥಿತಿಗತಿ ಕಾಗದದ ಮೇಲೆ ನೋಡುವುದಾದರೆ ಗಮನಾರ್ಹವಾಗಿರುವುದು ಕಂಡುಬರುತ್ತದೆ. ಆದರೆ ಭಾರತದಲ್ಲಿ ಸವಾಲುಗಳಿವೆ (ರಾಜ್ಯಗಳಲ್ಲಿ) ದೇಶದ ಇತರೆಡೆಗಳಲ್ಲಿರುವಂತೆ

**ಪಟ್ಟಿ 3 : ಸಾಮಾಜಿಕ ಭದ್ರತೆಯಲ್ಲಿ ಜಾಗತಿಕ ಅನುಷ್ಠಾನ ಅನುಭವದಿಂದ ಭಾರತ ಮುನ್ನಡೆಯಬೇಕಾಗಿರುವ 7 ಮಾರ್ಗಗಳು**

1. ಏಕರೂಪದ ಸೌಲಭ್ಯ ಒದಗಿಸಿ ಕೊಡಲು ಮಾರ್ಗಸೂಚಿಯನ್ನು ಅಭಿವೃದ್ಧಿಗೊಳಿಸಿ ಅದನ್ನು ಜಾರಿಗೆ ತರಬೇಕು.
2. ಸ್ವಾಯತ್ತ ರಾಷ್ಟ್ರೀಯ ಸಾಮಾಜಿಕ ಭದ್ರತಾ ಸಂಸ್ಥೆಗಳನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸುವುದು.
3. ವಿನೂತನ ಹಣಕಾಸು ಕಾರ್ಯತಂತ್ರಗಳ ಮೂಲಕ ಸಾಮಾಜಿಕ ವಲಯಕ್ಕೆ ಬಂಡವಾಳ ಹೂಡಿಕೆ ಯೋಜನೆಯನ್ನು ಅಭಿವೃದ್ಧಿಗೊಳಿಸುವುದು.
4. ಸಾರ್ವಜನಿಕ ಜಾಗೃತಿ ಮತ್ತು ಸಹಭಾಗಿತ್ವದ ಬಗ್ಗೆ ಒಗ್ಗಟ್ಟು ಮೂಡಿಸಲು ಗಮನ ಹರಿಸುವುದು.
5. ಸಮಗ್ರ ಆರೋಗ್ಯ ರಕ್ಷಣೆ ಸೇವೆಯನ್ನು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಒಂದು ಭಾಗವಾಗಿ ಪರಿಗಣಿಸುವುದು.
6. ರಾಜ್ಯ ಸರ್ಕಾರಗಳ ಕ್ರಿಯಾಶೀಲ ನಾಯಕತ್ವ.
7. ಶಾಸನಾತ್ಮಕ ಹಾಗೂ ಕಾನೂನು ಸುಧಾರಣೆಗಳ ಬಗ್ಗೆ ಪರಿಶೀಲಿಸುವುದು.

ಕಾರ್ಯಕ್ರಮಗಳಲ್ಲಿ ಗೊಂದಲ, ಆಂಶಿಕ ಅನುಷ್ಠಾನ, ಯೋಜನೆಗಳು ನಿರೀಕ್ಷಿತ ಮಟ್ಟದಲ್ಲಿ ತಲುಪದಿರುವುದು – ಮೊದಲಾಗಿ ಭಾರತದಲ್ಲೂ ಸವಾಲುಗಳು ಇವೆ. ಈ ನಿಟ್ಟಿನಲ್ಲಿ ನೋಡುವುದಾದರೆ ಭಾರತ ತನ್ನ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ವ್ಯಾಪ್ತಿ ಮತ್ತು ವಿಸ್ತಾರವನ್ನು ಹೆಚ್ಚಿಸಲು ಈ ಮುಂದಿನ ಏಳು ಅಂಶಗಳನ್ನು ಪಾಲಿಸಬೇಕಾಗುತ್ತದೆ. (ಪಟ್ಟಿ–3)

**ಏಕರೂಪಗೊಳಿಸಲು ಮಾರ್ಗ ಸೂಚಿ ಅಭಿವೃದ್ಧಿ ಮತ್ತು ಜಾರಿ :** ಅಂತಾರಾಷ್ಟ್ರೀಯ ಅನುಭವಗಳ ಸಲಹೆ ಎಂದರೆ ನಿಗದಿತ ಫಲಾನುಭವಿಗಳನ್ನು ಯೋಜನೆ ವ್ಯಾಪ್ತಿಗೆ ಸೇರಿಸಲು ವ್ಯವಸ್ಥಿತ ಕಾರ್ಯತಂತ್ರ ರೂಪಿಸಬೇಕು. ಇಲ್ಲವಾದರೆ ಫಲಾನುಭವಿಗಳು ಹೊರಗುಳಿಯುತ್ತಾರೆ. ಸಾಮಾಜಿಕ ಕಾರ್ಯಕ್ರಮಗಳ ಆಳ ಮತ್ತು ಅಗಲವನ್ನು ವಿಸ್ತರಿಸಲು ಮಾರ್ಗಸೂಚಿ ಸಿದ್ಧಪಡಿಸಿ ಅದಕ್ಕೆ ಗರಿಷ್ಠ ಮಟ್ಟದಲ್ಲಿ ಅಗತ್ಯ ಕಾನೂನು ಬೆಂಬಲ ನೀಡಲು ಒಪ್ಪಿಕೊಳ್ಳಬೇಕು. ಆ ಮಾರ್ಗಸೂಚಿಯನ್ನು ಅಧಿಕೃತವಾಗಿ ಸರ್ಕಾರ ಬಿಡುಗಡೆ ಮಾಡಿ, ಅದಕ್ಕೆ ಸಾರ್ವಜನಿಕ ಉತ್ತರದಾಯಿತ್ವ ಒದಗಿಸಬೇಕು. ಅದಕ್ಕೆ ಪೂರಕವಾಗಿ ಸಾಂಸ್ಥಿಕ ಕಾರ್ಯತಂತ್ರಗಳನ್ನು ಸ್ಥಾಪಿಸಿ, ಜಾರಿಯಲ್ಲಿರುವ ಹಲವು ಯೋಜನೆಗಳನ್ನು ಏಕರೂಪಗೊಳಿಸಿ, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಇತ್ತೀಚಿನ ಕೆಲವು ಕಾರ್ಯಕ್ರಮಗಳು ಉದಾಹರಣೆಗೆ ಆಧಾರ್ ಕಾರ್ಡ್, ಜನ್–ಧನ್ ಯೋಜನಾ ಮತ್ತಿತರ ಕಾರ್ಯಕ್ರಮಗಳು ಇದಕ್ಕೆ ಉತ್ತಮ ವೇದಿಕೆ ಒದಗಿಸಿಕೊಡುತ್ತವೆ. ಅದಕ್ಕಾಗಿ ಸೂಕ್ತ ಮಾರ್ಗಸೂಚಿ ರೂಪಿಸಿ, ಅವುಗಳ ಅನುಷ್ಠಾನಕ್ಕೆ ಅಗತ್ಯ ಚೌಕಟ್ಟು ರೂಪಿಸಬೇಕಾಗಿದೆ.

**ಸ್ವಾಯತ್ತ ರಾಷ್ಟ್ರೀಯ ಸಾಮಾಜಿಕ ಭದ್ರತಾ ಸಂಸ್ಥೆ ಸ್ಥಾಪನೆ :** ಬಹುತೇಕ ರಾಷ್ಟ್ರಗಳು ಸಾಮಾಜಿಕ ಭದ್ರತಾ ಪ್ರಯೋಜನಗಳನ್ನು ಮತ್ತು ಯೋಜನೆಗಳ ಅನುಷ್ಠಾನದ ಮೇಲೆ ನಿಗಾವಹಿಸಲು ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿದೆ. ಭಾರತದಲ್ಲಿ ಹಲವು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಅನುಷ್ಠಾನ ಕಳಪೆ ಮಟ್ಟದಲ್ಲಿದೆ. ಆದ್ದರಿಂದ ಆ ಯೋಜನೆಗಳ ಸಮರ್ಪಕ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಒಂದು ಸ್ವಾಯತ್ತ ಸಂಸ್ಥೆಯನ್ನು ರಚಿಸುವ ಅಗತ್ಯವಿದೆ. ಇದರಿಂದಾಗಿ ಸರ್ಕಾರ ನೀತಿಯನ್ನು ರೂಪಿಸಿ, ಅದನ್ನು ಆ ಸಂಸ್ಥೆಯ ಮೂಲಕ ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದಾಗಿದೆ.

**ವಿನೂತನ ಹಣಕಾಸು ಕಾರ್ಯತಂತ್ರಗಳ ಮೂಲಕ ಸಾಮಾಜಿಕ ಭದ್ರತಾ ಹೂಡಿಕೆ ಯೋಜನೆ ರೂಪಿಸುವುದು :** ಸಮಗ್ರ ಮತ್ತು ಏಕರೂಪದ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ದೇಶ ಅತ್ಯಂತ ಶ್ರೀಮಂತವಾಗಿರಬೇಕು ಎಂಬುದರ ಅಗತ್ಯವಿಲ್ಲ ಎಂಬುದು ಅನುಭವಗಳಿಂದ ವೇದ್ಯವಾಗಿದೆ. ಬಂಡವಾಳ ಹೂಡಿಕೆ ಇಲ್ಲದೆ ಸಾಮಾಜಿಕ





ಭದ್ರತಾ ಯೋಜನೆಗಳನ್ನು ಆರ್ಥಿಕ ಪ್ರಗತಿಗೆ ಪೂರಕವಾಗಿ ಬಳಸಿಕೊಳ್ಳಬಹುದು. ಬದಲಾಗುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಅಗತ್ಯ ಸಂಪನ್ಮೂಲಗಳನ್ನು ಗಮನದಲ್ಲಿರಿಸಿಕೊಂಡು ಮುಂದಿನ 15 ರಿಂದ 20 ವರ್ಷಗಳಿಗೆ ಸಾಮಾಜಿಕ ಭದ್ರತಾ ಹೂಡಿಕೆ ಯೋಜನೆಗಳನ್ನು ರೂಪಿಸಿದರೆ ಅವುಗಳಿಂದ ಸಾಕಷ್ಟು ಪ್ರಯೋಜನವಾಗಲಿದೆ. ಈ ಯೋಜನೆಗಳಿಗೆ ವಿನೂತನ ಕಾರ್ಯತಂತ್ರಗಳ ಮೂಲಕ ಬಂಡವಾಳ ಹೂಡಿಕೆ ಮಾಡಬಹುದು ಮತ್ತು ಅವುಗಳಿಂದಾಗಿ ಯೋಜನೆಗಳಲ್ಲಿ ಸ್ಥಿರತೆ ಕಾಯ್ದುಕೊಳ್ಳಬಹುದಾಗಿದೆ. ಅದಕ್ಕಾಗಿ ಅಗತ್ಯಬಿದ್ದರೆ ಸಾಂವಿಧಾನಿಕ ಹಾಗೂ ಕಾನೂನು ತಿದ್ದುಪಡಿಗಳನ್ನು ಮಾಡಿ, ನಿಗದಿತ ಅಥವಾ ಜನಸಂಖ್ಯೆ ಇಂದ ಕಡ್ಡಾಯ ವಂತಿಗೆ ಪಡೆಯಬಹುದು.

**ಏಕತೆಗೆ ಒತ್ತು, ಜೊತೆಗೆ ಸಾರ್ವಜನಿಕ ಜಾಗೃತಿ ಮತ್ತು ಸಹಭಾಗಿತ್ವಕ್ಕೆ ಗಮನ:** ಸಾಮಾಜಿಕ ಭದ್ರತಾ ಯೋಜನೆಗಳ ಅನುಷ್ಠಾನದಲ್ಲಿ ಏಕತೆ ಪ್ರಮುಖ ಸಿದ್ಧಾಂತವಾಗಿದೆ. ಇಲ್ಲಿ ಹಲವರು ಸಮಾಜದ ದುರ್ಬಲ ಹಾಗೂ ಹಿಂದುಳಿದ ವರ್ಗದವರ ಅಭಿವೃದ್ಧಿಗೊಳಿಸುವ ಬದ್ಧತೆಗೆ ಮುಂದಾಗುತ್ತಾರೆ. ಶ್ರೀಮಂತರು ಬಡವರಿಗಾಗಿ, ಶಿಕ್ಷಿತರು ಅಶಿಕ್ಷಿತರಿಗಾಗಿ ಸಂಘಟಿತ ವಲಯದ ಉದ್ಯೋಗಿಗಳು ನಿರುದ್ಯೋಗಿಗಳಿಗಾಗಿ ಮತ್ತು ಅಸಂಘಟಿತ ವಲಯದವರಿಗೆ ನೆರವು ನೀಡಲು ಮುಂದಾಗುತ್ತಾರೆ. ಆ ಸಮುದಾಯವನ್ನು ಸಮರ್ಪಕವಾಗಿ ಬಳಸಿಕೊಂಡು ಐಕ್ಯತೆಯಿಂದ ಅವರಲ್ಲಿ ಜಾಗೃತಿ ಮೂಡಿಸಿ, ಲಭ್ಯವಿರುವ ಯೋಜನೆಗಳನ್ನು ಸಮರ್ಪಕವಾಗಿ ಜಾರಿಗೊಳಿಸಬಹುದು.

**ಏಕರೂಪದ ಆರೋಗ್ಯ ರಕ್ಷಣೆ :** ಭಾರತದಲ್ಲಿ ವಾರ್ಷಿಕ 63 ದಶಲಕ್ಷ ಜನ ಬಡ ಬಡತನಕ್ಕೆ ಸೇರ್ಪಡೆಯಾಗುತ್ತಾರೆ, ಕಾರಣ

ಅವರಿಗೆ ತಮ್ಮ ಜೇಬಿನಿಂದ ಆರೋಗ್ಯ ರಕ್ಷಣೆಗೆ ಖರ್ಚು ಮಾಡಲು ಹಣ ಇಲ್ಲದಿರುವುದು. ಇದರಿಂದಾಗಿ ಮೊದಲೇ ಬಡತನರೇಖೆಗಿಂತ ಕೆಳಗಿರುವ ಜನರು ಮತ್ತು ಕಡುಬಡತನಕ್ಕೆ ನೂಕಲ್ಪಡುತ್ತಾರೆ. ಇದನ್ನೇ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಆರೋಗ್ಯ ಸಂಬಂಧಿ ವೆಚ್ಚ ಮತ್ತು ಸಮಗ್ರ ಆರೋಗ್ಯ ರಕ್ಷಣೆ ಕೊರತೆಯಿಂದಾಗಿ ಸಾಮಾಜಿಕ ಭದ್ರತಾ ಪ್ರಯತ್ನಗಳು ವಿಫಲವಾಗುತ್ತಿದ್ದು, ದೇಶದಲ್ಲಿ ಬಡತನ ನಿರ್ಮೂಲನೆ ಗುರಿ ಪ್ರಯತ್ನಗಳು ಸಫಲವಾಗುತ್ತಿಲ್ಲ. ಸರ್ಕಾರ ಸಾರ್ವಜನಿಕ ಆರೋಗ್ಯದ ಮೇಲೆ ಮಾಡುತ್ತಿರುವ ಖರ್ಚು ಸಹ ಕಡಿಮೆ ಇದೆ. ಸರ್ಕಾರದ ಒಟ್ಟಾರೆ ಆರೋಗ್ಯ ವೆಚ್ಚ ಶೇಕಡ 30ರಷ್ಟಿದೆ. ಇದು ವಿಶ್ವದಲ್ಲೇ ಅತಿ ಕಡಿಮೆ. ಆದರೆ ಆರೋಗ್ಯ ರಕ್ಷಣೆಗೆ ಜನರು ಸ್ವಂತ ಜೇಬಿನಿಂದ ಖರ್ಚು ಮಾಡುತ್ತಿರುವ ವೆಚ್ಚ ಶೇಕಡ 65 ರಷ್ಟಿದ್ದು, ಇದು ವಿಶ್ವದಲ್ಲೇ ಅಧಿಕ. ಸರ್ಕಾರ ಆರೋಗ್ಯದ ಮೇಲೆ ಹೆಚ್ಚಿನ ಹಣ ಹೂಡಿಕೆ ಮಾಡಿದರೆ ಜನರು ಕಡಿಮೆ ಖರ್ಚು ಮಾಡಬಹುದು ಮತ್ತು ಅದು ಬಡತನ ನಿರ್ಮೂಲನೆ ಸೇರಿದಂತೆ ಹಲವು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಭಾಗವಾಗಲಿದೆ. ಅದರ ಜತೆಗೆ ಆರೋಗ್ಯದ ಮೇಲಿನ ಬಂಡವಾಳ ಹೂಡಿಕೆಯಿಂದ ಜಿಡಿಪಿ ಮತ್ತು ಆರ್ಥಿಕ ಪ್ರಗತಿಗೆ ಹೆಚ್ಚಿನ ಲಾಭವಾಗಲಿದೆ.

ಬಹುತೇಕ ರಾಷ್ಟ್ರಗಳು ಏಕರೂಪ ಆರೋಗ್ಯ ರಕ್ಷಣಾ ಮಾರ್ಗವನ್ನು ಆಯ್ದುಕೊಂಡಿದ್ದು, ಆ ಮೂಲಕ ಸಾಮಾಜಿಕ ಭದ್ರತಾ ವ್ಯವಸ್ಥೆಯ ಭಾಗವಾಗಿ ಸಾಮಾಜಿಕ ಆರೋಗ್ಯ ವಿಮಾ ಕಾರ್ಯತಂತ್ರಗಳನ್ನು ಅನುಸರಿಸುತ್ತಿವೆ. ಭಾರತ ಮತ್ತು ದೇಶದ ಇತರ ರಾಷ್ಟ್ರಗಳು ಈ ನಿಟ್ಟಿನಲ್ಲಿ ಈಗಷ್ಟೆ ಆಸಕ್ತಿ ತೋರುತ್ತಿವೆ. ಸರ್ಕಾರ ಆರೋಗ್ಯದ ಮೇಲೆ ಹೆಚ್ಚಿನ ಹಣ ಹೂಡಿಕೆ ಮಾಡಿ, ಸಾಮಾಜಿಕ ಆರೋಗ್ಯ ವಿಮಾ ವ್ಯವಸ್ಥೆಯ ಕಾರ್ಯತಂತ್ರಗಳನ್ನು ಅಭಿವೃದ್ಧಿಗೊಳಿಸಬೇಕಿದೆ. ಅದೇ ಉದ್ದೇಶದಿಂದ ಸರ್ಕಾರ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ(ಆರ್‌ಎಸ್‌ಬಿವೈ) ಜಾರಿಗೊಳಿಸಿದೆ. ಆದರೂ ದೇಶದಲ್ಲಿ ಆರೋಗ್ಯ ರಕ್ಷಣೆಗಾಗಿ ಒಟ್ಟಾರೆ ಸರ್ಕಾರ ಮಾಡುತ್ತಿರುವ ವೆಚ್ಚ ಶೇಕಡ 1 ಕ್ಕಿಂತಲೂ ಕಡಿಮೆ. ಹಾಗಾಗಿಯೇ ಈ ಯೋಜನೆಯ ಪರಿಣಾಮ ಸೀಮಿತವಾದುದು. ಉದ್ದೇಶಿತ




ರಾಷ್ಟ್ರೀಯ ಆರೋಗ್ಯ ರಕ್ಷಣಾ ಯೋಜನೆ ಜಾರಿಗೊಳಿಸಲು ಇದು ಸಕಾಲ. ಅದಕ್ಕೆ ಸರ್ಕಾರ ಅಗತ್ಯ ಹಣಕಾಸಿನ ನೆರವನ್ನು ಒದಗಿಸಿಕೊಡಬೇಕಿದೆ. ಕೇಂದ್ರ ಸರ್ಕಾರ ಇತ್ತೀಚೆಗೆ ಬಿಡುಗಡೆ ಮಾಡಿರುವ ರಾಷ್ಟ್ರೀಯ ಆರೋಗ್ಯ ನೀತಿ–2017 ದೇಶದಲ್ಲಿ ಏಕರೂಪದ ಆರೋಗ್ಯ ರಕ್ಷಣಾ ಸೇವೆ ಒದಗಿಸಲು ಸಹಾಯಕವಾಗಲಿದೆ.

**ರಾಜ್ಯ ಸರ್ಕಾರಗಳ ಕ್ರಿಯಾಶೀಲ ನಾಯಕತ್ವ :** ಭಾರತದಂತಹ ಒಕ್ಕೂಟ ವ್ಯವಸ್ಥೆಯಲ್ಲಿ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ರಾಜ್ಯ ಸರ್ಕಾರಗಳು ಅತ್ಯಂತ ಮಹತ್ವದ ಪಾತ್ರವಹಿಸಲಿವೆ. ಇದರಿಂದಾಗಿ ಹಲವು ಸರಳ ಹಾಗೂ ವಿನೂತನ ಮಾರ್ಗಗಳ ಮೂಲಕ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಬಹುದಾಗಿದೆ. ಕೇಂದ್ರ ಸರ್ಕಾರದಿಂದ ಲಭ್ಯವಾಗುವ ಹಣಕಾಸು ಮತ್ತು ಆರ್ಥಿಕ ಸಂಪನ್ಮೂಲಗಳು ಸೀಮಿತವಾಗಿದ್ದರೂ, ರಾಜ್ಯಗಳಲ್ಲಿನ ಬದ್ಧತೆ ಮತ್ತು ದೂರದೃಷ್ಟಿ ಹೊಂದಿರುವ ಅಗ್ರ ರಾಜಕೀಯ ನಾಯಕರು ಆ ಯೋಜನೆಗಳನ್ನು ಹೇಗೆ ಅನುಷ್ಠಾನಗೊಳಿಸುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ದೇಶದ ಹಲವು ರಾಜ್ಯಗಳು ಈ ನಿಟ್ಟಿನಲ್ಲಿ ದೇಶಕ್ಕೆ ಹೊಸ ದಾರಿ ಹಾಕಿಕೊಡಬಹುದು. ಸಮಗ್ರ ಆರೋಗ್ಯ ರಕ್ಷಣೆ ಮೂಲಕ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದು.

**ಶಾಸನಾತ್ಮಕ ಹಾಗೂ ಕಾನೂನು ಸುಧಾರಣೆಗಳು :** ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಲ್ಲಿ ಸ್ಥಿರತೆ ಕಾಯ್ದುಕೊಳ್ಳಬೇಕಾದರೆ ಅವುಗಳಿಗೆ ಶಾಸನಾತ್ಮಕ ಮತ್ತು ಕಾನೂನಿನ ನೆರವು ಅಗತ್ಯ. ಅದೇ ವೇಳೆ ತೆರಿಗೆ ಆಧರಿತ ಹಣಕಾಸು ಉಳ್ಳವರಿಂದ ಕಡ್ಡಾಯ ದೇಣಿಗೆ ಪಡೆಯಲು ಅವಕಾಶ, ಕಾರ್ಯಕ್ರಮಗಳ ಅಂಶಗಳ ಪರಿಣಾಮಕಾರಿ ನಿರ್ವಹಣೆ ಮಾಡಬೇಕಿದೆ. ಇಲ್ಲವಾದರೆ ಸ್ಥಿರತೆ ಕಾಯ್ದುಕೊಳ್ಳುವುದು ದೊಡ್ಡ ಸವಾಲಾಗಲಿದೆ. ಅದಕ್ಕೆ ಶಾಸನಾತ್ಮಕ ಮತ್ತು ಕಾನೂನಿನ ಅಂಶಗಳ ಬೆಂಬಲವಿದ್ದು, ಅಗತ್ಯಬಿದ್ದರೆ ಸಾಂವಿಧಾನಿಕ ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ. ಈ ಪ್ರಕ್ರಿಯೆಗೆ ವಿಷಯ ಪರಿಣಿತರು, ಖ್ಯಾತ ಶಿಕ್ಷಣ ತಜ್ಞರು ಮತ್ತು ನೀತಿ ನಿರೂಪಣಾ ಸಂಸ್ಥೆಗಳ ಮಾರ್ಗದರ್ಶನ ಅಗತ್ಯವಿದೆ.

**ಉಪಸಂಹಾರ :** ಕಳೆದ ಕೆಲವು ದಶಕಗಳಿಂದೀಚೆಗೆ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಾಕಷ್ಟು ಬೆಳವಣಿಗೆಯಾಗಿದೆ. ಹಲವು ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯ ಭಾಗವಾಗಿರುವ ಈ ಯೋಜನೆಗಳ ಬಗ್ಗೆ ಸಾಕಷ್ಟು ಕಲಿಯಲಾಗಿದೆ. ಸಾಮಾಜಿಕ ಭದ್ರತೆ ಎನ್ನುವುದು ಭಾರತೀಯ ಸಂವಿಧಾನದ ಒಂದು ಭಾಗವಾಗಿದ್ದು, ಭಾರತದಲ್ಲಿನ ಆಡಳಿತಾರೂಢ ಸರ್ಕಾರಗಳು ಅದನ್ನು ನಾನಾ ವ್ಯಾಪ್ತಿಯಲ್ಲಿ ಆದ್ಯತೆಯನ್ನಾಗಿ ಮಾಡಿಕೊಂಡಿವೆ. ಆದರೂ, ಈ ಯೋಜನೆಗಳು ಸೀಮಿತ ವ್ಯಾಪ್ತಿಗೆ ಮಾತ್ರ ತಲುಪುತ್ತಿವೆ ಮತ್ತು ಅದರ ಪರಿಣಾಮಗಳು ಕೂಡ ಕಡಿಮೆಯೇ. ಭಾರತ ಜಾಗತಿಕ ಕಲಿಕೆಯನ್ನು ಬಳಸಿಕೊಂಡು ಏಕರೂಪದ ಮತ್ತು ಸ್ಥಿರತೆಯ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಬಹುದು. ಸಾಮಾಜಿಕ ವಲಯ ಭದ್ರತಾ ಯೋಜನೆಗಳನ್ನು ಮತ್ತು ಅವುಗಳನ್ನು ಜಾರಿಗೊಳಿಸುತ್ತಿರುವ ಸಂಸ್ಥೆಗಳನ್ನು ಒಗ್ಗೂಡಿಸುವುದು ಮತ್ತು ಈ ಯೋಜನೆಗಳಿಗೆ ಹಣಕಾಸು ನೆರವು ನೀಡುವ ಸಂಸ್ಥೆಗಳನ್ನು ಒಂದೆಡೆ ಸೇರಿಸುವುದು ಮತ್ತು ರಾಜ್ಯಗಳ ನಾಯಕತ್ವವನ್ನು ಬಳಸಿಕೊಂಡಾಗ ಮಾತ್ರ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ.

ಇದರ ಜತೆಗೆ ಏಕರೂಪದ ಆರೋಗ್ಯ ರಕ್ಷಣೆಯನ್ನು ಭಾರತದಲ್ಲಿ ಆದ್ಯತೆಯನ್ನಾಗಿ ಪರಿಗಣಿಸಬೇಕು ಮತ್ತು ಸಾಮಾಜಿಕ ಕಲ್ಯಾಣದ ಕಾರ್ಯತಂತ್ರ ಎಂದು ಭಾವಿಸಬೇಕು. ಸುಸ್ಥಿರ ಮತ್ತು ಏಕರೂಪದ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಿಗಾಗಿ ದೇಶದಲ್ಲಿ ಕ್ಷಿಪ್ರ ಹಾಗೂ ಸುಸ್ಥಿರ ಆರ್ಥಿಕ ಪ್ರಗತಿ, ಬಡತನ ನಿರ್ಮೂಲನೆ, ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆ ಮತ್ತು ಏಕರೂಪ ಆರೋಗ್ಯ ರಕ್ಷಣಾ ಸೇವೆ ಗುರಿಗಳನ್ನು ಸಾಧಿಸಲು ಸಾಧ್ಯ. ❑

**ಯೋಜನಾ – ಕನ್ನಡ**
**ಪ್ರಕಾಶನ ವಿಭಾಗ**
**ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ**

**ಮೊದಲನೆಯ ಅಂತಸ್ತು, 'ಎಫ್'ವಿಂಗ್, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು – 560 034.**
**ದೂರವಾಣಿ : 080 – 25537244. E-mail : kannada-yojana@gov.in**
**ಪ್ರಕಾಶನ ವಿಭಾಗದ ಕೆಳಕಂಡ ಕನ್ನಡ ಪುಸ್ತಕಗಳು 50% ರ ರಿಯಾಯಿತಿ ದರದಲ್ಲಿ ಮಾರಾಟಕ್ಕೆ ಲಭ್ಯ ಇವೆ.**
**(ವ್ಯಾಪಾರದ ವೇಳೆ : ಸೋಮವಾರದಿಂದ – ಶುಕ್ರವಾರ. ಬೆಳಿಗ್ಗೆ 11 ರಿಂದ ಸಂಜೆ 4)**

| ಕ್ರಮ ಸಂಖ್ಯೆ | ಶೀರ್ಷಿಕೆ | ಲೇಖಕರು | ಬೆಲೆ (ರೂ.ಗಳಲ್ಲಿ /–) |
|---|---|---|---|
| 1 | ಅಬುಲ್ ಕಲಮ್ ಆಜಾದ್ | ಅರ್ಷ ಮಸಲಾನಿ | 15.00 |
| 2 | ಬಾಲ ಪಂಚತಂತ್ರ | ಪ್ರಕಾಶನ ವಿಭಾಗ | 5.75 |
| 3 | ಬನ್ನಿ ನೋಡೋಣ ವಸ್ತು ಸಂಗ್ರಹಾಲಯಗಳ | ಹೊ. ಶ್ರೀನಿವಾಸಯ್ಯ | 14.00 |
| 4 | ರಾಷ್ಟ್ರೀಯ ಪಂಚಾಂಗ | ಪ್ರಕಾಶನ ವಿಭಾಗ | 0.40 |
| 5 | ಪ್ರಜೆಗಳು ಮತ್ತು ಸಂವಿಧಾನ | ಸುಭಾಷ್ ಸಿ. ಕಶ್ಯಪ್ | 200.00 |
| 6 | ಈ ಭಾರತ | ಶೀಲಾ ಧರ್ | 200.00 |
| 7 | ಗಾಂಧಿ ಕತೆ | ಎಸ್. ಡಿ. ಸಾವಂತ್, ಎಸ್.ಡಿ. ಬಾದಲ್ಕರ್ | 10.00 |
| 8 | ಗಣೇಶ್ ವಾಸುದೇವ ಮಾವಳಂಕರ್ | ಎಂ.ವಿ. ಕಾಮತ್ | 100.00 |
| 9 | ಮಹಾನ್ ವ್ಯಕ್ತಿಗಳು ಮಹಾನ್ ಕಾರ್ಯಗಳು | ಆರ್. ಕೆ. ಮೂರ್ತಿ | 55.00 |
| 10 | ಹೇಗಿದ್ದರು ಹೇಗಾದರು | ಸಿಸು ಸಂಗಮೇಶ | 14.00 |
| 11 | ಕಕ್ಷೆಯಲ್ಲಿ ಭಾರತ | ಮೋಹನ್ ಸುಂದರ ರಾಜನ್ | 180.00 |
| 12 | ಬಾಹ್ಯಾಕಾಶದಲ್ಲಿ ಭಾರತ | ಮೋಹನ್ ಸುಂದರ ರಾಜನ್ | 7.00 |
| 13 | ಕ್ರೀಡಾಜಗತ್ತಿನಲ್ಲಿ ಭಾರತ | ದೇವೇಂದ್ರ ಭಾರದ್ವಾಜ್ | 14.50 |
| 14 | ಭಾರತದ ಸಂಸತ್ತು | ಪ್ರಕಾಶನ ವಿಭಾಗ | 5.00 |
| 15 | ಜ್ಞಾನ ವಿಜ್ಞಾನ | ಹೆಚ್. ಆರ್. ಲೀಲಾವತಿ, ಕೆ. ಎಸ್. ರಾಮನ್ | 14.00 |
| 16 | ಕಾಡಿನ ಕಥೆಗಳು | ರಸಿಕ ಪುತ್ತಿಗೆ, ಟಿ.ಸಿ. ಪೂರ್ಣಿಮಾ | 14.00 |
| 17 | ಕರ್ನಾಟಕದ ಮಹಾ ಸಂತ ಕನಕದಾಸ | ಚೆನ್ನಪ್ಪ ಯರೆಸೀಮೆ, ಎಂ. ಬಸವರಾಜ್ | 13.00 |
| 18 | ಕ್ರಾಂತಿವೀರ ಆಜಾದ್ | ಬಾಬು ಕೃಷ್ಣಮೂರ್ತಿ | 14.00 |
| 19 | ಲೋಕಮಾನ್ಯ ಬಾಲಗಂಗಾಧರ ತಿಲಕ್ | ಎನ್.ಜಿ. ಜೋಗ್ | 13.00 |
| 20 | ಲಜಪತ್ ರಾಯ್: ಜೀವನ ಮತ್ತು ಸಾಧನೆ | ಫಿರೋಜ್ ಚಾಂದ್ | 145.00 |
| 21 | ಮದನ ಮೋಹನ ಮಾಳವೀಯ | ಸೀತಾರಾಮ್ ಚತುರ್ವೇದಿ | 60.00 |
| 22 | ಮೂವರು ಸಂತ ಕವಿಗಳು | ಡಾ. ಸಿದ್ದಯ್ಯ ಪುರಾಣಿಕ್, ಡಾ. ಪ್ರಭಾಶಂಕರ್, ವಿ. ನಾಗರಾಜ್ ರಾವ್ | 14.00 |
| 23 | ನಮ್ಮ ರಾಷ್ಟ್ರಧ್ವಜ | ಕರಮ್ ವೀರ ಸಿಂಗ್ | 110.00 |
| 24 | ಭಾರತೀಯ ಜನರ ಇತಿಹಾಸ ದರ್ಶನ | ಹೆಚ್. ಆರ್. ಘೋಷ್ | 90.00 |
| 25 | ಪೌರಾಣಿಕ ಬಾಲ ಕಥೆಗಳು | ನಿರಂಕಾರ್ ದೇವ ಸೇವಕ್ | 14.00 |
| 26 | ಪುರಾಣದ ಕಥೆಗಳು | ಬ್ರಹ್ಮ ದತ್ತ ಶರ್ಮ | 15.00 |
| 27 | ರವೀಂದ್ರನಾಥ ಟಾಗೋರ್ | ಹಿರಣ್ಮಯ್ ಬ್ಯಾನರ್ಜಿ | 20.00 |
| 28 | ನೆಹರು ಕಥೆ | ಎಸ್. ಡಿ. ಸಾವಂತ್, ಬಾದಲ್ಕರ್ | 3.50 |
| 29 | ಸ್ವಾಮಿ ವಿವೇಕಾನಂದ | ವಿ. ಕೆ. ಆರ್.ವಿ. ರಾವ್ | 16.50 |
| 30 | ವಾಲ್ಮೀಕಿ ವ್ಯಾಸ | ಕಮಲ ರತ್ನಂ, ಆರ್. ರಂಗಾಚಾರಿ | 25.00 |
| 31 | ವೀರ ದೇಶಾಭಿಮಾನಿ ಜನರಲ್ ತಿಮ್ಮಯ್ಯ | ಪ್ರೊ. ಎಲ್.ಎಸ್. ಶೇಷಗಿರಿ ರಾವ್ | 14.00 |
| 32 | ವಿಶ್ವದ ಶ್ರೇಷ್ಠ ಜಾನಪದ ಕಥೆಗಳು | ಹಿಮಾಂಶು ಜೋಶಿ | 11.00 |

# ಬಾಹ್ಯಾಕಾಶದಲ್ಲಿ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅತ್ಯಂತ ಭಾರದ ರಾಕೆಟ್ ಜಿಎಸ್‌ಎಲ್‌ವಿ ಮಾರ್ಕ್ – 3ಡಿ1 ಮೂಲಕ ಜಿಸ್ಯಾಟ್ 19 ಉಪಗ್ರಹವನ್ನು ಯಶಸ್ವಿಯಾಗಿ ಬಾಹ್ಯಾಕಾಶ ಕಕ್ಷೆಗೆ ಸೇರಿಸಿ ಹಿರಿಮೆ ಮೆರೆದಿದೆ. ಗರಿಷ್ಠ ನಾಲ್ಕು ಟನ್‌ಗಳಷ್ಟು ಭಾರದ ಉಪಗ್ರಹಗಳನ್ನು ಹೊತ್ತುಕೊಂಡು ನಭಕ್ಕೆ ಚಿಮ್ಮಬಲ್ಲ ಸಾಮರ್ಥ್ಯ-ವಿರುವ ಈ ರಾಕೆಟ್, 3,136 ಕೆ.ಜಿ. ತೂಕದ ಜಿಸ್ಯಾಟ್ – 19 ಉಪಗ್ರಹವನ್ನು ಭೂಸ್ಥಿರ ಕಕ್ಷೆಗೆ ಸೇರಿಸಿದೆ. ಆಂಧ್ರಪ್ರದೇಶದ ಶ್ರೀಹರಿ ಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ 2ನೇ ಉಡಾವಣಾ ಕಟ್ಟೆಯಿಂದ (ಲಾಂಚ್ ಪ್ಯಾಡ್) ಆಗಸಕ್ಕೆ ನೆಗೆದ ರಾಕೆಟ್, 16 ನಿಮಿಷಗಳಲ್ಲಿ ಉಪಗ್ರಹವನ್ನು ನಿಗದಿತ ಕಕ್ಷೆಯಲ್ಲಿ ಇರಿಸಿತು.



ಐತಿಹಾಸಿಕ ದಿನ : ಯಶಸ್ವಿ ಉಡಾವಣೆಯ ನಂತರ ಮಾತನಾಡಿದ ಇಸ್ರೊ ಅಧ್ಯಕ್ಷ ಶ್ರೀ ಎ.ಎಸ್. ಕಿರಣ್ ಕುಮಾರ್, 'ಇದೊಂದು ಐತಿಹಾಸಿಕ ದಿನ' ಎಂದು ಬಣ್ಣಿಸಿದರು. 'ರಾಕೆಟ್ ಅನ್ನು 2002ರಲ್ಲಿ ವಿನ್ಯಾಸಗೊಳಿಸಿದ್ದರೂ 15 ವರ್ಷಗಳ ನಂತರ ಇಸ್ರೊ ತಂಡಕ್ಕೆ ಅದನ್ನು ಯಶಸ್ವಿಯಾಗಿ ಉಡಾವಣೆ ಮಾಡಲು ಸಾಧ್ಯವಾಯಿತು' ಎಂದು ಅವರು ಹೇಳಿದರು. ಈ ಯೋಜನೆಗಾಗಿ ಹಗಲಿರುಳು ದುಡಿದ ಇಸ್ರೊ ವಿಜ್ಞಾನಿಗಳ ತಂಡವನ್ನು ಅವರು ಅಭಿನಂದಿಸಿದರು.


**ಜಿಸ್ಯಾಟ್-19ನಲ್ಲಿ ಬ್ಯಾಂಡ್ ಸಂವಹನ ಟ್ರಾನ್ಸ್‌ಪಾಂಡರ್‌ಗಳು, ಭೂಸ್ಥಿರ ವಿಕಿರಣ ಸ್ಪೆಕ್ಟ್ರೋಮೀಟರ್ (ಜಿಆರ್‌ಎಎಸ್‌ಪಿ), ಲೀಥಿಯಂ ಅಯಾನ್ ಬ್ಯಾಟರಿ, ಅತ್ಯಾಧುನಿಕ ವೈಮಾಂತರಿಕ್ಷ ತಂತ್ರಜ್ಞಾನಗಳಾದ ಚಿಕ್ಕದಾದ ಉಷ್ಣ ಕೊಳವೆ, ಫೈಬರ್ ಆಪ್ಟಿಕ್ ಗೈರೊ, ಮೈಕ್ರೊಎಲೆಕ್ಟ್ರೊ ಮೆಕ್ಯಾನಿಕಲ್ ಸಿಸ್ಟಮ್ (ಎಂಇಎಂಎಸ್) ಆ್ಯಕ್ಸೆಲೆರೊಮೀಟರ್, ಕುಬ್ಯಾಂಡ್ ಟಿಟಿಸಿ ಟ್ರಾನ್ಸ್‌ಪಾಂಡರ್‌ಗಳಿವೆ, ಈ ಉಪಗ್ರಹ ಕಾರ್ಯನಿರ್ವಹಣೆ ನಿರೀಕ್ಷಿತ ಗುರಿ 10 ವರ್ಷಗಳು.**

### ಜಿಎಸ್‌ಎಲ್‌ವಿ ಮಾರ್ಕ್ – 3 ವೈಶಿಷ್ಟ್ಯ

* ಮೂರು ಹಂತಗಳ ರಾಕೆಟ್ – ಸ್ವದೇಶಿ ತಂತ್ರಜ್ಞಾನದಲ್ಲಿ ರೂಪಿಸಿರುವ ಕ್ರಯೊಜೆನಿಕ್ ಎಂಜಿನ್.
* ಜಿಎಸ್‌ಎಲ್‌ವಿ ಮಾರ್ಕ್ 3 ರಾಕೆಟ್ ವಿನ್ಯಾಸ ಮಾಡಿದ ವರ್ಷ 2002.
* ರಾಕೆಟ್‌ನ ಭಾರ ಒಯ್ಯುವ ಗರಿಷ್ಠ ಸಾಮರ್ಥ್ಯ (ಭೂಸ್ಥಿರ ಕಕ್ಷೆಯವರೆಗೆ) 4 ಟನ್.
* 640 ಟನ್ ರಾಕೆಟ್ ತೂಕ.
* 43.43 ಮೀಟರ್ ರಾಕೆಟ್ ಎತ್ತರ.
* ಜಿಎಸ್‌ಎಲ್‌ವಿ ಮಾರ್ಕ್ – 3 ನಭಕ್ಕೆ ಚಿಮ್ಮಿದ ಸಮಯ – ಜೂನ್ 5, ಸಂಜೆ 5.28.
* ಜಿಸ್ಯಾಟ್-19 ಉಪಗ್ರಹ ಕಕ್ಷೆ ಸೇರಲು ತೆಗೆದುಕೊಂಡ ಅವಧಿ 16 ನಿಮಿಷ.
* 200 ಆನೆಗಳಷ್ಟು ಅಥವಾ ಪ್ರಯಾಣಿಕರಿಂದ ಪೂರ್ಣವಾಗಿ ತುಂಬಿರುವ ಐದು ಬೋಯಿಂಗ್ ಜಂಬೊ ವಿಮಾನಗಳ ಭಾರ.
* 13 ಮಹಡಿಗಳ ಕಟ್ಟಡದಷ್ಟು ಎತ್ತರ
* ಕೆಳ ಹಂತದ ಭೂ ಕಕ್ಷೆಗೆ 10 ಟನ್ ತೂಕವನ್ನು ಹೊತ್ತೊಯ್ಯುವ ಸಾಮರ್ಥ್ಯ.

# ಭಾರತದ ತ್ರಿವಿಕ್ರಮ

ಅಭಿವೃದ್ಧಿ ಪರ್ವ



ಭಾರತದ ಭೂ ನಿರೀಕ್ಷಣೆಯ ಆಧುನಿಕ ದೂರ ಸಂವೇದಿ ಉಪಗ್ರಹ ಕಾರ್ಟೊಸ್ಯಾಟ್ – 2ಇ ಉಪಗ್ರಹವನ್ನು ಜೂನ್ 23 ರಂದು ಯಶಸ್ವಿಯಾಗಿ ಹಾರಿಬಿಡಲಾಗಿದೆ. ಭಾರತದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಶ್ರೀ ಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಪಿಎಸ್ಎಲ್‌ವಿ – 38 ನೌಕೆ ಮೂಲಕ ಕರಾರುವಕ್ಕಾಗಿ ಕಾರ್ಟೊಸ್ಯಾಟ್ 2ಇ ಉಪಗ್ರಹವನ್ನು ಉಡಾವಣೆ ಮಾಡಿತು. 'ಆಕಾಶದಲ್ಲಿನ ಕಣ್ಣು' ಎಂದೇ ಕರೆಯಲಾಗುವ ಕಾರ್ಟೊಸ್ಯಾಟ್ ಉಪಗ್ರಹ ಅತಿಸೂಕ್ಷ್ಮವಾದ ಮಾಹಿತಿಗಳನ್ನು ಗುರುತಿಸಿ ಚಿತ್ರ ದಾಖಲಿಸಿಕೊಳ್ಳುವ ಮಲ್ಟಿ ಸ್ಪೆಕ್ಟರಲ್ ಆಪ್ಟಿಕಲ್ ಇಮೇಜರ್ ಮತ್ತು ಪ್ಯಾನ್ ಕ್ರೊಮ್ಯಾಟಿಕ್ ಕೆಮೆರಾಗಳನ್ನು ಹೊಂದಿದೆ. ಸುಮಾರು 160 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ 550 ಕೆ.ಜಿ. ತೂಕದ ಈ ಉಪಗ್ರಹ 500 ಕಿ.ಮೀ. ಎತ್ತರದಲ್ಲಿ ಪ್ರದಕ್ಷಿಣೆ ಮಾಡುತ್ತದೆ. ಈ ಉಪಗ್ರಹದಿಂದ ನಗರ ಯೋಜನೆ, ಮೂಲಸೌಕರ್ಯ ಅಭಿವೃದ್ಧಿ, ಸಾರಿಗೆ ನಿರ್ವಹಣೆ ಮತ್ತು ನೈಸರ್ಗಿಕ ವಿಕೋಪ ನಿರ್ವಹಣೆ ಉತ್ತಮಗೊಳ್ಳಲಿದೆ.

ಕಾರ್ಟೊಸ್ಯಾಟ್ 2–ಇ ಉಪಗ್ರಹದ ಜತೆಗೆ ಇನ್ನೂ 30 ಪುಟ್ಟ ಉಪಗ್ರಹಗಳನ್ನು ಹಾರಿಬಿಡಲಾಗಿದೆ. ಆಸ್ಟ್ರಿಯಾ, ಬೆಲ್ಜಿಯಂ ಚಿಲಿ, ಜೆಕ್ ಗಣರಾಜ್ಯ, ಫಿನ್‌ಲ್ಯಾಂಡ್, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಲ್ಯಾಟ್‌ವಿಯಾ, ಲಿಥುನಿಯಾ, ಸ್ಲೊವಾಕಿಯಾ, ಯುಕೆ, ಅಮೆರಿಕ ಮೊದಲಾದ ದೇಶಗಳ ಉಪಗ್ರಹಗಳು ಇದರಲ್ಲಿ ಸೇರಿವೆ.

---

**ಭಾರತದ ಅತ್ಯಾಧುನಿಕ ಸಂವಹನ ಉಪಗ್ರಹ ಜಿಸ್ಯಾಟ್–17 ಅನ್ನು ಜೂನ್ 29 ರಂದು ಫ್ರೆಂಚ್‌ನ ಗಯಾನದ ಕೌರೌದಿಂದ ಯಶಸ್ವಿಯಾಗಿ ಉಡಾಯಿಸಲಾಗಿದೆ. 3 ಸಾವಿರದ 477 ಕೆ.ಜಿ. ತೂಕವನ್ನು ಹೊತ್ತಿರುವ ಉಪಗ್ರಹ ಸಾಮಾನ್ಯ ಸಿ–ಬ್ಯಾಂಡ್, ವಿಸ್ತರಿಸಿದ ಸಿ–ಬ್ಯಾಂಡ್ ಮತ್ತು ಎಸ್–ಬ್ಯಾಂಡ್ ಸಂವಹನ ಸೇವೆಗಳನ್ನು ಒದಗಿಸಲಿದೆ. ಇದಲ್ಲದೆ ಹವಾಮಾನ ವೈಪರೀತ್ಯ ಕುರಿತ ದತ್ತಾಂಶಗಳನ್ನು ದಾಖಲಿಸುವ ಉಪಕರಣ ಹಾಗೂ ಇನ್‌ಸ್ಯಾಟ್ ಉಪಗ್ರಹದ ಮೂಲಕ ಶೋಧ ಹಾಗೂ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳುವ ಉಪಕರಣವನ್ನು ಉಪಗ್ರಹ ಹೊತ್ತೊಯ್ದಿದೆ. ದಕ್ಷಿಣ ಅಮೆರಿಕಾದ ಈಶಾನ್ಯ ಕರಾವಳಿಯ ತೀರದಲ್ಲಿ ಏರಿಯನ್ ಸ್ಪೇಸ್ ಫ್ಲೈಟ್ ವಿಎ–238 ಮೂಲಕ ಉಪಗ್ರಹವನ್ನು ಉಡಾಯಿಸಲಾಯಿತು. ಇದರಿಂದಾಗಿ ಇಸ್ರೊ ಈ ತಿಂಗಳು ಒಟ್ಟು 3 ಉಪಗ್ರಹಗಳನ್ನು ಉಡಾವಣೆ ಮಾಡಿದಂತಾಗಿದೆ. ಇದಕ್ಕೂ ಮುನ್ನ ಜಿಎಸ್ಎಲ್‌ವಿ ಮಾರ್ಕ್–3 ಹಾಗೂ ಪಿಎಸ್ಎಲ್‌ವಿ ಸಿ–38 ನೌಕೆ ಮೂಲಕ ಎರಡು ಉಪಗ್ರಹಗಳನ್ನು ಶ್ರೀಹರಿ ಕೋಟಾ ಬಾಹ್ಯಾಕಾಶ ಕೇಂದ್ರದಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ.**






ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಮಂಗಳ ಗ್ರಹದ ಅನ್ವೇಷಣೆಗಾಗಿ ಹಾರಿಬಿಟ್ಟ 'ಮಂಗಳಯಾನ' ನೌಕೆ ಮಂಗಳ ಗ್ರಹದ ಪರಿಭ್ರಮಣೆಯಲ್ಲಿ ಭೂಮಿಯ 1000 ದಿನಗಳನ್ನು (20 ಜೂನ್ 2017), ಯಶಸ್ವಿಯಾಗಿ ಪೂರೈಸಿದೆ.

ಅನಿವಾರ್ಯ

# ಬಡವರಿಗೆ ನೆರವು

* ಊರ್ಮಿ ಗೋಸ್ವಾಮಿ




**ಸರ್ಕಾರವು ಮಾಡಬೇಕಾದುದು ಬಹಳಷ್ಟಿದೆ. ಅವುಗಳಲ್ಲಿ ಸರ್ಕಾರ ಮಧ್ಯಪ್ರವೇಶ ಮಾಡಬಹುದಾದ ಮತ್ತು ಮಾಡಲೇಬೇಕಾದ ಕ್ಷೇತ್ರವೆಂದರೆ ಶಿಕ್ಷಣಕ್ಷೇತ್ರ. ಶಿಕ್ಷಣದ ಅವಕಾಶಗಳನ್ನು ಅಭಿವೃದ್ಧಿಪಡಿಸಲು ಹೆಚ್ಚಿನ ಗಮನವನ್ನು ನೀಡಬೇಕಾಗಿದೆ. ನಿರ್ಲಕ್ಷಿತ ಹಾಗೂ ಬಡ ಸಮುದಾಯದವರ ಹಾಗೂ ಶಿಕ್ಷಣವು ಬೇರುಬಿಡಲು ಇನ್ನೂ ಸಾಧ್ಯವಾಗದಿರುವ ಸಮುದಾಯದವರ ಮಕ್ಕಳನ್ನು ಈ ಕ್ಷೇತ್ರದ ವ್ಯಾಪ್ತಿಯ ಒಳಕ್ಕೆ ತರುವುದಕ್ಕಾಗಿ ಭಗೀರಥ ಪ್ರಯತ್ನವನ್ನೇ ಮಾಡಬೇಕಾಗುತ್ತದೆ.**

"ಎಲ್ಲಾ ದೋಣಿಗಳನ್ನೂ ಮೇಲೆತ್ತಲು ಉಬ್ಬರದ ಅಲೆಗಳ ಅಗತ್ಯವಿರುತ್ತದೆ. ಬಹಳಷ್ಟು ಬಳಕೆಯಲ್ಲಿರುವ ಜಾನ್ ಎಫ್. ಕೆನಡಿಯವರ ಈ ಉಕ್ತಿಯನ್ನು ತಲೆಕೆಳಗು ಮಾಡುತ್ತದೆಯಾದರೂ, ಇದು ಭಾರತದಲ್ಲಿನ ವಾಸ್ತವ ಸ್ಥಿತಿಯಾಗಿದೆ. ಸಾಮಾಜಿಕ ಭದ್ರತೆಯ ಕ್ರಮಗಳು ಸಾಮಾನ್ಯವಾಗಿ ಸಾರ್ವಜನಿಕರನ್ನು ಕುರಿತವಾಗಿರುತ್ತವೆ. ಅಂದರೆ, ಸರ್ಕಾರವು ವ್ಯಕ್ತಿಗಳ ಮತ್ತು ಕುಟುಂಬಗಳ ಆರ್ಥಿಕ ಭದ್ರತೆಗಾಗಿ ಹಾಗೂ ಸಾಮಾಜಿಕ ಕಲ್ಯಾಣಕ್ಕಾಗಿ ಯೋಜನೆಗಳನ್ನು ರೂಪಿಸುತ್ತದೆ. ಪಾರಂಪರಿಕವಾಗಿ, ಇಂತಹ ದೃಷ್ಟಿಯು ಕೆಲವು ನಿರ್ದಿಷ್ಟ ಸಮುದಾಯಗಳು ಅಥವಾ ಪ್ರದೇಶಗಳಲ್ಲಿ ಇರುವ ಕೊರತೆಗಳನ್ನು ನಿವಾರಿಸುವ ಉದ್ದೇಶಗಳನ್ನುಳ್ಳ ಯೋಜನೆಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ. ಆದರೆ ಇಂತಹ ದೃಷ್ಟಿಗಳನ್ನು ಹೊಂದಿರುವ ಯೋಜನೆಗಳು ಅಭೀಷ್ಟ ಗುರಿಗಳನ್ನು ಸಾಧಿಸುವಲ್ಲಿ ಎಲ್ಲಾ ಸಮಯದಲ್ಲಿಯೂ ಯಶಸ್ವಿಯಾಗಿಲ್ಲ. ಇದಕ್ಕೆ ಕಾರಣವೆಂದರೆ, ನಾವು ಆರ್ಥಿಕ ಭದ್ರತೆಯ ಮತ್ತು ಸಮಾಜಕಲ್ಯಾಣದ ಮಟ್ಟವನ್ನು ಏರಿಸುವವರೆಗೆ ನಮ್ಮ ಉದ್ದೇಶಿತ ಕ್ರಮಗಳ ಗುರಿಯನ್ನು ಸಾಧಿಸುವುದು ಸಾಧ್ಯವೇ ಇರುವುದಿಲ್ಲ. ಆದುದರಿಂದ ನಮ್ಮ ಗಮನ ಉಬ್ಬರದ ಅಲೆಗಳು ಏಳುವಂತೆ ಮಾಡುವುದರ ಮೇಲೆ ಇರಬೇಕು ಮತ್ತು ಅದೇ ಸಮಯದಲ್ಲಿ, ತಮ್ಮ ದೋಣಿಗಳು ಮುಳುಗದ ಹಾಗೆ ನೋಡಿಕೊಳ್ಳಬೇಕಾದ ಅಗತ್ಯವಿರುವವರಿಗೆ ಹೆಚ್ಚಿನ ನೆರವನ್ನು ನೀಡುವುದರತ್ತಲೂ ನಾವು ನಮ್ಮ ಕೈಗಳನ್ನು ಚಾಚಬೇಕು.

ಜೀವನೋಪಾಯಗಳನ್ನು ಉತ್ತಮ ದಾರಿಯನ್ನು ತೋರುವ ಶಿಕ್ಷಣ, ಆರೋಗ್ಯ ಸೇವೆ, ಕೌಶಲಗಳು ಉಬ್ಬರದ ಅಲೆಗಳನ್ನು ಏಳುವಂತೆ ಮಾಡಲು ಸಹಾಯ ಮಾಡುವ ಮಾಧ್ಯಮಗಳಾಗುತ್ತವೆ. ಸರ್ಕಾರದ ನೈಜ ಕಾಳಜಿಯನ್ನು ಅಳೆಯುವ ಸಾಧನವೆಂದರೆ, ಜನತೆಯ ಅದರಲ್ಲಿಯೂ ಕಡೆಗಣಿಸಲ್ಪಟ್ಟವರ, ಸಾಮಾಜಿಕ ಸ್ಥಿತಿಗತಿಗಳನ್ನು ಸುಧಾರಿಸಲು ಅದು (ಸರ್ಕಾರವು) ತೆಗೆದುಕೊಳ್ಳುವ ಕ್ರಮಗಳ ಮೌಲ್ಯಮಾಪನದಲ್ಲಿ ಇರುತ್ತದೆ. ಜನತೆಯ ಕಲ್ಯಾಣವನ್ನು ಸಮುದಾಯಗಳ, ಜಾತಿಗಳ ಮತ್ತು ಮತಗಳ ನಾಜೂಕಾದ ಅಂಕಣಗಳನ್ನಾಗಿ ಮಾಡುವುದು ಸಾಧ್ಯವೇ ಅಥವಾ ಅಂತಹ ನಡೆ ವಿವೇಕಯುತವೇ? ಭಾರತದ ಜನತೆಯ ಅಗತ್ಯಗಳು ಅನಂತವಾಗಿವೆ. ಯಾವುದೇ ಸರ್ಕಾರದ ಭಾರಿ ಎನ್ನಬಹುದಾದ ಜವಾಬ್ದಾರಿಯೆಂದರೆ, ನಿರ್ಲಕ್ಷ್ಯಕ್ಕೆ ಒಳಗಾಗಿ ಬಡತನದ ಬೇಗೆಯಲ್ಲಿರುವ ಕೋಟ್ಯಂತರ ಜನರಿಗೆ ಉತ್ತಮ ಜೀವನದ ಅವಕಾಶವನ್ನು ಪಡೆಯಲು ಇರುವ ದಾರಿಯ ಆಶ್ವಾಸನೆಯನ್ನು ನಿರಂತರವಾಗಿ ನೀಡುವ ಕ್ರಮಗಳನ್ನು ಕೈಗೊಳ್ಳುವುದು. ಸರ್ಕಾರದ ಯಾವುದೇ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಕಾರ್ಯಕ್ರಮದ ಆಂತರ್ಯದಲ್ಲಿ ಇರಲೇಬೇಕಾದುದೆಂದರೆ ಈ ದೃಷ್ಟಿಕೋನ. ಅದೇ ಸಮಯದಲ್ಲಿ, ಜನತೆಯಲ್ಲಿನ ಕೆಲವು ಸಮುದಾಯಗಳವರಿಗೆ ಅಥವಾ ಪಂಗಡಗಳವರಿಗೆ ಆರ್ಥಿಕ ಅಂತಸ್ತಿನ ಕೊರತೆಯ ಜೊತೆಗೆ ಅವರ ಸಾಮಾಜಿಕ ಸ್ಥಾನಮಾನಗಳೂ ತಳಕು ಹಾಕಿಕೊಂಡಿರುವುದರಿಂದ, ಈ ಜನರಿಗೆ ಮುಂದುವರಿಯಲು ಇರುವ ಹಾದಿಯಲ್ಲಿ ಇರುವ ತೊಡಕುಗಳು ಮತ್ತೂ ಹೆಚ್ಚಾಗಿರುತ್ತವೆ. ಹೀಗಿರುವುದರಿಂದ, ಅವರು ತಮ್ಮ ಜೀವನದ ಏಳಿಗೆಗಾಗಿ ತಮ್ಮ ಮುಂದೆ ಇರುವ ಅವಕಾಶಗಳನ್ನು

* ಪತ್ರಕರ್ತೆ. E-mail : urmi.goswami@gmail.com

ಸದುಪಯೋಗಪಡಿಸಿಕೊಳ್ಳಲು ಸಮರ್ಥರು ಆಗುವಂತೆ ಮಾಡಲು, ಸರ್ಕಾರವು ಆಯಾ ಸಮುದಾಯಗಳವರಿಗೇ ನಿರ್ದಿಷ್ಟವಾಗಿರುವ, ಅವರಿಗಾಗಿಯೇ ರೂಪಿಸಲ್ಪಟ್ಟ ಕೆಲವೊಂದು ಕ್ರಮಗಳನ್ನು ಕೈಕೊಳ್ಳುವುದು ಆವಶ್ಯಕವಾಗಿರುತ್ತದೆ.

ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವಿಕೆಯ ಸಂಕಷ್ಟಗಳನ್ನು ಉಪಶಮನಗೊಳಿಸಲು ಸಾಮಾನ್ಯ ಹಾಗೂ ನಿರ್ದಿಷ್ಟ ಕ್ರಮಗಳನ್ನು ಏಕಕಾಲದಲ್ಲಿ ತೆಗೆದುಕೊಳ್ಳಬೇಕು.

ಸಾಮಾನ್ಯ ಕ್ರಮಗಳ ಪರಿಣಾಮವನ್ನು ಮಾಪನಮಾಡದೆ, ಅಲ್ಪಸಂಖ್ಯಾತರು, ಶೋಷಿತರು ಮತ್ತು ಬುಡಕಟ್ಟು ಜನರು – ಇವರಿಗಾಗಿ ಕೈಕೊಂಡ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣಕಾರ್ಯಕ್ರಮಗಳನ್ನು ಅಳೆಯಲು ಪ್ರಯತ್ನಿಸಿದರೆ, ಅದು ವಿಕೃತವಾದ ಚಿತ್ರಣವನ್ನು ನೀಡುತ್ತದೆ.

ಈಶ್ವರಚಂದ್ರ ವಿದ್ಯಾಸಾಗರ ಮತ್ತು ವಿವೇಕಾನಂದರಂತಹ ಹಿಂದಿನ ಸಾಮಾಜಿಕ ಸುಧಾರಕರೆಲ್ಲರೂ ಸಮುದಾಯವನ್ನು ಪ್ರಗತಿಯತ್ತ ನಡೆಸಬೇಕಾದರೆ ಮೊದಲು ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ದೊರಕುವಂತೆ ಮಾಡಿ ಅವರ ಸ್ಥಾನವನ್ನು ಮೇಲಕ್ಕೆ ಎತ್ತಬೇಕಾಗಿರುವ ಅಗತ್ಯವನ್ನು ಒತ್ತಿಒತ್ತಿ ಹೇಳಿದ್ದಾರೆ. ಇತ್ತೀಚಿನ ದಿನಗಳಲ್ಲಿ, ಮಹಿಳೆಯರನ್ನು ಉದ್ದೇಶದಲ್ಲಿಟ್ಟುಕೊಂಡು ಜಾರಿಗೆ ತಂದ ವ್ಯಕ್ತಿಗಳ ಮಟ್ಟದಲ್ಲಿ ಆರ್ಥಿಕ ಸಹಾಯವನ್ನು ಒದಗಿಸುವ ಕಾರ್ಯಕ್ರಮಗಳು ಹೇಗೆ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸ್ವರೂಪವನ್ನೇ ಬದಲಾಯಿಸುವುದಕ್ಕೆ ಮೂಲವಾಯಿತು ಎಂಬುದನ್ನು ನೋಡಿದ್ದೇವೆ. ಸರ್ಕಾರದ ಉಜ್ವಲಾ ಯೋಜನೆಯನ್ನು ಈ ದೃಷ್ಟಿಯಿಂದ ಅರ್ಥಮಾಡಿಕೊಳ್ಳಬೇಕು.

ಈ ಯೋಜನೆಯು ಯಾವುದೇ ಒಂದು ನಿರ್ದಿಷ್ಟ ಮತದವರನ್ನು, ಜಾತಿ–ಪಂಗಡಗಳನ್ನು ಉದ್ದೇಶಿಸಿರದೆ, ಕೇವಲ ಬಡವರನ್ನು, ಬಡತನದ ರೇಖೆಯ ಅಡಿಯಲ್ಲಿ ಇರುವವರನ್ನು ಮಾತ್ರ ದೃಷ್ಟಿಯಲ್ಲಿ ಇಟ್ಟುಕೊಂಡಿದೆ. ಇಷ್ಟಾದರೂ, ದೇಶದಲ್ಲಿ ಬಡತನದ ರೇಖೆಯ ಕೆಳಗೆ ಇರುವ ವಿವಿಧ ಜನಾಂಗಗಳ ಸಂಯೋಜನೆಯ ಪರಿಸ್ಥಿತಿಯನ್ನು ನೋಡಿದಾಗ, 2017ರ ಏಪ್ರಿಲ್ 3ರವರೆಗಿನ



ಅಂದಾಜಿನ ಪ್ರಕಾರ, ಈ ಯೋಜನೆಯಿಂದ ಲಾಭವನ್ನು ಪಡೆಯುತ್ತಿರುವವರಲ್ಲಿ ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ 20 ದಶಲಕ್ಷದಷ್ಟು ಅಧಿಕ ಸಂಖ್ಯೆಯ ಮಹಿಳೆಯರು ಇದ್ದಾರೆಂಬುದು ಕಾಣಬರುತ್ತದೆ. 2016ರಲ್ಲಿ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಚಾಲನೆ ನೀಡಿದ ಈ ಯೋಜನೆಯು ಬಡತನದ ರೇಖೆಯ ಕೆಳಗೆ ಇರುವಂತಹ ಕುಟುಂಬಗಳ ಸ್ತ್ರೀಯರಿಗೆ 5,00,00,000 ಅಡುಗೆ ಅನಿಲದ ಸಂಪರ್ಕವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಇವರು ಇಲ್ಲಿಯವರೆಗೆ ಸೌದೆ ಮತ್ತು ಬೆರಣಿಗಳನ್ನು ಇಂಧನವನ್ನಾಗಿ ಬಳಸುತ್ತಿದ್ದರು. ತಜ್ಞರ ಪ್ರಕಾರ ಒಂದು ಗಂಟೆ ಅದರ ಹೊಗೆಯನ್ನು ಸೇವಿಸಿದರೆ, 400 ಸಿಗರೇಟುಗಳನ್ನು ಸೇದುವುದರಿಂದ ಆಗುವಷ್ಟು ಹಾನಿಯನ್ನು ಅದು ಮಾಡುತ್ತದೆ. ಈ ವರ್ಗದ ಮಹಿಳೆಯರು ಇಂದು ಆರೋಗ್ಯಕರವಾದ ಅಡುಗೆಯ ಸಾಧನವನ್ನು ಬಳಸುವ ಅವಕಾಶವನ್ನು ಹೊಂದಿದ್ದಾರೆ.

ಸೌದೆ ಮತ್ತು ಬೆರಣಿಯನ್ನು ಬಳಸುತ್ತಿದ್ದ ಮಹಿಳೆಯರಿಗೆ ಹಾಗೂ ಅವರ ಮಕ್ಕಳಿಗೆ ಈ ಯೋಜನೆಯು ಮಾಲಿನ್ಯರಹಿತವಾದ ಇಂಧನವನ್ನು ಒದಗಿಸುವ ಮೂಲಕ ಅವರ ಆರೋಗ್ಯ ಹಾಗೂ ಅರಿವಿನ ಪ್ರಗತಿಯ ಮೇಲೆ ಅಪಾರವಾದ ಸಕಾರಾತ್ಮಕವಾದ ಪರಿಣಾಮವನ್ನು ಬೀರುತ್ತಿದೆ. ಇದರ ಪರಿಣಾಮವೆಂದರೆ, ಈ ಕುಟುಂಬಗಳಲ್ಲಿನ ಮಕ್ಕಳು ಉತ್ತಮವಾದ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದಾರೆ, ಅಂತಹ ಕುಟುಂಬಗಳ ಚಿಕಿತ್ಸೆ ಹಾಗೂ ಔಷಧಗಳ ಮೇಲಿನ ವೆಚ್ಚವು ಕಡಿಮೆಯಾಗುತ್ತಿದೆ ಮತ್ತು ಆ ಮಕ್ಕಳ ರೋಗನಿರೋಧಕ ಶಕ್ತಿಯು ವೃದ್ಧಿಸುತ್ತಿದೆ. ಇದು ಸಾಧಿಸಲಾಗಿರುವ ನಿಜವಾದ ಯಶಸ್ಸು. ಆರೋಗ್ಯದಿಂದ ಕೂಡಿರುವ ಮನೆಯ ಮಕ್ಕಳ ಆರೋಗ್ಯಕ್ಕೆ ಕಾರಣವಾಗುತ್ತದೆ ಮತ್ತು ಆ ಮಕ್ಕಳ ಕಲಿಕೆಯ ಸಾಮರ್ಥ್ಯವನ್ನು ಹಲವು ಪಟ್ಟು ಹೆಚ್ಚಿಸುತ್ತದೆ. ಇದು ಬಡತನದ ಶೃಂಖಲೆಗಳನ್ನು ಹರಿದು ಉತ್ತಮ ಜೀವನದತ್ತ ನಡೆಯಲು ದಾರಿಯನ್ನು ತೋರಿಸುತ್ತದೆ.

ಇದು ಒಂದು ಪ್ರಾರಂಭ ಅಷ್ಟೆ. ಜನ್‌ಧನ್ ಯೋಜನೆಯನ್ನೇ ಗಮನಿಸಿ. ಈ ಯೋಜನೆಯು ಕೂಡ ಯಾವುದೇ ಒಂದು ಸಮುದಾಯವನ್ನು ತನ್ನ ದೃಷ್ಟಿಯಲ್ಲಿ ಇಟ್ಟುಕೊಂಡಿಲ್ಲ, ಬದಲಿಗೆ ಇಲ್ಲಿಯವರೆಗೆ ಬ್ಯಾಂಕಿಂಗ್ ವ್ಯವಸ್ಥೆಯ ವ್ಯಾಪ್ತಿಯಿಂದ ಹೊರಗೆ ಇದ್ದವರನ್ನೆಲ್ಲಾ ಇದು ತನ್ನ ಅಪ್ಪುಗೆಯ ಒಳಕ್ಕೆ ತರುತ್ತಿದೆ. ಹಣಕಾಸಿನ ಸೇವೆ – ಅಂದರೆ, ಬ್ಯಾಂಕಿನಲ್ಲಿ ಹಣವನ್ನು ಉಳಿತಾಯ ಮಾಡುವುದು, ಠೇವಣಿಯನ್ನು ಇಡುವುದು, ಹಣದ ರವಾನೆ, ಸಾಲವನ್ನು ಪಡೆಯುವುದು, ಪಿಂಚಣಿ, ಮತ್ತು ವಿಮಾ ಸೌಲಭ್ಯ ಇವುಗಳನ್ನೆಲ್ಲಾ – ಅವರ ಕೈಗೆ ಎಟುಕುವ ದರಗಳಲ್ಲಿ ಒದಗಿಸುವುದು ಈ ಯೋಜನೆಯ ಗುರಿಯಾಗಿದೆ. ಈ ಯೋಜನೆಯು ಯಾವುದೇ ಬ್ಯಾಂಕಿನ ಖಾತೆಯಲ್ಲಿ ಶಿಲ್ಕನ್ನು ಇಡಬೇಕಾದ ಅವಶ್ಯಕತೆಯಿಲ್ಲದೆ, ಬಡವರು ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್‌ಗಳನ್ನು ಹೊಂದುವ ಸೌಲಭ್ಯವನ್ನು ಒದಗಿಸುತ್ತದೆ. ಈ ಸೌಲಭ್ಯಗಳು ಹಿಂದೆ ದುಡ್ಡಿದ್ದವರ ಪಾಲಿಗೆ ಮಾತ್ರ ದೊರಕುತ್ತಿದ್ದವು. ಇದು ಇಡೀ ವಾತಾವರಣವನ್ನೇ ಬದಲಾಯಿಸುವ ಸಮರ್ಥ ಸಾಧನವಾಯಿತು. ವಿದ್ಯಾರ್ಥಿವೇತನ, ಪಿಂಚಣಿ, ಸಹಾಯಧನ ಮೊದಲಾದವುಗಳೆಲ್ಲವೂ ಈ ಅವುಗಳ ಅನುಭವದಾರರಿಗೆ ನೇರವಾಗಿ ತಲುಪುವಂತೆ ಮಾಡುತ್ತವೆ. ಮಧ್ಯವರ್ತಿಗಳ ಹಾವಳಿಯನ್ನು ನಿವಾರಿಸುವುದರ ಜೊತೆಗೆ, ಸಾಮಾಜಿಕ ಮತ್ತು ಆರ್ಥಿಕ ಸವಲತ್ತು ಎಂದು ಭಾವಿಸಿದ್ದ ಬ್ಯಾಂಕುಗಳ ವ್ಯವಸ್ಥೆಯೊಡನೆ ಸಂಬಂಧವನ್ನು ಸಮಾಜದ ಕೆಳವರ್ಗಗಳವರಿಗೆ ಒದಗಿಸಿ ಅದ್ಭುತವಾದ ಸಾಮಾಜಿಕ ಪರಿಣಾಮಗಳಿಗೆ ಈ ಯೋಜನೆಯು ಕಾರಣವಾಗಿದೆ.

ಈ ಸಾಮಾನ್ಯ ಕಾರ್ಯಕ್ರಮಗಳು ನಿರ್ದಿಷ್ಟ ಗುರಿಯನ್ನುಳ್ಳ ಯೋಜನೆಗಳಿಗೆ ಅವುಗಳು ತಮ್ಮ ಉದ್ದೇಶವನ್ನು ಸಾಧಿಸಲು ಅಗತ್ಯವಾದ ಬಲವನ್ನು ಒದಗಿಸುತ್ತವೆ. ಅಲ್ಪಸಂಖ್ಯಾತ ಪಂಗಡಗಳಂತಹ ಕೆಲವೊಂದು ನಿರ್ದಿಷ್ಟ ಪಂಗಡಗಳನ್ನು ಗುರಿಯಲ್ಲಿಟ್ಟುಕೊಂಡಿರುವ ಸಾಮಾಜಿಕ

ಭದ್ರತೆ ಮತ್ತು ಕಲ್ಯಾಣ ಯೋಜನೆಗಳು ಆಯಾ ಪಂಗಡ/ಸಮುದಾಯಗಳಿಗೆ ಅಗತ್ಯವಾದ ರೀತಿಯಲ್ಲಿಯೇ ರೂಪಿಸಲ್ಪಡಬೇಕು. ಆದರೆ ಅವುಗಳನ್ನು ವಿಸ್ತಾರವಾದ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಕಾರ್ಯಕ್ರಮಗಳ ತಳಪಾಯದ ಮೇಲೆ ಕಟ್ಟಬೇಕಾಗುತ್ತದೆ. ಈ ಪಂಗಡಗಳ ಜನರು ಸಾಮಾಜಿಕ ಚಲನಶೀಲತೆಯನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ ಇವುಗಳು ಆರ್ಥಿಕ ಅಭಿವೃದ್ಧಿಗೆ ತಡೆಯಾಗಿರುವ ಸಾಮಾಜಿಕ ಪರಿಸ್ಥಿತಿಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಬೇಕು. ಅಂದರೆ, ಸಾಮಾಜಿಕ ಭದ್ರತಾ ಯೋಜನೆಗಳ ಗಮನವು ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣಗಳನ್ನು ತಮ್ಮ ದೃಷ್ಟಿಯ ಕೇಂದ್ರವನ್ನಾಗಿಸಿಕೊಂಡಿರಬೇಕು.

ಅಲ್ಪಸಂಖ್ಯಾತರನ್ನು ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ತರುವ ಉದ್ದೇಶದಿಂದ ಸರ್ಕಾರವು 'ನಯೀಮಂಜ಼ಿಲ್' ಮತ್ತು 'ಸಾಂಪ್ರದಾಯಿಕ ಕಲೆ/ಕುಶಲಕಲೆಗಳ ಅಭಿವೃದ್ಧಿಯಲ್ಲಿನ ಕೌಶಲದ ಮಟ್ಟವನ್ನು ಹೆಚ್ಚಿಸುವ ಮತ್ತು ತರಬೇತಿಯನ್ನು ನೀಡುವ' ಉಸ್ತಾದ್ ಯೋಜನೆಗಳನ್ನು ಕ್ರಮವಾಗಿ 2014–15 ಮತ್ತು 2015–16ನೆಯ ಸಾಲುಗಳಲ್ಲಿ ಘೋಷಿಸಿದೆ. 'ನಯೀ ಮಂಜ಼ಿಲ್' ಯೋಜನೆಯು ವಿದ್ಯಾಭ್ಯಾಸವನ್ನು ನಡುವಿನಲ್ಲಿಯೇ ತೊರೆದವರ ಶಿಕ್ಷಣ ಮತ್ತು ಕೌಶಲಾಭಿವೃದ್ಧಿಗಾಗಿ ರೂಪಿಸಲ್ಪಟ್ಟಿದ್ದರೆ, 'ಸಾಂಪ್ರದಾಯಿಕ ಕಲೆ/ಕುಶಲಕಲೆಗಳ ಅಭಿವೃದ್ಧಿಯಲ್ಲಿನ ಕೌಶಲದ ಮಟ್ಟವನ್ನು ಹೆಚ್ಚಿಸುವ ಮತ್ತು ತರಬೇತಿಯನ್ನು ನೀಡುವ' ಉಸ್ತಾದ್ ಯೋಜನೆಯು ಸಾಂಪ್ರದಾಯಿಕ ಕಲೆ ಮತ್ತು ಕುಶಲಕಲೆಗಳನ್ನು ಸಂರಕ್ಷಿಸಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಕುಶಲ ಕೆಲಸಗಾರರ ಮತ್ತು ಕಸುಬುದಾರರ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ. ಈ ಎರಡು ಯೋಜನೆಗಳಿಗಾಗಿ ಕೇಂದ್ರದ 2016–17ರ ಆಯವ್ಯಯದಲ್ಲಿ ಕ್ರಮವಾಗಿ 175 ಕೋಟಿ ಹಾಗೂ 22 ಕೋಟಿ ರೂಗಳನ್ನು ತೆಗೆದಿರಿಸಲಾಗಿದೆ. ಇವೆರಡೂ ಯೋಜನೆಗಳು ಮೂಲಭೂತವಾಗಿ ಶಿಕ್ಷಣ, ಕೌಶಲದ ಅಭಿವೃದ್ಧಿ ಮತ್ತು ಜೀವನೋಪಾಯದ ದಾರಿಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿವೆ. ಅಲ್ಪಸಂಖ್ಯಾತರ ವ್ಯವಹಾರವನ್ನು ನೋಡಿಕೊಳ್ಳುವ ಸಚಿವಾಲಯವು 1,82,00,000 ವಿದ್ಯಾರ್ಥಿಗಳಿಗೆ 4,740 ಕೋಟಿ ರೂಗಳ ವಿದ್ಯಾರ್ಥಿವೇತನವನ್ನು ವಿತರಿಸಿರುವುದನ್ನು ಸರ್ಕಾರವು ಖಾತರಿಪಡಿಸಿದೆ. ಇದರಲ್ಲಿ 1,38,426 ವಿದ್ಯಾರ್ಥಿನಿಯರಿಗೆ 'ಬೇಗಮ್ ಹಜ಼್ರತ್ ಮಹಲ್ ಸ್ಕಾಲರ್‌ಶಿಪ್'ನ ಅಡಿಯಲ್ಲಿ 166 ಕೋಟಿ ರೂ. ವಿದ್ಯಾರ್ಥಿ ವೇತನವನ್ನು ನೀಡಲಾಗಿದೆ. ಮತ್ತು ಕಳೆದ ಆರು ವರ್ಷಗಳಲ್ಲಿ 33 ಪದವಿ ಕಾಲೇಜುಗಳು, 223 ವಿವಿದೋದ್ದೇಶ 'ಸದ್ಭಾವಮಂಟಪ'ಗಳು ಹಾಗೂ 18 ಗುರುಕುಲ ಮಾದರಿಯ ವಸತಿಶಾಲೆಗಳಲ್ಲಿ ಶೇ 40% ಮಹಿಳೆಯರನ್ನೊಳಗೊಂಡ 5,20,000 ಯುವಕ/ಯುವತಿಯರಿಗೆ ವಿವಿಧ ವೃತ್ತಿಗೆ ಸಂಬಂಧಿಸಿದ ಕೌಶಲಗಳ ತರಬೇತಿಯನ್ನು ನೀಡಲಾಗಿದೆ.

**ಇತರ ಯೋಜನೆಗಳು**

ಶಿಕ್ಷಣದ ಅಭಿಯಾನವಾಗಿರುವ 'ತೆಹ್ರೀಕ್–ಇ–ತಲೀಮ್', ದೇಶದಾದ್ಯಂತ ಇರುವ ಕಸಬುದಾರರಿಗೆ ಮಾರುಕಟ್ಟೆಯನ್ನು ಒದಗಿಸುವ 'ಹುನರ್–ಹಾತ್', ಎಲ್ಲಾ



ರಾಜ್ಯಗಳಲ್ಲಿಯೂ 'ಹುನರ್ ಜಾಲ'ವನ್ನು ಸ್ಥಾಪಿಸುವ ಯೋಜನೆ; 'ಉಸ್ತಾದ್ ಸಮ್ಮಾನ್ ಸಮಾಗಮ್' ಯೋಜನೆಯ ಜಾರಿ; ಅಂತಾರಾಷ್ಟ್ರೀಯ ಗುಣಮಟ್ಟದ ಐದು ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ, ಅಲ್ಪಸಂಖ್ಯಾತರು ಹೆಚ್ಚಾಗಿ ಇರುವ ಪ್ರದೇಶಗಳಲ್ಲಿ 100 ಗುರುಕುಲ–ನವೋದಯ ಮಾದರಿಯ ಶಾಲೆಗಳ ಸ್ಥಾಪನೆ – ಇವುಗಳು ನಿರ್ದಿಷ್ಟ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ಅಡಿಯಲ್ಲಿ ಬರುವ ಕೆಲವು ಯೋಜನೆಗಳು.

ಶಿಕ್ಷಣದ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಬರುವವರ ಉದ್ಯೋಗಾವಕಾಶಗಳ ಸಂಭವನೀಯತೆ ಬಗ್ಗೆ ಪ್ರತಿಯೊಂದು ಯೋಜನೆಯೂ ತನ್ನ ಗಮನವನ್ನು ಕೇಂದ್ರೀಕರಿಸುತ್ತಿದೆ. ಮಹಿಳೆಯರಿಗೆ ತರಬೇತಿಯನ್ನು ನೀಡಿ ಅವರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವುದರ ಮೇಲೆ ತನ್ನ ಗುರಿಯನ್ನು ಕೇಂದ್ರೀಕರಿಸುವ 'ನಯೀರೋಶನಿ' ಯೋಜನೆಯು ಸರ್ಕಾರದ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಮಹಿಳೆಯರ ಸಬಲೀಕರಣವು ಸಾಮಾಜಿಕ ಕಲ್ಯಾಣದಲ್ಲಿ ಒಂದು ಪ್ರಮುಖವಾದ ವಿಷಯವಾಗಿದೆ. ಇದೇ ನಿಟ್ಟಿನಲ್ಲಿ ಮತ್ತೊಂದು ಪ್ರಮುಖವಾದ ಅಂಶವೆಂದರೆ ತರುಣ ಜನಾಂಗದ ಮೇಲೆ ಗಮನವನ್ನು ಕೇಂದ್ರೀಕರಿಸುವುದು. ಇದಕ್ಕಾಗಿ, ಉದ್ಯಮಿ–ಪ್ರವರ್ತಕರಲ್ಲಿರುವ ಕೌಶಲವನ್ನು ವೃದ್ಧಿಸಲು ಸರ್ಕಾರವು 'ಮಾನಸ್'ನಂತಹ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಆದರೆ, ಸರ್ಕಾರವು ಮಾಡಬೇಕಾದುದು ಇನ್ನೂ ಬಹಳಷ್ಟಿದೆ. ಅವುಗಳಲ್ಲಿ ಸರ್ಕಾರದ ಮಧ್ಯಪ್ರವೇಶ ಮಾಡಬಹುದಾದ ಮತ್ತು ಮಾಡಲೇಬೇಕಾದ ಕ್ಷೇತ್ರವೆಂದರೆ ಶಿಕ್ಷಣಕ್ಷೇತ್ರ. ಶಿಕ್ಷಣದ ಅವಕಾಶಗಳನ್ನು ಅಭಿವೃದ್ಧಿಪಡಿಸಲು ಹೆಚ್ಚಿನ ಗಮನವನ್ನು ನೀಡಬೇಕಾಗಿದೆ. ಮಾನವನ ಬದುಕಿನಲ್ಲಿ ಅವನಿಗೆ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಇರುವ ಏಕೈಕ ಆಶಾಕಿರಣವೆಂದರೆ ಶಿಕ್ಷಣ. ನಿರ್ಲಕ್ಷಿತ ಹಾಗೂ ಬಡ ಸಮುದಾಯದವರ ಹಾಗೂ ಶಿಕ್ಷಣವು ಬೇರುಬಿಡಲು ಇನ್ನೂ ಸಾಧ್ಯವಾಗದಿರುವ ಸಮುದಾಯದವರ ಮಕ್ಕಳನ್ನು ಈ ಕ್ಷೇತ್ರದ ವ್ಯಾಪ್ತಿಯ ಒಳಕ್ಕೆ ತರುವುದಕ್ಕಾಗಿ ಭಗೀರಥ ಪ್ರಯತ್ನವನ್ನೇ ಮಾಡಬೇಕಾಗುತ್ತದೆ. ಈ ಸಮುದಾಯಗಳಿವರಿಗಾಗಿ, ಸರ್ಕಾರವು ಶಾಲೆಗಳಿಗಾಗಿ ಹಾಗೂ ಉಪಾಧ್ಯಾಯರಿಗಾಗಿ ಹೆಚ್ಚಿನ ಬಂಡವಾಳವನ್ನು ಹೂಡಬೇಕು. ಈ ಶಾಲೆಗಳು ಮೂಲಭೂತ ಅವಶ್ಯಕತೆಗಳಾದ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯದಿಂದ ಹಿಡಿದು ಗ್ರಂಥಾಲಯಗಳವರೆಗೆ ಎಲ್ಲಾ ಅಗತ್ಯಗಳನ್ನೂ ಹೊಂದಿರಬೇಕು. ಈ ಸಮುದಾಯದವರ ಮಕ್ಕಳಿಗಾಗಿ ವಿದ್ಯಾರ್ಥಿವೇತನದ ಸಹಾಯವನ್ನು ನೀಡುವ ವ್ಯವಸ್ಥೆಗಳನ್ನು ಮಾಡಿದರೆ, ಈ ಮಕ್ಕಳಿಗೆ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುತ್ತದೆ. ಸಾಮಾಜಿಕ ಭದ್ರತೆಗಾಗಿ ಸರ್ಕಾರವು ಮಾಡುವ ಹಣದ ವಿನಿಯೋಗದಲ್ಲಿ ಶಿಕ್ಷಣಕ್ಷೇತ್ರಕ್ಕಾಗಿ ಹಾಗೂ ಭವಿಷ್ಯದಲ್ಲಿನ ಅವಕಾಶಗಳನ್ನು ಒದಗಿಸುವುದಕ್ಕಾಗಿ ಮಾಡುವ ಹಣದ ವಿನಿಯೋಗವು ಅತ್ಯಂತ ಉತ್ತಮವಾದ ವಿನಿಯೋಗವಾಗಿರುತ್ತದೆ. ಉಳಿದುದೆಲ್ಲವೂ ಜನತೆಯು ಆರ್ಥಿಕ ತೊಂದರೆಗಳಿಂದ ಆಘಾತಕ್ಕೆ ಒಳಗಾಗುವುದನ್ನು ತಪ್ಪಿಸಲು ನೀಡುವ ಅಲ್ಪಸ್ವಲ್ಪ ಸಹಾಯಗಳಾಗಿವೆ. ❑

# ಆಹಾರ ನೀತಿ : ಪೌಷ್ಟಿಕಾಂಶದ ಕೃಷಿ

* ಡಾ. ಮೌಸಮಿ ದಾಸ್



**ಅಪೌಷ್ಟಿಕತೆಯ ತ್ರಿವಿಧ ಹೊರೆಯನ್ನು ಎದುರಿಸಲು ನಮ್ಮ ದೇಶದ ಆಹಾರ ನೀತಿಯ ಚೌಕಟ್ಟು ಪರಿಶುದ್ಧವಾಗಿರಬೇಕು. ಭಾರತ ಯಾವಾಗಲೂ ತನಗೆ ಬದ್ಧವಾದ ಆಹಾರ ನೀತಿಯನ್ನು ರಚಿಸಿಕೊಂಡಿಲ್ಲ. ಕೇಂದ್ರಿತ ಪದ್ಧತಿಯನ್ನು ವಿನ್ಯಾಸಗೊಳಿಸುವುದು ಅಷ್ಟು ಸುಲಭವಲ್ಲ. ಆದ್ದರಿಂದ ಸುಸ್ಥಿರ ಅಭಿವೃದ್ಧಿ ಗುರಿಯನ್ನೂ ಮನಸ್ಸಲ್ಲಿಟ್ಟುಕೊಂಡು ಸಣ್ಣ ಮತ್ತು ಮಧ್ಯಮ ಅವಧಿಗಳ ಗುರಿಗಾಗಿ ಶೀಘ್ರ ಪರಿಹಾರ ಕ್ರಮಗಳನ್ನೂ ತಯಾರಿ ಮಾಡಿಟ್ಟುಕೊಳ್ಳಬೇಕಾಗಿದೆ.**

ಆಹಾರ ಭದ್ರತೆಯು ಅನೇಕ ಆಯಾಮಗಳ ಪ್ರಕ್ರಿಯೆ ಎಂಬುದು ವ್ಯಾಪಕ ಚರ್ಚೆಯುಳ್ಳ ವಿಷಯವಾಗಿದೆ. ಏಕೆಂದರೆ ಅದು ಉತ್ಪಾದನೆ, ಹಂಚಿಕೆ, ಗ್ರಾಹಕರ ಆಯ್ಕೆ, ಸಾಕಷ್ಟು ಪ್ರಮಾಣದಲ್ಲಿ ಪೌಷ್ಟಿಕಾಂಶಗಳ ಸೇವನೆ ಮತ್ತು ಅದರ ಪರಿಣಾಮಕಾರಿ ಪಚನ ಇತ್ಯಾದಿಗಳನ್ನೊಳಗೊಂಡಿದೆ. ಆಹಾರ ಪದ್ಧತಿ ಮತ್ತು ಅದರಲ್ಲಿನ ದ್ವಿಮುಖ ಪರಸ್ಪರ ಸ್ಥಿತಿಗಳ ನಡುವೆ ಒಂದು ಸಂಬಂಧವಿದೆ. ಇದೇ ಆಧಾರದ ಮೇಲೆ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆಯ ಆಹಾರ ನೀತಿಯನ್ನು ರೂಪಿಸಲು ಅನುಕೂಲವಾಗುವಂತೆ ಆಹಾರ ಭದ್ರತೆಯ ವ್ಯಾಖ್ಯಾನವನ್ನು ಸಾರ್ವತ್ರಿಕಗೊಳಿಸಿದೆ.

ಬಹಳ ಕಾಲದಿಂದಲೂ ಬದಲಾಗುತ್ತಿರುವ ಅಗತ್ಯತೆ ಮತ್ತು ಅವಶ್ಯಕತೆಗೆ ತಕ್ಕಂತೆ ಆಹಾರ ನೀತಿಯನ್ನೂ ರಚಿಸಲಾಗುತ್ತಿದೆ. ಇದೇ ನೀತಿಯನ್ನು ದಕ್ಷಿಣ ಏಶಿಯಾ ಮತ್ತು ಆಫ್ರಿಕ ಉಪಖಂಡದ ಅಭಿವೃದ್ಧಿಶೀಲ ದೇಶಗಳು ಸೇರಿದಂತೆ ಪ್ರಪಂಚಾದಾದ್ಯಂತ ಹೆಚ್ಚಿನ ದೇಶಗಳು ಅನುಸರಿಸುತ್ತಿವೆ. ಪಿನ್‌ಸ್ಟ್ರೆಪ್ ಅಂಡರ್‌ಸನ್ ಮತ್ತು ವಾಟ್ಸನ್‌ರವರುಗಳು ರಚಿಸಿಕೊಟ್ಟಿರುವ ಆಹಾರ ನೀತಿಯೇ ತೀರ ಇತ್ತೀಚಿನದಾಗಿದ್ದು ಅದು ವಿವಿಧ ಆಯಾಮಗಳು ಮತ್ತು ಪೌಷ್ಟಿಕತೆಯ ಮಾರ್ಗಗಳನ್ನು ಒಳಗೊಂಡಿದೆ.

ಆದರೆ ಭಾರತದಲ್ಲಿ ಆಹಾರ ನೀತಿ ನಿರೂಪಣೆ ಅತಿ ದೀರ್ಘ ಇಲ್ಲವೆ ಅತಿಶಯವಾಗಿದ್ದು ಈ ನೀತಿಗೆ ವೈಚಾರಿಕ ಸಿದ್ಧಾಂತಗಳು ಅಥವಾ ಹಿಂದೆ ಕೈಗೊಂಡ ಕಾರ್ಯಕ್ರಮಗಳು ಆಧಾರವಾಗಿವೆ. ಭಾರತದಲ್ಲಿ ಆಹಾರ ಭದ್ರತೆಗಾಗಿ ರೂಪಿಸಿರುವ 'ಸಾರ್ವಜನಿಕ ವಿತರಣಾ ಪದ್ಧತಿ' ಆ ಕಾಲಕ್ಕೆ ಸರಿಯಾಗಿ ಕೈಗೊಂಡ ಒಂದು ದೊಡ್ಡ ಕಾರ್ಯಕ್ರಮವಾಗಿದ್ದು ದೇಶದಾದ್ಯಂತ ಹಲವಾರು ರಾಜ್ಯಗಳು ಇದನ್ನೂ ಬಹಳ ಚೆನ್ನಾಗಿಯೇ ಅನುಷ್ಠಾನಗೊಳಿಸಿವೆ. ಕೆಲವೆಡೆ ಭ್ರಷ್ಟಾಚಾರ ವಿತರಣಾ ದೋಷ, ಕಳಪೆ ಗುಣಮಟ್ಟ ಇತ್ಯಾದಿಗಳ ಸಾಕಷ್ಟು ಪ್ರಮಾಣದ ನ್ಯೂನತೆಗಳು ಕಂಡುಬಂದಿವೆ.

**ಕ್ರಿಯಾತ್ಮಕ ಜಾಗತಿಕ ಆಹಾರ ಪದ್ಧತಿ : ಅಂತರ ಸಂಪರ್ಕ ಮತ್ತು ಅತಿಕ್ರಮಣ**

- ಆಹಾರ ಭದ್ರತೆ ಸೇವಿಸುವಿಕೆ ಮತ್ತು ಬೇಡಿಕೆ ನೀತಿಗಳು
- ಬಡತನ ಶಮನ ನೀತಿಗಳು
- ಆರೋಗ್ಯ ಮತ್ತು ಪೌಷ್ಟಿಕತೆ ನೀತಿ
- ಆಹಾರ ಉತ್ಪಾದನೆ ಮತ್ತು ಹಂಚಿಕೆ ನೀತಿ
- ಹವಾಮಾನ ಬದಲಾವಣೆ ಇಂಧನ ಮತ್ತು ನೈಸರ್ಗಿಕ ಸಂಪತ್ತಿನ ನಿರ್ವಹಣೆ ನೀತಿಗಳು
- ಜಾಗತೀಕರಣ ಮತ್ತು ಆಹಾರಪದ್ಧತಿ
- ಪ್ರಶಾಸನ ಮತ್ತು ಸಂಸ್ಥೆಗಳು
- ಆಹಾರ ಪದ್ಧತಿಯ ಧರ್ಮ ಸಿದ್ಧಾಂತ


* ಪ್ರಾಧ್ಯಾಪಕರು, ಹಣಕಾಸು ನಿರ್ವಹಣೆ ಮತ್ತು ಸಂಶೋಧನಾ ಸಂಸ್ಥೆ, ನವದೆಹಲಿ. E-mail : mdas@ncaer.org / mousumii.das@gmail.com




ಕಾಲ ಕಳೆದಂತೆ ಹೆಚ್ಚಿನ ರಾಜ್ಯಗಳು ಆಹಾರ ಭದ್ರತೆಯ ಇತರೆ ಆಯಾಮಗಳ ಕಡೆ ಮುಗಿಬಿದ್ದವರ ಪರಿಣಾಮ ಈ ಪಿಡಿಎಸ್ ಜನಪ್ರಿಯತೆ ಕುಗ್ಗುತ್ತಾ ಬಂತು. ಇದಕ್ಕೆ ಕಾರಣ ಕ್ರಮಬದ್ಧ ಆರೋಗ್ಯ ಮತ್ತು ಶುಚಿತ್ವದ ಕೊರತೆ, ಬದಲಿ ಆಹಾರ ಬಳಕೆ ಹಾಗೂ ಮಹಿಳಾ ಸಬಲೀಕರಣ ಇತ್ಯಾದಿ. ಆಶ್ಚರ್ಯಕರ ಸಂಗತಿ ಎಂದರೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ 2013 ಜಾರಿಗೆ ಬಂದು ದೇಶದಾದ್ಯಂತ ದ್ವಿದಳ ಧಾನ್ಯಗಳ ಕಾಳುಗಳನ್ನೂ ಹಂಚಿಕೆಯಾಗುವಂತೆ ಮಾಡಿತು. ಬದಲಿ ಆಹಾರ ಬಳಕೆಯ ಬಗ್ಗೆ ಕಡಿಮೆ ಗಮನಹರಿಸಿ ಎಲ್ಲಾ ಸಾಮರ್ಥ್ಯವನ್ನೂ ಅಷ್ಟೇನೂ ಅವಸರವಲ್ಲದ ಪಿಡಿಎಸ್‌ನ್ನು ಪುನಶ್ಚೇತನಗೊಳಿಸುವಲ್ಲಿ ತೋರಿತು. ಸಾರ್ವಜನಿಕ ವಿತರಣಾ ಪದ್ಧತಿಯ ಗುರಿಯೊಂದಿಗೆ ಹೋಲಿಸಿದಾಗ ಮಕ್ಕಳ ಪೌಷ್ಟಿಕಾಂಶ ಸ್ಥಿತಿಯಲ್ಲಿ ಯಾವ ವ್ಯತ್ಯಾಸವು ಕಾಣುತ್ತಿಲ್ಲ. ಸದ್ಯ ನಮ್ಮ ಮುಂದಿರುವ ಗುರಿ ಎಂದರೆ ಸಮಗ್ರ ಕೃಷಿ ಕ್ಷೇತ್ರದ ವಿವಿಧ ಆಯಾಮಗಳನ್ನು ಪೌಷ್ಟಿಕತೆಯು ಮಾರ್ಗದೆಡೆಗೆ ತರುವುದಾಗಿದೆ. ಸಹಸ್ರಮಾನದ ಅಭಿವೃದ್ಧಿ ಗುರಿ ಸಾಧಿಸಲು ವಿಫಲವಾಗಿರುವುದಕ್ಕೆ ಇದೂ ಒಂದು ಕಾರಣವಾಗಿದೆ. ಸಹಸ್ರಮಾನದ ಅಭಿವೃದ್ಧಿ ಗುರಿ ಪ್ರಕಾರ 1990ರಲ್ಲಿ ಭಾರತದಲ್ಲಿನ ಮಕ್ಕಳ ಅಪೌಷ್ಟಿಕತೆಯ ಪ್ರಮಾಣ ಶೇ.53.5 ಇದ್ದು ಅದನ್ನೂ 2015ರ ವೇಳೆಗೆ ಅದರ ಅರ್ಧದಷ್ಟು ಕಡಿಮೆ ಮಾಡಬೇಕಾಗಿದೆ. 2005ರಲ್ಲಿ ಈ ಪ್ರಮಾಣ ಶೇ.40 ಇದ್ದು 2015ರ ಗುರಿ ಶೇ.26 ಕಡಿಮೆ ಮಾಡುವ ಗುರಿ ಇನ್ನೂ ಬಹಳ ದೂರದಲ್ಲಿದೆ.

ಇತ್ತೀಚೆಗೆ ಸಹಸ್ರಮಾನದ ಅಭಿವೃದ್ಧಿ ಗುರಿಯನ್ನು, ಸುಸ್ಥಿರ ಅಭಿವೃದ್ಧಿ ಗುರಿ ಬದಲಾಯಿಸಿದ್ದು ಅದನ್ನು ತಲುಪುವ ಗುರಿ ಮಂಕಾಗಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ಕೃಷಿಯನ್ನೂ ಪೌಷ್ಟಿಕತೆಯ ಕಡೆಗೆ ಸಾಗಿಸುವ ಮಾರ್ಗಗಳು ಒಂದಕ್ಕೊಂದು ಬೆಸೆಯದಿರುವುದು. ಇದನ್ನೂ ಕೇಂದ್ರ ಹಾಗೂ ರಾಜ್ಯಮಟ್ಟಗಳೆರಡರಲ್ಲೂ ಕಾಣಬಹುದು. ಕೃಷಿಯನ್ನು ಪೌಷ್ಟಿಕತೆಯ ಕಡೆಗೆ ತರುವ ವಿವಿಧ ಮಾರ್ಗಗಳು ಹೀಗಿವೆ.

1. ಕೃಷಿಯನ್ನು ಆಹಾರದ ಮೂಲವಾಗಿಸುವುದು
2. ಆಹಾರ ಮತ್ತು ಆಹಾರೇತರ ವೆಚ್ಚಗಳಲ್ಲಿ ಕೃಷಿಯನ್ನೂ ಆದಾಯದ ಮೂಲವಾಗಿಸುವುದು.
3. ಆಹಾರದ ಬಳಕೆಗೆ ಅಡ್ಡಿಯಾಗುವ ಕೃಷಿ ನೀತಿ ಮತ್ತು ಆಹಾರ ಬೆಲೆಗಳ ಬಗ್ಗೆ ಗಮನ ಹರಿಸುವುದು.
4. ಕೃಷಿ ಮತ್ತು ಗೃಹಕಾರ್ಯ ನಿರತ ಮಹಿಳೆಯರಿಗೆ ಸಂಪನ್ಮೂಲ ಹಂಚಿಕೆ ಮಾಡುವುದು.
5. ಕೃಷಿಯನ್ನು ಶಿಶುಪಾಲನೆ ತಾಯಂದಿರು ಪಾಲ್ಗೊಳ್ಳುವುದು ಮತ್ತು ಶಿಶುಪಾಲನೆ ಹಾಗೂ ಹಾಲುಣಿಸುವವರ ಮೇಲೆ ಅದರ ಪರಿಣಾಮ.
6. ಕೃಷಿಯಲ್ಲಿ ಮಹಿಳೆಯರ ಕೆಲಸದ ಕಾರಣ ಅದು ಅವರ ಆರೋಗ್ಯದ



ಮೇಲೆ ಮತ್ತು ಮಕ್ಕಳ ಪೌಷ್ಟಿಕತೆಯ ಮೇಲೆ ಬೀರುವ ಪರಿಣಾಮ.

ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸಲು ವಿವಿಧ ಆಯಾಮಗಳ ಈ ಮುಂದಿನ ಉಪಗುರಿಗಳ ಮೇಲೆ ಗಮನ ಹರಿಸುವ ಅವಶ್ಯಕತೆ ಇದೆ. ಗುರಿ 1 (ಶೂನ್ಯ ಬಡತನ) ಗುರಿ 2 (ಶೂನ್ಯ ಹಸಿವು) ಗುರಿ 3 (ಒಳ್ಳೆಯ ಆರೋಗ್ಯ ಮತ್ತು ಯೋಗಕ್ಷೇಮ) ಗುರಿ 6 (ಪರಿಶುದ್ಧ ನೀರು ಮತ್ತು ಶುಚಿತ್ವ) ಗುರಿ 12 (ಸುಸ್ಥಿರ ಬಳಕೆ ಮತ್ತು ಉತ್ಪಾದನೆ) ಗುರಿ 13 (ಹವಾಮಾನ ಕ್ರಮ).

ಆಹಾರ ಭದ್ರತೆ ಉದ್ದೇಶ ತಲುಪಲು ಅನೇಕ ಗುರಿ ಮತ್ತು ಉಪಗುರಿಗಳನ್ನು ಕ್ರಮಿಸಬೇಕಾಗುತ್ತದೆ. ಇದು ವಿವಿಧ ಸಚಿವಾಲಯ ಹಾಗೂ ಇಲಾಖೆಗಳಿಗೆ ಹರಡಿದ್ದು ಇವುಗಳನ್ನು ಪ್ರತ್ಯೇಕವಾಗಿ



ಕಾರ್ಯನಿರ್ವಹಿಸದೆ ಒಂದೇ ಸೂರಿನಡಿ ತರಬೇಕಾಗಿದೆ. 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸಲು ಸರ್ಕಾರಕ್ಕೆ ಸಣ್ಣ ಹಾಗೂ ಮಧ್ಯಮ ಕೌಶಲ್ಯಗಳನ್ನು ಬಳಸುವಂತೆ ಈ ಒಂದು ಲೇಖನದಲ್ಲಿ ಸಲಹೆ ನೀಡಲಾಗಿದೆ. ಈಗ ಜಗತ್ತಿನಾದ್ಯಂತ ಸುಸ್ಥಿರ ಅಭಿವೃದ್ಧಿ ಗುರಿ ಮುಟ್ಟಲು ಸುಸ್ಥಿರ ಜಾಗತಿಕ ಆಹಾರ ಪದ್ಧತಿಯ ಕೆಲಸ ನಡೆಯುತ್ತಿದ್ದು ಈ ಕೊಂಡಿ ಕಳೆದುಕೊಂಡಿರುವ ಭಾರತ ಈ ದಿಕ್ಕಿನಲ್ಲಿ ಅತ್ಯಂತ ತ್ವರಿತ ಗಮನಹರಿಸಬೇಕಾಗಿದೆ. ಸಲಹೆಗಳು ಹೀಗಿವೆ.

**ಅ. ಬದಲಿ ಆಹಾರ : ಅವಶ್ಯಕತೆಯ ನಿರ್ಲಕ್ಷ್ಯ**

ಜನರು ಬೇರೆ ಬೇರೆ ಆಹಾರ ಪದ್ಧತಿ ಬಳಸುವಂತೆ ಸರ್ಕಾರವು ತ್ವರಿತ ಉತ್ತೇಜನ ನೀಡಬೇಕು. ರಾಷ್ಟ್ರೀಯ ಪೌಷ್ಟಿಕ ಆಹಾರ ಸಂಸ್ಥೆ ನಿರೂಪಿಸಿರುವ ಆಹಾರ ಪಿರಮಿಡ್ ಬಹುಜನರ ಗ್ರಹಿಕೆಗೆ ಮೀರಿದ್ದಾಗಿದೆ, ಈ ದಿಕ್ಕಿನಲ್ಲಿ ಜನರಿಗೆ ತಿಳಿವಳಿಕೆ ನೀಡಲು ಸರಳ ಆದರೆ ಆಕರ್ಷಣೀಯ ತಂತ್ರಗಾರಿಕೆ ಬಳಸುವ ಅವಶ್ಯಕತೆ ಇದೆ. ಉದಾಹರಣೆಗೆ ಅಮೆರಿಕದ ಕೃಷಿ ಇಲಾಖೆ ಪರಿಚಯಿಸಿರುವ "ವರ್ಣರಂಜಿತ ತಟ್ಟೆ ಸಿದ್ಧಾಂತ ಸಣ್ಣ ಶಿಶುವಿನಿಂದ ಹಿಡಿದು ವಯಸ್ಕರವರೆಗೆ ಸುಲಭವಾಗಿ ಅರ್ಥವಾಗುವಂತಿದೆ. ಬಣ್ಣವು ಪ್ರತಿದಿನ ತಟ್ಟೆಯಲ್ಲಿರುವ ಆಹಾರ ಪದಾರ್ಥಗಳ ಸಂಯೋಜನೆಯನ್ನು ಸಾಂಕೇತಿಸುತ್ತದೆ. ವಿವಿಧ ಆಹಾರ ಪದಾರ್ಥಗಳಾದ ಬೇಳೆಕಾಳುಗಳು, ಧಾನ್ಯಗಳು, ಹಣ್ಣುಗಳು, ತರಕಾರಿಗಳು, ಮಾಂಸ ಇತ್ಯಾದಿಗಳು ವಿವಿಧ ಬಣ್ಣಗಳನ್ನೂ ಹೊಂದಿರುತ್ತವೆ. ಈ ರೀತಿಯ ಸಿದ್ಧಾಂತವನ್ನು ಅನುಸರಿಸುವಂತೆ ಭಾರತದ ಮನೆ ಮನೆಗಳಲ್ಲೂ ಉತ್ತೇಜಿಸಬೇಕು.

ನಮ್ಮ ಸಂಸ್ಕೃತಿ ಮತ್ತು ಸ್ಥಳೀಯ ಆಹಾರ ಪದ್ಧತಿಗೆ ನಾವು ಗಂಭೀರ ಪ್ರಾಮುಖ್ಯತೆಯನ್ನೂ ನೀಡುವಂತೆ ಮತ್ತು ಪೌಷ್ಟಿಕಾಂಶ ಸುಧಾರಿಸುವ ಪದಾರ್ಥಗಳಿಗೆ ಗಮನ ನೀಡಬೇಕಾಗಿದೆ. ದೇಶದ ಆಹಾರ ಉತ್ಪಾದನೆಯ ಬದಲಾವಣೆ ಬಳಕೆ ಮತ್ತು ತಯಾರಿಕೆಯಲ್ಲಿ ಉನ್ನತ ಮಾರ್ಗ ಸಂಧಾನದಿಂದ ನಿಜವಾಗಿಯೂ ಆಡಳಿತ ಮತ್ತು ಹೊಣೆಗಾರಿಕೆಯಲ್ಲಿ ಹೆಚ್ಚು ಮಹತ್ವ ನೀಡಿದಂತಾಗುತ್ತದೆ. ಪರಿಸ್ಥಿತಿಯ ಆಧಾರದ ಮೇಲೆ ಹಣದ ಹಂಚಿಕೆಯಾಗಬೇಕಾಗುತ್ತದೆ. ಇದೆಲ್ಲಾ ಆಗಬೇಕಾದರೆ ಎಲ್ಲಾ ಇಲಾಖೆಗಳು ಒಂದೇ ಸೂರಿನಡಿ ಕಾರ್ಯ ನಿರ್ವಹಿಸಬೇಕು. ಯಾವುದೇ ನೀತಿಯನ್ನೂ ಫಲಪ್ರದವಾಗಿಸಲು ಆದೇಶದಲ್ಲಿ ಉತ್ತಮ ಮೂಲಭೂತ ಸೌಕರ್ಯಗಳಿರುವುದು ಅವಶ್ಯಕ. ಮೂಲ ಸೌಕರ್ಯಗಳು ವೈದ್ಯಕೀಯ ಕೇಂದ್ರಗಳ ಲಭ್ಯತೆ ಮತ್ತು ವಾರ್ತಾಪತ್ರಿಕೆಗಳು ಬದಲಿ ಆಹಾರ ಬಳಕೆಗೆ ಉತ್ತೇಜನ ನೀಡುವ ಪ್ರಮುಖ ಉಪಕರಣಗಳು ಎಂದು ಪೋಷಕಾಂಶ ತಜ್ಞ ದಾಸ್ ಅಭಿಪ್ರಾಯಪಟ್ಟಿದ್ದಾರೆ.

**ಆ. ಗುರಿ ತಲುಪುವ ಯಾಂತ್ರಿಕತೆಯ ಪರಿಷ್ಕರಣೆ : ಯಾರು ದುರ್ಬಲರು?**

ಭಾರತದ ತೀರಾ ಬಡಜನತೆಗೆ ಆಹಾರ ಧಾನ್ಯಗಳ ಉಚಿತ ಹಂಚಿಕೆ ಅಗತ್ಯವಾಗಿದ್ದರೆ ಉಳಿದ ಜನರ ಆಹಾರ ಸೇವಿಕೆಯ ಕ್ಯಾಲೋರಿ ಪ್ರಮಾಣದಲ್ಲಿ ಸುಧಾರಣೆ ಕಂಡುಬಂದಿದೆ.




ಏಕೆಂದರೆ 2009ರಲ್ಲಿ ಗ್ರಾಮೀಣ ಮತ್ತು ನಗರವಾಸಿಗಳಿಬ್ಬರ ಕ್ಯಾಲೋರಿ ಸೇವನೆ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿತ್ತು. ಆಹಾರ ಧಾನ್ಯಗಳು ಮತ್ತು ಕಾಳುಗಳನ್ನು ಬಿಟ್ಟು ಇತರೆ ಆಹಾರ ವಸ್ತುಗಳನ್ನೂ ಸಬ್ಸಿಡಿ ದರದಲ್ಲಿ ಒದಗಿಸುವುದು ಸ್ವಲ್ಪ ಕಷ್ಟವಾದರೂ, ಸ್ಥಳೀಯ ಬಳಕೆ ಮತ್ತು ಉತ್ಪಾದನಾ ವಿಧಾನಗಳಿಗೆ ಅನುಸರಿಸಿ ತರಕಾರಿ, ಹಣ್ಣು, ಹಾಲು, ಮೊಟ್ಟೆ, ಮೀನು ಮತ್ತು ಮಾಂಸ ಉತ್ಪಾದಕರಿಗೆ ಪ್ರೋತ್ಸಾಹಕ ಹಣವನ್ನು ನೀಡಬೇಕು. ಉದಾಹರಣೆಗೆ ಆಹಾರದ ಗುಣಮಟ್ಟ ಸುಧಾರಿಸಲು ದ್ವಿದಳ ಧಾನ್ಯಗಳಿಗೆ ಹೆಚ್ಚಿನ ಉತ್ತೇಜನ ನೀಡಬೇಕೆಂದು ಇತ್ತೀಚಿನ ಅಧ್ಯಯನ ವರದಿಗಳು ಹೇಳಿವೆ. ಭಾರತದಲ್ಲಿ ಶೀತ ಸಂಗ್ರಹಾಗಾರಗಳ ಕೊರತೆ ಇದೆ. ಇದನ್ನು ಸುಧಾರಿಸಿದರೆ ಪೌಷ್ಟಿಕಾಂಶ ಆಹಾರದ ಬಳಕೆಯನ್ನು ಸುಲಲಿತ ಹಂಚಿಕೆ ಮತ್ತು ಸುಲಭ ಲಭ್ಯಗೊಳಿಸುವ ಮೂಲಕ ಸಾಧಿಸಬಹುದು. ಶಾಲೆಗಳ ಮಧ್ಯಾಹ್ನ ಊಟದಲ್ಲಿ ಬೇಳೆ-ಕಾಳುಗಳು ಮತ್ತು ಧಾನ್ಯಗಳ ಮಿಶ್ರಣ ನೀಡುವ ಮತ್ತು ಕೆಲವು ರಾಜ್ಯಗಳಲ್ಲಿ ಮೊಟ್ಟೆ ನೀಡುವ ಮೂಲಕ ಹೆಚ್ಚಿನ ಪೌಷ್ಟಿಕಾಂಶಕ್ಕೆ ಅನುವು ಮಾಡಿಕೊಡಲಾಗಿದೆ.

**ಬಡತನ ರೇಖೆಯಲ್ಲಿರುವವರ ಆಹಾರ ಘಟಕಾಂಶಗಳನ್ನೂ ಸುಧಾರಿಸುವುದು:** ತೆಂಡೂಲ್ಕರ್ ಮತ್ತು ರಂಗರಾಜನ್ ಸಮಿತಿಗಳೆರಡೂ ಆಹಾರದಲ್ಲಿ ಕ್ಯಾಲೊರಿಗಿಂತ ಪೌಷ್ಟಿಕಾಂಶಗಳ ಪ್ರಾಮುಖ್ಯತೆಯನ್ನು ಗುರುತಿಸಿದ್ದು ಅದನ್ನು ಬಡತನ ರೇಖೆಯ ಜನಗಳ ಆಹಾರದಲ್ಲಿ ಸೇರಿಸಬೇಕು ಎಂದಿದ್ದಾರೆ. ನಾವು ಈಗ ಹೇಳುತ್ತಿರುವ ಬದಲಿ ಆಹಾರದ ಹೊಸ ಮಾಪನವನ್ನು 'ಭಾರತದ ಆರೋಗ್ಯಕರ ಆಹಾರ ಸೂಚ್ಯಂಕ'ವೆಂದು ಕರೆಯಬಹುದು. ಇದು ಬದಲಿ ಆಹಾರ ಸೇವಿಸುವಿಕೆ ಪ್ರಮಾಣದ ಆಧಾರದ ಮೇಲೆ ಬಡ

ಮನೆಗಳನ್ನೂ ಗುರುತಿಸಲು ನೆರವಾಗುತ್ತದೆ. ಸಸ್ಯಹಾರಿಗಳಲ್ಲದೆ, ಮಾಂಸಹಾರಿಗಳು ಕಡಿಮೆ ಬದಲಿ ಆಹಾರ ಸೇವಿಸುತ್ತಿದ್ದರೆ ಅಂತಹವರನ್ನೂ ಈ ಸೂಚ್ಯಂಕದ ಮೂಲಕ ಗುರುತಿಸಬಹುದಾಗಿದೆ. ಇದಲ್ಲದೆ ಮನೆಯವರ ದೌರ್ಬಲ್ಯತೆಯ ಪ್ರಮಾಣವನ್ನು ತಿಳಿಯಬಹುದಾಗಿದೆ. ಬಡತನ ರೇಖೆ ಹೆಚ್ಚು ಕ್ರಿಯಾಶೀಲವಾಗಿರಬೇಕು ಮತ್ತು ದುರ್ಬಲತೆಯನ್ನು ಗುರುತಿಸಲು ನೆರವಾಗಬೇಕು. ದಿಢೀರನೆ ಆರೋಗ್ಯ ಅಥವಾ ನೈಸರ್ಗಿಕ ವಿಕೋಪಗಳಿಗೆ ಈಡಾದವರಿಗೆ ಆಹಾರ ಪದಾರ್ಥಗಳ ಹಂಚಿಕೆ ಅಗತ್ಯವಾಗಬಹುದು ಇಂತಹ ಸಂದರ್ಭಗಳನ್ನೂ ಆಹಾರ ಬಳಕೆ ಪ್ರಮಾಣವನ್ನು ಕಡಿತಗೊಳಿಸುವುದರ ಮೂಲಕ ನಿಭಾಯಿಸಬಹುದು.

### ಇ. ಡಿಜಿಟಲ್ ಪರಿಹಾರ : ವರ್ಗಾವಣೆ ಮತ್ತು ಗುರುತಿಸುವಿಕೆ

ಸ್ಥಳೀಯ ಪುರಾವೆಗಳ ಆಧಾರದ ಮೇಲೆ ಹಣ ಅಥವಾ ಪದಾರ್ಥಗಳನ್ನೂ ವರ್ಗಾವಣೆ ಮಾಡಬೇಕು. ಎಲ್ಲಿ ಸಾರ್ವಜನಿಕ ವಿತರಣ ಪದ್ಧತಿ ಫಲಪ್ರದವಾಗಿದೆಯೋ ಅಲ್ಲಿ ಅದನ್ನೇ ಮುಂದುವರಿಸಬೇಕು. ನಗದು ವರ್ಗಾವಣೆಯನ್ನು ಮನೆಯವರ ಆಹಾರ ಭದ್ರತೆ ಸ್ಥಿತಿಗತಿ ಸುಧಾರಿಸಲು ಮಾತ್ರ ಬಳಸಬೇಕು ಎಂಬ ಎಚ್ಚರಿಕೆ ನೀಡಬೇಕು. ಈ ನಗದು ವರ್ಗಾವಣೆ ಮನೆಯವರನ್ನು ಮಾಮೂಲಿ ಆಹಾರ ಬಳಕೆಗಿಂತ ಹೆಚ್ಚಿನ ಪೌಷ್ಟಿಕಾಂಶವುಳ್ಳ ಹಾಗೂ ಬದಲಿ ಆಹಾರ ಬಳಸುವಂತೆ ಪ್ರೇರೇಪಿಸಬಹುದು. ಪಿಡಿಎಸ್ ಮೂಲಕ ಹಂಚಿಕೆಯಾಗುವ ಧಾನ್ಯಗಳ ಗುಣಮಟ್ಟದ ಮೇಲೆ ನಾವು ಹೆಚ್ಚು ಗಮನ ಹರಿಸಬೇಕು, ಏಕೆಂದರೆ ಜನಸಂಖ್ಯೆ ಕೆಳಹಂತದ ಜನ ಇದನ್ನು ನಂಬಿಕೊಂಡಿರುವುದು. ಈ ಸಂದರ್ಭದಲ್ಲಿ ಮಹಿಳಾ ಸಬಲೀಕರಣ ಒಂದು ಮುಖ್ಯ ಅಂಶವಾಗಿದೆ. ಮನೆಗಳಲ್ಲಿ ಹಿರಿಯ ಮಹಿಳೆಯರೇ ಯಾವುದೇ ವಿಷಯದ ಬಗೆಗಿನ ತೀರ್ಮಾನ





ತೆಗೆದುಕೊಳ್ಳುವವರಾಗಿದ್ದು ಅಂತಹವರನ್ನೂ ಹೆಚ್ಚು ಶಿಕ್ಷಿತರನ್ನಾಗಿ ಮಾಡಿದರೆ ಅವರು ಆಹಾದ ಬದಲಿಕೆಗೆ ಹೆಚ್ಚು ಉತ್ತೇಜನ ನೀಡಬಹುದು.

ಆಧಾರ್‌ಕಾರ್ಡ್ ಮತ್ತು ಹಣರಹಿತ ಬ್ಯಾಂಕ್ ಖಾತೆ ಮೂಲಕ ಜನಗಳಿಗೆ ಹಣದ ನೇರ ವರ್ಗಾವಣೆ ಆಗುತ್ತದೆ. ಅಲ್ಲದೆ ಇವುಗಳಿಂದ ಅವರ ಆರೋಗ್ಯ ಸ್ಥಿತಿಗತಿಗಳನ್ನೂ ಗುರುತಿಸಬಹುದಾಗಿದೆ. ದೇಶದಲ್ಲಿ ನಡೆಯುತ್ತಿರುವ ಡಿಜಿಟಲ್ ಕ್ರಾಂತಿಯಿಂದ ನಿಯಮಿತಿ ಅಂತರದಲ್ಲಿ ಬಡಜನತೆಯನ್ನೂ ಗುರುತಿಸಬಹುದಾಗಿದೆ.

2017–18ನೇ ಸಾಲಿನಲ್ಲಿ "ಆಧಾರ್‌ಕಾರ್ಡ್ ಸಂಪರ್ಕ ಸೇತುವೆ ಪಾವತಿ" ಮೂಲಕ ಶೇ. 51ಕ್ಕೂ ಅಧಿಕ ಪ್ರಯೋಜನದಾರರನ್ನೂ ಗುರುತಿಸಲಾಗಿದೆ. ಆಹಾರ ಧಾನ್ಯ ಕೊಳ್ಳಲು ನಗದು ವರ್ಗಾವಣೆ ಪಡೆದವರ ಪ್ರಮಾಣ ಶೇ.94 ಆಗಿದೆ. ಸರ್ಕಾರದ ಅಂದಾಜಿನ ಪ್ರಕಾರ ಡಿಸೆಂಬರ್ 2016ರ ವರೆಗೆ ರೂ. 50,000 ಕೋಟಿ ಹಣ ಉಳಿಸಲಾಗಿದ್ದು ಇದು ಒಂದು ವರ್ಷದ ಸಬ್ಸಿಡಿ ಹಣಕ್ಕೆ ಸಮನಾಗಿದೆ. ಇದು ಬಡತನ ಗುರುತಿಸುವಿಕೆ ವೆಚ್ಚದಲ್ಲಿ ಹೆಚ್ಚುವರಿ ಕಡಿತ ಮಾಡಲು ನೆರವಾಗುತ್ತದೆ. ಈ ಎಲ್ಲಾ ಕೆಲಸ ನಿರ್ವಹಿಸಲು ಯಾವುದೇ ಇಲಾಖೆಯನ್ನೂ ತೆರೆಯುವಂತೆ ಅಥವಾ ಹೆಚ್ಚುವರಿ ಸಿಬ್ಬಂದಿಯನ್ನೂ ನೇಮಿಸಿಕೊಳ್ಳುವಂತೆ ನಾವು ಸಲಹೆ ಮಾಡುವುದಿಲ್ಲ. ಆದರೆ ಈಗಿರುವ ಸಿಬ್ಬಂದಿಯಿಂದಲೇ ಬಡಜನತೆ ಹೆಚ್ಚಿರುವ ಪ್ರದೇಶಗಳಲ್ಲಿ ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬಹುದು.

ಈ ರೀತಿಯ ಒಂದು ಕೌಶಲ್ಯತೆಯನ್ನು ಮಂಗೋಲಿಯ ದೇಶದ ತೀರ ಒಳಗಿನ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗಿದ್ದು ಬಡತನವನ್ನೂ ಶಾಶ್ವತವಾಗಿ ತೆಗೆದುಹಾಕಲು ಮನೆಯವರನ್ನು ನಿರಂತರವಾಗಿ ಸಜ್ಜುಗೊಳಿಸಲಾಗಿದೆ.

### ಈ. ಸಂಪತ್ತು ಮತ್ತು ಸ್ಥೂಲಕಾಯ

ಅಪೌಷ್ಟಿಕತೆಯ ಹೊರತಾಗಿ ಭಾರತ ಹೆಚ್ಚಿನ ಪ್ರಮಾಣದಲ್ಲಿ ಸ್ಥೂಲಕಾಯತೆ ಮತ್ತು ಸೂಕ್ಷ್ಮ ಪೋಷಕಾಂಶ ಕೊರತೆಯಿಂದ ನರಳುತ್ತಿದೆ. ಹೆಚ್ಚಿನ ಮಧ್ಯಮವರ್ಗ ಮತ್ತು ಶ್ರೀಮಂತ ಜನತೆ ಇಂದು ಬಿಜಿಯಾಗಿದ್ದಾರೆ. ಇದಕ್ಕೆ ಹಲವಾರು ಕಾರಣಗಳಿವೆ. ಅತ್ಯಂತ ವೇಗದ ನಗರೀಕರಣ, ಜೀವನ ಶೈಲಿ, ಎಣ್ಣೆ ಮತ್ತು ಕೊಬ್ಬಿನ ಪದಾರ್ಥಗಳ ಸುಲಭ ಲಭ್ಯತೆ, ಮಾರುಕಟ್ಟೆ ಪ್ರಚಾರ ಇತ್ಯಾದಿಗಳು. ಈ ವಿಧದ ಆಹಾರ ಬಳಕೆಯು ರಕ್ತಕಣಗಳ ಏರುಪೇರು, ಮಧುಮೇಹ, ಹೃದಯಸ್ತಂಭನ ಮುಂತಾದ ತೀವ್ರತರಹದ ಕಾಯಿಲೆಗಳಿಗೆ ಆಹ್ವಾನವೆಂದು ಅವರು ಅರ್ಥ ಮಾಡಿಕೊಳ್ಳಬೇಕು. ಅನಾರೋಗ್ಯಕರ ಕೊಬ್ಬಿನ ಪದಾರ್ಥಗಳನ್ನೂ ಬಳಕೆ ಮಾಡುವಂತೆ ಉತ್ತೇಜನ ನೀಡುತ್ತಿರುವ



ಉತ್ಪಾದನಾಕಾರರಿಗೆ ಮತ್ತು ಸೂಪರ್ ಮಾರ್ಕೆಟ್‌ಗಳಿಗೆ ಹೆಚ್ಚಿನ ತೆರಿಗೆ ಹಾಕುವುದರ ಮೂಲಕ ಸರ್ಕಾರ ಮಧ್ಯ ಪ್ರವೇಶಿಸಬೇಕು. ಒಟ್ಟಿನಲ್ಲಿ ಸಮಾಜ ಮತ್ತು ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಮೇಲೆ ಈ ಅಪೌಷ್ಟಿಕತೆ ಒಂದು ಹೆಚ್ಚಿನ ಆರ್ಥಿಕ ಹೊರೆಯಾಗಿದೆ.

### ಉ. ಆಹಾರ ರಕ್ಷಣೆ : ಹಾನಿ ಮತ್ತು ನಷ್ಟ

ಪ್ರಸ್ತುತ ಇದು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿರುವ ವಿದ್ಯಮಾನವಾಗಿದೆ. ಅತ್ತ ಸಾರ್ವಜನಿಕ ವಿತರಣಾ ಪದ್ಧತಿ ಸೋರುವಿಕೆ ಮತ್ತು ಭ್ರಷ್ಟಾಚಾರಕ್ಕೆ ಒಳಗಾಗಿದ್ದರೆ ಇತ್ತ ಶೀತ ಸಂಗ್ರಹಾಗಾರಗಳ ಅಲಭ್ಯತೆಯಿಂದ ಸಾಕಷ್ಟು ಪ್ರಮಾಣದ ಆಹಾರ ಹಾನಿಯಾಗುತ್ತಿದೆ. ಇದರ ಬಗ್ಗೆ ಒಂದು ಸಂಶೋಧನೆ ಉಪಯೋಗವಾಗಬಲ್ಲದು ಆದರೆ ನಾವು ಈಗ ಆಹಾರ ಪದಾರ್ಥಗಳ ಹಾನಿ ಮತ್ತು ನಷ್ಟ ತಡೆಯುವಿಕೆಗೆ ಉತ್ಪಾದನೆ ಮತ್ತು ಆಹರ ಸಂಗ್ರಹಣದಲ್ಲಿ ರಾಸಾಯನಿಕಗಳ ಬಳಕೆಯನ್ನೂ ಕಡಿಮೆ ಮಾಡಬೇಕಾಗಿದೆ. ಭಾರತದಲ್ಲಿ ಆಹಾರ ಸಂರಕ್ಷಣೆಯ ಬಗ್ಗೆ

ಯಾವುದೇ ವರದಿ ಸಿಗುತ್ತಿಲ್ಲದಿರುವುದು ಒಂದು ಎಚ್ಚರಿಕೆಯ ಗಂಟೆಯಾಗಿದೆ. ಉದಾಹರಣೆಗೆ ಅಫ್ಲಾಟಾಕ್ಸಿನ್ ಎಂಬುದು ಮಾನವನ ಆರೋಗ್ಯಕ್ಕೆ ಹಾನಿಕರವಾಗಿದ್ದು ಮಕ್ಕಳಷ್ಟೆ ಅಲ್ಲದೆ ವಯಸ್ಕರಲ್ಲೂ ಅಪೌಷ್ಟಿಕತೆ ಮತ್ತು ದೀರ್ಘಕಾಲದ ರೋಗಗಳಿಗೆ ಕಾರಣವಾಗಿದೆ. ಭಾರತದಲ್ಲಿ ಡೈರಿ ರೈತರು ಅನುಸರಿಸುತ್ತಿರುವ ಆಹಾರ ಸಂರಕ್ಷಣೆಯು ನಾನಾ ಪ್ರಚೋದನಾ ಅಂಶಗಳಿಂದ ಪ್ರೇರಿತವಾಗಿದ್ದು ಇದನ್ನು ಬೆಲೆ ಹೆಚ್ಚಿಸುವ ಮೂಲಕ ಮಾತ್ರ ಸರಿತೂಗಿಸಬಹುದಾಗಿದೆ. ಹವಾಮಾನ ಬದಲಾವಣೆಯು ಆಹಾರ ಸಂರಕ್ಷಣೆ ಇನ್ನೊಂದು ಬಹುಮುಖ್ಯ ಸಂಬಂಧಿತ ವಿಷಯವಾಗಿದೆ. ಉದಾಹರಣೆಗೆ ಗಂಗಾನದಿ ಬಯಲಿನಲ್ಲಿ ಆಹಾರ ಪದ್ಧತಿಯನ್ನೂ ಹವಾಮಾನಕ್ಕನುಗುಣವಾಗಿ ಹೊಂದಾಣಿಕೆಯಾಗಿರುವ ವಿಷಯ.


ಮೇಲೆ ತಿಳಿಸಿದ ಶೀಘ್ರ ಕ್ರಮಗಳು ಪೌಷ್ಟಿಕಾಂಶಗಳ ಉನ್ನತಿಗೆ ಮುಖ್ಯವಾದರೂ



ಜಾಗತಿಕ ಆಹಾರ ಪದ್ಧತಿ ಅನುಸರಿಸುವ ನಾವು ಬಹಳ ದೂರದಲ್ಲಿದ್ದೇವೆ. ಅಪೌಷ್ಟಿಕತೆಯ ತ್ರಿವಿಧ ಹೊರೆಯನ್ನು ಎದುರಿಸಲು ನಮ್ಮ ದೇಶದ ಆಹಾರ ನೀತಿಯ ಚೌಕಟ್ಟು ಪರಿಶುದ್ಧವಾಗಿರಬೇಕು. ಮೇಲೆ ತಿಳಿಸಿದಂತೆ ಭಾರತ ಯಾವಾಗಲೂ ತನಗೆ ಬದ್ಧವಾದ ಆಹಾರ ನೀತಿಯನ್ನು ರಚಿಸಿಕೊಂಡಿಲ್ಲ. ಅದರ ಬದಲು ಅವಸರದಲ್ಲಿ ಮತ್ತು ಆಹಾರ ಸಂಗ್ರಹಣಕಾರರ ಲಾಬಿಗೊಳಗಾಗಿ ಕಾರ್ಯಕ್ರಮವನ್ನು ವಿನ್ಯಾಸಗೊಳಿಸುತ್ತದೆ. ಈ ರೀತಿಯ ಸಂಕುಚಿತ ಕೇಂದ್ರಿತ ಪದ್ಧತಿಯನ್ನು ವಿನ್ಯಾಸಗೊಳಿಸುವುದು ಅಷ್ಟು ಸುಲಭವಲ್ಲ. ಆದ್ದರಿಂದ ಸುಸ್ಥಿರ ಅಭಿವೃದ್ಧಿ ಗುರಿಯನ್ನೂ ಮನಸ್ಸಲ್ಲಿಟ್ಟುಕೊಂಡು ಸಣ್ಣ ಮತ್ತು ಮಧ್ಯಮ ಅವಧಿಗಳ ಗುರಿಗಾಗಿ ಶೀಘ್ರ ಪರಹಾರ ಕ್ರಮಗಳನ್ನೂ ತಯಾರಿ ಮಾಡಿಟ್ಟುಕೊಳ್ಳಬೇಕಾಗಿದೆ.

### ಪೌಷ್ಟಿಕಾಂಶ ಮಾರ್ಗಗಳಿಗಾಗಿ ಕೃಷಿ

ಅತ್ಯಂತ ಜರೂರಿನ ಹಾಗೂ ತಕ್ಷಣದ ಅವಶ್ಯಕತೆಯುಳ್ಳವರಿಗಾಗಿ ಹಣದ ಹಂಚಿಕೆ ಮಾಡಲು ವಿಶಾಲ ದೃಷ್ಟಿಕೋನದ ಏಕೀಕೃತ ಇಲಾಖೆ ರಚಿಸಬೇಕು. ಪುರಾವೆ ಆಧರಿತ ಆಹಾರ ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸುಸ್ಥಿರ ಅಭಿವೃದ್ಧಿ ಗುರಿ ಅನುಮೋದಿತ ಸೂಚ್ಯಂಕಗಳು ಮತ್ತು ಉಪಗುರಿಗಳನ್ನು ನೇರ ಮತ್ತು ದಿಟ್ಟ ವಿಶ್ಲೇಷಣೆಗೆ ಒಳಪಡಿಸಿಕೊಂಡು ಕಾರ್ಯಕ್ರಮ ಸಿದ್ಧಪಡಿಸುವ ಅಗತ್ಯವಿದೆ. ಇದನ್ನು ಇತರ ಅತ್ಯಾಧುನಿಕ ತಂತ್ರಜ್ಞಾನದಿಂದ ಸಜ್ಜುಗೊಳಿಸಬೇಕಾಗಿದೆ. ❑

# ಮಧ್ಯಾಹ್ನದ ಬಿಸಿ ಊಟ ಯೋಜನೆ

* ಕಿರಣ ಭಟ್ಟಿ



ಸಾಮಾಜಿಕ ಭದ್ರತೆ
ಮತ್ತು
ಶಿಕ್ಷಣ ವಲಯಗಳು
ಒಂದಕ್ಕೊಂದು ಪೂರಕವಾಗಿದ್ದು
ಯಶಸ್ವಿಯಾಗಿವೆ.
ಶಿಕ್ಷಣ ಪಡೆಯಬೇಕಾದರೆ
ಕಡು ಬಡತನದಲ್ಲಿರುವ
ಮಕ್ಕಳಿಗೆ
ಯಾವುದಾದರೂ
ಒಂದು ರೀತಿಯ
ಸಾಮಾಜಿಕ ಭದ್ರತೆ ಅವಶ್ಯ.
ಆದರೆ
ಶಿಕ್ಷಣ ಕೂಡ
ಮುಂದೆ ಬರಬಹುದಾದ
ಸಂಕಷ್ಟ ತಪ್ಪಿಸಲು
ನೀಡುವ
ಸಾಮಾಜಿಕ ಭದ್ರತೆ
ಎನ್ನಬಹುದು.

ದೇಶದ ಪ್ರತಿಯೊಬ್ಬ ನಾಗರಿಕ ಸುಖದಿಂದ ಇರಬೇಕೆನ್ನುವುದು ಸಾಮಾಜಿಕ ಭದ್ರತೆಯ ಸಾಮಾನ್ಯವಾದ ಉದ್ದೇಶವಾಗಿದೆ.

ವಿಶೇಷವಾಗಿ ಸಮಾಜದ ಪ್ರತಿಯೊಬ್ಬ ನಾಗರಿಕರಿಗೆ ಗೌರವಯುತ ಜೀವನ ನಡೆಸಲು ಯೋಗ್ಯವಾದ ವಾತಾವರಣ ಮತ್ತು ಸೌಲಭ್ಯ ನೀಡುವುದು ಸಾಮಾಜಿಕ ಭದ್ರತೆಯ ಗುರಿಯಾಗಿದೆ. (1. ಸಾಮಾಜಿಕ ಒಪ್ಪಂದ ಎನ್ನುವ ಅಂಶ ಪ್ಲಾಟೊ ಹೊಬಸ್ ಲೋಕೆ ಮತ್ತು ರೊಸೆರೊಕ ಕಾಲದಿಂದ ಹಲವಾರು ಬದಲಾವಣೆಗಳನ್ನು ಹೊಂದಿದ್ದು ಮೂವರ ವಿಚಾರ ಕ್ರೊಢೀಕರಿಸಿ ಅರ್ಥೈಸಬಹುದು.) ಇದು ಒಂದು ರೀತಿಯಲ್ಲಿ ಸಮಾಜದ ಜೊತೆ ಮಾಡಿ ಕೊಂಡ (ಅಂದರೆ ಸಂಸ್ಥೆಗಳಾಗಿರಬಹುದು ಅಥವಾ ವ್ಯಕ್ತಿಗಳ ಜೊತೆಯಾಗಿರಬಹುದು) ಅಲಿಖಿತ ನೈತಿಕ ಒಪ್ಪಂದವಾಗಿದ್ದು ಎಲ್ಲರ ಭದ್ರತೆ ಮತ್ತು ರಕ್ಷಣೆಯು ಇದರ ಮೂಲ ಆಶಯವಾಗಿದೆ. ಪ್ರಜಾ ಪ್ರಭುತ್ವದಲ್ಲಿ ಸಾಮಾಜಿಕ ಒಪ್ಪಂದದ ಪಾತ್ರ ಬಹಳ ಪ್ರಮುಖವಾಗಿದೆ.

ಸಾಮಾಜಿಕ ಭದ್ರತೆಯ ಪರಿಕಲ್ಪನೆಯ ಇತಿಹಾಸ ಅವಲೋಕಿಸಿದಾಗ ಈ ಪರಿಕಲ್ಪನೆ ಅತಿ ಪುರಾತನವಾಗಿದ್ದು, ಲಭ್ಯ ದಾಖಲೆಗಳ ಪ್ರಕಾರ ರೋಮ್ ಸಾಮ್ರಾಜ್ಯದಲ್ಲಿಯೂ ಬಡವರಿಗೆ ಉಚಿತ ಆಹಾರ ಧಾನ್ಯ ವಿತರಿಸುತ್ತಿದ್ದ ಅಂಶ ದಾಖಲಾಗಿದೆ. ನಂತರದ ಅವಧಿಯಲ್ಲಿ ಇಂಗ್ಲೀಷ್ ಪೂರ್ ಲಾ (1601) ಮತ್ತು ಯು.ಎಸ್. ಸೋಶಿಯಲ್ ಸೆಕ್ಯುರಿಟಿ ಆಕ್ಟ್ (1935) ಗಳು ಇವೇ ಪರಿಕಲ್ಪನೆಯನ್ನು ಹೊಂದಿದ್ದವು ಎಂದು ತಿಳಿದು ಬರುತ್ತದೆ. ಒಟ್ಟಿನಲ್ಲಿ ಸಾಮಾಜಿಕ ಭದ್ರತೆ ಎಂದರೆ ಸಾಮಾನ್ಯವಾಗಿ ಎಲ್ಲರೂ ಅರ್ಥ ಮಾಡಿಕೊಂಡ ಮತ್ತು ಒಪ್ಪಿಕೊಂಡ ಅಂಶವೆಂದರೆ, ವಿಶ್ವ ಸಂಸ್ಥೆಯು ಮಾನವ ಹಕ್ಕುಗಳ ಕುರಿತ 22 ವಿಧಿಯಲ್ಲಿ ಘೋಷಿಸಿರುವಂತೆ ಸಮಾಜದ ಪ್ರತಿಯೊಬ್ಬ ಪ್ರಜೆ ಸಾಮಾಜಿಕ ಭದ್ರತೆಗೆ ಬಾಧ್ಯಸ್ಥನಾಗಿರುತ್ತಾನೆ. ಅವನಿಗೆ ರಾಷ್ಟ್ರೀಯ ಮಟ್ಟದಲ್ಲಿ ಪ್ರಯತ್ನದಿಂದ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಹಕಾರದಿಂದ ಮತ್ತು ಆ ದೇಶದ ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಪನ್ಮೂಲಗಳಿಗೆ ಅನುಗುಣವಾಗಿ ಆ ಪ್ರಜೆಯ ವ್ಯಕ್ತಿತ್ವ ವಿಕಾಸ ಮತ್ತು ಗೌರವಯುತವಾದ ಜೀವನ ನಡೆಸಲು ಅಗತ್ಯವಾದ ಸಾಮಾಜಿಕ ಭದ್ರತೆಯನ್ನು ನೀಡಲೇಬೇಕು.

ಸಾಮಾಜಿಕ ಭದ್ರತೆಯ ಅಂಶಗಳು ಪ್ರತಿ ದೇಶದಲ್ಲಿ ಅಲ್ಲಿನ ನಾಗರಿಕರ (ಫಲಾನುಭವಿಗಳ) ಅಗತ್ಯತೆಗೆ ಅನುಗುಣವಾಗಿ ವಿವಿಧ ರೂಪಗಳನ್ನು ಪಡೆದಿದೆ. ಉದಾಹರಣೆಗೆ ಪಿಂಚಣಿ ಯೋಜನೆ, ನಿರುದ್ಯೋಗ ವಿಮೆ (ಸಾಮಾನ್ಯವಾಗಿ ಸಾಮಾಜಿಕ ವಿಮೆ ಎಂದು ಕರೆಯುವ) ಇತ್ಯಾದಿ ಅಲ್ಲದೆ ಮೂಲಭೂತ ಅವಶ್ಯಕತೆಗಳಾದ ಆರೋಗ್ಯ ಸೇವೆ, ಶಿಕ್ಷಣಗಳನ್ನು ಸಹ ಸಾಮಾಜಿಕ ಭದ್ರತೆಯಲ್ಲಿ ಪರಿಗಣಿಸಬಹುದು. ಸಂಕಷ್ಟದಲ್ಲಿರುವವರ (ಅಂದರೆ ಬಡತನ) ಸಾಮಾಜಿಕವಾದ ಅಸಮಾನತೆಯನ್ನು ಹೋಗಲಾಡಿಸುವದು ಸರ್ಕಾರದ ಕರ್ತವ್ಯವಾಗಿದೆ.

ಭಾರತದಲ್ಲಿ ಹಲವಾರು ಸಾಮಾಜಿಕ ಭದ್ರತೆಯ ಕುರಿತ ವಿಷಯಗಳು ಕಾಗದದ ಮೇಲೆ ಮಾತ್ರ ಇವೆ. ಉದಾಹರಣೆಗೆ ಪಿಂಚಣಿ ಯೋಜನೆ, ಉದ್ಯೋಗ ಖಾತ್ರಿ ಯೋಜನೆ (ನಿರುದ್ಯೋಗ ಭತ್ಯೆ ಸಹ ಇದರಲ್ಲಿದೆ) ಹೆರಿಗೆ ಸೌಲಭ್ಯಗಳು,

* ಪ್ರಾಧ್ಯಾಪಕರು, ನೀತಿ ಸಂಶೋಧನಾ ಸಂಸ್ಥೆ. E-mail : kiran.bhatty@cprindia.org

ಮಧ್ಯಾಹ್ನದ ಊಟ ಇತ್ಯಾದಿ ಇವುಗಳ ಪ್ರಗತಿ ಸಾಕಷ್ಟು ಅಸಮತೋಲನದಿಂದ ಕೂಡಿದೆ. ಅಲ್ಲದೆ ತೃಪ್ತಿದಾಯಕವಾಗಿಲ್ಲ. ಜನ ಸಾಮಾನ್ಯರ ಅನಿಸಿಕೆ ಮತ್ತು ಮಾಧ್ಯಮದ ವರದಿಗಳೂ ಸಹ ಈ ಯೋಜನೆಗಳು ಸೂಕ್ತ ಫಲಾನುಭವಿಗಳನ್ನು ತಲುಪುವಲ್ಲಿ ವಿಫಲವಾಗಿವೆ ಎನ್ನುವ ಅಭಿಪ್ರಾಯ ಹೊಂದಿವೆ. ಇದರ ವೈಫಲ್ಯಕ್ಕೆ ಹಲವಾರು ಕಾರಣಗಳನ್ನು ಗುರುತಿಸಿದ್ದು, ಪ್ರಮುಖವಾಗಿ ಅಧಿಕಾರಿ ವರ್ಗದ ನಿರಾಸಕ್ತಿ, ಭ್ರಷ್ಟಾಚಾರ, ಕಾರಣ ಎನ್ನಬಹುದು.

ಈ ವೈಫಲ್ಯಗಳು ವ್ಯವಸ್ಥೆಯ ಮೂಲ ಆಶಯಕ್ಕೆ ಮಾರಕವಾಗಿದೆ. ಈ ವ್ಯವಸ್ಥೆಯಲ್ಲಿನ ಸಮಸ್ಯೆಗಳಿಗೆ ಪರಿಹಾರವನ್ನು (ಖಾಸಗೀಕರಣ, ಸರ್ಕಾರ ಮತ್ತು ಖಾಸಗಿಯವರ ಸಹಭಾಗಿತ್ವ) ಹುಡುವ ಬದಲು ತಂತ್ರಜ್ಞಾನ ಬಳಸಿ ಸಮಸ್ಯೆ ಸುಧಾರಿಸುವ ಪ್ರಯತ್ನ ಮಾಡಬಹುದು. ಇದರಲ್ಲಿ ಮುಖ್ಯವಾಗಿ ಬಯೊಮೆಟ್ರಿಕ್ ವ್ಯವಸ್ಥೆಯನ್ನು ಕಡ್ಡಾಯವಾಗಿ ಜಾರಿಗೆ ತಂದಲ್ಲಿ ನಿಗದಿತ ಫಲಾನುಭವಿಗೆ ಪ್ರಯೋಜನ ದೊರೆಯಬಹುದು ಇದರ ಇತ್ತೀಚಿನ ಹೊಸ ಪ್ರಯತ್ನವೊಂದನ್ನು ಭಾರತ ಸರ್ಕಾರ ಜಾರಿಗೆ ತಂದಿದ್ದು ಅದರ ಆದೇಶದಂತೆ ಮಧ್ಯಾಹ್ನದ ಊಟ ನಿಗದಿತ ಫಲಾನುಭವಿ ಮಗುವಿಗೆ ದೊರೆಯಲು ಅವನ/ಅವಳ ಆಧಾರ ಸಂಖ್ಯೆಯನ್ನು ಬಯೊಮೆಟ್ರಿಕ್‌ಗೆ ಒಳಪಡಿಸುವುದು.

ಶಿಕ್ಷಣ ವ್ಯವಸ್ಥೆಯಲ್ಲಿ ಸಾಮಾಜಿಕ ಭದ್ರತೆ ತರಬೇಕಾದಲ್ಲಿ ಮತ್ತು ಈ ಯೋಜನೆಯ ಕಾರ್ಯಕ್ರಮತೆ ಹೆಚ್ಚಿಸುವಲ್ಲಿ ಇಲ್ಲಿ ಒತ್ತು ನೀಡಲಾಗಿದೆ. ಈ ವ್ಯವಸ್ಥೆ ಸಾಕಷ್ಟು ಸವಾಲಿನದಾಗಿದೆ. ಆದರೂ ಮಗುವಿಗೆ ಪೌಷ್ಟಿಕ ಆಹಾರ ಮತ್ತು ಶೈಕ್ಷಣಿಕ ಭದ್ರತೆ ನೀಡುವಲ್ಲಿ ಪರಿಣಾಮಕಾರಿಯಾಗುತ್ತದೆ ಎಂದು ಸರ್ಕಾರ ಅಭಿಪ್ರಾಯಪಡುತ್ತದೆ.

**ಮಧ್ಯಾಹ್ನದ ಊಟದ ಯೋಜನೆ**

ಸಾಮಾಜಿಕ ಭದ್ರತೆ ಮತ್ತು ಶಿಕ್ಷಣ ವಲಯಗಳು ಒಂದಕ್ಕೊಂದು ಪೂರಕವಾಗಿದ್ದು ಯಶಸ್ವಿಯಾಗಿದೆ. ಶಿಕ್ಷಣ ಪಡೆಯಬೇಕಾದರೆ ಕಡು ಬಡತನದಲ್ಲಿರುವ ಮಕ್ಕಳಿಗೆ ಯಾವುದಾದರೂ ಒಂದು ರೀತಿಯ ಸಾಮಾಜಿಕ ಭದ್ರತೆ ಅವಶ್ಯ. ಆದರೆ ಶಿಕ್ಷಣ ಕೂಡ ಮುಂದೆ ಬರಬಹುದಾದ ಸಂಕಷ್ಟ ತಪ್ಪಿಸಲು ನೀಡುವ ಸಾಮಾಜಿಕ



ಭದ್ರತೆ ಎನ್ನಬಹುದು. ಬಡಕುಟುಂಬದ ಮಕ್ಕಳು ಶಾಲೆಗೆ ಬರಲು ಪ್ರೇರೆಪಿಸಿ ಅವರು ಕೂಡ ಶಿಕ್ಷಣ ಕ್ರಮದಲ್ಲಿ ಸೇರಬೇಕು ಎಂಬ ಉದ್ದೇಶದಿಂದಲೆ ಶಿಕ್ಷಣವನ್ನು ಸಾಮಾಜಿಕ ಭದ್ರತೆಯ ಸೇರಿಸಲಾಗಿದೆ. ಇದರಲ್ಲಿ ಮಕ್ಕಳ ವಾಸ ಸ್ಥಳಕ್ಕೆ ಹತ್ತಿರ ಇರುವಂತೆ ಶಾಲೆಗಳ ನಿರ್ಮಾಣ ವಿದ್ಯಾರ್ಥಿ ವೇತನ ವಿವಿಧ ರೀತಿಯ ಆರ್ಥಿಕ ಸಹಾಯ ಶಾಲೆಯಲ್ಲಿ ಊಟ ನೀಡುವುದು ಶಾಲಾ ಆರೋಗ್ಯ ಯೋಜನೆಗಳು ಮತ್ತು ಶಿಕ್ಷಣದಿಂದ ವಂಚಿತ ಕುಟುಂಬದ ಮೊದಲ ಪೀಳಿಗೆಯ ಮಕ್ಕಳಿಗೆ ನೀಡುವದು ಸೇರಿವೆ.

ಭಾರತದಲ್ಲಿ ಮೇಲಿನ ಎಲ್ಲ ಯೋಜನೆಗಳು ಸರ್ಕಾರದ ಶಿಕ್ಷಣ ಯೋಜನೆ ಮತ್ತು ಕಾರ್ಯಕ್ರಮದಲ್ಲಿ ಸೇರಿವೆ. ಆದರೂ ಅವುಗಳು ಯಶಸ್ಸು ಮತ್ತು ಗುಣಮಟ್ಟದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಮಧ್ಯಾಹ್ನದ ಊಟ ಯೋಜನೆ ಬಹುಶಃ ಎಲ್ಲರಿಂದ ಸ್ವೀಕೃತವಾದ ಪ್ರಶಂಸೆಗೆ ಪಾತ್ರವಾದ ಮತ್ತು ಯಶಸ್ವಿಯಾಗಿ ನಡೆಯುತ್ತಿರುವ ಸರ್ಕಾರಿ ಯೋಜನೆ ಎನ್ನಬಹುದು.

ಹಸಿದ ಮಕ್ಕಳಿಗೆ ಶಿಕ್ಷಣ ನೀಡುವದು ಸುಲಭವಲ್ಲ ಸರಿಯೂ ಅಲ್ಲ. (2. ಗಿಲೆಪ್ಸ್ ಎ : ಮಿತ್ಸ್ ಆಂಡ್ ರಿಯಾಲಿಟಿ ಆಫ್ ಚೈಲ್ಡ್ ನ್ಯೂಟ್ರಿಷ್ ಎಕನಾಮಿಕ್ ಆಂಡ್ ಪಾಲಿಟಿಕಲ್ ಎಕ್ಸ್ ಆಗಸ್ಟ 24 2013 ವಾಲ್ಯೂಂ XVIII No. 34.) ಲಭ್ಯವಿರುವ ಹಸಿವು ಮತ್ತು ಪೌಷ್ಟಿಕತೆಯ ಅಂಕಿ ಅಂಶಗಳನ್ನು (ವಿಶೇಷವಾಗಿ ಮಕ್ಕಳು) ಆಧರಿಸಿಯೇ ಶಾಲೆಯಲ್ಲಿ ಮಧ್ಯಾಹ್ನದ ಊಟದ ಯೋಜನೆ ಜಾರಿಗೊಳಿಸಲಾಗಿದೆ. ಇದರಿಂದ ಎರಡು ಉದ್ದೇಶಗಳಿವೆ. ಅಂದರೆ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡುವದರ ಜೊತೆಗೆ ಅವರು ಶಾಲೆಗೆ ಹಾಜರಾಗಿ ಇಡಿ ದಿನ ಕಲಿಕಾ ವಾತಾವರಣದಲ್ಲಿಯೇ ಇರುವಂತೆ ಮಾಡುವದು. ಇದರಿಂದ ಎರಡು ಗುರಿ ಸಾಧಿಸಿದಂತಾಗುವದು. ವಿಶ್ವಾದಾದ್ಯಂತ ನಡೆಸಿರುವ ಸಮೀಕ್ಷೆಯ ಪ್ರಕಾರ, ಮಧ್ಯಾಹ್ನದ ಊಟ ಯೋಜನೆ ಶಾಲೆಗೆ ಮಕ್ಕಳ ದಾಖಲಾತಿ ಹೆಚ್ಚಿಸುವದು. ಹಾಜರಾತಿಯಲ್ಲಿ ಸುಧಾರಣೆ, ಮತ್ತು ಕಲಿಕಾ ಗುಣಮಟ್ಟದಲ್ಲಿ ಸುಧಾರಣೆ ಕಂಡು ಬಂದಿದೆ. ವಿಶ್ವದ ಬಹಳಷ್ಟು ಮುಂದುವರಿದ ಮತ್ತು ಮುಂದುವರೆಯುತ್ತಿರುವ ದೇಶಗಳಲ್ಲಿ ಒಂದಲ್ಲ ಒಂದು ಮಾದರಿಯಲ್ಲಿ ಮಧ್ಯಾಹ್ನದ ಊಟದ ಯೋಜನೆ ಜಾರಿಯಲ್ಲಿದೆ. (3. ಅಫ್ರಿಧಿ ಪರ್ಜಾನಾ, ಬದಿಶಾ ಬೋರಾ ಮತ್ತು ರೋಹಿಣಿ ಸೋಮನಾಥನ್ (2013) ಸಕೂಲ್ ಮಿಲ್ಸ್ ಕ್ಲಾಸ್ ರೂಂ, ಎಫರ್ಟ ಎವಿಡನ್ಸ್ ಫ್ರೀ ಇಂಡಿಯಾ ಲೇಖನ ಇಂಟರ್ ನ್ಯಾಷನಲ್ ಗ್ರೋಥ್ ಸೆಂಟರ್.)

ಮಧ್ಯಾಹ್ನದ ಊಟ ಯೋಜನೆಗೆ ದೊಡ್ಡ ಇತಿಹಾಸವಿದ್ದು 1982 ರಲ್ಲಿ ಮೊದಲ ಬಾರಿಗೆ ತಮಿಳುನಾಡು ಸರ್ಕಾರ ಈ ಯೋಜನೆ ಜಾರಿ ಮಾಡಿತು. ನಂತರ 2001ರಲ್ಲಿ ಸುಪ್ರೀಂ ಕೋರ್ಟ್ ದೇಶದ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ತಯಾರಿಸಿದ ಊಟ ನೀಡುವಂತೆ ನಿರ್ದೇಶಿಸಿ ಇದಕ್ಕೆ ಕಾನೂನಾತ್ಮಕವಾದ ಸ್ಥಾನ ನೀಡಿತು. (4. ಲ್ಯಾಂಡ್ ಮಾರ್ಕ್ ಆದೇಶದ ಪ್ರಕಾರ ಬೇಯಿಸಿದ ಆಹಾರವನ್ನು ದೇಶದ ಎಲ್ಲಾ ರಾಜ್ಯದ ಅಂದರೆ ಸರ್ಕಾರಿ ಮತ್ತು



ಅನುದಾನಿತ ಶಾಲೆಗಳಲ್ಲಿ ನೀಡಬೇಕು ಯಾವ ರಾಜ್ಯದಲ್ಲಿ ಇದು ಜಾರಿಯಲ್ಲಿ ಇಲ್ಲವೊ ಅಲ್ಲಿನ ಅರ್ಧದಷ್ಟು ಜಿಲ್ಲೆಗಳಲ್ಲಿ (ಬಡತನ ರೇಖೆ ಆಧರಿಸಿ) ಇದನ್ನು 28 ಫೆಬ್ರವರಿ 2002 ರಿಂದ ಮೇ 28 2002 ರೊಳಗಾಗಿ ಪ್ರಾರಂಭಿಸಬೇಕು ಹಾಗೆಯೇ ಉಳಿದ ಜಿಲ್ಲೆಗಳಲ್ಲಿಯೂ ಇದನ್ನು ಪ್ರಾರಂಭಿಸಬೇಕು.) ಇಂದಿಗೂ ಕೂಡ ದೇಶದ ಹಲವಾರು ಶಾಲೆಗಳ ಮಕ್ಕಳಿಗೆ ಮಧ್ಯಾಹ್ನದ ಊಟವೇ ದಿನದ ಮೊದಲ ಆಹಾರವಾಗಿದೆ. ಸದ್ಯ ದೇಶದಲ್ಲಿ 11.5 ಲಕ್ಷ ಶಾಲೆಗಳ 10 ಕೋಟಿ ಮಕ್ಕಳು ಈ ಯೋಜನೆ

ವ್ಯಾಪ್ತಿಯೊಳಗಿದ್ದರೆ. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಮತ್ತು ಇತರೆ ವರ್ಗದ ಹಿಂದುಳಿದ 25 ಲಕ್ಷಕ್ಕೂ ಹೆಚ್ಚು ಮಹಿಳೆಯರು ಮಧ್ಯಾಹ್ನದ ಊಟ ತಯಾರಿಕೆಯಲ್ಲಿ ಅಡುಗೆ ಮಾಡಲು ಮತ್ತು ಅಡುಗೆ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಲ್ಲದೆ ಹಲವಾರು ಸಾಮಾಜಿಕ ಮೌಲ್ಯಗಳು ಮುಖ್ಯವಾಗಿ ಯಾವುದೇ ಸಾಮಾಜಿಕ ಹಿನ್ನೆಲೆ ಹೊಂದಿದ್ದರೂ ಸಹ ಮಕ್ಕಳ ಸಹ ಭೋಜನೆ ಅಲ್ಲಿರುವ ಪಾಲಕರ ಪಾಲುದಾರಿಕೆ ನಿರ್ದೇಶನ ಮತ್ತು ಸ್ಥಳೀಯವಾಗಿ ಬೆಳೆದ ಉತ್ಪನ್ನಗಳ ಬಳಕೆ ರೂಢಿಯಾಗುತ್ತಿದೆ. ಈ ಯೋಜನೆಯಲ್ಲಿ ಯಾವುದೇ ಮಾನ್ಯತೆ, ಟೀಕೆಗಳು ಇಲ್ಲವೆ ಇಲ್ಲ ಎನ್ನುವದು ಸರಿಯಲ್ಲ ಅಲ್ಲಿ ಕೆಲವು ಸಮಸ್ಯೆಗಳಿವೆ. ಉದಾಹರಣೆ, ಅಸಮರ್ಪಕ ಆಹಾರ ಸರಬರಾಜು, ಪೌಷ್ಟಿಕಾಂಶದ ಕೊರತೆ, ನಿಖರವಾಗಿ ಮಕ್ಕಳ ಸಂಖ್ಯೆ ಲೆಕ್ಕ ಹಾಕಲು ಸಾಧ್ಯವಾಗದೆ ಇರುವದು ಇತ್ಯಾದಿ. ವಾಸ್ತವ ಸ್ಥಿತಿ ಅರಿಯದೆ ಕೆಲವರ ಅಭಿಪ್ರಾಯದಂತೆ ಶಿಕ್ಷಕರು ಬಹಳ ಸಮಯ ಮಧ್ಯಾಹ್ನದ ಊಟ ನೀಡುವಲ್ಲಿಯೆ ಕಳೆಯುತ್ತಾರೆ. ಇದರಿಂದ ಮಕ್ಕಳ ಕಲಿಕೆಯ ಮೇಲೆ ಪರಿಣಾಮವಾಗುತ್ತಿದೆ. ಅಲ್ಲದೆ ಮಕ್ಕಳು ಊಟಕ್ಕಾಗಿ ಮಾತ್ರ ಶಾಲೆಗೆ ಬಂದು ಊಟವಾದ ನಂತರ ಹೊರಟು ಹೋಗುತ್ತಾರೆ. ಇದರಿಂದ ಅವರ ಶೈಕ್ಷಣಿಕ ಅವಶ್ಯಕತೆ ಪೂರ್ಣಗೊಳ್ಳುತ್ತಿಲ್ಲ. ಎಂಬ ಅಭಿಪ್ರಾಯ ಹೊಂದಿದ್ದಾರೆ. ಇದಲ್ಲದೆ ಜಾತಿ ಬೇಧ ಪ್ರತ್ಯೇಕ ಊಟ ಬಡಿಸುವುದು. ಕಡಿಮೆ ಆಹಾರ ನೀಡುವಂತಹ ಆಯೋಜನೆಗಳು ಇವೆ. ಯು.ಆಯ್.ಡಿ. ಬಳಸುವುದರಿಂದ ಈ ಎಲ್ಲಾ ಸಮಸ್ಯೆಗಳಿಗೆ ಬಹುತೇಕ ಪರಿಹಾರ ಸಾಧ್ಯ ಇದ್ದರೂ ಹೇಗೆ ಎಂಬುದು ಸ್ಪಷ್ಟವಿಲ್ಲ.

### ಬಯೊ ಮೆಟ್ರಿಕ್ ವ್ಯವಸ್ಥೆಯ ಮೂಲಕ ಮಧ್ಯಾಹ್ನದ ಊಟದ ಯೋಜನೆಯ ಕಾರ್ಯಕ್ಷಮತೆ ಹೆಚ್ಚಿಸುವ ಬಗೆ

ಯು.ಐ.ಡಿ. ಅಂದರೆ ಆಧಾರ ಸಂಖ್ಯೆಯನ್ನು ಕಡ್ಡಾಯ ಮಾಡುವ



ಉದ್ದೇಶವೆಂದರೆ ಆಧಾರ ಸಂಖ್ಯೆಯನ್ನು ಗುರುತಿನ ದಾಖಲೆಯಾಗಿ ಮಾಡುವುದರಿಂದ ಸರ್ಕಾರ ನೀಡುವ ಸೇವೆ ಮತ್ತು ಲಾಭ ಅಥವಾ ಸವಲತ್ತಿನ ಪ್ರಕ್ರಿಯೆ ಹೆಚ್ಚು ಪಾರದರ್ಶಕ ಮತ್ತು ಪರಿಣಾಮಕಾರಿಯಾಗುತ್ತದೆ. ಕಾರಣವೆಂದರೆ ಫಲಾನುಭವಿಗಳ (ಮಕ್ಕಳ) ನಿಖರವಾದ ಸಂಖ್ಯೆಯನ್ನು ನೀಡುವಲ್ಲಿ ಹಲವಾರು ಸಮಸ್ಯೆಗಳಿದ್ದು ಆಧಾರ ಸಂಖ್ಯೆ ಜೋಡಣೆಯಿಂದ ನಿಖರವಾದ ಮಕ್ಕಳ ಸಂಖ್ಯೆ ತಿಳಿಯಬಹುದು ಆದರೆ ಹೆಚ್ಚು ಮಕ್ಕಳಿಗೆ ತಲುಪುವಂತೆ ಮಾಡಲು ಆಗುವದಿಲ್ಲ. ಯೋಜನೆಯಲ್ಲಿ ಅದೂ ಮಕ್ಕಳನ್ನು ಗುರಿಯಾಗಿಸಿಕೊಂಡಾಗ ಇದು ಖಂಡಿತವಾಗಿಯೂ ಸಾಮಾಜಿಕ ಭದ್ರತೆ ಕಾರ್ಯಕ್ರಮವಲ್ಲ. ಏಕೆಂದರೆ ಯು.ಐ.ಡಿ. ಕಡ್ಡಾಯ ಮಾಡುವದರಿಂದ ವ್ಯವಸ್ಥೆಯಲ್ಲಿ ಪಾರದರ್ಶಕತೆ ತಂದು ಏನನ್ನು ಅಥವಾ ಯಾರನ್ನು ಜವಾಬ್ದಾರರನ್ನಾಗಿ ಮಾಡಲಾಗುತ್ತದೆ ಎನ್ನುವ ಅಂಶ ಸ್ಪಷ್ಟವಾಗಿಲ್ಲ. ಏಕೆಂದರೆ ಇದರಿಂದ ಅಸರ್ಮಪಕ ಸರಬರಾಜು, ಪೌಷ್ಟಿಕಾಂಶಗಳ ಕೊರತೆ ಮೂಲಭೂತ ಸೌಕರ್ಯಗಳು, ಅಥವಾ ಆರೋಗ್ಯಕರ ವಾತಾವರಣದಂತಹ ಯಾವುದೇ ವಿಷಯಗಳನ್ನು ಸುಧಾರಿಸಲು ಸಾಧ್ಯವಿಲ್ಲ.

ಆದರೆ ಇದರಿಂದ ಎರಡು ಕಡೆ ದಾಖಲಾತಿ ಪಡೆದ ಅಂದರೆ ಖಾಸಗಿ ಶಾಲೆಯ ವಿದ್ಯಾರ್ಥಿಯಾಗಿದ್ದು, ಸರ್ಕಾರಿ ಶಾಲೆಯಲ್ಲಿ ನೊಂದಾಯಿಸಿದ ವಿದ್ಯಾರ್ಥಿಗಳನ್ನು ಪತ್ತೆ ಮಾಡಲು ಸಾಧ್ಯ. ಆದರೆ ಮಧ್ಯಾಹ್ನದ ಊಟಕ್ಕಾಗಿ ಆಧಾರ ಕಡ್ಡಾಯಗೊಳಿಸುವದರಿಂದ ಇಂತಹ ಕೆಟ್ಟ ಅಭ್ಯಾಸ ತಪ್ಪಿಸಲು ಸಾಧ್ಯವಿಲ್ಲ. ಬದಲಾಗಿ ಯಾವುದಾದರೂ ಬಡ ವಿದ್ಯಾರ್ಥಿಗೆ ದೊರೆಯಬಹುದಾದ ಪೌಷ್ಟಿಕ ಊಟ ತಪ್ಪುವ ಸಾಧ್ಯತೆ ಇದೆ.

ಇದಲ್ಲದೆ ಆಧಾರ್ ಸಂಖ್ಯೆ ಜೋಡಿಸಿರುವ ವ್ಯವಸ್ಥೆಗಳು ಅಂದರೆ ಸಾರ್ವಜನಿಕ ವಿತರಣೆ, ಪಿಂಚಣಿ ಯೋಜನೆ, ನೇರ ನಗದು ವರ್ಗಾವಣೆಯಂತಹ ಯೋಜನೆಗಳು, ರಾಜಸ್ಥಾನ, ದಿಲ್ಲಿ, ಛತ್ತಿಸಗಢ ರಾಜ್ಯಗಳಲ್ಲಿ ನಿರೀಕ್ಷಿಸಿದಷ್ಟು ಯಶಸ್ವಿಯಾಗಿಲ್ಲ. 30% ರಷ್ಟು ಫಲಾನುಭವಿಗಳು ಅಭಿಪ್ರಾಯದಂತೆ ಗುರುತು ದೃಢೀಕರಣ ಅಂತರ್ಜಾಲ ಸಮಸ್ಯೆ, ವಿದ್ಯುತ್ ತೊಂದರೆಯಂತಹ ಸಮಸ್ಯೆಗಳು ದೇಶದ ಬಹುತೇಕ ಕಡೆ ಇವೆ. ಸರ್ಕಾರದ




ಈ ಆದೇಶದ ಪ್ರಕಾರ ಪ್ರತಿ ದಿನ ಮಗುವಿಗೆ ಊಟ ನೀಡುವ ಮೊದಲು ಆ ಮಗುವಿನ ಗುರುತಿನ ಬಗ್ಗೆ ದೃಢೀಕರಣ ಪಡೆಯಬೇಕೆ? ಅಕಸ್ಮಾತ ತಾಂತ್ರಿಕ ತೊಂದರೆಯಿಂದ ಮಗುವಿನ ಗುರುತು ದೃಢೀಕರಿಸುವಲ್ಲಿ ತೊಂದರೆ ಆದರೆ ಆ ಮಗುವಿಗೆ ಊಟ ನಿರಾಕರಿಸಬೇಕೆ? ಹಾಗಿದ್ದರೆ ಇದಕ್ಕೆ ಜವಾಬ್ದಾರಿ ಯಾರು?

ಈ ವ್ಯವಸ್ಥೆಯನ್ನು ಇನ್ನೂ ಪರಿಣಾಮಕಾರಿಯಾಗಿಸಲು ಅಂದರೆ ಭ್ರಷ್ಟಾಚಾರ ಕಡಿತಗೊಳಿಸಿ ಜವಾಬ್ದಾರಿಯನ್ನು ನಿಭಾಯಿಸುವಂತೆ ಮಾಡುವ ಕೆಲವು ಕ್ರಮಗಳಿವೆ. ಅವುಗಳೆಂದರೆ ಸಮುದಾಯಕ್ಕೆ ಉಸ್ತುವಾರಿ ನೀಡುವದು. ಸಾರ್ವಜನಿಕವಾಗಿ ಲೆಕ್ಕಪತ್ರ ಪರಿಶೀಲನೆ ಕೆಡ್ಡ ನಡವಳಿಕೆಯ ವಿರುದ್ಧ ದೂರು ನೀಡುವ ವ್ಯವಸ್ಥೆ. ಸಾರ್ವಜನಿಕವಾಗಿ ಫಲಾನುಭವಿಗಳ ಮತ್ತು ಊಟದ ವಿವರ ಪ್ರಚುರಗೊಳಿಸುವದು ಇತ್ಯಾದಿ. ಇಂತಹ ಪ್ರಕಟಣೆಯಲ್ಲಿ ಮಕ್ಕಳ ಆರೋಗ್ಯ ಮತ್ತು ಶಿಕ್ಷಣ ಕುರಿತ ತಪ್ಪಾದ ಮಾಹಿತಿ ಇದ್ದರೆ ಸಮಾಜದಲ್ಲಿ ಮಕ್ಕಳನ್ನು ನಿರ್ಲಕ್ಷ್ಯಿಸುವದು ನಿಲ್ಲುವದಿಲ್ಲ. ಅಲ್ಲದೆ ಅವರ ಹಕ್ಕುಗಳನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ತಿರಸ್ಕರಿಸಲಾಗುವದು. ಈ ಯೋಜನೆ ಸಾಕಷ್ಟು ಯಶಸ್ವಿಯಾದ ಯೋಜನೆ ಇದ್ದು ಇದರಲ್ಲಿ ಹೊಸ ವ್ಯವಸ್ಥೆಯನ್ನು ಸರ್ಕಾರ ತಂದಲ್ಲಿ ಇದರಿಂದ ಸಕಾರಾತ್ಮಕ ಪರಿಣಾಮಕ್ಕಿಂತ ನಕಾರಾತ್ಮಕ ಪರಿಣಾಮಗಳೆ ಹೆಚ್ಚಾಗಬಹುದು. ಈ ಸಮಯದಲ್ಲಿ ಮಕ್ಕಳ ಬೆಳವಣಿಗೆಗೆ ಪೂರಕವಾಗುವ ಪ್ರೋತ್ಸಾಹದಾಯಕ ವಾತಾವರಣವನ್ನು ನಿರ್ಮಿಸಬೇಕಾಗಿದೆ. ಅಂದರೆ ಅವರಿಗೆ ಬಿಸಿಯಾದ ಊಟ ನೀಡುವುದು, ಗುಣಮಟ್ಟದ ಶಿಕ್ಷಣ, ಮಾನವೀಯ ಮೌಲ್ಯಗಳ ಮಕ್ಕಳ ಎಳೆ ಮನಸ್ಸನ್ನು ಅರಿತು ನಡೆಯುವ ಶಿಕ್ಷಕರು, ಇತ್ಯಾದಿ. ❑

# ಅಸಂಘಟಿತ ಕ್ಷೇತ್ರದ ಸವಾಲುಗಳು

* ಡಾ. ರೂಮಾ ಘೋಷ್



ಸಾಮಾಜಿಕ ಭದ್ರತೆ ಕೊರತೆ ಉತ್ಪಾದಕತೆ ಮೇಲೆ ಪರಿಣಾಮ ಬೀರುತ್ತದೆ. ಅನಾರೋಗ್ಯ ಉತ್ಪಾದಕತೆ ಕಡಿಮೆಗೊಳಿಸುತ್ತದೆ. ಆರೋಗ್ಯ ವೆಚ್ಚಕ್ಕಾಗಿ ಕುಟುಂಬ, ಹಣತಂದು ಸಾಲ ಜಾಲಕ್ಕೆ ಸಿಲುಕುತ್ತದೆ. ಆದ್ದರಿಂದ ಅಸಂಘಟಿತ ಕ್ಷೇತ್ರದ ಶ್ರಮಿಕರಿಗೆ, ಕನಿಷ್ಠ ಮಟ್ಟದ ರಕ್ಷಣೆ ಒದಗಿಸದ ಹೊರತು, ಎಲ್ಲರನ್ನೂ ಒಳಗೊಂಡ ಬೆಳವಣಿಗೆ ಹೇಳಿಕೆ ಅರ್ಥಪೂರ್ಣವಾಗದು.

ನ್ಯಾಯೋಚಿತ ಹಾಗೂ ಸಮಾನ ಸಮಾಜದ ಮೂಲ ಪೂರ್ವ ಅಗತ್ಯಗಳಲ್ಲಿ ಸಾಮಾಜಿಕ ಭದ್ರತೆ ಒಂದಾಗಿದೆ. ಈ ಕಾರಣದಿಂದಲೇ ಸಾಮಾಜಿಕ ಭದ್ರತೆಯನ್ನು ಮಾನವ ಹಕ್ಕೆಂದು ಗುರುತಿಸಲಾಗಿದೆ. ವಿಶ್ವ ಸಂಸ್ಥೆಯ 22 ಮತ್ತು 25ನೇ ಪರಿಚ್ಛೇದದ ಮಾನವ ಹಕ್ಕಿನ ಸಾರ್ವತ್ರಿಕ ಘೋಷಣೆ ಪ್ರಕಾರವೂ ಸಾಮಾಜಿಕ ಭದ್ರತೆ ಮೂಲ ಹಕ್ಕುಗಳಲ್ಲಿ ಒಂದಾಗಿದೆ. 1952ರಲ್ಲಿ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ ಅಂಗೀಕರಿಸಿದ ಸಾಮಾಜಿಕ ಭದ್ರತೆ (ಕನಿಷ್ಠ ಗುಣಮಟ್ಟ) ಸಮಾವೇಶ 102 ಗೊತ್ತುವಳಿಯಲ್ಲಿ ವಿವಿಧ ಒಂಭತ್ತು ಕ್ಷೇತ್ರಗಳಲ್ಲಿನ ಸವಲತ್ತುಗಳಿಗಾಗಿ ಕನಿಷ್ಠ ಗುಣಮಟ್ಟಗಳನ್ನು ನಿಗದಿಪಡಿಸಲಾಗಿದೆ. ಈ ಕ್ಷೇತ್ರಗಳೆಂದರೆ ವೈದ್ಯಕೀಯ ಸೌಲಭ್ಯ, ಅನಾರೋಗ್ಯ ಆರೈಕೆ, ನಿರುದ್ಯೋಗ ಪರಿಹಾರ, ವೃದ್ಧಾಪ್ಯ ಬೆಂಬಲ, ಕಾರ್ಮಿಕ ಅಪಘಾತ ಪರಿಹಾರ ಬೆಂಬಲ, ಕೌಟುಂಬಿಕ ನೆರವು, ಮಾತೃತ್ವ ಸೌಕರ್ಯ, ಬದುಕುಳಿದ ಸೌಲಭ್ಯ.

ಭಾರತ, ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಸ್ಥಾಪನಾ ಸದಸ್ಯ ದೇಶಗಳಲ್ಲಿ ಒಂದಾಗಿದ್ದು, ಸಂಘಟನೆಯ ಮತ್ತು ವಿಶ್ವ ಸಂಸ್ಥೆಯ ಮಾನವ ಹಕ್ಕು ಸಾಧನಗಳನೆಲ್ಲಾ ಸ್ಥಿರೀಕರಿಸಿದೆ. ಇವುಗಳೆಲ್ಲ ಸಾಮಾಜಿಕ ಭದ್ರತೆಗೆ ನೇರವಾಗಿ ಸಂಬಂಧಿಸಿವೆ. ವಿಶ್ವ ಸಂಸ್ಥೆ ಇತ್ತೀಚೆಗೆ ಅಂಗೀಕರಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳು ಕೂಡ ಸಾಮಾಜಿಕ ಭದ್ರತೆ ಅಂಶಗಳನ್ನೆ ಪರೋಕ್ಷವಾಗಿ ಪುನರುಚ್ಚರಿಸಿವೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಸಾಮಾಜಿಕ ಭದ್ರತೆ ಸಮಾವೇಶವು ಅಂಗೀಕರಿಸಿದ ಗೊತ್ತುವಳಿಯಂತೆ ಸರ್ಕಾರಿ – ಖಾಸಗಿ ಸಂಸ್ಥೆಗಳ ನಿರ್ದಿಷ್ಟ ಕೆಲ ಗಾತ್ರದ ಸಂಸ್ಥೆಗಳಲ್ಲಿನ ಔಪಚಾರಿಕ ರಂಗ ಕಾರ್ಮಿಕರೆಲ್ಲರೂ ವಿವಿಧ ಪ್ರಮಾಣದ ಸಾಮಾಜಿಕ ಭದ್ರತೆಗೊಳಗಾಗಿದ್ದಾರೆ. ಆದರೆ, ಭಾರತದ ಒಟ್ಟು ಶ್ರಮಿಕ ಶಕ್ತಿಯಲ್ಲಿ ಶೇ. 84 ರಷ್ಟು ಸಂಖ್ಯೆ ಅಸಂಘಟಿತ ಕ್ಷೇತ್ರದಲ್ಲಿದ್ದು, ಅವರು ನಿಯಮಿತ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳ ವ್ಯಾಪ್ತಿಗೊಳಪಟ್ಟಿಲ್ಲ.

### ಅಸಂಘಟಿತ ಕ್ಷೇತ್ರ

ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ ನಡೆಸಿದ 68 ಸುತ್ತಿನ ಸಮೀಕ್ಷೆಯಂತೆ, ಕಾರ್ಮಿಕ ಪಡೆಯಲ್ಲಿ ಶೇ. 84 ರಷ್ಟು ಜನರು ಅಸಂಘಟಿತ ಅಥವಾ ಅನೌಪಚಾರಿಕ ಕ್ಷೇತ್ರದಲ್ಲಿದ್ದಾರೆ. ಅನೌಪಚಾರಿಕ ಕ್ಷೇತ್ರ ಮತ್ತು ಉದ್ಯೋಗ ಸ್ಥಿತಿ ಕುರಿತಾದ 2011–12ನೇ ಸಾಲಿನ ರಾಷ್ಟ್ರೀಯ ಮಾದರಿ ಸಮೀಕ್ಷೆ ತಿಳಿಸುವಂತೆ ಗ್ರಾಮೀಣ ಭಾಗದಲ್ಲಿ ಸ್ವ ಉದ್ಯೋಗಸ್ಥರ ಪೈಕಿ ಶೇ. 97 ರಷ್ಟು ಸಾಂದರ್ಭಿಕ ಕೆಲಸಗಾರರ ಪೈಕಿ ಶೇ. 78 ಮತ್ತು ನಿಯಮಿತ ಕೂಲಿಯ / ವೇತನದ ಶೇ. 42 ರಷ್ಟು ಉದ್ಯೋಗಸ್ಥರು ಅನೌಪಚಾರಿಕ ಕ್ಷೇತ್ರದಲ್ಲಿದ್ದಾರೆ. ನಗರ ಪ್ರದೇಶದಲ್ಲಿ ಸ್ವಉದ್ಯೋಗಸ್ಥರ ಪೈಕಿ ಶೇ. 98 ರಷ್ಟು ಸಾಂದರ್ಭಿಕ ಕೆಲಸಗಾರರ ಪೈಕಿ ಶೇ. 98 ಮತ್ತು ನಿಯಮಿತ ಕೂಲಿಯ / ವೇತನದ ಶೇ. 40 ರಷ್ಟು ಉದ್ಯೋಗಸ್ಥರು ಅನೌಪಚಾರಿಕ ರಂಗದಲ್ಲಿದ್ದಾರೆ. ಅನೌಪಚಾರಿಕ ರಂಗದಲ್ಲಿ ಗ್ರಾಮೀಣ ಭಾಗದ ಶೇ. 75 ಮತ್ತು ನಗರ ಪ್ರದೇಶಗಳ ಶೇ. 70 ರಷ್ಟು ಜನರು ಸಣ್ಣ ಉದ್ದಿಮೆಗಳಲ್ಲಿದ್ದಾರೆ.

ಗ್ರಾಮೀಣ ಭಾಗದ ಕೃಷಿ / ಕೃಷಿಯೇತರ ರಂಗದ ಶೇ. 79 ರಷ್ಟು ಜನರಿಗೆ ಲಿಖಿತ ಉದ್ಯೋಗವಿಲ್ಲ. ಕೃಷಿ / ಕೃಷಿಯೇತರ ಕ್ಷೇತ್ರದಲ್ಲಿನ ಶೇ. 42 ರಷ್ಟು

* ಪ್ರಾಧ್ಯಾಪಕರು, ವಿವಿ ಗಿರಿ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ : ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ. E-mail : rumaghosh.vvgnli@gov.in

ಜನರು ತಾತ್ಕಾಲಿಕ ಉದ್ಯೋಗಸ್ಥರಾಗಿದ್ದಾರೆ. ಕೃಷಿ / ಕೃಷಿಯೇತರ ರಂಗದ ಶೇ. 72 ರಷ್ಟು ಉದ್ಯೋಗಸ್ಥರು ಯಾವುದೇ ಭದ್ರತಾ ಸೌಲಭ್ಯಕ್ಕೆ ಅರ್ಹರಾಗಿರಲಿಲ್ಲ. ಸಾಂದರ್ಭಿಕ ಉದ್ಯೋಗಸ್ಥರಲ್ಲಿ ಶೇ. 93 ಮತ್ತು ನಿಯಮಿತ ಕೂಲಿ / ವೇತನದ ಶೇ. 56 ರಷ್ಟು ಉದ್ಯೋಗಸ್ಥರು ಯಾವುದೇ ಭದ್ರತಾ ಸೌಲಭ್ಯಕ್ಕೆ ಅರ್ಹರಾಗಿರಲಿಲ್ಲ.

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲರಾಗಿರುವ ಹೆಚ್ಚಿನ ಪ್ರಮಾಣದ ಜನರು ಅನೌಪಚಾರಿಕ ಕ್ಷೇತ್ರದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಕಳೆದೆರಡು ದಶಕಗಳಲ್ಲಿ ಬೆಳೆದ ದೇಶದ ಒಟ್ಟಾರೆ ಆರ್ಥಿಕತೆಯೊಂದಿಗೆ ಅನೌಪಚಾರಿಕ ರಂಗವೂ ಬೆಳೆದಿದೆ. ಔಪಚಾರಿಕ ಹಾಗೂ ಅನೌಪಚಾರಿಕ ಆರ್ಥಿಕ ಚಟುವಟಿಕೆಗಳ ನಡುವೆ ಸಂಬಂಧ ಹೆಚ್ಚುತ್ತಿದೆ. ಹೊರ ಹರಿವು, ಉದ್ಯೋಗ ಮತ್ತು ಗಳಿಕೆಗಳನ್ನು ಗಮನಿಸಿದಾಗ ಅನೌಪಚಾರಿಕ ಆರ್ಥಿಕತೆ ಸಂಚಲನೆ ಕಂಡು ಕೊಂಡಿದೆ. ಅನೌಪಚಾರಿಕ ಆರ್ಥಿಕತೆಯಲ್ಲಿ ತ್ವರಿತ ಮತ್ತು ಎಲ್ಲರನ್ನು ಒಳಗೊಂಡ ಬೆಳವಣಿಗೆಗೆ ವಿಶೇಷ ಗಮನ ನೀಡಬೇಕಾದ ಅಗತ್ಯವಿದೆ. ಉನ್ನತ ಬೆಳವಣಿಗೆ ಮಟ್ಟವನ್ನು ಕಾಯ್ದುಕೊಳ್ಳಲು, ಅನೌಪಚಾರಿಕ ರಂಗದಲ್ಲಿನ, ಸಾಲ ಸೌಲಭ್ಯ, ಕೌಶಲ್ಯ, ತಂತ್ರಜ್ಞಾನ ಮಾರುಕಟ್ಟೆ ಮತ್ತು ಮೂಲಸೌಕರ್ಯ ಬೇಡಿಕೆಗಳನ್ನು ಪೂರೈಸಬೇಕಾಗಿದೆ. ಈ ಕ್ಷೇತ್ರದ ಬಹುತೇಕ ಶ್ರಮಿಕ ಶಕ್ತಿ ಔಪಚಾರಿಕ ಸಾಮಾಜಿಕ ಭದ್ರತೆಗೆ ಒಳಗಾಗಿಲ್ಲ. ಅಂದರೆ ವಂತಿಕೆ ಆಧರಿತ ಸಾಮಾಜಿಕ ವಿಮಾ ಪ್ರಯೋಜನಕ್ಕೂ ಒಳಗಾಗಿಲ್ಲ. ಈ ಜನರನ್ನು ಸಾಮಾಜಿಕ ವಿಮಾ ಭದ್ರತೆಯ ವ್ಯಾಪ್ತಿಗೊಳಪಡಿಸುವುದೇ ಸವಾಲಿನ ಕೆಲಸವಾಗಿದೆ.

ಒಟ್ಟು ಶ್ರಮಿಕ ಶಕ್ತಿಯ ಶೇ. 7 ರಷ್ಟು ಉದ್ಯೋಗಿಗಳು ಸಂಘಟಿತ ಕ್ಷೇತ್ರದಲ್ಲಿದ್ದಾರೆ. ಇವರಿಗೆ ಶಾಸನಾತ್ಮಕವಾದ ವಿವಿಧ ಸಾಮಾಜಿಕ ಭದ್ರತೆಗಳಿವೆ. ಇವುಗಳಲ್ಲಿ ನೌಕರರ ರಾಜ್ಯ ವಿಮಾ ಕಾಯ್ದೆ 1948, ನೌಕರರ ಭವಿಷ್ಯ ನಿಧಿ ಮತ್ತು ಇತರ ಸೌಲಭ್ಯ ಕಾಯ್ದೆ – 1952 ಪ್ರಮುಖವಾಗಿದೆ.

ಈ ಎರಡು ಶಾಸನಗಳು ಉದ್ಯೋಗಿಗಳಿಗೆ, ವೈದ್ಯಕೀಯ ಆರೋಗ್ಯ ವಿಮೆ ಮತ್ತು ಭವಿಷ್ಯ ನಿಧಿ, ಪಿಂಚಣಿ ಒದಗಿಸುತ್ತವೆ. ಅಸಂಘಟಿತ ಕ್ಷೇತ್ರದಲ್ಲಿ



472.9 ದಶಲಕ್ಷ ಕಾರ್ಮಿಕರಿದ್ದಾರೆ. ಸಾಂದರ್ಭಿಕ ಆವರ್ಧಿಕ ಉದ್ಯೋಗ, ನೆಲೆ ಇಲ್ಲದ ಕೆಲಸ, ದಯನೀಯ ಕೆಲಸದ ಸ್ಥಿತಿ, ಉದ್ಯೋಗಿ – ಉದ್ಯೋಗದಾತರ ನಡುವಿನ ಸಂಬಂಧದ ಕೊರತೆ; ಅನಿಯಮಿತ – ದೀರ್ಘಾವಧಿ ಕೆಲಸ, ಸಾಲದ ಕೊರತೆ, ಶಾಸನಗಳ ಬೆಂಬಲದ ಕೊರತೆ ಕಾರಣ, ಇವರಿಗೆ ಉದ್ಯೋಗ ಭದ್ರತೆ, ವೇತನ, ಸೇವಾ ಪರಿಸ್ಥಿತಿ, ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ದೃಷ್ಟಿಯಲ್ಲಿ ಯಾವುದೇ ಸೌಲಭ್ಯ ದೊರಕುತ್ತಿಲ್ಲ.

ಅಸಂಘಟಿತ ಕ್ಷೇತ್ರದ ಉದ್ದಿಮೆಗಳ ರಾಷ್ಟ್ರೀಯ ಆಯೋಗ (ಎನ್‌ಸಿಇಯುಎಸ್) ಪ್ರತಿಪಾದಿಸುವಂತೆ, ಅಸಂಘಟಿತ ಕ್ಷೇತ್ರದ ಶ್ರಮಿಕ ವರ್ಗ ಮೂರು ತರಹದ ಬಹುಮುಖ್ಯವಾದ ಸಾಮಾಜಿಕ ರಕ್ಷಣಾ ಆಶ್ರಯದಿಂದ ವಂಚಿತವಾಗಿದೆ. ಅವುಗಳೆಂದರೆ ಉದ್ಯೋಗ ಭದ್ರತೆ (ಏಕಾಏಕಿ ಕೆಲಸದಿಂದ ವಜಾ ವಿರುದ್ಧ ರಕ್ಷಣೆ ಇಲ್ಲ) ಕೆಲಸದಲ್ಲಿ ಭದ್ರತೆ (ಕೆಲಸದ ಸ್ಥಳಗಳಲ್ಲಿರುವ ಆರೋಗ್ಯ ಅಪಾಯ, ಅಪಘಾತಗಳ ವಿರುದ್ಧ ರಕ್ಷಣೆ ಇಲ್ಲ) ಮತ್ತು ಸಾಮಾಜಿಕ ಭದ್ರತೆ (ಆರೋಗ್ಯ ಸೇವೆ ಪಿಂಚಣಿ ಮತ್ತು ಮಾತೃತ್ವ ಸೌಲಭ್ಯ). ಕ್ರಮೇಣ ಹೆಚ್ಚಾಗುವ ವಯೋವೃದ್ಧರ ಸಂಖ್ಯೆ, ಬೆಳೆಯುತ್ತಿರುವ ಅನೌಪಚಾರಿಕ ರಂಗಗಳನ್ನು ದೃಷ್ಟಿಯಲ್ಲಿರಿಸಿ ಕೇಂದ್ರ ಸರ್ಕಾರ 2008ರಲ್ಲಿ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಕಾಯ್ದೆಯನ್ನು ತಂದಿತು. ಬೃಹತ್ ಪ್ರಮಾಣದಲ್ಲಿರುವ ಅಸಂಘಟಿತ ರಂಗದ ಶ್ರಮಿಕ ವರ್ಗಕ್ಕೆ, ಆರೋಗ್ಯ ಅಕಸ್ಮಿಕ, ಬಡತನ ಎದುರಿಸಿ, ಗೌರವಯುತ ಬದುಕು ನಡೆಸಲು ಅನುಕೂಲವಾಗುವಂತೆ ಕನಿಷ್ಠಮಟ್ಟದ್ದಾದರೂ ಸಾಮಾಜಿಕ ರಕ್ಷಣೆ ಒದಗಿಸುವುದು ಈ ಕಾಯ್ದೆಯ ಉದ್ದೇಶವಾಗಿದೆ. ಈ ಕಾಯ್ದೆ ಉದ್ದೇಶ ಉತ್ತಮವಾಗಿದ್ದರೂ ಯಾವುದೇ ಸವಲತ್ತುಗಳನ್ನು ಒದಗಿಸುವಷ್ಟು ಸಶಕ್ತವಾಗಿಲ್ಲ. ಕಾಯ್ದೆ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಮಂಡಳಿಗಳ ರಚನೆಗೆ ಅವಕಾಶ ಕಲ್ಪಿಸಿದ್ದು ಇವುಗಳು ಕೇವಲ ಸಲಹಾಕಾರ ಪಾತ್ರ ವಹಿಸುವುದಕ್ಕೆ ಮಾತ್ರ ಸೀಮಿತವಾಗಿವೆ.

**ಸಾಮಾಜಿಕ ಭದ್ರತೆ**

ಪ್ರಸ್ತುತ ದೇಶದ ಸಾಮಾಜಿಕ ಭದ್ರತೆ ಚೌಕಟ್ಟು ಎರಡು ಹಂತಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಮೊದಲ ಮಟ್ಟದಲ್ಲಿ ಮೂಲಭೂತ ಸಾಮಾಜಿಕ / ಮಾನವ ಅಭಿವೃದ್ಧಿಗಾಗಿ, ಸಾರ್ವತ್ರಿಕ ಕಾರ್ಯಕ್ರಮ, ಯೋಜನೆಗಳಿರುತ್ತವೆ. ಸಾಕ್ಷರತಾ ಮಿಷನ್, ಶಾಲಾ ಶಿಕ್ಷಣ ಕಾರ್ಯಕ್ರಮ, ಆರೋಗ್ಯ ರಕ್ಷಣೆ ಸೇವೆ, ಕುಡಿಯುವ ನೀರು ಮತ್ತು ಶೌಚ ಸೇವೆ, ತಾಂತ್ರಿಕ ತರಬೇತಿ ಮೊದಲಾದ ಯೋಜನೆಗಳು ಇದರಲ್ಲಿ ಸೇರಿವೆ. ಎರಡನೆ ಮಟ್ಟದಲ್ಲಿ ದುರ್ಬಲ ವರ್ಗದ ನಾಗರಿಕರ ಮೂಲ ರಕ್ಷಣಾ ಅಗತ್ಯಗಳನ್ನು ಪೂರೈಸುವ, ಸಾಮಾಜಿಕ ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದ ಮಕ್ಕಳ ಸಮಗ್ರ ಅಭಿವೃದ್ಧಿ ಕಾರ್ಯಕ್ರಮ – ಐಸಿಡಿಎಸ್, ಸಾರ್ವಜನಿಕ ವಿತರಣಾ ವ್ಯವಸ್ಥೆ – ಪಿಡಿಎಸ್, ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ ಎಂಜಿಎನ್‌ಆರ್‌ಇಜಿಎ ಯೋಜನೆಗಳು ಇದರಲ್ಲಿ ಸೇರಿವೆ.

ಸಾಮಾಜಿಕ ಭದ್ರತೆಗೆ ಸಂಬಂಧಿಸಿದ ಕೊರತೆ ನೀಗಲು ವಿವಿಧ ಯೋಜನೆ ಕಲ್ಯಾಣ ಕಾರ್ಯಕ್ರಮಗಳಿದ್ದರೂ, ಅಭಿವೃದ್ಧಿ ಹೊಂದುತ್ತಿರುವ ಬಹುತೇಕ ದೇಶಗಳಲ್ಲಿದ್ದಂತೆ ಅನಾರೋಗ್ಯ, ಅಪಘಾತ / ಸಾವು ಮತ್ತು ವೃದ್ಧಾಪ್ಯ ರಕ್ಷಣಾ ಕ್ರಮಗಳು ಅಸಂಘಟಿತ ಶ್ರಮಿಕ ವರ್ಗಕ್ಕಿಲ್ಲ.

ಸದ್ಯ ಭಾರತದಲ್ಲಿರುವ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ವ್ಯವಸ್ಥೆಗಳು ಅಕಸ್ಮಿಕ (ಆರೋಗ್ಯ, ಅಪಘಾತ, ವೃದ್ಧಾಪ್ಯ) ಕಾನೂನು ಆಧರಿತವಾಗಿ ಸಂಘಟಿತ ಕ್ಷೇತ್ರದ ಉದ್ಯೋಗಿಗಳಿಗೆ ಮಾತ್ರ ಇದೆ. ಅಸಂಘಟಿತ ಕ್ಷೇತ್ರದ ಶ್ರಮಿಕರು ಆಪತ್ಕಾಲದಲ್ಲಿ ಮಾತ್ರ ಸಾಮಾಜಿಕ ವಿಮೆಯಡಿ ಬರುತ್ತಾರೆ. ಬಡವರ ಪ್ರಮಾಣ ಕಡಿಮೆಯಾಗುತ್ತಿದೆ ಎನ್ನುವ ಅಂಶದ ನಡುವೆ ಬಡವರೆಲ್ಲ ಅಸಂಘಟಿತ ಕ್ಷೇತ್ರದಲ್ಲೆ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಮರೆಯುವಂತಿಲ್ಲ. ಸಾಮಾಜಿಕ ಭದ್ರತೆ ಕೊರತೆ ಉತ್ಪಾದಕತೆ ಮೇಲೆ ಪರಿಣಾಮ ಬೀರುತ್ತದೆ. ಅನಾರೋಗ್ಯ ಉತ್ಪಾದಕತೆ ಕಡಿಮೆಗೊಳಿಸುತ್ತದೆ. ಆರೋಗ್ಯ ವೆಚ್ಚಕ್ಕಾಗಿ

ಕುಟುಂಬ, ಹಣತಂದು ಸಾಲ ಜಾಲಕ್ಕೆ ಸಿಲುಕುತ್ತದೆ. ಆದ್ದರಿಂದ ಅಸಂಘಟಿತ ಕ್ಷೇತ್ರದ ಶ್ರಮಿಕರಿಗೆ, ಕನಿಷ್ಠ ಮಟ್ಟದ ರಕ್ಷಣೆ ಒದಗಿಸದ ಹೊರತು, ಎಲ್ಲರನ್ನೂ ಒಳಗೊಂಡ ಬೆಳವಣಿಗೆ ಹೇಳಿಕೆ ಅರ್ಥಪೂರ್ಣವಾಗದು.

ಪ್ರಸ್ತುತ ಸಾಮಾಜಿಕ ಭದ್ರತೆ ಆಡಳಿತ ಎದುರಿಸುತ್ತಿರುವ ಸವಾಲುಗಳೆಂದರೆ – ಎ) ನೀತಿ, ಯೋಜನೆ, ಏಜೆನ್ಸಿಗಳ ಬಹುಮುಖತ್ವ. ಬಿ) ತಲುಪುವ ವ್ಯಾಪ್ತಿ, ಉದ್ದಗಲಗಳ ಕೊರತೆ. ಸಿ) ತಕ್ಕುದಲ್ಲದ ಫಲ. ಡಿ) ವಿಭಜನೆ ಇ) ಕಳಪೆ ಅನುಷ್ಠಾನ. ಎಫ್) ದುಬಾರಿ ಮತ್ತು ಜಿ) ಬಹುತೇಕರು ಅದರಲ್ಲಿಯೂ ವಿಶೇಷವಾಗಿ ಅಸಂಘಟಿತ ಶ್ರಮಿಕರು ವ್ಯಾಪ್ತಿಯಲ್ಲಿ ಇಲ್ಲದಿರುವುದು.

ಎರಡನೆಯ ರಾಷ್ಟ್ರೀಯ ಕಾರ್ಮಿಕ ಆಯೋಗದ ಶಿಫಾರಸುಗಳೊಂದಿಗೆ ಮೇಲಿನ ಎಲ್ಲ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಕೇಂದ್ರ ಕಾರ್ಮಿಕ ಕಾಯ್ದೆಗಳ, ಸರಳೀಕರಣ, ವಿಲಯನಗಳ ಮೂಲಕ ಬದಲಾವಣೆ ತಂದಿದೆ. ಸಾಮಾಜಿಕ



ಭದ್ರತೆಗೆ ಸಂಬಂಧಿಸಿದ ವಿವಿಧ ನೌಕರರ ಭವಿಷ್ಯ ನಿಧಿ, ಇಎಸ್ಐ ಮಾತೃತ್ವ ಸವಲತ್ತು ಕಾಯ್ದೆ, ಗ್ಯಾಚ್ಯುಟಿ, ನೌಕರರ ಪರಿಹಾರ ಕಾಯ್ದೆ, ಅಸಂಘಟಿತ ಸಾಮಾಜಿಕ ಭದ್ರತೆ ಕಾಯ್ದೆ ಮತ್ತು ವಿವಿಧ ಕಲ್ಯಾಣ ಮೇಲ್ತೆರಿಗೆ (ನಿಧಿ ಕಾಯ್ದೆಗಳು) ಕಾನೂನುಗಳನ್ನು ಸಮನ್ವಯಗೊಳಿಸಿ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಸಂಹಿತೆಯನ್ನು ತಂದಿದೆ.

ಸಂಹಿತೆಯಲ್ಲಿ ಮೂರು ಹಂತಗಳ ಸಾಮಾಜಿಕ ಭದ್ರತೆ ಆಡಳಿತ ವಿನ್ಯಾಸ ಪ್ರಸ್ತಾಪಿಸಲಾಗಿದೆ. 1. ಪ್ರಧಾನ ಮಂತ್ರಿಯವರ ನೇತೃತ್ವದ ರಾಷ್ಟ್ರೀಯ ಸಾಮಾಜಿಕ ಭದ್ರತಾ ಮಂಡಳಿ. 2. ಕೇಂದ್ರದ ಮಟ್ಟದಲ್ಲಿ ಕೇಂದ್ರೀಯ ಭದ್ರತಾ ಮಂಡಳಿ ಮತ್ತು 3. ರಾಜ್ಯ / ಕೇಂದ್ರಾಡಳಿತ ಮಟ್ಟಗಳಲ್ಲಿ ಸಾಮಾಜಿಕ ಭದ್ರತಾ ಕಾರ್ಯ ಚೌಕಟ್ಟಿನ ಅನುಷ್ಠಾನಕ್ಕಾಗಿ ಸಾಮಾಜಿಕ ಭದ್ರತೆಯ ರಾಜ್ಯ ಮಂಡಳಿಗಳ ರಚನೆ ಸ್ಥಳೀಯ ಸಂಸ್ಥೆಗಳು (ಪಂಚಾಯತ್‌ಗಳು / ನಗರ ಸ್ಥಳೀಯ ಸಂಸ್ಥೆಗಳು) ನೊಂದಣಿ ಹಾಗೂ ಅವಕಾಶ ಕಲ್ಪಿಸುವ ಕಾರ್ಯ ವಹಿಸಲಿದ್ದು ನಾಲ್ಕನೇ ಹಂತವಾಗಿ ಸೇವೆ ಸಲ್ಲಿಸುತ್ತವೆ. ಎಲ್ಲ ಶ್ರಮಿಕರಿಗೂ (ಕಡ್ಡಾಯ) ವಿಶಿಷ್ಟ ಆಧಾರ್ ಆಧರಿತ ನೊಂದಣಿ ವ್ಯವಸ್ಥೆ ಇರುತ್ತದೆ. ಸಂಚಾಲಿತ ಸಾಮಾಜಿಕ ಭದ್ರತೆ ಖಾತೆಯನ್ನು (ವಿಶ್ವಕರ್ಮ ಕಾರ್ಮಿಕ ಸುರಕ್ಷಾ ಖಾತಾ – ವಿಐಕೆಎಎಸ್) ಎಲ್ಲ ಶ್ರಮಿಕರಿಗೂ ತೆರೆಯಲಾಗುವುದು. ಎಲ್ಲ ನೊಂದಣಿಗಳು ಆಧಾರ್ ಸಂಖ್ಯೆಗೆ ಜೋಡಿಸಲ್ಪಡುವ ಕಾರಣ ಶ್ರಮಿಕರು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ತೆರಳಿದರೂ ವಂತಿಕೆ ವರ್ಗಾಂತರ ಮತ್ತು ಪ್ರಯೋಜನ ಪಡೆಯಲು ಯಾವುದೇ ಅಡೆತಡೆಗಳಿರುವುದಿಲ್ಲ. ಈ ಹೊಸ ಸಾಮಾಜಿಕ ಭದ್ರತೆ ವ್ಯವಸ್ಥೆ ನಾಗರಿಕರ ಮನವೊಲಿಸುವ / ಕೃಪಾ ಕಟಾಕ್ಷವಾಗಿರದೆ, ದೇಶದ ಎಲ್ಲ ಶ್ರಮಿಕರ ಹಕ್ಕಾಗಿರುತ್ತದೆ. ❑




ನಿರೀಕ್ಷೆ

# ಉದ್ದಿಮೆಗಳ ಸಾಮಾಜಿಕ ಹೊಣೆಗಾರಿಕೆ

* ಜತೀಂದರ್




ಜನರ ಮೇಲೆ ಸಕಾರಾತ್ಮಕ ಪರಿಣಾಮ ಬೀರುವಂತಹ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಮೂಲಕ ಸಮುದಾಯಗಳ ಹಿತಾಸಕ್ತಿಯನ್ನು ಕಾಪಾಡುವುದು ಉದ್ದಿಮೆಗಳ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಯೋಜನೆಗಳ ಗುರಿಯಾಗಿರುತ್ತದೆ. ಭಾರತ ಸಿಎಸ್‌ಆರ್ ಉಪಬಂಧಗಳನ್ನು ಶಾಸನ ಮಾಡಿರುವ ವಿಶ್ವದ ಮೊದಲ ದೇಶವಾಗಿದೆ. ಉದ್ಯಮಗಳ ವ್ಯವಹಾರ ಸಚಿವಾಲಯವು 2009 ರಲ್ಲಿ ಸಿಎಸ್‌ಆರ್ ಕುರಿತ ಸ್ವಯಂಪ್ರೇರಿತ ಮಾರ್ಗದರ್ಶನಗಳನ್ನು ಬಿಡುಗಡೆ ಮಾಡಿತು. ಈ ಮಾರ್ಗದರ್ಶಿಕೆಗಳು ಕಂಪನಿಗಳ ಕಾಯ್ದೆ 2013ರಲ್ಲಿ ಸೇರ್ಪಡೆಗೊಂಡವು. ಸಿಎಸ್‌ಆರ್ ವ್ಯಾಪ್ತಿಯಲ್ಲಿ ಬರುವ ಕಂಪನಿಗಳು ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 135[1] ರಲ್ಲಿ ಒಳಗೊಂಡಿದೆ. ಈ ಮುಂದಿನ ವರ್ಗಗಳ ಕಂಪನಿಗಳು ಸಿಎಸ್‌ಆರ್ ಉಪಬಂಧಗಳನ್ನು ಅನುಸರಿಸಬೇಕಾಗುತ್ತದೆ.

1. ನಿವ್ವಳ ಮೌಲ್ಯ 500 ಕೋಟಿ ರೂ.ಗಳು ಹಾಗೂ ಅಥವಾ ಅದಕ್ಕಿಂತ ಹೆಚ್ಚು ಮೌಲ್ಯ ಹೊಂದಿರುವ ಕಂಪನಿಗಳು.
2. ಒಂದು ಸಾವಿರ ಕೋಟಿ ರೂ.ಗಳು ಅಥವಾ ಅದಕ್ಕಿಂತ ಹೆಚ್ಚು ಮೊತ್ತದ ವಹಿವಾಟು ನಡೆಸುವ ಕಂಪನಿಗಳು.
3. 5 ಕೋಟಿ ರೂ.ಗಳು ಅಥವಾ ಅದಕ್ಕಿಂತ ಹೆಚ್ಚು ಮೌಲ್ಯದ ನಿವ್ವಳ ಲಾಭ ಮಾಡುವ ಕಂಪನಿಗಳು.

ಅಂದಾಜಿನ ಪ್ರಕಾರ ಈ ಕಾಯ್ದೆಯ ವ್ಯಾಪ್ತಿಯಲ್ಲಿ ಸುಮಾರು 8000 ಕಂಪನಿಗಳು ಬರುತ್ತವೆ. ಕಳೆದ ಮೂರು ವರ್ಷಗಳ ಲಾಭದಲ್ಲಿ ಕನಿಷ್ಠ ಸರಾಸರಿ ಶೇ. 2% ರಷ್ಟು ಮೊತ್ತವನ್ನು ಸಿಎಸ್‌ಆರ್ ಚಟುವಟಿಕೆಗೆ ಕಡ್ಡಾಯವಾಗಿ ಖರ್ಚು ಮಾಡಬೇಕೆಂದು ಈ ಕಾಯ್ದೆ ಸ್ಪಷ್ಟಪಡಿಸುತ್ತದೆ. ಈ ಮೊತ್ತವು ವಾರ್ಷಿಕವಾಗಿ 10,000 ದಿಂದ 12,000 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಜಿಡಿಪಿ ಹೆಚ್ಚಳ ಹಾಗೂ ಆದಾಯದ ಹೆಚ್ಚಳದಿಂದಾಗಿ ಸಿಎಸ್‌ಆರ್ ಅಡಿಯಲ್ಲಿ ಮಾಡುವ ವೆಚ್ಚವು ಸಹ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಸೆಕ್ಷನ್ 135 ಪ್ರಕಾರ ಕಂಪನಿಗಳು ಸಿಎಸ್‌ಆರ್ ಸಮಿತಿಯನ್ನು ಸ್ಥಾಪಿಸಬೇಕು. ಸಮಿತಿಯಲ್ಲಿ ಮೂವರು ಅಥವಾ ಅದಕ್ಕಿಂತ ಹೆಚ್ಚು ನಿರ್ದೇಶಕರುಗಳು ಹಾಗೂ ಒಬ್ಬರು ಸ್ವತಂತ್ರ ನಿರ್ದೇಶಕರು ಇರಬೇಕು. ಸಮಿತಿಯು ಪರಿಶಿಷ್ಟೇದ 7 ರಲ್ಲಿ ನಿರ್ದಿಷ್ಟ ಪಡಿಸಿರುವಂತಹ ಸಿಎಸ್‌ಆರ್ ಚಟುವಟಿಕೆಗಳನ್ನು ಒಳಗೊಂಡಂತೆ ನೀತಿ ರೂಪಿಸಬೇಕು. ಕಂಪನಿಗಳು ತಾವೇ ಸ್ವತಃ ಅಥವಾ ಪ್ರತಿಷ್ಠಾನಗಳ ಮೂಲಕ ಅಥವಾ ಸ್ವಯಂ ಸೇವಾ ಸಂಸ್ಥೆಗಳ ಜತೆಗೂಡಿ ಸಿಎಸ್‌ಆರ್ ಮೊತ್ತವನ್ನು ವಿವಿಧ ವಿದಾಯಕ ಕಾರ್ಯಕ್ರಮಗಳಿಗೆ ವ್ಯಯ ಮಾಡಬಹುದಾಗಿದೆ. ಉದ್ದಿಮೆಗಳ ಸಾಮಾಜಿಕ ಹೊಣೆಗಾರಿಕೆಯು ಕೇವಲ ಒಂದು ಅನುಸರಣೆ ಅಷ್ಟೆ ಅಲ್ಲ. ಸೌಲಭ್ಯವಂಚಿತರ ಜೀವನ ಸುಧಾರಣೆಗೆ ಬೆಂಬಲ ನೀಡುವ ಬದ್ಧತೆಯಾಗಿದೆ ಎಂದು ಈ ನೀತಿ ಗುರುತಿಸಿದೆ.

**ಸಿಎಸ್‌ಆರ್ – ಸಬಲೀಕರಣದ ಮುನ್ಸೂಚಕ**

ಸೌಲಭ್ಯ ವಂಚಿತರ ಸಬಲೀಕರಣ ಎಂದರೆ ಅಭಿವೃದ್ಧಿಶೀಲತೆ, ಸಾಮರ್ಥ್ಯಗಳ ನಿರ್ಮಾಣ ಹಾಗೂ ಜೀವನ ಗುಣಮಟ್ಟದ ಸುಧಾರಣೆಯ ಮೂಲಕ ಅವರ ಸಾಮಾಜಿಕ ಆರ್ಥಿಕ ಸ್ಥಿತಿಗತಿಯ ಸುಧಾರಣೆಯಾಗಿದೆ. ಇದು ಸರ್ಕಾರದ

**ಗ್ರಾಮೀಣ ಪ್ರದೇಶಗಳಲ್ಲಿ ಸ್ವಸಹಾಯ ಗುಂಪುಗಳು ಮತ್ತು ಸೂಕ್ಷ್ಮ ಉದ್ಯಮಗಳ ಮೂಲಕ ಉದ್ಯೋಗ ಅವಕಾಶವನ್ನು ಸೃಷ್ಟಿಮಾಡಿ ಗ್ರಾಮೀಣ ಜನರ ಜೀವನೋಪಾಯ ಸೌಲಭ್ಯ ಒದಗಿಸುವುದಲ್ಲದೆ, ವಲಸೆ ತಡೆಯುವಲ್ಲಿ ಸಿಎಸ್‌ಆರ್ ಯೋಜನೆಗಳು ನೆರವಾಗಿವೆ.**

* ಹಿರಿಯ ಕಾರ್ಯದರ್ಶಿ, ಪಿಹೆಚ್‌ಡಿ ವಾಣಿಜ್ಯೋದ್ಯಮದ ಸಂಘ, ನವದೆಹಲಿ. E-mail : jitinder@phdcci.in

ಪ್ರಮುಖ ಜವಾಬ್ದಾರಿಯಾಗಿದೆ. ಆದರೆ ಉತ್ತಮ ಅಭ್ಯಾಸಗಳ ಸೃಷ್ಟಿ ಹಾಗೂ ಅವರ ಸ್ಪರ್ಧಾತ್ಮಕತೆಯ ವೇಗವನ್ನು ಹೆಚ್ಚಿಸಲು ಉದ್ಯಮ ವಲಯಗಳ ಪಾಲುದಾರಿಕೆ ಕ್ರಮಗಳು ಅಗತ್ಯವಾಗಿದೆ. ಸಂಸ್ಥೆಗಳು ತಾವು ಸ್ಥಾಪನೆಯಾಗಿರುವ ಸ್ಥಳಗಳ ಸಮುದಾಯಗಳಿಗೆ ಪರಿಚಯವಾಗಿರುತ್ತವೆ. ಆದ್ದರಿಂದ ಸ್ಥಳೀಯ ಸಮಸ್ಯೆಗಳನ್ನು ಹಾಗೂ ಸವಾಲುಗಳನ್ನು ಸುಲಭವಾಗಿ ಅರ್ಥ ಮಾಡಿಕೊಂಡು ಸೌಲಭ್ಯವಂಚಿತರ ಸುಧಾರಣೆಗೆ ಇರುವ ಅವಕಾಶಗಳನ್ನು ಸಿಎಸ್‌ಆರ್ ಯೋಜನೆಗಳ ಮೂಲಕ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. ಭಾರತವು ವಿಶಿಷ್ಟವಾದ ಬೆಳವಣಿಗೆಯನ್ನು ಕಂಡಿದೆ. ಸೌಲಭ್ಯ ವಂಚಿತರ ಶತಮಾನಗಳಷ್ಟು ಹಳೆಯದಾದ ಸಮಸ್ಯೆಗಳನ್ನು ನಿವಾರಿಸಿ ಮುಖ್ಯವಾಹಿನಿಗೆ ತರುವ ಪ್ರಯತ್ನಕ್ಕೆ ಸಾಕಷ್ಟು ಸಮಯಬೇಕಾಗುತ್ತದೆ.

ಸಮಗ್ರ ಅಭಿವೃದ್ಧಿಯ ಮಂತ್ರವಾದ "ಎಲ್ಲರೊಡನೆ ಎಲ್ಲರ ವಿಕಾಸಕ್ಕಾಗಿ" ತತ್ವವನ್ನು ಖಾಸಗಿ ಹಾಗೂ ಸಾರ್ವಜನಿಕ ವಲಯದ ಅಭಿವೃದ್ಧಿ ಮಾದರಿಗಳನ್ನು ಜೋಡಿಸುವ ಮೂಲಕ ಸಾಧಿಸಬಹುದಾಗಿದೆ. ಹೆಚ್ಚುತ್ತಿರುವ ಬೇಡಿಕೆಗೆ ಅನುಗುಣವಾಗಿ ಜನರ ಕಲ್ಯಾಣಕ್ಕಾಗಿ ರಾಜ್ಯದ ಆಯವ್ಯಯ ನೀಡುತ್ತಿರುವ ಮೊತ್ತವು ಸಾಲುತ್ತಿಲ್ಲ. ಸರ್ಕಾರವು ಸೌಲಭ್ಯ ವಂಚಿತರ ಸಬಲೀಕರಣಕ್ಕಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಆದರೆ ಇಡೀ ಜನ ಸಮುದಾಯದ ಕಲ್ಯಾಣವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಸಾಧಿಸಲು ಸಾಧ್ಯವಾಗುವುದಿಲ್ಲ. ಸೌಲಭ್ಯ ವಂಚಿತರ ಅಭಿವೃದ್ಧಿ ಗುಣಗಳನ್ನು ತಲುಪಲು ಖಾಸಗಿ ವಲಯದ ಸಹಭಾಗಿತ್ವ ಅತ್ಯಗತ್ಯ. ಶಿಕ್ಷಣ ಜೀವನೋಪಾಯ ಹಾಗೂ ಆರೋಗ್ಯ ಮುಂತಾದ ಕ್ಷೇತ್ರಗಳು ಬೃಹತ್ ಪ್ರಮಾಣದ ಹಣಕಾಸಿನ ಸಂಗ್ರಹಣೆಯನ್ನು ಬೇಡುತ್ತವೆ. ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಪ್ರಕಟಿಸಲಾದ ಮಾನವ ಅಭಿವೃದ್ಧಿ ವರದಿಯ ಪ್ರಕಾರ ಭಾರತವು 188 ರಾಷ್ಟ್ರಗಳ ಪೈಕಿ 131ನೇ ಸ್ಥಾನದಲ್ಲಿ ಇದೆ. ಮಾನವ ಅಭಿವೃದ್ಧಿ ಸೂಚ್ಯಂಕವು ದೇಶದಲ್ಲಿನ ಮಾನವ ಅಭಿವೃದ್ಧಿ ಸಾಧನೆಗಳ ಸರಾಸರಿ ಮೂಲಭೂತ ಮಾಪನವಾಗಿದೆ.

ಸರ್ಕಾರದ ಪ್ರಮುಖ ಕಾರ್ಯಕ್ರಮಗಳಾದ ಮೇಕ್ ಇನ್ ಇಂಡಿಯಾ, ಸ್ಟಾರ್ಟ್ – ಅಪ್ ಇಂಡಿಯಾ, ಕೌಶಲ್ಯ ಭಾರತ ಮತ್ತು ಡಿಜಿಟಲ್ ಇಂಡಿಯಾ ಮುಂತಾದವುಗಳನ್ನು ಸಿಎಸ್‌ಆರ್ ಯೋಜನೆಗಳ ಮೂಲಕ ಉತ್ತೇಜಿಸಬಹುದಾಗಿದೆ. ಈ ಕಾರ್ಯಕ್ರಮಗಳು ಸೌಲಭ್ಯ ವಂಚಿತರ ಕೌಶಲ್ಯ ಹೆಚ್ಚಿಸುವುದಲ್ಲದೆ ಬೃಹತ್ ಪ್ರಮಾಣದ ಉದ್ಯೋಗ ಅವಕಾಶ ಸೃಷ್ಟಿಯಾಗುವುದರಿಂದ ಹಲವು ಆಯಾಮಗಳಲ್ಲಿ ಸೌಲಭ್ಯ ವಂಚಿತರ ಸಬಲೀಕರಣದ ಮೇಲೆ ಪೂರಕ ಪರಿಣಾಮ ಬೀರುತ್ತವೆ.

### ಸಿಎಸ್‌ಆರ್ ಮತ್ತು ಉದ್ಯಮ

ಸಿಎಸ್‌ಆರ್ ಚಟುವಟಿಕೆಗಳನ್ನು ಒಗ್ಗೂಡಿಸಿಕೊಂಡು ಹಲವಾರು ಕಂಪನಿಗಳು ಸಮುದಾಯದ ಜೀವನೋಪಾಯವನ್ನು ಸುಧಾರಿಸುವಲ್ಲಿ ನೇರವಾಗುತ್ತಿವೆ. ಇದರಿಂದ ಸಿಎಸ್‌ಆರ್ ಎಂಬ ಹೊಸ ಯುಗ ಪ್ರತಿಷ್ಠಾಪನೆಗೊಂಡಿದೆ. 2015ರಲ್ಲಿ ವಿಶ್ವ ಸಂಸ್ಥೆಯು ಅಳವಡಿಸಿಕೊಂಡ 17



ಸುಸ್ಥಿರ ಅಭಿವೃದ್ಧಿ ಗುರಿಗಳು (ಎಸ್‌ಡಿಜಿ) ಉದ್ಯಮ ವಲಯಗಳಿಗೆ ಪ್ರಮುಖ ಕ್ಷೇತ್ರವಾಗಿರುವುದರಿಂದ ಸಿಎಸ್‌ಆರ್ ಪರಿಸರವು ಉತ್ತೇಜನ ಪಡೆದುಕೊಂಡಿದೆ. ಅತ್ಯಂತ ಸಮರ್ಥವಾದ ಸಿಎಸ್‌ಆರ್ ಚಟುವಟಿಕೆಗಳು ಕಂಪನಿಯು ಶಾಸನಕ್ಕೆ ಬದ್ಧವಾಗಿರುವುದನ್ನು ಖಾತರಿಪಡಿಸುವುದಲ್ಲದೆ, ಅವರ ಹೂಡಿಕೆಗಳು ಸೌಲಭ್ಯವಂಚಿತ ಸಮುದಾಯಗಳ ಅಭಿವೃದ್ಧಿಗೆ ನೆರವಾಗುತ್ತವೆ. ಭಾರತದ ಸಂದರ್ಭದಲ್ಲಿ ಹಿಂದೆ ಸಾಕ್ಷರತೆಯು ಪ್ರಮುಖ ವಿಷಯವಾಗಿತ್ತು. ಈಗಿನ ಸಂದರ್ಭದಲ್ಲಿ ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ ಸೃಷ್ಟಿಯು ಪ್ರಾಥಮಿಕ ಆದ್ಯತೆಯಾಗಿದೆ. ಶಿಕ್ಷಣವು ಕೇವಲ ಓದು ಬರವಣಿಗೆಗೆ ಸೀಮಿತವಾಗಿಲ್ಲ. ಇದು ಕೌಶಲ್ಯದ ಕಡೆಗೆ ಗಮನ ಹರಿಸಿದೆ. ಸಮುದಾಯದ ಕೆಳಸ್ತರದಲ್ಲಿ ಕೌಶಲ್ಯ ಅಭಿವೃದ್ಧಿಗೆ ಮಾಡುವ ಹೂಡಿಕೆ ತಂತ್ರಗಳು ನೇರವಾಗಿ ವ್ಯವಹಾರಗಳ ತಳಸ್ತರದ ಮೇಲೂ ಪರಿಣಾಮ ಬೀರುತ್ತವೆ.

ವರ್ಲ್ಡ್ ಎಕಾನಾಮಿಕ್ ಫೋರಂ ಗ್ಲೋಬಲ್ ರಿಸ್ಕ್ಸ್ ಪರ್ಸಪ್ಷನ್ ಸರ್ವೇ 2016ರ ಪ್ರಕಾರ ಗಾಢವಾದ ಸಾಮಾಜಿಕ ಅಸ್ಥಿರತೆ ಮತ್ತು ನಿರುದ್ಯೋಗವು ಒಂದಕ್ಕೊಂದು ಬೆಸೆದುಕೊಂಡರೆ ಸಮಾಜದ ಸ್ವಾಸ್ಥ್ಯ ಅಪಾಯಕ್ಕೆ ಸಿಲುಕುತ್ತದೆ. ಈ ಅಪಾಯಗಳ ಬಗ್ಗೆ ಭಾರತದ ಕೈಗಾರಿಕೆಯ ಪ್ರಮುಖರಿಗೆ ಅರಿವಿದ್ದು, ಉದ್ದಿಮೆಗಳು ಸಿಎಸ್‌ಆರ್ ಚಟುವಟಿಕೆಗಳ ಮೂಲಕ ತಮ್ಮ ವ್ಯಾಪ್ತಿಯಲ್ಲಿ ಈ ಅಪಾಯಗಳ ನಿವಾರಣೆಗೆ ಶ್ರಮಿಸುತ್ತಿವೆ.

### ಸೌಲಭ್ಯ ವಂಚಿತರಿಗೆ ಸಿಎಸ್‌ಆರ್ ಚಟುವಟಿಕೆಗಳು

#### ವಿಶೇಷ ಚೇತನರಿಗೆ ಕೌಶಲ್ಯ ಹಾಗೂ ಜೀವನೋಪಾಯ ಅವಕಾಶಗಳು

ನಾವು ಅಂದುಕೊಂಡಿದ್ದಕ್ಕಿಂತ ಹೆಚ್ಚು ಗುಣಗಳನ್ನು, ಸಾಮರ್ಥ್ಯವನ್ನು ವಿಶೇಷ ಚೇತನರು ಹೊಂದಿರುತ್ತಾರೆ ಎಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಹೇಳಿದ್ದಾರೆ. ಪ್ರಧಾನ ಮಂತ್ರಿಗಳು ವಿಶೇಷಚೇತನರನ್ನು "ದಿವ್ಯಾಂಗ"ರು ಎಂದು ಬಣ್ಣಿಸಿದ್ದಾರೆ. ವಿಶ್ವದಲ್ಲಿ ಅತಿ ಹೆಚ್ಚು ವಿಕಲಚೇತರನ್ನು ಹೊಂದಿರುವ ದೇಶಗಳಲ್ಲಿ ಭಾರತವು ಒಂದು. 2011ರ ಜನಗಣತಿ ಪ್ರಕಾರ ಒಟ್ಟು ಜನಸಂಖ್ಯೆಯಲ್ಲಿ ಶೇ. 2.21% ರಷ್ಟು ವಿಕಲಚೇತನರಿದ್ದಾರೆ. ಬಹುತೇಕರು ಗ್ರಾಮೀಣ ಪ್ರದೇಶದಲ್ಲಿದ್ದಾರೆ. ವಿಕಲಚೇತನರಿಗೆ ಮೂಲ ಸೌಕರ್ಯ ಶಿಕ್ಷಣ ಕೌಶಲ್ಯ ಅಭಿವೃದ್ಧಿ ಕಡಿಮೆ ಪ್ರಮಾಣದಲ್ಲಿ ದೊರೆಯುವುದರಿಂದ ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ಅವರು ಹೆಚ್ಚು ದುರ್ಬಲರಾಗಿದ್ದಾರೆ. ಹಿಂದೆ ವಿಶೇಷ ಚೇತನರ ಯೋಜನೆಗಳು ಕೇವಲ ಕಾರ್ಯಾಚರಣೆಗೆ ಮಾತ್ರ ಸೀಮಿತವಾಗಿದ್ದವು. ಆದರೆ ಸಿಎಸ್‌ಆರ್ ಯೋಜನೆಗಳು ಬಂದನಂತರ ಕಂಪನಿಗಳು ವಿಕಲಚೇತನರ ಸವಾಲುಗಳ ಕಡೆಗೂ ಗಮನ ನೀಡಿವೆ. ಸಾಕ್ಷರತೆ ನೀಡುವುದು, ವೃತ್ತಿ ಶಿಕ್ಷಣ ನೀಡುವುದು, ಉದ್ಯೋಗಶೀಲತೆಯನ್ನು ಹೆಚ್ಚಿಸುವುದು ಮುಂತಾದವು ವಿಶೇಷಚೇತನರಿಗೆ ಇರುವ ತಾಂತ್ರಿಕ ಸಿ.ಎಸ್.ಆರ್ ಯೋಜನೆಗಳಿವೆ.

**ಸ್ವ ಸಹಾಯ ಗುಂಪುಗಳು ಮತ್ತು ಸೂಕ್ಷ್ಮ ಉದ್ಯಮಗಳು**

ಗ್ರಾಮೀಣ ಪ್ರದೇಶಗಳಲ್ಲಿ ಸ್ವಸಹಾಯ ಗುಂಪುಗಳು ಮತ್ತು ಸೂಕ್ಷ್ಮ ಉದ್ಯಮಗಳ ಮೂಲಕ ಉದ್ಯೋಗ ಅವಕಾಶವನ್ನು ಸೃಷ್ಟಿಮಾಡಿ ಗ್ರಾಮೀಣ ಜನರ ಜೀವನೋಪಾಯ ಸೌಲಭ್ಯ ಒದಗಿಸುವುದಲ್ಲದೆ, ವಲಸೆ ತಡೆಯುವಲ್ಲಿ ಸಿಎಸ್‌ಆರ್ ಯೋಜನೆಗಳು ನೆರವಾಗಿವೆ. ಈ ಉದ್ಯಮಗಳಿಗೆ ಆರ್ಥಿಕ ನೆರವು ನೀಡಿ ಅವುಗಳ ಸರಕು ಮತ್ತು ಸೇವೆಗಳಿಗೆ ಉತ್ತಮ ಮಾರುಕಟ್ಟೆ ಒದಗಿಸುವ ಕಡೆಗೂ ಸಿಎಸ್‌ಆರ್ ಯೋಜನೆಗಳು ಗಮನ ಹರಿಸಬಹುದಾಗಿದೆ. ಈ ವಲಯದ ಉತ್ಪಾದಕರು, ಕಸಬುದಾರರು ತಮ್ಮ ಉತ್ಪನ್ನಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡಲು ಇ-ಕಾಮರ್ಸ್ ಪದ್ಧತಿಯಲ್ಲಿ ಮಾರುಕಟ್ಟೆ ಸಂಪರ್ಕಗಳನ್ನು ಒದಗಿಸಬಹುದಾಗಿದೆ. ಸ್ವ ಸಹಾಯ ಗುಂಪುಗಳಿಗೆ ವಿನೂತನ ಮಾದರಿಯಲ್ಲಿ ಸಿಎಸ್‌ಆರ್ ಯೋಜನೆಯಡಿ ಕೌಶಲ್ಯ ನೀಡಿದರೆ ಅವರ ದಕ್ಷತೆ ಹಾಗೂ ಉತ್ಪಾದಕತೆಯು ಹೆಚ್ಚುತ್ತದೆ.

**ಹಿರಿಯ ವಯಸ್ಕರ ಜನಸಂಖ್ಯೆ**

ಭಾರತದಲ್ಲಿ ಯುವಜನಸಂಖ್ಯೆ ಹೆಚ್ಚಾಗುವುದರ ಜೊತೆಗೆ ವಯಸ್ಸಾದವರ ಜನಸಂಖ್ಯೆಯು ಸಹ ತೀವ್ರವಾಗಿ ಹೆಚ್ಚುತ್ತಿದೆ ಸುಮಾರು 100 ಮಿಲಿಯನ್‌ರಷ್ಟು ಈ ಜನಸಂಖ್ಯೆ ಇದೆ. ಅತಿವಯಸ್ಸಾದವರ ಜನಸಂಖ್ಯೆ ಪ್ರತಿವರ್ಷ ಶೇ. 3.8% ರಷ್ಟು ಬೆಳೆಯುತ್ತಿದ್ದು, ಒಟ್ಟು ಜನಸಂಖ್ಯೆಯ ಶೇ. 8% ರಷ್ಟು ಜನಸಂಖ್ಯೆಯನ್ನು ಈ ವರ್ಗ ಹೊಂದಿದೆ. 2050ರ ವೇಳೆಗೆ ಹಿರಿಯ ವಯಸ್ಕರ ಜನಸಂಖ್ಯೆ 240 ಮಿಲಿಯನ್‌ಗೆ ಹೆಚ್ಚಾಗಲಿದೆ. ಈ ಜನರ ಸಮಸ್ಯೆಗಳು ಗೊತ್ತಿರುವಂತಹದ್ದೇ. ದೈಹಿಕ ಹಾಗೂ ಮಾನಸಿಕ ಆರೋಗ್ಯ ಕುಗ್ಗುವುದರ ಜೊತೆಗೆ ಇವರ ಕಾರ್ಯದಕ್ಷತೆ





ಸೀಮಿತಗೊಳ್ಳುವುದರಿಂದ ಇವರ ಹಣಕಾಸು ಪರಿಸ್ಥಿತಿ ಸಹ ಸೀಮಿತಗೊಂಡು, ಹೆಚ್ಚು ಸಮಸ್ಯೆಗಳನ್ನು ಅನುಭವಿಸುತ್ತಾರೆ. ಕಳಪೆ ನಾಗರಿಕ ಸೌಲಭ್ಯಗಳು ಸಹ ಅವರ ಸಮಸ್ಯೆಗೆ ಹೆಚ್ಚು ಸೇರಿಕೊಳ್ಳುವುದರಿಂದ ಅವರ ಆರೋಗ್ಯ ಜೀವನಶೈಲಿ, ವಸತಿ ಅಗತ್ಯಗಳ ಸವಾಲುಗಳು ಅವರಿಗೆ ಎದುರಾಗುತ್ತವೆ. ಉದ್ದಿಮೆಗಳ ಸಾಮಾಜಿಕ ಹೊಣೆಗಾರಿಕೆಯ ಹೊಸ ತಿದ್ದುಪಡಿಯು ಹಿರಿಯ ನಾಗರಿಕರಿಗೆ ವೃದ್ಧಾಶ್ರಮ, ಹಗಲು ಯೋಗಕ್ಷೇಮ ಕೇಂದ್ರ (day care) ಕೇಂದ್ರಗಳನ್ನು ಸ್ಥಾಪಿಸಲು ಸಲಹೆ ನೀಡುತ್ತದೆ. ಪರಿಚ್ಛೇದ 7 ರಲ್ಲಿ ಸಿಎಸ್‌ಆರ್ ಚಟುವಟಿಕೆಗಳನ್ನು ಸೇರಿಸುವುದರಿಂದ ಹಿರಿಯ ನಾಗರಿಕರಿಗೆ ಯೋಗ ಕ್ಷೇಮ ಒದಗಿಸುವ ಸರ್ಕಾರದ ಪ್ರಯತ್ನಕ್ಕೆ ಪೂರಕವಾಗಿದೆ.

**ಕೊಳಚೆ ಪ್ರದೇಶ ಅಭಿವೃದ್ಧಿ**

ನಗರ ಪ್ರದೇಶಗಳಲ್ಲಿ ಕೊಳಚೆ ಪ್ರದೇಶ ಹೆಚ್ಚಾಗಲು ನಿರುದ್ಯೋಗ ಹಾಗೂ ವಸತಿ ಸೌಲಭ್ಯ ಇಲ್ಲದಿರುವುದು ಪ್ರಮುಖ ಕಾರಣವಾಗಿದೆ. 2011 ರಲ್ಲಿ 93 ಮಿಲಿಯನ್ ಕೊಳಚೆ ಪ್ರದೇಶದ ಜನಸಂಖ್ಯೆ ಇದೆಯೆಂದು ಅಂದಾಜಿಸಲಾಗಿದೆ. ಸಿಎಸ್‌ಆರ್ ಚಟುವಟಿಕೆಗಳನ್ನು ಕೊಳಚೆ ಪ್ರದೇಶದ ಅಭಿವೃದ್ಧಿಗೆ ಸೇರ್ಪಡೆ ಮಾಡುವುದರಿಂದ ಕೊಳಚೆ ಮುಕ್ತ ನಗರಗಳನ್ನು ಮಾಡುವ ಸರ್ಕಾರದ ಪ್ರಯತ್ನಕ್ಕೆ ನೆರವಾಗುತ್ತದೆ. ನಮ್ಮ ದೇಶದಲ್ಲಿ "ಸ್ಮಾರ್ಟ್ ಸಿಟಿ" ಯೋಜನೆಗಳನ್ನು ಆರಂಭಿಸುವ ಮುನ್ನ ಕೊಳಚೆ ಪ್ರದೇಶದ ಸಮಸ್ಯೆ ನಿವಾರಿಸಬೇಕಾಗಿದೆ. ಸುಸ್ಥಿರ ಆರ್ಥಿಕ ಅಭಿವೃದ್ಧಿಗಾಗಿ ಭಾರತ ಕೊಳಚೆ ಪ್ರದೇಶ ನಿವಾಸಿಗಳಿಗೆ ಉದ್ಯೋಗ ಅವಕಾಶವನ್ನು ಒದಗಿಸಬೇಕಾಗಿದೆ. ಕೊಳಚೆ ಪ್ರದೇಶ ಅಭಿವೃದ್ಧಿ ಗುರಿಯಾಗಿಸಿಕೊಂಡಿರುವ ಸಿಎಸ್‌ಆರ್ ಯೋಜನೆಗಳಿಂದ ಕೈಗಾರಿಕೆಗಳಿಗೆ ಹಾಗೂ ನಗರಗಳ ಬಡವರಿಗೆ ತುಂಬಾ ಲಾಭದಾಯಕವಾಗಲಿದೆ.

**ಉಪಸಂಹಾರ**

ಉದ್ದಿಮೆಗಳ ಮೇಲುಸ್ತರ ಹಾಗೂ ಕೆಳಸ್ತರದ ಉದ್ಯೋಗಿಗಳ ಮಾನವ ಅಭಿವೃದ್ಧಿ ಸವಾಲುಗಳ ಬಗ್ಗೆ ವ್ಯವಹಾರ ಚಿಂತಕರು ಗಮನ ಹರಿಸಿದ್ದಾರೆ. ಈ ಉದ್ಯೋಗಿಗಳ ಮಾನವ ಅಭಿವೃದ್ಧಿ ಸವಾಲುಗಳು ವ್ಯವಹಾರದ ಮೇಲೆ ನೇರ ಪರಿಣಾಮ ಬೀರುತ್ತದೆ. ಉದ್ದಿಮೆಗಳು ತಮ್ಮ ಸಾಂಸ್ಥಿಕ ಗುರಿಗಳೊಂದಿಗೆ ಸಿಎಸ್‌ಆರ್ ಗುರಿಗಳನ್ನು ಒಗ್ಗೂಡಿಸಿ, ದೇಶದ ಅಭಿವೃದ್ಧಿಗೆ ಉಜ್ವಲ ಅವಕಾಶವನ್ನು ಸೃಷ್ಟಿಸುವ ಪ್ರಯತ್ನ ಮಾಡಬೇಕು. ಸುಮಾರು 10,000 ರಿಂದ 12,000 ಕೋಟಿ ರೂ.ಗಳಷ್ಟು ವಾರ್ಷಿಕ ಅನುದಾನ ಹೊಂದಿರುವ ಸಿ.ಎಸ್.ಆರ್ ಮೊತ್ತ ಭಾರತ ಸರ್ಕಾರದ ಆಯ-ವ್ಯಯಕ್ಕೆ ಹೋಲಿಸಿದರೆ ತುಂಬಾ ಕಡಿಮೆಯಾಗಿದೆ. ಆದರೂ ಸಹ ಅದರ ಪರಿಣಾಮ ಹೆಚ್ಚು. ಆದ್ದರಿಂದ ವಿನೂತನವಾದ ಸಿಎಸ್‌ಆರ್ ಯೋಜನೆಗಳು ಭಾರತದ ಜನಸಂಖ್ಯೆಗೆ ಅಗತ್ಯವಾಗಿದೆ. ಉದ್ದಿಮೆಗಳು ಸಿಎಸ್‌ಆರ್ ಅನುದಾನದ ಸ್ವಲ್ಪ ಭಾಗವನ್ನು ಸಂಶೋಧನೆ ಹಾಗೂ ಅಭಿವೃದ್ಧಿಗೆ ಪರಿವರ್ತಿಸಬಹುದು. ಈ ಹೊಸ ಮಾದರಿಗಳನ್ನು ಸಾರ್ವಜನಿಕ ವಲಯಕ್ಕೆ ನೀಡಿದರೆ ಸುಸ್ಥಿರ ಪರಿಣಾಮವನ್ನು ಕಾಣಬಹುದು. ವಾಸ್ತವದಲ್ಲಿ ಉದ್ದಿಮೆಗಳ ಸಾಮಾಜಿಕ ಸಂಶೋಧನೆ ಹಾಗೂ ಉದ್ದಿಮೆಗಳ ಸಾಮಾಜಿಕ ಹೊಣೆಗಾರಿಕೆ ಒಟ್ಟಿಗೆ ಸಾಗಬೇಕಾಗಿದೆ. ಈ ವಿನೂತನ ಮಾದರಿಗಳನ್ನು ಹಂಚಿಕೊಳ್ಳುವುದರಿಂದ ಸಾಮಾಜಿಕ ವಲಯದ ಮೇಲೆ ಪೂರಕ ಪರಿಣಾಮ ಉಂಟಾಗಿ ಸೌಲಭ್ಯ ವಂಚಿತರನ್ನು ಮುಖ್ಯ ವಾಹಿನಿಗೆ ತರಬಹುದಾಗಿದೆ. ಉದ್ಯಮಗಳು ಸೃಷ್ಟಿ ಮಾಡುವ ಸಂಪತ್ತು ಸಿಎಸ್‌ಆರ್ ಅನುದಾನವಾಗಿ ಮಾರ್ಪಾಡಾಗುತ್ತದೆ. ಆದ್ದರಿಂದ ಅಪರಿಮಿತ ಸಂಪನ್ಮೂಲವನ್ನು ಕ್ರೋಢೀಕರಿಸಿ ಹಾಗೂ ಉದ್ಯಮಗಳ ಸಾಂಸ್ಥಿಕ ಸಾಮರ್ಥ್ಯದೊಂದಿಗೆ ಸೇರಿಸಿ ವಿನೂತನವಾದ ಸಿಎಸ್‌ಆರ್ ಯೋಜನೆಗಳನ್ನು ವಿನ್ಯಾಸಗೊಳಿಸಬೇಕಾಗಿದೆ. ಸೌಲಭ್ಯವಂಚಿತ ವರ್ಗಗಳಾದ ಅಲ್ಪಸಂಖ್ಯಾತರು, ಶೋಷಿತರು, ಮೂಲ ವಾಸಿಗಳು, ಮಹಿಳೆಯರು ಅಸಂಘಟಿತ ವಲಯದ ಕಾರ್ಮಿಕರು ಮುಂತಾದವರ ಸಾಮಾಜಿಕ ಅಭಿವೃದ್ಧಿಯಲ್ಲಿ ಸಿಎಸ್‌ಆರ್ ಯೋಜನೆಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆ. ❑

# ಎನ್‌ಪಿಎಸ್–ಸ್ವಾವಲಂಬನ–ಅಟಲ್ ಪಿಂಚಣಿ ಯೋಜನೆ




**ಪಿಂಚಣಿದಾರನು ಪ್ರತಿ ತಿಂಗಳು ತುಂಬುವ ವಂತಿಕೆ ಮೊತ್ತವನ್ನು ಹೆಚ್ಚಿಸಬಹುದು ಅಥವಾ ಕಡಿಮೆ ಮಾಡಬಹುದಾಗಿದೆ. ವರ್ಷದ ಏಪ್ರಿಲ್ ತಿಂಗಳಲ್ಲಿ ಪಿಂಚಣಿಯ ಚಂದಾದಾರನು ಮಾರ್ಪಾಡು ಮಾಡಬಹುದಾಗಿದೆ. ಮತ್ತು ಚಂದಾದಾರನು ಹೆಚ್ಚು ಅಥವಾ ಕಡಿಮೆ ಮೊತ್ತವನ್ನು ಜಮೆ ಮಾಡಿದ್ದೇ ಆದಲ್ಲಿ ವರ್ಷದ ಅವಧಿಯ ಅನುಸಾರವಾಗಿ ಮೊತ್ತವನ್ನು ಸರಿಯಾಗಿ ಹೊಂದಾಣಿಕೆ ಮಾಡಲಾಗುತ್ತದೆ.**

ಅಸಂಘಟಿತ ಕ್ಷೇತ್ರದಲ್ಲಿನ ಕಾರ್ಮಿಕರು ತಮ್ಮ ನಿವೃತ್ತಿ ಅವಧಿಗಾಗಿ ಕೆಲಸದಲ್ಲಿದ್ದಾಗ ಸ್ವಯಂ ಪ್ರೇರಿತವಾಗಿ ಹಣ ವಂತಿಕೆ ಮಾಡುವಂತೆ ಪ್ರೋತ್ಸಾಹಿಸುವ, ಸ್ವಾವಲಂಬನ ಸಹವಂತಿಕೆಯ ಪಿಂಚಣಿ ಯೋಜನೆಯನ್ನು ಕೇಂದ್ರ ಸರ್ಕಾರ ಅಕ್ಟೋಬರ್ 2010ರಲ್ಲಿ ಜಾರಿಗೆ ತಂದಿದೆ. ಈ ಯೋಜನೆಯಡಿ ವಾರ್ಷಿಕ ಕನಿಷ್ಠ ರೂ. 1,000 ರಿಂದ ಗರಿಷ್ಠ ರೂ. 12,000 ವಂತಿಕೆ ನೀಡುವ ಎನ್‌ಪಿಎಸ್ / ಸ್ವಾವಲಂಬನ ಚಂದಾದಾರರ ಖಾತೆಗೆ 5 ವರ್ಷಗಳವರೆಗೆ ಅಥವಾ 2016–17ರ ವರೆಗೆ ಯಾವುದು ಮೊದಲಿನ ಅವಧಿಯೊ ಅಲ್ಲಿಯವರೆಗೆ 1,000 ರೂ. ಹಣವನ್ನು ಸರ್ಕಾರ ನೀಡಲಿದೆ ಇದನ್ನು ಎನ್‌ಪಿಎಸ್ ಲೈಟ್ ಮಾದರಿಯಲ್ಲಿ ನಿರೂಪಿಸಲಾಗಿದೆ. ವೈಯಕ್ತಿಕ ಖಾತೆದಾರರ ಮೊತ್ತವನ್ನು ಬಂಡವಾಳ ಹೂಡಿಕೆಗಾಗಿ ಪರಿಗಣಿಸಿ ವೈಯಕ್ತಿಕವಾಗಿ ಖಾತೆ ನಿರ್ವಹಿಸುವ ವ್ಯವಸ್ಥೆ ರೂಪಿಸಲಾಗಿದೆ. ವ್ಯಕ್ತಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕೊಡುಗೆಗಳನ್ನು ಪಡೆಯುವಂತೆಯೂ ಅವಕಾಶ ಕಲ್ಪಿಸಲಾಗಿದೆ. ಅನೇಕ ರಾಜ್ಯ ಸರ್ಕಾರಗಳು ಗುರುತಿಸಲ್ಪಟ್ಟ ಅಂದರೆ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕರು, ಆಶಾ ಕಾರ್ಯಕರ್ತೆಯರು, ಕಟ್ಟಡ ನಿರ್ಮಾಣ ಕೆಲಸಗಾರರಿಗಾಗಿ ಸ್ವಾವಲಂಬನ ಯೋಜನೆಯನ್ನು ಅಳವಡಿಸಿಕೊಂಡಿದೆ. ವಿವಿಧ ರಾಜ್ಯಗಳು ಅಳವಡಿಸಿಕೊಂಡಿರುವ ಯೋಜನ ಹಾಗೂ ಫಲಾನುಭವಿಗಳ ವಿವರಗಳನ್ನು ಪಟ್ಟಿ 1 ರಲ್ಲಿ ನೀಡಲಾಗಿದೆ. ಪಿಎಫ್‌ಆರ್‌ಡಿಎಗಳಲ್ಲಿ ನೊಂದಾಯಿಸಲ್ಪಟ್ಟ ಸಂಗ್ರಾಹಕರು ತಳಮಟ್ಟದಲ್ಲಿ ಪಿಂಚಣಿ ಖಾತೆ ತೆರೆಯಲು, ವಂತಿಕೆ ಸಂಗ್ರಹಿಸಲು ಹಾಗೂ ನಿಯಮಿತವಾಗಿ ಎನ್‌ಪಿಎಸ್ ಟ್ರಸ್ಟ್ ಖಾತೆಗೆ ನಿಯಮಾನುಸಾರ ಹಣ ಪಾವತಿಸುವ ಕಾರ್ಯವನ್ನು ನಿರ್ವಹಿಸುತ್ತಾರೆ. ಈ ಪಿಂಚಣಿ ಯೋಜನೆಯ ಅಡಿಯಲ್ಲಿ 31 ಮಾರ್ಚ 2017ರ ವರೆಗೆ 42.39 ಲಕ್ಷ ಜನರು ತಮ್ಮ ಹೆಸರನ್ನು ನೊಂದಣಿ ಮಾಡಿಸಿದ್ದಾರೆ. 2015 ಮೇ ತಿಂಗಳಿನಲ್ಲಿ ಅಟಲ್ ಪೆನ್‌ಷನ್ ಯೋಜನೆ ಜಾರಿಗೆ ಬಂದಿದ್ದರಿಂದ ಸ್ವಾವಲಂಬನ, ಲೈಟ್ ರಾಷ್ಟ್ರೀಯ ಪಿಂಚಣಿ ಯೋಜನೆಯ ಹೊಸ ನೊಂದಣಿ ತಡೆಹಿಡಿದು 18 ರಿಂದ 40 ವರ್ಷದ ವಯಸ್ಸಿನ ಎಲ್ಲ ಸ್ವಾವಲಂಬನ ಪಿಂಚಣಿ ಚಂದಾದಾರರಿಗೆ ಅಟಲ್ ಪೆನ್‌ಷನ್ ಯೋಜನೆಗೆ ವರ್ಗವಾಗುವಂತೆ ಅವಕಾಶ ಕಲ್ಪಿಸಲಾಯಿತು. ಈ ನಿಟ್ಟಿನಲ್ಲಿ ಚಂದಾದಾರರು ಸ್ವಾವಲಂಬನ ಪಿಂಚಣಿ ಯೋಜನೆಯಿಂದ ಅಟಲ್ ಪಿಂಚಣಿ ಯೋಜನೆಗೆ ವರ್ಗಾವಣೆ ಬಯಸಿದ್ದಲ್ಲಿ, ರಾಷ್ಟ್ರೀಯ ಸ್ವಾವಲಂಬನ ಪಿಂಚಣಿ ಯೋಜನೆಗೆ ಸಂಬಂಧಿಸಿದ ಬ್ಯಾಂಕ್ ಖಾತೆಯ ಪಾಸ್‌ಬುಕ್, ಯೋಜನೆಯ ಇ–ಪ್ರಾನ್ ಕಾರ್ಡ (e-PRAN), ಆಧಾರ ಕಾರ್ಡ ಸಾದರಪಡಿಸಿ ಸುಲಭವಾಗಿ ಖಾತೆಯನ್ನು ಬದಲಾಯಿಸಬಹುದಾಗಿದೆ. ದೇಶದ ಯಾವುದೇ ಪ್ರಜೆಯು ಇಲ್ಲಿಯ ವರೆಗೆ ಯಾವುದೇ ರೀತಿಯಿಂದ ಪಿಂಚಣಿ ಖಾತೆಯನ್ನು ಹೊಂದದೇ ಇದ್ದರೆ, ಅವರು ಹೊಸದಾಗಿ ಬ್ಯಾಂಕ್ ಖಾತೆಯನ್ನು ಹೊಂದಿರುವದು ಅವಶ್ಯಕವಾಗಿದ್ದು, ಅದರ ಜೊತೆಗೆ ಆಧಾರ ಕಾರ್ಡ ಕಡ್ಡಾಯವಾಗಿ ನೊಂದಣಿ ಮಾಡಿಸತಕ್ಕದ್ದು. 40 ವರ್ಷಕ್ಕಿಂತ ಹೆಚ್ಚಿನ ವಯೋಮಿತಿಯ ರಾಷ್ಟ್ರೀಯ ಸ್ವಾವಲಂಬನ ಲೈಟ್ ಪಿಂಚಣಿ ಯೋಜನೆಯ ಚಂದಾದಾರರು 60 ವರ್ಷದವರೆಗೆ ಪಿಂಚಣಿ ಖಾತೆಯನ್ನು ಮುಂದುವರಿಸಬಹುದಾಗಿದೆ.

### ಅಟಲ್ ಪೆನ್‌ಷನ್ ಯೋಜನೆ

ವಯೋವೃದ್ಧರನ್ನು ಗಮನದಲ್ಲಿ ಇಟ್ಟುಕೊಂಡು ಅವರ ಹಿತರಕ್ಷಣೆಗಾಗಿ ಅಟಲ್ ಪೆನ್‌ಷನ್ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಈ ಯೋಜನೆಯ ವ್ಯಾಪ್ತಿಯಲ್ಲಿ ಬಡವ, ಕೂಲಿಕಾರ್ಮಿಕರರನ್ನು

| ರಾಜ್ಯ ಸರ್ಕಾರಗಳು ಈ ಕೆಳಗಿನ ಕೋಷ್ಟಕದಲ್ಲಿ ಈ ಯೋಜನೆಯ ಫಲಾನುಭವಿಗಳನ್ನು ವಿಂಗಡಿಸಿ ರಾಜ್ಯ ಸರ್ಕಾರವು ನೀಡಿದ ಹಣದ ಪಾಲಿನ ಮಾಹಿತಿಯನ್ನು ನೀಡಲಾಗಿದೆ. ಕೋಷ್ಟಕ ಸಂಖ್ಯೆ 1 | | | |
|---|---|---|---|
| ರಾಜ್ಯ ಸರ್ಕಾರವು ರಾಷ್ಟ್ರೀಯ ಸ್ವಾಲಂಬನ್ ಪಿಂಚಣಿ ಯೋಜನೆಗೆ ವಿಶೇಷವಾದ ವಿವಿಧ ಗುಂಪುಗಳಿಗೆ ಅನುದಾನ ನೀಡಿದ ಮಾಹಿತಿ ವಿವರ: | | | |
| **ಕ್ರಮ ಸಂಖ್ಯೆ** | **ರಾಜ್ಯ ಸರ್ಕಾರಗಳ ಹೆಸರು** | **ಫಲಾನುಭವಿಗಳು** | **ರಾಜ್ಯಸರ್ಕಾರಗಳು ನೀಡಿದ ಕೊಡುಗೆ** |
| 1 | ಕಟ್ಟಡ ಕಾರ್ಮಿಕರ ಕಲ್ಯಾಣ ಅಭಿವೃದ್ಧಿ ಮಂಡಳಿ ಆಂಧ್ರ ಪ್ರದೇಶದ | ಕಟ್ಟಡ ಕಾರ್ಮಿಕರು | ರೂ. 1000/– |
| 2 | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ನಿರ್ದೇಶನಾಲಯ ಕರ್ನಾಟಕ | ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರು | ಅಂಗನವಾಡಿ ಕಾರ್ಯಕರ್ತರಿಗೆ ರೂ.1800/– ಅಂಗನವಾಡಿ ಸಹಾಯಕರಿಗೆ ರೂ. 1004/– |
| 3 | ಕರ್ನಾಟಕ ರಾಜ್ಯ ಅಸಂಘಟಿತ ಕೆಲಸಗಾರರ ಸಾಮಾಜಿಕ ಸುರಕ್ಷಾ ಮಂಡಳಿ | ವಿಶೇಷ ಯಾದಿಯಲ್ಲಿರುವ ಅಸಂಘಟಿತ ಕೆಲಸಗಾರರು | ರೂ. 1000/– |
| 4 | ಜಾರ್ಖಂಡ ಕಟ್ಟಡ ಮತ್ತು ಕೆಲಸಗಾರರ ಹಿತರಕ್ಷಣಾ ಮಂಡಳಿ ರಾಂಚಿ | ಕಟ್ಟಡ ಮತ್ತು ಇತರೆ ಕೆಲಸಗಾರರು | ರೂ. 1000/– |
| 5 | ಕಟ್ಟಡ ಮತ್ತು ಕೆಲಸಗಾರರ ಹಿತರಕ್ಷಣಾ ಮಂಡಳಿ ರಾಜಸ್ಥಾನ | ಕಟ್ಟಡ ಮತ್ತು ಇತರೆ ಕೆಲಸಗಾರರು | ರೂ.1000/– |
| 6 | ಛತ್ತಿಸಗಢ ರಾಜ್ಯ ಸರ್ಕಾರ | ವಿಶೇಷ ಯಾದಿಯಲ್ಲಿರುವ ಅಸಂಘಟಿತ ಕೆಲಸಗಾರರು | ರೂ.1000/– |
| 7 | ಎನ್‌ಸಿಟಿ ದೆಹಲಿ ರಾಜ್ಯ ಸರ್ಕಾರ | ಕಟ್ಟಡ ಮತ್ತು ಇತರೆ ಕೆಲಸಗಾರರು | ರೂ.1000/– |
| 8 | ಅಸ್ಸಾಂ ರಾಜ್ಯ ಸರ್ಕಾರ | ಕಟ್ಟಡ ಮತ್ತು ಇತರೆ ಕೆಲಸಗಾರರು | ರೂ.1000/– |
| 9 | ಹರಿಯಾಣಾ ರಾಜ್ಯ ಸರ್ಕಾರ | ಕಬ್ಬು ಬೆಳೆಗಾರರ ಸಂಘ ಸಹಕಾರಿ ಸಕ್ಕರೆ ಕಾರ್ಖಾನೆಗಳು ಹಾಲಿನ ಸಹಕಾರಿ ಮಹಾಮಂಡಳಿಗಳು ಅಂಗನವಾಡಿ ಕಾರ್ಯಕರ್ತೆಯರು | ರೂ.1200/– |
| 10 | ಮಧ್ಯಪ್ರದೇಶ ರಾಜ್ಯ ಸರ್ಕಾರ | ಕಟ್ಟಡ ಮತ್ತು ಇತರೆ ಕೆಲಸಗಾರರು | ರೂ.1000/– |


ತರಲಾಗಿದೆ. ಈ ಯೋಜನೆಯು ಅಸಂಘಟಿತ ವಲಯದ ಕಾರ್ಮಿಕರಿಗೆ ವೃದ್ಧಾಪ್ಯದಲ್ಲಿ ನೆರವಾಗುವ ಉದ್ದೇಶ ಹೊಂದಿದೆ. ಅಸಂಘಟಿತ ವಲಯದ ಕಾರ್ಮಿಕರು ತಾವು ದುಡಿದು ಗಳಿಸಿದ ಅಲ್ಪ ಮೊತ್ತವನ್ನು ಉಳಿತಾಯ ಮಾಡುವುದರ ಮೂಲಕ ಅವರನ್ನು ಪ್ರೇರೇಪಿಸುವುದಾಗಿದೆ. ಭಾರತ ಸರ್ಕಾರವು ಮೇ 2015 ರಂದು ಅಟಲ್ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿತು. ಈ ಯೋಜನೆಯ ಅಡಿಯಲ್ಲಿ 18 ವರ್ಷ ಮೇಲ್ಪಟ್ಟ ಮತ್ತು 40 ವರ್ಷದ ಒಳಗಿನ ವಯಸ್ಸಿನ ಯಾವುದೇ ಭಾರತೀಯ ನಾಗರಿಕನು ಈ ಯೋಜನೆಯ ಪ್ರಯೋಜನ ಪಡೆಯಲು ನೊಂದಣಿ ಮಾಡಿಸಲು ಅರ್ಹನಾಗಿರುತ್ತಾನೆ. ಈ ಯೋಜನೆಗೆ ಸಂಬಂಧಪಟ್ಟಂತೆ ದೇಶದ ಯಾವುದೇ ರಾಷ್ಟ್ರೀಕೃತ, ಸಾರ್ವಜನಿಕ ಕ್ಷೇತ್ರದ ಯಾವದೇ ಬ್ಯಾಂಕಿನಲ್ಲಿ ಪಿಂಚಣಿ ಯೋಜನೆಯ ಖಾತೆಯನ್ನು ಪ್ರಾರಂಭಿಸಬಹುದಾಗಿದೆ. ಇದಲ್ಲದೇ ಸಹಕಾರಿ, ಖಾಸಗಿ, ಪ್ರಾದೇಶಿಕ ಮತ್ತು ಅಂಚೆಕಚೇರಿಗಳಲ್ಲಿ ಈ ಪಿಂಚಣಿ ಯೋಜನೆಯ ಖಾತೆ ತೆರೆಯುವ ಸೌಲಭ್ಯಗಳನ್ನು ನಾಗರಿಕರು ಪಡೆಯಬಹುದಾಗಿದೆ. ಪ್ರಸ್ತುತ



ದೇಶದಾದ್ಯಂತ 228 ವಿವಿಧ ಬ್ಯಾಂಕ್ ಮತ್ತು ಅಂಚೆ ಕಚೇರಿಗಳ 1,45,000 ಶಾಖೆಗಳ ಮುಖಾಂತರ ಜನರು ಅಟಲ್ ಪಿಂಚಣಿ ಯೋಜನೆಯ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ. ಅಟಲ್ ಪೆನ್‌ಷನ್ ಪಿಂಚಣಿ ಯೋಜನೆಯ ಖಾತೆ ಹೊಂದಿದವರು ತಮ್ಮ 60ನೇ ವಯಸ್ಸಿಗೆ, ತಾವು ಮಾಡಿದ ವಂತಿಕೆ, ಯೋಜನೆಗೆ ಸೇರದ ವಯಸ್ಸು ಹಾಗೂ ಆಯ್ಕೆ ಮಾಡಿಕೊಂಡ ಮಾಸಿಕ ಪಿಂಚಣಿ ಅವಲಂಬಿಸಿ 1,000 ದಿಂದ 5,000 ರೂಪಾಯಿಗಳ ವರೆಗೆ ಖಚಿತವಾದ ನಿರ್ದಿಷ್ಟ ಮೊತ್ತವನ್ನು ಪಡೆಯುತ್ತಾರೆ. ಈ ಯೋಜನೆಯಲ್ಲಿ ಚಂದಾದಾರನ ಉಳಿತಾಯದ ಮೊತ್ತದ ಮೇಲೆ ನಿರ್ಧಾರಿತವಾಗುತ್ತದೆ. ಅಂದರೆ 18 ವರ್ಷ ಮೇಲ್ಪಟ್ಟ ವ್ಯಕ್ತಿಯು ಪ್ರತಿ

## ಅಟಲ್ ಪಿಂಚಣಿ ಯೋಜನೆ ವಿವರಣೆ ಪಟ್ಟಿ

| | | ಕನಿಷ್ಠ ಖಚಿತ ಪಿಂಚಣಿ ಯೋಜನೆ ಯೋಜನೆ ಪ್ರತಿ ತಿಂಗಳಿಗೆ ಕಂತು ರೂ. 1000 | | | ಕನಿಷ್ಠ ಖಚಿತ ಪಿಂಚಣಿ ಯೋಜನೆ ಪ್ರತಿ ತಿಂಗಳಿಗೆ ಕಂತು ರೂ. 2000 | | | ಕನಿಷ್ಠ ಖಚಿತ ಪಿಂಚಣಿ ಯೋಜನೆ ಪ್ರತಿ ತಿಂಗಳಿಗೆ ಕಂತು ರೂ. 3000 | | | ಕನಿಷ್ಠ ಖಚಿತ ಪಿಂಚಣಿ ಯೋಜನೆ ಪ್ರತಿ ತಿಂಗಳಿಗೆ ಕಂತು ರೂ. 4000 | | | ಕನಿಷ್ಠ ಖಚಿತ ಪಿಂಚಣಿ ಯೋಜನೆ ಪ್ರತಿ ತಿಂಗಳಿಗೆ ಕಂತು ರೂ. 5000 | | |
|---|---|---|---|---|---|---|---|---|---|---|---|---|---|---|---|---|
| ನಾಮಿನಿಗೆ ದೊರಕುವ ಮೊತ್ತ | | 1.7 ಲಕ್ಷ ರೂ. | | | 3.4. ಲಕ್ಷ ರೂ | | | 5.1 ಲಕ್ಷ ರೂ | | | 6.8 ಲಕ್ಷ ರೂ | | | 8.5 ಲಕ್ಷ ರೂ. | | |
| ವಯಸ್ಸು | ಅವಧಿ | ಒಂದು ತಿಂಗಳ ಕಂತು | ಮೂರು ತಿಂಗಳ ಕಂತು | ಆರು ತಿಂಗಳ ಕಂತು | ಒಂದು ತಿಂಗಳ ಕಂತು | ಮೂರು ತಿಂಗಳ ಕಂತು | ಆರು ತಿಂಗಳ ಕಂತು | ಒಂದು ತಿಂಗಳ ಕಂತು | ಮೂರು ತಿಂಗಳ ಕಂತು | ಆರು ತಿಂಗಳ ಕಂತು | ಒಂದು ತಿಂಗಳ ಕಂತು | ಮೂರು ತಿಂಗಳ ಕಂತು | ಆರು ತಿಂಗಳ ಕಂತು | ಒಂದು ತಿಂಗಳ ಕಂತು | ಮೂರು ತಿಂಗಳ ಕಂತು | ಆರು ತಿಂಗಳ ಕಂತು |
| 18 | 42 | 42 | 125 | 248 | 84 | 250 | 496 | 126 | 376 | 744 | 168 | 501 | 991 | 210 | 626 | 1239 |
| 19 | 41 | 46 | 137 | 271 | 92 | 274 | 543 | 138 | 411 | 814 | 183 | 545 | 1080 | 228 | 679 | 1346 |
| 20 | 40 | 50 | 149 | 295 | 100 | 298 | 590 | 150 | 447 | 885 | 198 | 590 | 1169 | 248 | 739 | 1464 |
| 21 | 39 | 54 | 161 | 319 | 108 | 322 | 637 | 162 | 483 | 956 | 215 | 641 | 1269 | 269 | 802 | 1588 |
| 22 | 38 | 59 | 176 | 348 | 117 | 349 | 690 | 177 | 527 | 1045 | 234 | 697 | 1381 | 292 | 870 | 1723 |
| 23 | 37 | 64 | 191 | 378 | 127 | 378 | 749 | 192 | 572 | 1133 | 254 | 757 | 1499 | 318 | 948 | 1877 |
| 24 | 36 | 70 | 209 | 413 | 139 | 414 | 820 | 208 | 620 | 1228 | 277 | 826 | 1635 | 346 | 1031 | 2042 |
| 25 | 35 | 76 | 226 | 449 | 151 | 450 | 891 | 226 | 674 | 1334 | 301 | 897 | 1776 | 376 | 1121 | 2219 |
| 26 | 34 | 82 | 244 | 484 | 164 | 489 | 968 | 246 | 733 | 1452 | 327 | 975 | 1930 | 409 | 1219 | 2414 |
| 27 | 33 | 90 | 268 | 531 | 178 | 530 | 1050 | 268 | 799 | 1582 | 356 | 1061 | 2101 | 446 | 1329 | 2632 |
| 28 | 32 | 97 | 289 | 572 | 194 | 578 | 1145 | 292 | 870 | 1723 | 388 | 1156 | 2290 | 485 | 1445 | 2862 |
| 29 | 31 | 106 | 316 | 626 | 212 | 632 | 1251 | 318 | 948 | 1877 | 423 | 1261 | 2496 | 529 | 1577 | 3122 |
| 30 | 30 | 116 | 346 | 685 | 231 | 688 | 1363 | 347 | 1034 | 2048 | 462 | 1377 | 2727 | 577 | 1720 | 3405 |
| 31 | 29 | 126 | 376 | 744 | 252 | 751 | 1487 | 379 | 1129 | 2237 | 504 | 1502 | 2974 | 630 | 1878 | 3718 |
| 32 | 28 | 138 | 411 | 814 | 276 | 823 | 1629 | 414 | 1234 | 2443 | 551 | 1642 | 3252 | 689 | 2053 | 4066 |
| 33 | 27 | 151 | 450 | 891 | 302 | 900 | 1782 | 453 | 1350 | 2673 | 602 | 1794 | 3553 | 752 | 2241 | 4438 |
| 34 | 26 | 165 | 492 | 974 | 330 | 983 | 1948 | 495 | 1475 | 2921 | 659 | 1964 | 3889 | 824 | 2456 | 4863 |
| 35 | 25 | 181 | 539 | 1068 | 362 | 1079 | 2136 | 543 | 1618 | 3205 | 722 | 2152 | 4261 | 902 | 2688 | 5323 |
| 36 | 24 | 198 | 590 | 1169 | 396 | 1180 | 2337 | 594 | 1770 | 3506 | 792 | 2360 | 4674 | 990 | 2950 | 5843 |
| 37 | 23 | 218 | 650 | 1287 | 436 | 1299 | 2573 | 654 | 1949 | 3860 | 870 | 2593 | 5134 | 1087 | 3239 | 6415 |
| 38 | 22 | 240 | 715 | 1416 | 480 | 1430 | 2833 | 720 | 2146 | 4249 | 957 | 2852 | 5648 | 1196 | 3564 | 7058 |
| 39 | 21 | 264 | 787 | 1558 | 528 | 1574 | 3116 | 792 | 2360 | 4674 | 1054 | 3141 | 6220 | 1318 | 3928 | 7778 |




ತಿಂಗಳು ಸರಿಯಾಗಿ ಅತಿ ಸಣ್ಣ ಮೊತ್ತ 42 ರೂಪಾಯಿಗಳನ್ನು ತನ್ನ ಪಿಂಚಣಿ ಖಾತೆಗೆ ಜಮಾ ಮಾಡುತ್ತಾ ಬಂದರೆ ಅವನು ಪ್ರತಿ ತಿಂಗಳಿಗೆ 1,000 ರೂಪಾಯಿಗಳನ್ನು ಪಿಂಚಣಿ ಪಡೆಯುತ್ತಾನೆ. ಕೇಂದ್ರ ಸರ್ಕಾರವು ಯಾವುದೇ ಇನ್ನಿತರ ಸಾಮಾಜಿಕ ಭದ್ರತಾ ಯೋಜನೆಯ ಫಲಾನುಭವಿಯಾಗಿರದ, ತೆರಿಗೆ ಪಾವತಿದಾರನಲ್ಲದ ಹಾಗೂ 31 ಮಾರ್ಚ್ 2016ರ ಒಳಗೆ ಯೋಜನೆ ಸೇರಿದ ಅರ್ಹ ಚಂದಾದಾರನ ಖಾತೆಗೆ 5 ವರ್ಷದ ಅವಧಿಗೆ ಆತನ ಖಾತೆಗೆ ಒಟ್ಟು ಚಂದಾ ಹಣದ ಶೇ. 50 ಅಥವಾ 1,000 ರೂಪಾಯಿ, ಯಾವುದು ಕಡಿಮೆ ಮೊತ್ತವೊ ಅಷ್ಟನ್ನು ನೀಡುತ್ತದೆ.

ಪಿಂಚಣಿದಾರನು ತನ್ನ ಪ್ರತಿ ತಿಂಗಳು ತುಂಬುವ ಮೊತ್ತವನ್ನು ಹೆಚ್ಚಿಸಬಹುದು ಅಥವಾ ಕಡಿಮೆ ಮಾಡಬಹುದಾಗಿದೆ. ವರ್ಷದ ಏಪ್ರಿಲ್ ತಿಂಗಳಲ್ಲಿ ಪಿಂಚಣಿಯ ಚಂದಾದಾರನು ಮಾರ್ಪಾಡು ಮಾಡಬಹುದಾಗಿದೆ ಮತ್ತು ಚಂದಾದಾರನು ಹೆಚ್ಚು ಅಥವಾ ಕಡಿಮೆ ಮೊತ್ತವನ್ನು ಜಮೆ ಮಾಡಿದ್ದೇ ಆದಲ್ಲಿ ವರ್ಷದ ಅವಧಿಯ ಅನುಸಾರವಾಗಿ ಮೊತ್ತವನ್ನು ಸರಿಯಾಗಿ ಹೊಂದಾಣಿಕೆ ಮಾಡಲಾಗುವುದು.

ಪಿಂಚಣಿ ಪಡೆಯುತ್ತಿರುವಾಗ ವ್ಯಕ್ತಿಯು ಮೃತಪಟ್ಟಲ್ಲಿ ಅವನ ಹೆಂಡತಿಗೆ ಇಲ್ಲವೇ ಚಂದಾದಾರರು ಮಹಿಳೆಯಾಗಿದ್ದರೆ ಅವರ ಪತಿಗೆ ಯೋಜನೆಯ ನಿಯಮಾವಳಿಯಂತೆ 60 ವರ್ಷದ ನಂತರ ಪ್ರತಿ ತಿಂಗಳು ಪಿಂಚಣಿ ದೊರೆಯುತ್ತದೆ. ಅದೇ ರೀತಿಯ ಒಂದು ವೇಳೆ ಯೋಜನೆಗೆ ಒಳಪಡುವ ಗಂಡ ಮತ್ತು ಹೆಂಡತಿ ಇಬ್ಬರೂ ಮೃತಪಟ್ಟಲ್ಲಿ ನಾಮ ನಿರ್ದೇಶನ ಮಾಡಿದ ವ್ಯಕ್ತಿ ಪಿಂಚಣಿಯ ಹಣವನ್ನು ಪಡೆಯಲು ಹಕ್ಕುದಾರನಾಗಿರುತ್ತಾನೆ. ಈ ಯೋಜನೆಯ ಪ್ರಕಾರ ಪಿಂಚಣಿದಾರನು ಅತಿ ಕಡಿಮೆ ವಯಸ್ಸಿನಲ್ಲಿ ಮೃತಪಟ್ಟಲ್ಲಿ ಅವನು ಅಥವಾ ಅವಳು ಪಿಂಚಣಿ ಹಣದ ಪ್ರತಿ ಕಂತನ್ನು ಮುಂದುವರಿಸಬೇಕಾಗುತ್ತದೆ. ಒಂದು ವೇಳೆ ಪಿಂಚಣಿ ಚಂದಾದಾರನು ಪ್ರತಿ ತಿಂಗಳು ತುಂಬುವ ಕಂತನ್ನು ಕಡಿತಗೊಳಿಸಿದರೆ ಇಲ್ಲವೇ ಖಾತೆಯನ್ನು ಸ್ಥಗಿತಗೊಳಿಸಿದರೆ, ಅಂತಹ ಚಂದಾದಾರರಿಗೆ ತುಂಬಿದ ಮೊತ್ತವನ್ನು ಮಾತ್ರ ಹಿಂತಿರುಗಿಸುವುದರ ಜೊತೆಗೆ ಖಾತೆಯನ್ನು ನಿರ್ವಹಿಸಿದ ವೆಚ್ಚವನ್ನು ಕಡಿತಗೊಳಿಸಲಾಗುವದು. ಇದು ನಿರ್ದಿಷ್ಟವಾದ ಮೊತ್ತವನ್ನು ಪಡೆಯುವ ಪಿಂಚಣಿ ಯೋಜನೆ ಆಗಿದ್ದು, ಪಿಂಚಣಿ ಸಂಚಯದ ಹಂತದಲ್ಲಿ ಚಂದಾದಾರರು ನಿಗದಿತವಾಗಿ ಕಂತನ್ನು ತುಂಬಿದ್ದೇ ಆದಲ್ಲಿ ಅಂತಹವರು ಹೆಚ್ಚಿನ ಪ್ರಯೋಜನ ಪಡೆಯುತ್ತಾರೆ.

ಈ ಅಟಲ್ ಪಿಂಚಣಿ ಯೋಜನೆಯು ಸ್ವಾವಲಂಬನ ಯೋಜನೆಯ ಸುಧಾರಿತ ಯೋಜನೆ ಆಗಿದ್ದು, ಸರ್ಕಾರ ತನ್ನ ಅನುದಾನ ಪಾಲನ್ನು ನೇರವಾಗಿ ವ್ಯಕ್ತಿಯ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತದೆ. ಕೇಂದ್ರ ಸರ್ಕಾರದ ಎಲ್ಲ ಉದ್ಯೋಗಿಗಳಿಗೆ ವಿವಿಧ ಮಾದರಿಯಲ್ಲಿ ರಾಷ್ಟ್ರೀಯ ಪಿಂಚಣಿಯ ಯೋಜನೆಗಳು ಲಭ್ಯವಿದ್ದು, 2016-17ನೇ ಸಾಲಿನಲ್ಲಿ ಈ ಯೋಜನೆಯ ಗಳಿಕೆಯ ಮೊತ್ತ 13.91 ರಷ್ಟಿದೆ.

ಅಟಲ್ ಪಿಂಚಣಿ ಯೋಜನೆಯ ಚಂದಾದಾರರು ತಾವು ತುಂಬಿದ ಪ್ರತಿ ತಿಂಗಳ ಕಂತಿನ ಮಾಹಿತಿಯನ್ನು www.npscra.nsdl.co.in ಇಲ್ಲವೇ www.npstrust.org.in ಆನ್‌ಲೈನ್ ಜಾಲತಾಣದ ಮೂಲಕ ಸಾರ್ವಜನಿಕರು ಮಾಹಿತಿಯನ್ನು ಪಡೆಯಬಹುದಾಗಿದೆ. ಈ ಅಟಲ್ ಪಿಂಚಣಿ ಯೋಜನೆಯ ಮಾಹಿತಿಯನ್ನು ಬ್ಯಾಂಕು ನೀಡಿದ ಖಾತೆಯ ಸಂಖ್ಯೆ APYPRAN ಮೂಲಕ ತಿಳಿದುಕೊಳ್ಳಬಹುದಾಗಿದೆ. ಚಂದಾದಾರರು ಒಂದು ವೇಳೆ APYPRAN ಸಂಖ್ಯೆ ಹೊಂದಿಲ್ಲದೆ ಇದ್ದರೂ ಖಾತೆದಾರರು ತಮ್ಮ ಹುಟ್ಟಿದ ದಿನಾಂಕ ಮತ್ತು ಖಾತೆಯ ಸಂಖೆಯನ್ನು ಆನ್‌ಲೈನ್ ಜಾಲತಾಣದಲ್ಲಿ ನಮೂದಿಸಿದರೆ ವಿವರವಾದ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ.

ಈ ಜಾಲತಾಣ (ವೈಬ್‌ಸೈಟ್) ಮೂಲಕ ಪಿಂಚಣಿದಾರನ ಹಣಕಾಸಿನ ವ್ಯವಹಾರ, ತುಂಬಿದ ಪಿಂಚಣಿ ಮೊತ್ತ, ಖಾತೆಯನ್ನು ಪ್ರಾರಂಭಿಸಿದ ದಿನಾಂಕ, ನಾಮ ನಿರ್ದೇಶನ ಮಾಡಿದ ವ್ಯಕ್ತಿಯ ಹೆಸರು ಮತ್ತು ಇತರೆ ವಿಸ್ತೃತವಾದ ಮಾಹಿತಿಯನ್ನು ಜಾಲತಾಣದ ಮೂಲಕ ತಿಳಿಯಬಹುದಾಗಿದೆ.

ಈ ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟಂತೆ e-PRAN (ಇ-ಪ್ರಾನ್) ಕಾರ್ಡ ತುಂಬ ಅನುಕೂಲಕರವಾಗಿದ್ದು, ಈ ಕಾರ್ಡಿನ ಮೂಲಕ ಪಿಂಚಣಿದಾರನು ತನ್ನ ಹಣಕಾಸಿನ ಎಲ್ಲ ವಿವರವಾದ ಮೊತ್ತವನ್ನು (ಇ-ಪ್ರಾನ್) e-PRAN ಕಾರ್ಡ ಮೂಲಕ ಮಾಹಿತಿ ಮತ್ತು ದಾಖಲೆಗಳನ್ನು ಮುದ್ರಿಸಿ ಕೊಳ್ಳಬಹುದಾಗಿದೆ. ಈ ಯೋಜನೆಗೆ ಒಳಪಟ್ಟ ವ್ಯಕ್ತಿಯು https://npslite-nsdl.com/CRAlite/grievance ಮೂಲಕ ದೂರನ್ನು ದಾಖಲಿಸಬಹುದಾಗಿದೆ.

ಜೂನ್ 13 2017ರ ವರೆಗೆ 54.71 ಲಕ್ಷ ಜನರು ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದಾರೆ. ಇದರಲ್ಲಿ ಶೇಕಡಾ 62 ರಷ್ಟು ಪುರುಷ ಚಂದಾದಾರರ ಖಾತೆ ಇದ್ದು, ಶೇಕಡಾ 38 ರಷ್ಟು ಮಹಿಳೆಯರು ಖಾತೆಯನ್ನು ಹೊಂದಿದ್ದಾರೆ.

ಈ ಯೋಜನೆಗೆ ಒಳಪಟ್ಟ ಅತಿ ಹೆಚ್ಚು ಚಂದಾದಾರರು ಪ್ರತಿ ತಿಂಗಳು ಉಳಿತಾಯದ ಕಂತನ್ನು ತುಂಬುವ ವಿಧಾನ ಅನುಸರಿಸಿದ್ದು, ಅದರಲ್ಲಿ ಶೇಕಡಾ 97.5 ರಷ್ಟು ಜನರು ತಿಂಗಳ ಮಧ್ಯದಲ್ಲಿ ಕಂತನ್ನು ತುಂಬುತ್ತಿದ್ದು, ಶೇಕಡಾ 0.8 ರಷ್ಟು ಜನರು ತ್ರೈಮಾಸಿಕ ಮೂರು ತಿಂಗಳ ಮಧ್ಯದಲ್ಲಿ ತುಂಬಲು ಆಸಕ್ತಿ ತೋರಿಸಿದ್ದಾರೆ. ಉಳಿದಂತೆ ಶೇಕಡಾ 1.7 ರಷ್ಟು ಜನರು ಆರು ತಿಂಗಳಿಗೊಮ್ಮೆ ಹಣವನ್ನು ಜಮಾ ಮಾಡಲು ನಿರ್ಧರಿಸಿದ್ದಾರೆ.

ಈ ಅಟಲ್ ಪೆನ್‌ಷನ್ ಯೋಜನೆ ಅಡಿಯಲ್ಲಿ ಅತಿ ಹೆಚ್ಚು ಶೇಕಡಾ 51.5 ರಷ್ಟು ಜನರು ತಮ್ಮ ಸೇವಾ ನಿವೃತ್ತಿ ನಂತರ ಪಡೆಯುವ ಪಿಂಚಣಿ ಮೊತ್ತ 1000 ರೂಪಾಯಿಗಳಾಗಿದ್ದು, ಮತ್ತು ಶೇಕಡಾ 34.5 ರಷ್ಟು ಜನರು ತಮ್ಮ ಸೇವಾ ನಿವೃತ್ತಿ ನಂತರ ಪ್ರತಿ ತಿಂಗಳು 5000 ಸಾವಿರ ರೂಪಾಯಿಗಳ ಪಿಂಚಣಿ ಪಡೆಯಲು ಅರ್ಹರಾಗಿದ್ದಾರೆ. ❑

# ಮನ್ ಕೀ ಬಾತ್



ಪ್ರಧಾನ ಮಂತ್ರಿ
ಶ್ರೀ ನರೇಂದ್ರ ಮೋದಿಯವರು
ದಿನಾಂಕ
25-06-2017ರಂದು
ಮಾಡಿದ
'ಮನ್ ಕಿ ಬಾತ್'
33 ನೇ ಭಾಷಣದ
ಕನ್ನಡ ಅವತರಣಿಕೆ.

ನನ್ನ ಪ್ರಿಯ ದೇಶಬಾಂಧವರೇ, ನಮಸ್ಕಾರ. ಹವಾಮಾನ ಬದಲಾಗುತ್ತಿದೆ. ಈ ಬಾರಿ ಬಿಸಿಲೂ ಹೆಚ್ಚಿತ್ತು. ಆದರೆ ಮಳೆ ಸರಿಯಾದ ಸಮಯಕ್ಕೆ ಆರಂಭವಾಗಿ ಮುನ್ನಡೆದಿದೆ. ದೇಶದ ಹಲವಾರು ಸ್ಥಳಗಳಲ್ಲಿ ಧಾರಾಕಾರ ಮಳೆ ಸುರಿದು ವಾತಾವರಣ ಆಹ್ಲಾದಕರವಾಗಿದೆ. ಮಳೆಯಿಂದಾಗಿ ಹಿಂದಿನ ದಿನಗಳ ಬಿಸಿಲ ಬೇಗೆ ತಗ್ಗಿ ಆರಾಮದಾಯಕವೆನಿಸಿದೆ. ಜೀವನದಲ್ಲಿ ಎಷ್ಟೇ ಏಳು ಬೀಳುಗಳಿರಲಿ, ಎಷ್ಟೇ ಉದ್ವೇಗ ಆತಂಕಗಳಿರಲಿ, ವೈಯಕ್ತಿಕ ಜೀವನದಲ್ಲಾಗಲಿ ಇಲ್ಲ ಸಾರ್ವಜನಿಕ ಜೀವನದಲ್ಲಾಗಲಿ ವರ್ಷಧಾರೆಯ ಆಗಮನದಿಂದಲೇ ನಮ್ಮ ಮನಸ್ಥಿತಿ ಬದಲಾಗುತ್ತದೆ ಎಂಬುದನ್ನು ನಾವೆಲ್ಲರೂ ಗಮನಿಸಿದ್ದೇವೆ.

ಇಂದು ಭಗವಾನ್ ಜಗನ್ನಾಥ ರಥಯಾತ್ರೆಯನ್ನು ದೇಶದ ಹಲವಾರು ಭಾಗಗಳಲ್ಲಿ ಜನರು ಬಹಳ ಶ್ರದ್ಧೆ ಮತ್ತು ಉಲ್ಲಾಸಪೂರ್ವಕವಾಗಿ ಆಚರಿಸುತ್ತಿದ್ದಾರೆ. ಈಗಂತೂ ದೇಶದ ಹಲವಾರು ಕಡೆ ಭಗವಾನ್ ಜಗನ್ನಾಥ ರಥಯಾತ್ರೆಯನ್ನು ಕೈಗೊಳ್ಳಲಾಗುತ್ತಿದೆ. ಭಗವಾನ್ ಜಗನ್ನಾಥನ ಜೊತೆ ದೇಶದ ಬಡವ ಜೊತೆಗೂಡಿದ್ದಾನೆ. ಯಾರು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಅಧ್ಯಯನವನ್ನು ಮಾಡಿದ್ದಾರೋ ಅವರು ಗಮನಿಸಿರಬಹುದು – ಅಂಬೇಡ್ಕರ್ ಅವರು ಜಗನ್ನಾಥ ದೇವಾಲಯ ಮತ್ತು ಅಲ್ಲಿಯ ಪರಂಪರೆ ಬಗ್ಗೆ ಬಹಳ ಪ್ರಶಂಸೆ ಮಾಡುತ್ತಿದ್ದರು. ಏಕೆಂದರೆ ಅಲ್ಲಿ ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಸಾಮರಸ್ಯ ಅಂತರ್ನಿಹಿತವಾಗಿತ್ತು. ಭಗವಾನ್ ಜಗನ್ನಾಥ ಬಡವರ ದೇವರು. ಇನ್ನು ಕೆಲ ಜನರಿಗೆ ಮಾತ್ರ ಇಂಗ್ಲೀಷ್ ಪದ ಜಾಗರ್‌ನಟ್ ಅರ್ಥ ಗೊತ್ತಿರಬಹುದು. ಅದರ ಅರ್ಥ ಏನೆಂದರೆ ಯಾರೂ ತಡೆಹಿಡಿಯಲಾಗದಂತಹ ಭವ್ಯ ರಥ ಎಂದು. ಜಾಗರ್‌ನಟ್ ಪದದ ಅರ್ಥವನ್ನು ಅರ್ಥಕೋಶ ತೆರೆದು ನೋಡಿದರೆ ಈ ಶಬ್ದ ಜಗನ್ನಾಥ ರಥದಿಂದಲೇ ಉದ್ಭವವಾಗಿದೆ ಎಂಬುದು ತಿಳಿಯುತ್ತದೆ. ಇದರಿಂದ ವಿಶ್ವದ ಜನರೂ ಕೂಡ ಜಗನ್ನಾಥ ದೇವರ ರಥ ಯಾತ್ರೆಯ ಮಹಾತ್ಮೆಯನ್ನು ತಮ್ಮದೇ ರೀತಿಯಲ್ಲಿ ಹೇಗೆ ಸ್ವೀಕರಿಸಿದ್ದಾರೆ ಎಂಬುದು ತಿಳಿಯುತ್ತದೆ. ಭಗವಾನ್ ಜಗನ್ನಾಥ ರಥಯಾತ್ರೆಯ ಸಂದರ್ಭದಲ್ಲಿ ದೇಶದ ಸಮಸ್ತ ಜನರಿಗೆ ನಾನು ಶುಭಾಶಯ ಕೋರುತ್ತೇನೆ ಮತ್ತು ಭಗವಾನ್ ಜಗನ್ನಾಥರ ಪಾದಕಮಲಗಳಲ್ಲಿ ನಮಸ್ಕರಿಸುತ್ತೇನೆ.

ಭಾರತದ ವಿವಿಧತೆಯಲ್ಲಿ ವಿಶೇಷತೆಯೂ ಇದೆ. ಭಾರತದ ವಿವಿಧತೆಯೇ ಭಾರತದ ಶಕ್ತಿಯೂ ಹೌದು. ರಂಜಾನ್ ಪವಿತ್ರ ತಿಂಗಳನ್ನು ಎಲ್ಲರೂ ಬಹಳ ಶ್ರದ್ಧಾಭಕ್ತಿಯಿಂದ, ಪವಿತ್ರ ಭಾವದಿಂದ ಆಚರಿಸಿದ್ದಾರೆ. ಈಗ ಹಬ್ಬದ ಸಂಭ್ರಮ. ಈದ್ ಉಲ್ ಫಿತ್ರ್ ಸಂದರ್ಭದಲ್ಲಿ ನನ್ನ ಪರವಾಗಿ ಎಲ್ಲರಿಗೂ ಹಾರ್ದಿಕ ಶುಭಾಶಯಗಳು. ರಂಜಾನ್ ತಿಂಗಳು ಪುಣ್ಯ ಪ್ರಾಪ್ತಿಯ, ದಾನದ ಮಾಸ. ಸಂತೋಷವನ್ನು ಹಂಚುವ ಮಾಸ ಮತ್ತು ನೀವು ಎಷ್ಟು ಸಂತೋಷವನ್ನು ಹಂಚುತ್ತಿರೊ ಅದು ಅಷ್ಟು ವೃದ್ಧಿಸುತ್ತದೆ. ಬನ್ನಿ, ನಾವೆಲ್ಲರೂ ಈ ಪವಿತ್ರ ಉತ್ಸವಗಳಿಂದ ಪ್ರೇರಣೆ ಪಡೆದು ಆನಂದದ ಭಂಡಾರವನ್ನು ಹಂಚುತ್ತಾ ಸಾಗೋಣ, ದೇಶವನ್ನು ಮುನ್ನಡೆಸೋಣ.

ರಂಜಾನ್ ಪವಿತ್ರ ತಿಂಗಳಲ್ಲಿ ಉತ್ತರ ಪ್ರದೇಶದ ಬಿಜನೌರ್‌ನ ಮುಬಾರಕ್‌ಪುರ್ ಗ್ರಾಮದ ಒಂದು ಘಟನೆ ಬಹಳ ಪ್ರೇರಣಾದಾಯಕವಾಗಿ ಬೆಳಕಿಗೆ ಬಂದಿದೆ. ಸುಮಾರು ಮೂರುವರೆ ಸಾವಿರ ಜನಸಂಖ್ಯೆಯ ಮುಸ್ಲಿಂ ಬಾಂಧವರ ಕುಟುಂಬಗಳು, ಆ ಪುಟ್ಟ ಗ್ರಾಮದಲ್ಲಿ ನೆಲೆಸಿವೆ. ಒಂದು ರೀತಿ ಹೇಳುವುದಾದರೆ ಹೆಚ್ಚಿನ ಜನಸಂಖ್ಯೆ ಮುಸ್ಲಿಂ ಕುಟುಂಬಗಳ

* ಕೃಪೆ; ಆಕಾಶವಾಣಿ, ಬೆಂಗಳೂರು



ಸೋದರ ಸೋದರಿಯರದ್ದೇ ಆಗಿದೆ. ಈ ರಂಜಾನ್ ತಿಂಗಳಲ್ಲಿ ಈ ಗ್ರಾಮಸ್ಥರು ಒಟ್ಟಾಗಿ ಶೌಚಾಲಯ ನಿರ್ಮಿಸುವ ನಿರ್ಣಯ ಕೈಗೊಂಡಿದ್ದಾರೆ ಮತ್ತು ಈ ವ್ಯಕ್ತಿಗತ ಶೌಚಾಲಯ ನಿರ್ಮಾಣಕ್ಕೆ ಸರ್ಕಾರದಿಂದಲೂ ಸಹಾಯ ಸಿಗುತ್ತದೆ ಮತ್ತು ಈ ಅನುದಾನದ ಮೊತ್ತ ಸುಮಾರು 17 ಲಕ್ಷ ರೂಪಾಯಿಗಳನ್ನು ಅವರಿಗೆ ನೀಡಲಾಗಿದೆ. ನಿಮಗೆ ಇದನ್ನು ಕೇಳಿ ಆಶ್ಚರ್ಯವೂ ಆಗಬಹುದು ಮತ್ತು ಆನಂದವೂ ಆಗಬಹುದು.

ಈ ರಂಜಾನ್ ಪವಿತ್ರ ತಿಂಗಳಲ್ಲಿ ಮುಸ್ಲಿಂ ಸೋದರ ಸೋದರಿಯರು 17 ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಹಿಂದಿರುಗಿಸಿದ್ದಾರೆ ಮತ್ತು ತಮ್ಮ ಶೌಚಾಲಯವನ್ನು ತಮ್ಮ ಪರಿಶ್ರಮ ಮತ್ತು ತಮ್ಮದೇ ಹಣದಿಂದ ನಿರ್ಮಿಸಿಕೊಳ್ಳುವುದಾಗಿಯೂ ಮತ್ತು ಈ 17 ಲಕ್ಷ ರೂಪಾಯಿಗಳನ್ನು ಗ್ರಾಮದ ಇತರ ಅಭಿವೃದ್ಧಿ ಕಾರ್ಯಗಳಿಗೆ ಬಳಸಬೇಕೆಂದು ಹೇಳಿದ್ದಾರೆ. ಈ ರಂಜಾನ್ ಪವಿತ್ರ ಸಂದರ್ಭವನ್ನು ಸಮಾಜದ ಏಳ್ಗೆಯ ಸಂದರ್ಭವನ್ನಾಗಿ ಪರಿವರ್ತಿಸಿದ್ದಕ್ಕೆ ಮುಬಾರಕ್‌ಪುರದ ಸಮಸ್ತ ಗ್ರಾಮಸ್ಥರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರ ಒಂದೊಂದು ವಿಷಯವು ಪ್ರೇರಣಾದಾಯಕವಾಗಿದೆ. ಮತ್ತು ಎಲ್ಲಕ್ಕಿಂತ ದೊಡ್ಡ ವಿಷಯ ಅಂದರೆ, ಅವರು ಮುಬಾರಕ್‌ಪುರವನ್ನು ಬಯಲು ಶೌಚಮುಕ್ತ ಮಾಡಿದ್ದಾರೆ. ಇದೇ ರೀತಿ ನಮ್ಮ ದೇಶದ ಸಿಕ್ಕಿಂ, ಹಿಮಾಚಲ ಪ್ರದೇಶ ಮತ್ತು ಕೇರಳ ರಾಜ್ಯಗಳು ಈಗಾಗಲೇ ಬಯಲು ಶೌಚಮುಕ್ತ ಎಂದು ಘೋಷಿಸಲ್ಪಟ್ಟಿವೆ. ಈ ವಾರ ಉತ್ತರಾಖಂಡ ಮತ್ತು ಹರಿಯಾಣಾ ಕೂಡಾ ಓಡಿಎಫ್ ಎಂದು ಘೋಷಿಸಲ್ಪಟ್ಟಿವೆ. ಈ ಕೆಲಸವನ್ನು ಪೂರ್ತಿಗೊಳಿಸಿದ್ದಕ್ಕೆ ನಾನು ಈ 5 ರಾಜ್ಯಗಳ ಆಡಳಿತವರ್ಗಕ್ಕೆ, ಸರ್ಕಾರಕ್ಕೆ ಮತ್ತು ಜನತಾ ಜನಾರ್ಧನರಿಗೆ ವಿಶೇಷವಾಗಿ ಅಭಿನಂದನೆ ಸಲ್ಲಿಸುತ್ತೇನೆ.

ಯಾವುದೇ ವ್ಯಕ್ತಿಯ ಜೀವನದಲ್ಲಿ, ಸಾಮಾಜಿಕ ಜೀವನದಲ್ಲಿ ಏನನ್ನಾದರೂ ಒಳಿತನ್ನು ಮಾಡಬೇಕಾದರೆ ಬಹಳ ಶ್ರಮಿಸಬೇಕಾಗುತ್ತದೆ ಎಂಬುದು ನಮಗೆಲ್ಲರಿಗೂ ಚೆನ್ನಾಗಿ ತಿಳಿದಿದೆ. ಒಂದೊಮ್ಮೆ ನಮ್ಮ ಕೈಬರಹ ಚೆನ್ನಾಗಿಲ್ಲ ಅದನ್ನು ಸರಿಪಡಿಸಿಕೊಳ್ಳಬೇಕಾಗಿದೆ ಎಂದಾದರೆ ಬಹಳ ಸಮಯದವರೆಗೆ ಜಾಗರೂಕರಾಗಿ ಬರೆಯುವ ಅಭ್ಯಾಸ ಮಾಡಬೇಕಾಗುತ್ತದೆ. ಆಗ ಮಾತ್ರ ನಮ್ಮ ಶಾರೀರಿಕ ಮತ್ತು ಮಾನಸಿಕ ಅಭ್ಯಾಸ ಬದಲಾಗುತ್ತದೆ. ಸ್ವಚ್ಛತೆಯ ವಿಷಯವೂ ಹಾಗೇ ಇದೆ. ಇಂಥ ಕೆಟ್ಟ ಅಭ್ಯಾಸಗಳು ನಮ್ಮ ಸ್ವಭಾವದ ಅಂಗವಾಗಿಹೋಗಿವೆ. ನಮ್ಮ ಅಭ್ಯಾಸದ ಭಾಗವಾಗಿವೆ. ಇದರಿಂದ ಮುಕ್ತರಾಗಲು ಅವಿರತ ಪ್ರಯತ್ನ ಮಾಡಲೇಬೇಕಾಗಿದೆ. ಎಲ್ಲರ ಗಮನ ಸೆಳೆಯಲೇಬೇಕು. ಉತ್ತಮ ಪ್ರೇರಣಾದಾಯಕ ಘಟನೆಗಳನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಲೇಬೇಕು. ಇಂದು ಸ್ವಚ್ಛತೆಯೆಂಬುದು ಸರ್ಕಾರಿ ಕಾರ್ಯಕ್ರಮವಾಗಿ ಉಳಿದಿಲ್ಲ ಎಂಬುದು ನನಗೆ ಸಂತೋಷವೆನಿಸಿದೆ. ಇದು ಸಮಾಜದ, ಜನಸಾಮಾನ್ಯರ ಆಂದೋಲನವಾಗಿ ಪರಿವರ್ತನೆಗೊಳ್ಳುತ್ತಾ ಸಾಗಿದೆ. ಅಲ್ಲದೇ ಆಡಳಿತ ವರ್ಗದಲ್ಲಿರುವವರು ಜನರ ಸಹಭಾಗಿತ್ವದಲ್ಲಿ ಈ ಕೆಲಸವನ್ನು ಮಾಡಿದಾಗ ಶಕ್ತಿ ವೃದ್ಧಿಸುತ್ತದೆ.

ಕೆಲ ದಿನಗಳ ಹಿಂದೆ ಒಂದು ಉತ್ತಮವಾದ ಘಟನೆ ನನಗೆ ಕಂಡುಬಂತು. ಅದನ್ನು ನಿಮ್ಮ ಮುಂದಿಡಬಯಸುತ್ತೇನೆ. ಇದು ಆಂಧ್ರದ ವಿಜಯನಗರಂ ಜಿಲ್ಲೆಯ ಘಟನೆ. ಅಲ್ಲಿಯ ಸರ್ಕಾರ ಜನರ ಸಹಭಾಗಿತ್ವದಲ್ಲಿ ಒಂದು ದೊಡ್ಡ ಕೆಲಸವನ್ನು ಕೈಗೆತ್ತಿಕೊಂಡಿತು. ಮಾರ್ಚ 10 ಬೆಳಿಗ್ಗೆ 6 ರಿಂದ ಮಾರ್ಚ 14 ಬೆಳಿಗ್ಗೆ 10ರವರೆಗೆ 100 ಗಂಟೆಗಳ ನಾನ್ ಸ್ಟಾಪ್ ಅಭಿಯಾನ. ಅವರ ಗುರಿ ಏನಿತ್ತು? ನೂರು ಗಂಟೆಗಳಲ್ಲಿ 71 ಗ್ರಾಮ ಪಂಚಾಯತಿಗಳ 10 ಸಾವಿರ ಮನೆಗಳಿಗೆ ಶೌಚಾಲಯ ನಿರ್ಮಿಸುವುದು. ನನ್ನ ಪ್ರಿಯ ದೇಶವಾಸಿಗಳೇ, ನಿಮಗೆ ಕೇಳಿ ಸಂತೋಷವಾಗುತ್ತದೆ; ಜನತಾ ಜನಾರ್ಧನರು ಮತ್ತು ಸರ್ಕಾರ ಸೇರಿ 100 ಗಂಟೆಗಳಲ್ಲಿ 10 ಸಾವಿರ ಮನೆಗಳಿಗೆ ಶೌಚಾಲಯ ನಿರ್ಮಿಸುವ ಕೆಲಸವನ್ನು ಸಫಲತೆಯೊಂದಿಗೆ ಪೂರ್ಣಗೊಳಿಸಿದ್ದಾರೆ. 71 ಗ್ರಾಮಗಳು ಓಡಿಎಫ್ ಆಗಿವೆ. ನಾನು ಅಧಿಕಾರದಲ್ಲಿರುವವರಿಗೆ, ಸರ್ಕಾರಿ ಅಧಿಕಾರಿಗಳಿಗೆ ಮತ್ತು ವಿಜಯನಗರಂ ಜಿಲ್ಲೆಯ ಆ ಗ್ರಾಮಸ್ಥರಿಗೆ ನೀವೆಲ್ಲರೂ ಪರಿಶ್ರಮದ ಪರಾಕಾಷ್ಠೆ ಮೂಲಕ ಎಲ್ಲರಿಗೂ ಬಹುದೊಡ್ಡ ಪ್ರೇರಣಾತ್ಮಕ ದೃಷ್ಟಾಂತವನ್ನು ತೋರಿದ್ದೀರಿ ಎಂದು ತುಂಬು ಹೃದಯದ ಅಭಿನಂದನೆ ಸಲ್ಲಿಸುತ್ತೇನೆ.

ಈ ಮಧ್ಯೆ ಮನದ ಮಾತಿಗೆ ಜನತಾ ಜನಾರ್ಧನರಿಂದ ಸಲಹೆಗಳು ಬರುತ್ತಿರುತ್ತವೆ. NarendraModiApp ಗೆ ಬರುತ್ತವೆ MyGov.in ಗೆ ಬರುತ್ತವೆ. ಪತ್ರದ ಮೂಲಕ, ಆಕಾಶವಾಣಿ ಮೂಲಕವೂ ಬರುತ್ತವೆ.

ಶ್ರೀಮಾನ್ ಪ್ರಕಾಶ್ ತ್ರಿಪಾಠಿ ಅವರು ತುರ್ತುಪರಿಸ್ಥಿತಿ ನೆನಪಿಸಿಕೊಳ್ಳುತ್ತಾ ಜೂನ್ 25 ನ್ನು ಪ್ರಜಾಸತ್ತಾತ್ಮಕತೆಯ ಇತಿಹಾಸದಲ್ಲಿ ಒಂದು ಕರಾಳ ಕಾಲಘಟ್ಟವೆಂದು ಬಿಂಬಿಸಿದ್ದಾರೆ. ಶ್ರೀ ಪ್ರಕಾಶ್ ತ್ರಿಪಾಠಿ ಅವರ ಪ್ರಜಾಸತ್ತಾತ್ಮಕತೆಯ ಕುರಿತಾದ ಈ ಜಾಗರೂಕತೆ ಅಭಿನಂದನಾರ್ಹ ಮತ್ತು ಪ್ರಜಾಸತ್ತಾತ್ಮಕತೆ ಎಂಬುದು ಕೇವಲ ಒಂದು ವ್ಯವಸ್ಥೆಯಲ್ಲ ಅದು ಒಂದು ಸಂಸ್ಕಾರವೂ ಹೌದು. ಎಟರ್‌ನಲ್ ವಿಜಿಲೆನ್ಸ್ ಈಜ್ ದ ಪ್ರೈಸ್ ಆಫ್ ಲಿಬರ್ಟಿ. ಪ್ರಜಾಸತ್ತಾತ್ಮಕತೆ ಕುರಿತು ಅರಿವು ಅವಶ್ಯಕವಾಗಿದೆ. ಹಾಗಾಗಿ ಪ್ರಜಾಸತ್ತಾತ್ಮಕತೆಗೆ ಆಘಾತವೊಡ್ಡುವ ವಿಷಯಗಳನ್ನೂ ನೆನಪಿನಲ್ಲಿಡುವುದು ಅವಶ್ಯಕ ಮತ್ತು ಪ್ರಜಾಸತ್ತಾತ್ಮಕತೆಯನ್ನು ಉತ್ತಮ ಮಾರ್ಗದಲ್ಲಿ ಕೊಂಡೊಯ್ಯುವ ಅವಶ್ಯಕತೆಯಿದೆ. 1975 ಜೂನ್ 25 ಎಂಥ ಕರಾಳ ರಾತ್ರಿಯಾಗಿತ್ತೆಂದರೆ ಯಾವುದೇ ಪ್ರಜಾಸತ್ತಾತ್ಮಕತೆಯ ಪ್ರೇಮಿ ಮರೆಯಲಾಗದು. ಯಾವ ಭಾರತೀಯನೂ ಮರೆಯಲಾರ. ಒಂದು ರೀತಿ ದೇಶವನ್ನು ಬಂದೀಖಾನೆಯಾಗಿ ಪರಿವರ್ತಿಸಲಾಗಿತ್ತು. ವಿರೋಧದ ಧ್ವನಿಯನ್ನು ಹತ್ತಿಕ್ಕಲಾಗಿತ್ತು. ಜಯಪ್ರಕಾಶ್ ನಾರಾಯಣ್ ಸಹಿತವಾಗಿ



ದೇಶದ ಗಣ್ಯ ನಾಯಕರನ್ನು ಸೆರೆಯಲ್ಲಿ ಬಂಧಿಸಲಾಗಿತ್ತು. ನ್ಯಾಯ ವ್ಯವಸ್ಥೆ ಕೂಡ ಈ ಭಯಾನಕ ಕರಾಳ ಛಾಯೆಯಿಂದ ತಪ್ಪಿಸಿಕೊಳ್ಳಲು ಆಗಿರಲಿಲ್ಲ. ಪತ್ರಿಕೆಗಳನ್ನಂತೂ ಸಂಪೂರ್ಣವಾಗಿ ನಿರುಪಯುಕ್ತ–ಗೊಳಿಸಲಾಗಿತ್ತು. ಇಂದಿನ ಮಾಧ್ಯಮ ವಿದ್ಯಾರ್ಥಿಗಳು, ಪ್ರಜಾಸತ್ತಾತ್ಮಕತೆಯಲ್ಲಿ ಕೆಲಸ ಮಾಡುವವರು ಆ ಕಾಳ ರಾತ್ರಿಯ ನೆನಪನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಾ ಪ್ರಜಾಸತ್ತಾತ್ಮಕತೆ ಕುರಿತು ಜಾಗರೂಕತೆಯನ್ನು ಹೆಚ್ಚಿಸುವ ನಿರಂತರ ಪ್ರಯತ್ನ ಮಾಡುತ್ತಲೇ ಇದ್ದಾರೆ ಮತ್ತು ಮಾಡಲೂ ಬೇಕು. ಆಗ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರೂ ಜೈಲಿನಲ್ಲಿದ್ದರು. ಆ ಆಪತ್ಕಾಲದಲ್ಲಿ ಒಂದು ವರ್ಷ ಕಳೆದಾಗ ಅಟಲ್‌ಜಿ ಅವರು ಒಂದು ಕವಿತೆ ಬರೆದಿದ್ದರು. ತಮ್ಮ ಕವಿತೆಯಲ್ಲಿ ಅಂದಿನ ತಮ್ಮ ಮನಸ್ಥಿತಿ ಬಗ್ಗೆ ಬರೆದಿದ್ದರು.

ತೂಯ್ದಾಡುತ್ತಿರುವ ಜ್ಯೇಷ್ಠ ಮಾಸ
ಶರತ್ ಋತುವಿನ ಬೆಳದಿಂಗಳೂ ನೀರಸ,
ತೂಯ್ದಾಡುತ್ತಿರುವ ಜ್ಯೇಷ್ಠ ಮಾಸ
ಶರತ್ ಋತುವಿನ ಬೆಳದಿಂಗಳೂ ನೀರಸ,
ಬಿಕ್ಕುತ್ತ ಮಳೆಗಾಲದ ಬಿಂದಿಗೆ ತುಂಬಿ
ಹೋಯ್ತು

ಒಂದು ವರ್ಷ ಉರುಳೇ ಹೋಯ್ತು
ಒಂದು ವರ್ಷ ಉರುಳೇ ಹೋಯ್ತು

ಮುಷ್ಟಿಯಲ್ಲಿ ಮುದುರಿತು ಜಗ
ಆದರೂ ಪ್ರಾಣ, ವಿಕಲತೆಯ ಮೂಗ
ಮುಷ್ಟಿಯಲ್ಲಿ ಮುದುರಿತು ಜಗ
ಆದರೂ ಪ್ರಾಣ, ವಿಕಲತೆಯ ಮೂಗ

ಭುವಿಯಿಂದ ಆಕಾಶದೆತ್ತರಕ್ಕೆ
ಭುವಿಯಿಂದ ಆಕಾಶದೆತ್ತರಕ್ಕೆ
ಹಾಡಿದೆ ಮುಕ್ತಿಯ ಗೀತೆ
ಒಂದು ವರ್ಷ ಉರುಳೇ ಹೋಯ್ತೆ
ಒಂದು ವರ್ಷ ಉರುಳೇ ಹೋಯ್ತೆ

ದಾರಿಗೆ ನೆಟ್ಟ ಕಣ್ಣು
ಎಣಿಸುತಿದೆ ದಿನ, ಪ್ರತಿ ಕ್ಷಣವನ್ನು
ದಾರಿಗೆ ನೆಟ್ಟ ಕಣ್ಣು
ಎಣಿಸುತಿದೆ ದಿನ, ಪ್ರತಿ ಕ್ಷಣವನ್ನು
ಮರಳಿ ಬರುವನೇನವನು
ಮರಳಿ ಬರುವನೇನವನು

ಮನ ಮೆಚ್ಚಿದ ಗೆಳೆಯ
ಒಂದು ವರ್ಷ ಉರುಳೇ ಹೋಯ್ತು
ಒಂದು ವರ್ಷ ಉರುಳೇ ಹೋಯ್ತು

ಪ್ರಜಾಸತ್ತಾತ್ಮಕತಾ ಪ್ರೇಮಿಗಳು ಬಹಳ ದೊಡ್ಡ ಯುದ್ಧವನ್ನೇ ಮಾಡಿದ್ದಾರೆ. ಭಾರತದಂತಹ ವಿಶಾಲವಾದ ದೇಶದಲ್ಲಿ ಯಾವಾಗಲೇ ಅವಕಾಶ ಸಿಕ್ಕರೂ ಜನರ ನರನಾಡಿಗಳಲ್ಲಿ ಒಂದಾದ ಪ್ರಜಾಸತ್ತಾತ್ಮಕತೆಯನ್ನು, ಅದರ ಶಕ್ತಿಯನ್ನು ಚುನಾವಣೆ ರೂಪದಲ್ಲಿ ಪ್ರದರ್ಶಿಸಿದ್ದಾರೆ. ಅವರ ನರ ನಾಡಿಗಳಲ್ಲಿ ಬೆರೆತು ಹೋದಂತಹ ಈ ಪ್ರಜಾಸತ್ತಾತ್ಮಕತೆಯ ಭಾವ ನಮ್ಮ ಅಮರ ಆಸ್ತಿಯಂತಿದೆ. ಈ ಆಸ್ತಿಯನ್ನು ಇನ್ನಷ್ಟು ಸಶಕ್ತಗೊಳಿಸಬೇಕಿದೆ.

ನನ್ನ ಪ್ರಿಯ ದೇಶಬಾಂಧವರೇ, ಪ್ರತಿಯೊಬ್ಬ ಹಿಂದೂಸ್ತಾನಿಯೂ ಇಂದು ವಿಶ್ವದಲ್ಲಿ ಹೆಮ್ಮೆಯಿಂದ ತಲೆ ಎತ್ತಿ ಗೌರವವನ್ನು ಅನುಭವಿಸುತ್ತಿದ್ದಾರೆ. 2017 ರ ಜೂನ್ 21 ವಿಶ್ವವೆಲ್ಲ ಯೋಗಮಯವಾಗಿತ್ತು. ಹರಿಯುವ




ನೀರಿನಿಂದ ಪರ್ವತದವರೆಗೆ ಜನರು ಬೆಳಗಿನ ಸೂರ್ಯರಶ್ಮಿಯನ್ನು ಯೋಗದ ಮೂಲಕ ಸ್ವಾಗತಿಸಿದ್ದಾರೆ. ಯಾವ ಹಿಂದೂಸ್ತಾನಿಗೆ ಇದರ ಬಗ್ಗೆ ಹೆಮ್ಮೆ ಎನ್ನಿಸುವುದಿಲ್ಲ.. ಹಿಂದೆ ಯೋಗವಿರಲಿಲ್ಲ ಎಂದಲ್ಲ. ಇಂದು ಯೋಗವೆಂಬ ಸೂತ್ರದೊಂದಿಗೆ ನಾವು ಒಂದಾಗಿದ್ದರಿಂದ ವಿಶ್ವವನ್ನೇ ಅದರೊಂದಿಗೆ ಒಗ್ಗೂಡಿಸುವುದಕ್ಕೆ ಕಾರಣವಾಗಿದೆ. ವಿಶ್ವದ ಹೆಚ್ಚು ಕಡಿಮೆ ಎಲ್ಲ ದೇಶಗಳೂ ಯೋಗದ ಈ ಸಂದರ್ಭವನ್ನು ತಮ್ಮದಾಗಿಸಿಕೊಳ್ಳುವತ್ತ ಮುಂದಾಗಿವೆ. ಚೀನಾದ ಗೋಡೆ ಮೇಲೆ ಜನರು ಯೋಗಾಭ್ಯಾಸ ಮಾಡಿದ್ದಾರೆ. ಅದೇ ರೀತಿ ಸಮುದ್ರ ತಳದಿಂದ 2400 ಮೀಟರ್ ಎತ್ತರದ ಪೆರುವಿನ ವಿಶ್ವ ಪರಂಪರೆ ತಾಣ ಮಾಚು ಪಿಚ್ಚುವಿನಲ್ಲಿ ಜನರು ಯೋಗಾಭ್ಯಾಸ ಮಾಡಿದರು. ಫ್ರಾನ್ಸ್‌ನ ಐಫೆಲ್ ಟವರ್‌ನ ನೆರಳಲ್ಲಿ ಜನರು ಯೋಗಾಭ್ಯಾಸ ಮಾಡಿದರು. ಯುಎಇ ಯ ಅಬುದಾಭಿಯಲ್ಲಿ 4000 ಕ್ಕೂ ಅಧಿಕ ಜನರು ಸಾಮೂಹಿಕ ಯೋಗಾಭ್ಯಾಸ ಮಾಡಿದರು. ಅಫ್ಘಾನಿಸ್ತಾನದ ಹೆರತ್‌ನಲ್ಲಿ ಇಂಡಿಯಾ ಆಫ್ಘಾನ್ ಫ್ರೆಂಡ್‌ಶಿಪ್ ಡ್ಯಾಮ್ ಸಲ್ಮಾ ಅಣೆಕಟ್ಟೆ ಬಳಿ ಯೋಗಾಭ್ಯಾಸ ಮಾಡಿ ಭಾರತದ ಸ್ನೇಹಕ್ಕೆ ಹೊಸ ಆಯಾಮ ನೀಡಿದರು. ಸಿಂಗಾಪೂರದಂತಹ ಸಣ್ಣ ರಾಷ್ಟ್ರದಲ್ಲಿ 70 ಸ್ಥಳಗಳಲ್ಲಿ ಕಾರ್ಯಕ್ರಮ ನಡೆದವು. ಅಲ್ಲದೇ ವಾರಪೂರ್ತಿ ಅವರು ಅಭಿಯಾನ ಹಮ್ಮಿಕೊಂಡಿದ್ದರು. ವಿಶ್ವಸಂಸ್ಥೆ ಅಂತಾರಾಷ್ಟ್ರೀಯ ಯೋಗ ದಿನದ 10 ಅಂಚೆ ಚೀಟಿ ಹೊರಡಿಸಿತು. ಆ ಹತ್ತು ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಲಾಯಿತು. ವಿಶ್ವ ಸಂಸ್ಥೆ ಮುಖ್ಯ ಕಚೇರಿಯಲ್ಲಿ ಯೋಗ ಸೆಷನ್ ವಿತ್ ಯೋಗ ಮಾಸ್ಟರ್ ಆಯೋಜಿಸಲಾಗಿತ್ತು. ವಿಶ್ವಸಂಸ್ಥೆ ಸಿಬ್ಬಂದಿ, ವಿಶ್ವದ ಡಿಪ್ಲೊಮೆಟ್ಸ್ ಹೀಗೆ ಎಲ್ಲರೂ ಭಾಗವಹಿಸಿದ್ದರು.

ಈ ಬಾರಿ ಮತ್ತೊಮ್ಮೆ ಯೋಗ ವಿಶ್ವ ದಾಖಲೆಯ ಕೆಲಸ ಮಾಡಿದೆ. ಗುಜರಾತ್‌ನ ಅಹ್ಮದಾಬಾದ್‌ನಲ್ಲಿ ಸುಮಾರು 55 ಸಾವಿರ ಜನರು ಒಟ್ಟಿಗೇ ಯೋಗಾಭ್ಯಾಸ ಮಾಡಿ ಹೊಸ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ನನಗೂ ಲಖನೌದಲ್ಲಿ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ಲಭಿಸಿತು. ಆದರೆ ಮೊದಲ ಬಾರಿಗೆ ನನಗೆ ಮಳೆಯಲ್ಲಿ ಯೋಗಾಭ್ಯಾಸ ಮಾಡುವ ಸದವಕಾಶ ದೊರೆಯಿತು. ನಮ್ಮ ಸೈನಿಕರು –20, –25, –40 ಡಿಗ್ರಿ ತಾಪಮಾನದಲ್ಲಿ ಇರುವ ಸಿಯಾಚಿನ್‌ನಲ್ಲಿ ಕೂಡ ಯೋಗ ಮಾಡಿದರು. ನಮ್ಮ ಆರ್ಮ್ಡ್ ಫೋರ್ಸ್ಸ್ – ಬಿಎಸ್‌ಎಫ್ ಆಗಿರಲಿ, ಐಟಿಬಿಪಿ ಆಗಿರಲಿ, ಸಿಆರ್‌ಪಿಎಫ್ ಆಗಿರಲಿ, ಸಿಐಎಸ್‌ಎಫ್ ಆಗಿರಲಿ ಎಲ್ಲರೂ ತಮ್ಮ ಡ್ಯೂಟಿ ಜೊತೆಗೆ ಯೋಗದೊಂದಿಗೆ ಬೆರೆತಿದ್ದರು. ಈ



ಯೋಗ ದಿನದಂದು ನಾನು, ಇದು 3 ನೇ ಅಂತಾರಾಷ್ಟ್ರೀಯ ಯೋಗ ದಿನವಾದ್ದರಿಂದ 3 ತಲೆಮಾರು ಒಟ್ಟಿಗೇ ಸೇರಿ ಯೋಗಾಭ್ಯಾಸ ಮಾಡುವ ಫೋಟೊ ಶೇರ್ ಮಾಡಿ ಎಂದು ಹೇಳಿದ್ದೆ. ಕೆಲ ಟಿವಿ ಚಾನಲ್‌ಗಳೂ ಈ ವಿಷಯವನ್ನು ಪ್ರೋತ್ಸಾಹಿಸಿದ್ದವು. ನನಗೆ ಇಂಥ ಹಲವು ಫೋಟೊಗಳು ಸಿಕ್ಕವು.



ಅದರಲ್ಲಿ ಕೆಲವು ಸೆಲೆಕ್ಟೆಡ್ ನರೇಂದ್ರ ಮೋದಿ ಆ್ಯಪ್‌ನಲ್ಲಿ ಕಂಪೈಲ್ ಮಾಡಿ ಇಡಲಾಗಿದೆ. ವಿಶ್ವಾದ್ಯಂತ ಹೇಗೆ ಯೋಗದ ಚರ್ಚೆ ಆಗುತ್ತಿದೆ ಎಂದರೆ, ಅದರಿಂದ ಒಂದು ಉತ್ತಮ ಅಂಶವೂ ಹೊರಹೊಮ್ಮಿದೆ. ಇಂದಿನ ಹೆಲ್ತ್ ಕಾನ್‌ಶಿಯಸ್ ಸೊಸೈಟಿ ಏನಿದೆಯೋ ಅದೀಗ ಫಿಟ್ನೆಸ್‌ನಿಂದ ವೆಲ್‌ನೆಸ್ ಕಡೆಗೆ ದಾಪುಗಾಲಿಟ್ಟಿದೆ. ಅವರಿಗೆ ಫಿಟ್‌ನೆಸ್ ಮಹತ್ವಪೂರ್ಣ ಹೌದು, ಜೊತೆಗೆ ವೆಲ್‌ನೆಸ್‌ಗಾಗಿ ಯೋಗ ಅವಶ್ಯಕ ಎಂಬುದರ ಅರಿವಾಗುತ್ತಿದೆ.

“ಮಾನ್ಯ ಪ್ರಧಾನ ಮಂತ್ರಿಗಳೇ, ನಾನು ಡಾ. ಅನಿಲ್ ಸೊನಾರಾ, ಅಹ್ಮದಾಬಾದ್, ಗುಜರಾತಿನಿಂದ ಮಾತಾಡುತ್ತಿದ್ದೇನೆ. ಸಾರ್, ನನ್ನದೊಂದು ಪ್ರಶ್ನೆ, ನೀವು ಇತ್ತೀಚೆಗೆ ಕೇರಳದಲ್ಲಿ ಮಾತಾಡಿದ್ದನ್ನು ನಾವು ಕೇಳಿದ್ದೆವು. ವಿವಿಧ ಶುಭ ಸಂದರ್ಭಗಳಲ್ಲಿ ನಾವು ಹೂಗುಚ್ಛವನ್ನು ಉಡುಗೊರೆಯಾಗಿ ನೀಡುತ್ತೇವೆ, ಅದರ ಬದಲಿಗೆ ಒಳ್ಳೆಯ ಪುಸ್ತಕಗಳನ್ನ ಮೆಮೆಂಟೋವಿನ ಹಾಗೆ ನೀಡಬೇಕೆಂದು ನೀವು ಹೇಳಿದನ್ನ ನಾವು ಕೇಳಿದ್ದೆವು. ನೀವು ನಿಮ್ಮ ಗುಜರಾತಿನ ಕಛೇರಿಯಲ್ಲಿ ಇದನ್ನ ಪ್ರಾರಂಭವೂ ಮಾಡಿಸಿದ್ದಿರಿ. ಆದರೆ, ಸಾರ್ ಇತ್ತೀಚಿನ ದಿನಗಳಲ್ಲಿ ನಮಗಿದು ಹೆಚ್ಚಾಗಿ ನೋಡಲು ಸಿಗುತ್ತಿಲ್ಲ. ಸೊ ಕ್ಯಾನ್ ವಿ ಡೂ ಸಮ್‌ತಿಂಗ್? ನಾವಿದರ ಬಗ್ಗೆ ಏನೂ ಮಾಡಲು ಸಾಧ್ಯವಿಲ್ಲವೇ, ದೇಶವ್ಯಾಪಿ ಇದರ ಅಳವಡಿಕೆ ಆಗುವಂತೆ ನಾವೇನೂ ಮಾಡಲಾಗುವುದಿಲ್ಲವೇ ಸರ್?”

ಕಳೆದ ದಿನಗಳಲ್ಲಿ ನನಗೆ ಅತ್ಯಂತ ಪ್ರಿಯವಾದ ಕಾರ್ಯಕ್ರಮವೊಂದರಲ್ಲಿ ಹೋಗುವ ಅವಕಾಶ ದೊರೆಯಿತು. ಕೆಲ ವರ್ಷಗಳಿಂದ ಕೇರಳದಲ್ಲಿ ತುಂಬಾ ಒಳ್ಳೇ ಕಾರ್ಯಕ್ರಮಗಳು ನಡೆಯುತ್ತಿವೆ. ಅದು ಪಿ.ಎನ್. ಪಣಿಕ್ಕರ್ ಫೌಂಡೇಶನ್ ಹೆಸರಲ್ಲಿ ನಡೆಯುತ್ತದೆ. ಜನರಿಗೆ ಓದುವ ಅಭ್ಯಾಸ ಬೆಳೆಯಲಿ, ಓದಿನತ್ತ ಜನರು ಜಾಗರೂಕರಾಗಲಿ ಎಂದು ರೀಡಿಂಗ್ ಡೆ, ರೀಡಿಂಗ್ ಮಂತ್ ಸೆಲೆಬ್ರೇಶನ್ ಮಾಡಲಾಗುತ್ತದೆ. ನನಗೆ ಅದರ ಶುಭಾರಂಭದಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆಯಿತು. ಅಲ್ಲಿ ನನಗೆ ‘ನಾವು ಹೂಗುಚ್ಛ ಕೊಡುವುದಿಲ್ಲ ಬದಲಾಗಿ ಬುಕ್ಸ್ ಕೊಡುತ್ತೇವೆ’ ಎಂದು ಹೇಳಲಾಯಿತು. ನನಗೆ ತುಂಬಾ ಖುಷಿಯಾಯ್ತು. ನನಗೂ ನನ್ನ ಗಮನದಿಂದ ಏನು ಅಳಿಸಿಹೋಗಿತ್ತೋ ಅದರ ನೆನಪು ಮತ್ತೆ ಆಯ್ತು. ಏಕೆಂದರೆ ನಾನು ಗುಜರಾತ್‌ನಲ್ಲಿದ್ದಾಗ ನನ್ನ ಆಡಳಿತದಲ್ಲಿ ಒಂದು ನಿಯಮವನ್ನು ಮಾಡಿದ್ದೆ. ಏನೆಂದರೆ ನಾವು ಬೊಕೆ ಕೊಡಲ್ಲ ಪುಸ್ತಕ ಕೊಡುತ್ತೇವೆ ಇಲ್ಲ ಕರವಸ್ತ್ರದಿಂದಲೇ ಸ್ವಾಗತಿಸುತ್ತೇವೆ ಎಂದು. ಅದರಲ್ಲೂ ಖಾದಿಗೆ ಕೂಡ ಪ್ರೋತ್ಸಾಹ ದೊರೆಯಲೆಂದು ಖಾದಿ ಕರವಸ್ತ್ರ ಬಳಸುವುದು ಎಂದು ನಿರ್ಧರಿಸಲಾಗಿತ್ತು.

ನಾನು ಗುಜರಾತ್‌ನಲ್ಲಿ ಇರುವವರೆಗೂ ಅದು ಒಂದು ಅಭ್ಯಾಸವಾಗಿಹೋಗಿತ್ತು ಆದರೆ, ಇಲ್ಲಿಗೆ ಬಂದ ಮೇಲೆ ಆ ಅಭ್ಯಾಸ ತಪ್ಪಿ ಹೋಗಿದೆ. ಆದರೆ ಕೇರಳಾಗೆ ಹೋದಮೇಲೆ, ಮತ್ತೊಮ್ಮೆ ಅದು ಜಾಗರೂಕವಾಯಿತು. ನಾನು ಈಗಾಗಲೇ ಈ ಆಡಳಿತದಲ್ಲಿಯೂ ಸೂಚನೆಗಳನ್ನು ನೀಡಲು ಆರಂಭಿಸಿದ್ದೇನೆ. ಹೂಗುಚ್ಛದ ಆಯಸ್ಸು ಬಹಳ ಕಡಿಮೆ, ಒಮ್ಮೆ ಕೈಗೆ ತೊಗೊಂಡ ನಂತರ ಅದನ್ನು ಬಿಟ್ಟು ಬಿಡುತ್ತೇವೆ. ಆದರೆ, ಪುಸ್ತಕವನ್ನು ನೀಡಿದರೆ, ಅದು ಒಂದು ರೀತಿ ಮನೆಯ ಭಾಗವಾಗಿಹೋಗುತ್ತೆ, ಕುಟುಂಬದ ಒಂದು ಭಾಗವಾಗಿಬಿಡುತ್ತೆ. ಖಾದಿ ಕರವಸ್ತ್ರ ನೀಡಿ ಸ್ವಾಗತಿಸಬಹುದು, ಇದರಿಂದ ಎಷ್ಟೊಂದು ಬಡವರಿಗೆ ಸಹಾಯವಾಗುತ್ತದೆ. ಖರ್ಚು ಕಡಿಮೆಯಾಗುವುದರ ಜೊತೆಗೆ ಸರಿಯಾದ ರೀತಿಯಲ್ಲಿ ಅದರ ಉಪಯೋಗವೂ ಆಗುತ್ತದೆ. ನಾನು ಇಂಥ ಮಾತುಗಳನ್ನು ಹೇಳುತ್ತಿದ್ದೇನೆ ಅಂದರೆ, ಇಂಥ ವಸ್ತುಗಳಿಗೆ ಎಷ್ಟು ಐತಿಹಾಸಿಕ ಮೌಲ್ಯವಿರಬಹುದು?

ನಾನು ಕಳೆದ ವರ್ಷ ಯುಕೆಗೆ ಹೋಗಿದ್ದಾಗ ಲಂಡನ್‌ನಲ್ಲಿ ಬ್ರಿಟನ್ ಮಹಾರಾಣಿ ಎಲಿಜೆಬತ್, ನನ್ನನ್ನು ಭೋಜನಕೂಟಕ್ಕೆ ಆಮಂತ್ರಿಸಿದ್ದರು. ತಾಯಿಯ ಬಳಿ ಇರುವಂಥ ಅನುಭವವಾಗಿತ್ತು. ಬಹಳ ಪ್ರೀತಿಯಿಂದ ಊಟ ಬಡಿಸಿದರು, ನಂತರ ಅವರು ಬಹಳ ಗೌರವದಿಂದ, ಭಾವಾತ್ಮಕ ಸ್ವರದೊಂದಿಗೆ ಒಂದು ಪುಟ್ಟ ಖಾದಿಯ, ನೂಲಿನಿಂದ ತಯಾರಿಸಿದ, ಕರವಸ್ತ್ರ ತೋರಿಸಿದರು. ಅವರ ಕಣ್ಣು ಮಿಣುಗುತ್ತಿದ್ದವು, ನನ್ನ ಮದುವೆಯ ಸಮಯದಲ್ಲಿ ಶುಭಹಾರೈಸಲು, ಮಹಾತ್ಮ ಗಾಂಧಿಯವರು ಇದನ್ನು ಉಡುಗೊರೆಯಾಗಿ ನೀಡಿದ್ದರೆಂದು ಹೇಳಿದರು. ಎಷ್ಟೊಂದು ವರ್ಷ ಕಳೆದು ಹೋದವು, ಆದರೆ, ರಾಣಿ ಎಲಿಜೆಬತ್ ಮಹಾತ್ಮ ಗಾಂಧಿಯವರು ನೀಡಿದಂತಹ ಕರವಸ್ತ್ರವನ್ನು ಜೋಪಾನದಿಂದ ಇಟ್ಟಿದ್ದರು. ನಾನು ಹೋಗಿದ್ದಾಗ ಅದನ್ನು ತೋರಿಸಿ ನನಗೆ ಈ ಮಾತುಗಳನ್ನು ಹೇಳಲು, ಅವರಿಗೆ ಬಹಳ ಸಂತೋಷವಾಗಿತ್ತು. ನಾನು ನೋಡುತ್ತಿದ್ದಂತೆಯೇ ಅವರು ಅದನ್ನು



ಸ್ಪರ್ಶಿಸಿ ನೋಡಲು ಒತ್ತಾಯಿಸಿದರು. ಮಹಾತ್ಮ ಗಾಂಧಿಯವರ ಒಂದು ಪುಟ್ಟ ಉಡುಗೊರೆ ಅವರ ಜೀವನದ ಒಂದು ಭಾಗವಾಗಿಬಿಟ್ಟಿತ್ತು, ಅವರ ಇತಿಹಾಸದ ಒಂದು ಭಾಗವಾಗಿಬಿಟ್ಟಿದೆ. ಈ ಅಭ್ಯಾಸಗಳು ರಾತ್ರೋ-ರಾತ್ರಿ ಬದಲಾಗುತ್ತವೆ ಎಂಬ ನಂಬಿಕೆ ನನಗಿಲ್ಲ ಮತ್ತು ನಾವೆಂದಾದರೂ ಇಂಥ ಮಾತುಗಳನ್ನಾಡಿದಾಗ, ಆಲೋಚನೆಗಳಿಗೂ ಗುರಿಯಾಗಬೇಕಾಗುತ್ತದೆ. ಆದರೂ ಸಹ ಇಂತಹ ಮಾತುಗಳನ್ನು ಆಡುತ್ತಲೇ ಇರಬೇಕು, ಪ್ರಯತ್ನ ಮಾಡುತ್ತಲೇ ಇರಬೇಕು.


ನಾನು ಎಲ್ಲಾದರೂ ಹೋದಾಗ, ಯಾರಾದರೂ ಹೂಗುಚ್ಛ ತಂದರೆ, ನಾನು ಅದನ್ನು ತಿರಸ್ಕರಿಸುತ್ತೇನೆ ಎಂದು ಹೇಳಲಾಗುವುದಿಲ್ಲ, ನಾನು ಹಾಗೆ ಮಾಡಲೂ ಆಗುವುದಿಲ್ಲ. ಆದರೆ ಯೋಚನೆಯಂತೂ ಇದ್ದೇ ಇರುತ್ತದೆ, ಇದರ ಬಗ್ಗೆ ಮಾತನಾಡುತ್ತಲೇ ಇದ್ದರೆ, ನಿಧಾನವಾಗಿ ಸುಧಾರಣೆಯಾಗುತ್ತದೆ.

ನನ್ನ ಪ್ರಿಯ ದೇಶವಾಸಿಗಳೇ, ಪ್ರಧಾನ ಮಂತ್ರಿಯಾಗಿ ನನಗೆ ಅನೇಕ ಬಗೆಯ ಕೆಲಸಗಳಿರುತ್ತವೆ. ಫೈಲುಗಳಲ್ಲಿ

ಮುಳುಗಿ ಹೋಗಿರುತ್ತೇನೆ, ಆದರೆ, ನಾನು ನನಗೋಸ್ಕರ ಒಂದು ಅಭ್ಯಾಸ ಮಾಡಿಕೊಂಡಿದ್ದೇನೆ, ಅದೇನೆಂದರೆ, ನಾನು ಪ್ರತಿದಿನ, ನನಗೆ ಬಂದಂತಹ ಪತ್ರಗಳಲ್ಲಿ ಕೆಲವನ್ನು ಓದುತ್ತೇನೆ, ಇದರಿಂದ ನನಗೆ ಸಾಮಾನ್ಯ ಮನುಷ್ಯನ ಜೊತೆ ಬೆರೆಯಲು ಒಂದು ಅವಕಾಶ ದೊರೆಯುತ್ತದೆ. ವಿಭಿನ್ನ ರೀತಿಯ ಪತ್ರಗಳು ಬರುತ್ತವೆ, ವಿಭಿನ್ನ ಜನರು ಪತ್ರಗಳನ್ನು ಬರೆಯುತ್ತಾರೆ. ಇತ್ತೀಚೆಗೆ ನನಗೆ ಒಂದು ಪತ್ರ ಓದಲು ದೊರಕಿತ್ತು, ನಾನದನ್ನು ನಿಮ್ಮೊಂದಿಗೆ ಖಂಡಿತ ಹಂಚಿಕೊಳ್ಳಬೇಕೆಂದು ನನಗೆ ಅನ್ನಿಸುತ್ತಿದೆ. ದೂರದ ದಕ್ಷಿಣ ಭಾರತದಲ್ಲಿ, ತಮಿಳುನಾಡಿನಲ್ಲಿ, ಮಧುರೈನಿಂದ ಒಬ್ಬ ಗೃಹಿಣಿ, ಅರುಳ್ ಮೋಳಿ ಸರವಣನ್ ಅವರು, ನನಗೊಂದು ಪತ್ರ ಬರೆದಿದ್ದಾರೆ.

'ನಾನು ನನ್ನ ಕುಟುಂಬದಲ್ಲಿ, ಮಕ್ಕಳ ವಿದ್ಯಾಭ್ಯಾಸ ಇತ್ಯಾದಿಗಳನ್ನು ನೋಡಿಕೊಳ್ಳುತ್ತಾ ಏನಾದರೂ ಎಕನಾಮಿಕಲ್ ಆ್ಯಕ್ಟಿವಿಟಿ ಮಾಡಿದರೆ, ನನ್ನ ಕುಟುಂಬಕ್ಕೆ ಸ್ವಲ್ಪ ಮಟ್ಟಿಗಾದರೂ ಆರ್ಥಿಕ ಸಹಾಯವಾಗಬಹುದೆಂದು ನಾನು ಯೋಚಿಸಿದ್ದೇನೆ. ಆದ್ದರಿಂದ ನಾನು 'ಮುದ್ರಾ' ಯೋಜನೆಯಿಂದ, ಬ್ಯಾಂಕಿನಿಂದ ಹಣ ಪಡೆದೆ ಮತ್ತು ಮಾರುಕಟ್ಟೆಯಿಂದ ಕೆಲ ವಸ್ತುಗಳನ್ನು ತಂದು ಸಪ್ಲೈ ಮಾಡಲು, ಕೆಲಸ ಪ್ರಾರಂಭಿಸಿದ್ದೇನೆ' ಎಂದು. ಇಷ್ಟರಲ್ಲಿ ಭಾರತ ಸರ್ಕಾರ, ಗವರ್ನಮೆಂಟ್ ಇ ಮಾರ್ಕೆಟ್ ಪ್ಲೇಸ್ ಎಂಬ ವ್ಯವಸ್ಥೆಯನ್ನು ಆರಂಭಿಸಿದ್ದರ ಕಡೆಗೆ ನನ್ನ ಗಮನ ಹೋಯಿತು. ಆಗ ನಾನದನ್ನು ಹುಡುಕಿದೆ, ಇದೇನೆಂದು ಕೆಲವರನ್ನು ಪ್ರಶ್ನಿಸಿದೆ, ನಾನು ಸ್ವತಃ ಅದರಲ್ಲಿ ರಿಜಿಸ್ಟರ್ ಮಾಡಿಸಿಕೊಂಡೆ. ನಾನು ದೇಶದ ಜನತೆಗೆ ಹೇಳುವುದೇನೆಂದರೆ, ನಿಮಗೆ ಅವಕಾಶ ಸಿಕ್ಕಾಗ ಇಂಟರ್‌ನೆಟ್‌ನಲ್ಲಿ 'ಇಜಿಇಎಮ್'ಗೆ ಒಮ್ಮೆ ಭೇಟಿ ನೀಡಿ. ಇದೊಂದು ಹೊಸ ರೀತಿಯ ವ್ಯವಸ್ಥೆಯಾಗಿದೆ. ಯಾರಾದರೂ ಸರ್ಕಾರಕ್ಕೆ ಏನನ್ನಾದರೂ ಸಪ್ಲೈ ಮಾಡಬೇಕೆಂದಿದ್ದರೆ, ಚಿಕ್ಕ ಚಿಕ್ಕ ವಸ್ತುಗಳನ್ನು ಮಾರಾಟ ಮಾಡಬೇಕೆಂದಿದ್ದರೆ – ಬಲ್ಬುಗಳು ಮಾರಾಟ ಮಾಡಬೇಕೆಂದಿದ್ದರೆ, ಚೇರ್ ಮಾರಾಟ ಮಾಡಬೇಕೆಂದಿದ್ದರೆ, ಕಸ ಪೊರಕೆ ಮಾರಾಟ ಮಾಡಬೇಕೆಂದಿದ್ದರೆ, ಟೇಬಲ್ ಮಾರಾಟ ಮಾಡಬೇಕೆಂದಿದ್ದರೆ, ಅವರು ಅದರಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಕೊಳ್ಳಬಹುದು. ಅವರ ಬಳಿ ಯಾವ ಗುಣಮಟ್ಟದ ವಸ್ತುಗಳಿವೆ ಎಂದು ಅದರಲ್ಲಿ ನಮೂದಿಸಬಹುದು, ಅವರು ಎಷ್ಟಕ್ಕೆ ಮಾರಬೇಕೆಂದಿದ್ದಾರೆಂದೂ ಬರೆದಿಡಬಹುದು, ಜೊತೆಗೆ ಸರ್ಕಾರದ ಇಲಾಖೆಯವರು ಇದನ್ನು ಪರಿಶೀಲಿಸುವುದು ಕಡ್ಡಾಯವಾಗಿದೆ. ಇದನ್ನು ಮಾರಾಟ ಮಾಡುವವರು ಕ್ವಾಲಿಟಿ ಕಾಂಪ್ರೊಮೈಸ್ ಮಾಡದೇ ಕಡಿಮೆ ಬೆಲೆಯಲ್ಲಿ ಯಾರು ಮಾರುತ್ತಾರೆಂದು ಪರಿಶೀಲಿಸಿ ಅದನ್ನು ಆರ್ಡರ್ ಮಾಡಬೇಕಾಗುತ್ತದೆ ಇದರಿಂದ ಮುಚ್ಚಿಡುವಿಕೆ ಅಂತ್ಯವಾಗಿ ಎಲ್ಲವೂ ಪಾರದರ್ಶಕವಾಗುವುದು. ಯಾವುದೇ ಇಂಟರ್‌ಫೇಸ್ ಇರುವುದಿಲ್ಲ, ಎಲ್ಲವೂ ಟೆಕ್ನಾಲಜಿ ಮಾಧ್ಯಮದಿಂದಲೇ ನಡೆಯುವುದು. ಆದ್ದರಿಂದ ಇಜಿಇಎಮ್‌ನಿಂದ ಯಾರೇ ರಿಜಿಸ್ಟರ್ ಮಾಡಿಸಿದರೂ, ಸರ್ಕಾರದ ಎಲ್ಲಾ ಇಲಾಖೆಗಳೂ ಅದನ್ನು ನೋಡುತ್ತಿರುತ್ತವೆ. ಮಧ್ಯದಲ್ಲಿ ದಲ್ಲಾಳಿಗಳು ಇಲ್ಲದಿರುವುದರಿಂದ ವಸ್ತುಗಳು ಕಡಿಮೆಬೆಲೆಗೆ ಲಭಿಸುತ್ತವೆ.

ಈಗ ಈ ಅರುಳ್ ಮೋಳಿ ಮೇಡಂ, ಸರ್ಕಾರದ ಈ ವೆಬ್‌ಸೈಟ್‌ನಲ್ಲಿ, ಅವರು ಏನೇನು ಕೊಡಬಹುದೊ, ಅವೆಲ್ಲವನ್ನೂ ರಿಜಿಸ್ಟರ್ ಮಾಡಿಸಿಬಿಟ್ಟಿದ್ದಾರೆ. ಅದರಲ್ಲೂ ಆಸಕ್ತಿಕರವಾದ ವಿಷಯವೆಂದರೆ, ಅವರು ನನಗೆ ಬರೆದಿರುವಂಥ ಪತ್ರ ಬಹಳ ಇಂಟರೆಸ್ಟಿಂಗ್ ಆಗಿದೆ. ಅವರು ಬರೆಯುತ್ತಾರೆ, ನನಗೆ 'ಮುದ್ರಾ'ದಿಂದ ಹಣ ಲಭಿಸಿದೆ, ನನ್ನ ವ್ಯಾಪಾರ ಆರಂಭವಾಗಿದೆ, ಇಜಿಇಎಮ್‌ನಲ್ಲಿ ನಾನೇನು ಮಾರಬಹುದೋ, ಅವೆಲ್ಲವನ್ನೂ ಸೂಚಿಸಿದ್ದೇನೆ ಮತ್ತು ನನಗೆ ಪ್ರಧಾನ ಮಂತ್ರಿಗಳ ಕಾರ್ಯಾಲಯದಿಂದ ಆದೇಶ ದೊರೆತಿದೆ, ಪಿಎಂಓ ಯಿಂದ. ಪಿಎಂಓ ಏನು ತರಿಸಿರಬಹುದೆಂಬುದು ನನಗೂ ಹೊಸ ಸುದ್ದಿಯಾಗಿತ್ತು. ಪಿಎಂಓ ನನ್ನಿಂದ ಎರಡು ಥರ್ಮಾಸ್ ಖರೀದಿಸಿದ್ದಾರೆಂದು ಬರೆದಿದ್ದಾರೆ, ಜೊತೆಗೆ 1600/– ರೂಪಾಯಿಯ ಹಣ ಸಂದಾಯವಾಗಿದೆ. ಇದೇ ಎಂಪವರ್‌ಮೆಂಟ್. ಇದು ಉದ್ಯಮಶೀಲತೆಗೆ ಪ್ರೋತ್ಸಾಹ ನೀಡುವ ಅವಕಾಶ. ಒಂದು ವೇಳೆ, ಅರುಳ್ ಮೋಳಿ ಅವರು ನನಗೆ ಪತ್ರ ಬರೆಯದೇ ಹೋಗಿದ್ದರೆ, ಇ–ಜಿಇಎಂ ವ್ಯವಸ್ಥೆಯಿಂದ, ದೂರದಲ್ಲಿರುವ ಒಬ್ಬ ಗೃಹಿಣಿ, ಚಿಕ್ಕ ಕೆಲಸ ಮಾಡುತ್ತಿದ್ದಾಳೆಂದು ಮತ್ತು ಅವರು ಮಾರಿದ ವಸ್ತುಗಳನ್ನು ಪ್ರಧಾನ ಮಂತ್ರಿಗಳ ಕಛೇರಿಯವರೂ ಖರೀದಿಸಬಹುದೆಂದು ನನಗೆ ತಿಳಿಯುತ್ತಿರಲಿಲ್ಲ. ಇದೇ ದೇಶದ ಶಕ್ತಿಯಾಗಿದೆ, ಇದರಲ್ಲಿ, ಪಾರದರ್ಶಕತೆ ಇದೆ, ಎಂಪವರ್‌ಮೆಂಟ್ ಇದೆ, ಜೊತೆಗೆ ಉದ್ಯಮಶೀಲತೆ ಸಹ ಇದೆ. ಗವರ್ನಮೆಂಟ್ ಇ ಮಾರ್ಕೆಟ್ ಪ್ಲೇಸ್ – ಜಿಎಎಂ. ಯಾರು ಸರ್ಕಾರಕ್ಕೆ ಹೀಗೆ ತಮ್ಮ ವಸ್ತುಗಳನ್ನು ಮಾರಾಟಮಾಡಲು ಇಷ್ಟಪಡುತ್ತೀರೋ, ಅವರು ಹೆಚ್ಚೆಚ್ಚು ಇದರಲ್ಲಿ ತೊಡಗಿಸಿಕೊಳ್ಳಿ. ಇದು ಮಿನಿಮಮ್ ಗವರ್ನ್‌ಮೆಂಟ್ ಮ್ಯಾಕ್ಸಿಮಮ್ ಗವರ್ನೆನ್ಸ್‌ಗೆ ಒಂದು ಉತ್ತಮ ಉದಾಹರಣೆ ಮತ್ತು ಮಿನಿಮಮ್ ಪ್ರೈಸ್ ಹಾಗೂ ಮ್ಯಾಕ್ಸಿಮಮ್ ಈಸ್, ಎಫಿಸಿಯೆನ್ಸಿ ಅಂಡ್ ಟ್ರಾನ್ಸ್‌ಪರೆನ್ಸಿ ಎಂಬುದೇ ಇದರ ಗುರಿಯಾಗಿದೆ



ನನ್ನ ಪ್ರಿಯ ದೇಶ ಬಾಂಧವರೇ, ಒಂದೆಡೆ ನಾವು ನಮ್ಮ ಯೋಗ ಕುರಿತು ಹೆಮ್ಮೆ ಪಟ್ಟರೆ, ಮತ್ತೊಂದೆಡೆ ನಾವು ಸ್ಪೇಸ್ ಸೈನ್ಸ್ ಮತ್ತು ಅದರಲ್ಲಿ ಮಾಡಿರುವಂಥ ಸಾಧನೆಗಳ ಬಗ್ಗೆಯೂ ಅಷ್ಟೇ ಹೆಮ್ಮೆ ಪಡಬಹುದು. ಇದೇ ನಮ್ಮ ಭಾರತದ ವಿಶೇಷತೆಯಾಗಿದೆ, ನಮ್ಮ ಪಾದಗಳು ಯೋಗದಿಂದ ಕೂಡಿದ ಭೂಮಿಯ ಮೇಲಿದ್ದರೆ, ನಮ್ಮ ಕನಸುಗಳು, ದೂರ ದೂರದ ಆಕಾಶದಲ್ಲಿರುವ ಉತ್ತುಂಗಗಳನ್ನು ಮೀರುವಂಥದ್ದಾಗಿವೆ. ಇತ್ತೀಚೆಗೆ, ಭಾರತ ಕ್ರೀಡೆಯಲ್ಲಿ ಮತ್ತು ವಿಜ್ಞಾನದಲ್ಲೂ ಬಹಳಷ್ಟು ಸಾಧನೆ ಮಾಡಿ ತೋರಿಸಿದೆ. ಇಂದು ಭಾರತ ಕೇವಲ ಭೂಮಿಯ ಮೇಲಷ್ಟೇ ಅಲ್ಲ, ಬಾಹ್ಯಾಕಾಶದಲ್ಲೂ ತನ್ನ ಬಾವುಟ ಹಾರಿಸುತ್ತಿದೆ. ಎರಡು ದಿನಗಳ




ಹಿಂದೆಯಷ್ಟೇ ಇಸ್ರೊ. 'ಕಾರ್ಟೊಸ್ಯಾಟ್ 2 ಸರಣಿಯ ಉಪಗ್ರಹ'ದ ಜೊತೆಗೆ 30 ನ್ಯಾನೊ ಉಪಗ್ರಹಗಳನ್ನು ಲಾಂಚ್ ಮಾಡಿದೆ. ಈ ಉಪಗ್ರಹಗಳಲ್ಲಿ ಭಾರತವಷ್ಟೇ ಅಲ್ಲ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಬ್ರಿಟನ್, ಅಮೆರಿಕಾ ಸೇರಿದಂತೆ 14 ದೇಶಗಳ ಉಪಗ್ರಹಗಳನ್ನು ಭಾರತ ಉಡ್ಡಯನ ಮಾಡಿದೆ. ಈ ನ್ಯಾನೊ ಸೆಟೆಲೈಟ್ ಅಭಿಯಾನದಿಂದ, ವ್ಯವಸಾಯದ ಕ್ಷೇತ್ರದ ಕುರಿತು, ರೈತರ ಕೆಲಸದ ಕುರಿತು, ಪ್ರಾಕೃತಿಕ ವಿಕೋಪಗಳ ಕುರಿತು ತಿಳಿದುಕೊಳ್ಳಲು ನಮಗೆ ಸಾಕಷ್ಟು ಸಹಾಯವಾಗಿದೆ. ಕೆಲ ದಿನಗಳ ಹಿಂದೆ ನಡೆದಂತಹ ಈ ವಿಷಯ ನಮಗೆಲ್ಲರಿಗೂ ನೆನಪಿರಬಹುದು, ಇಸ್ರೊ, 'ಜಿಸ್ಯಾಟ್–19' ಅನ್ನು ಯಶಸ್ವಿಯಾಗಿ ಉಡ್ಡಯನ ಮಾಡಿತು, ಇಲ್ಲಿವರೆಗೆ ಭಾರತ ಮಾಡಿದಂತಹ ಉಪಗ್ರಹ ಉಡಾವಣೆಗಳಲ್ಲಿ, ಇದು ಅತ್ಯಂತ ಭಾರವಾದ ಹೆವಿ ಸೆಟೆಲೈಟ್ ಆಗಿದೆ. ನಮ್ಮ ಭಾರತದ ಮಾಧ್ಯಮಗಳು ಇದರ ಭಾರವನ್ನು ಆನೆಯ ಭಾರಕ್ಕೆ ಹೋಲಿಸಿದ್ದರು, ಅಂದರೆ ಬಾಹ್ಯಾಕಾಶ ಕ್ಷೇತ್ರದಲ್ಲಿ ನಮ್ಮ ಭಾರತದ ವಿಜ್ಞಾನಿಗಳು ಎಷ್ಟು ಮಹತ್ತರವಾದ ಸಾಧನೆ ಮಾಡಿದ್ದಾರೆಂದು ನೀವೇ ಊಹಿಸಿಕೊಳ್ಳಬಹುದು. ಜೂನ್ 19 ಕ್ಕೆ 'ಮಾರ್ಸ್ ಮಿಶನ್'ನ 1000 ದಿನಗಳು ಪೂರ್ಣಗೊಂಡಿವೆ. ನಿಮಗೆಲ್ಲರಿಗೂ ತಿಳಿದಿರುವ ಹಾಗೆ, 'ಮಾರ್ಸ್ ಮಿಶನ್'ನಲ್ಲಿ ನಾವು ಯಶಸ್ವಿಯಾಗಿ ಆರ್ಬಿಟ್‌ನಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದೆವು, ಈ ಸಂಪೂರ್ಣ ಮಿಶನ್ 6 ತಿಂಗಳ ಅವಧಿಯದ್ದಾಗಿತ್ತು. ಅದರ ಲೈಫ್ 6 ತಿಂಗಳದ್ದಾಗಿತ್ತು. ಆದರೆ, ನಮ್ಮ ವಿಜ್ಞಾನಿಗಳ ಪ್ರಯೋಗದ ಶಕ್ತಿಯಿಂದ, ಇದು 6 ತಿಂಗಳ ಅವಧಿಯನ್ನು ಮೀರಿಸಿದ ವಿಷಯ ನನಗೆ ತುಂಬಾ ಸಂತೋಷ ನೀಡಿದೆ. 1000 ದಿನಗಳ ನಂತರವೂ ಈ ನಮ್ಮ 'ಮಂಗಳಯಾನ ಮಿಶನ್' ಇನ್ನೂ ಯಶಸ್ವಿಯಾಗಿ ಮುಂದುವರೆದಿದೆ, ಚಿತ್ರಗಳನ್ನು ಕಳುಹಿಸುತ್ತಲೇ ಇದೆ, ಮಾಹಿತಿಯನ್ನು ನೀಡುತ್ತಿದೆ, ಸೈಂಟಿಫಿಕ್ ಡಾಟಾ ಲಭಿಸುತ್ತಿದೆ, ಅಂದರೆ ಕಾಲಾವಧಿಯ ನಂತರವೂ, ತನ್ನ ಆಯಸ್ಸಿಗಿಂತ ಹೆಚ್ಚು ಕೆಲಸ ನಿರ್ವಹಿಸುತ್ತಿದೆ. 1000 ದಿನಗಳು ಪೂರ್ಣಗೊಳ್ಳುವುದು ನಮ್ಮ ವೈಜ್ಞಾನಿಕ ಯಾತ್ರೆಯಲ್ಲಿ, ನಮ್ಮ ಬಾಹ್ಯಾಕಾಶದ ಯಾತ್ರೆಯಲ್ಲಿ ಒಂದು ಮಹತ್ವ ಪೂರ್ಣ ಹೆಜ್ಜೆಯಾಗಿದೆ.

ಇಂದಿನ ದಿನಗಳಲ್ಲಿ ಕ್ರೀಡೆಯಲ್ಲೂ ನಮ್ಮ ಯುವಜನತೆಯ ಒಲವು ಹೆಚ್ಚುತ್ತಾ ಸಾಗಿದೆ. ಇಂದು ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಯಲ್ಲೂ ನಮ್ಮ ಯುವಜನತೆಗೆ ತಮ್ಮ ಭವಿಷ್ಯ ಗೋಚರಿಸುತ್ತಿದೆ. ಹಾಗೆಯೇ ನಮ್ಮ ಕ್ರೀಡಾಳುಗಳಿಂದಾಗಿ, ಅವರ ಕೆಚ್ಚೆದೆಯಿಂದಾಗಿ, ಅವರ ಸಾಧನೆಯಿಂದಾಗಿ ದೇಶದ ಹೆಸರು ರಾರಾಜಿಸುತ್ತಿದೆ. ಇತ್ತೀಚೆಗೆ ಭಾರತದ ಬ್ಯಾಡ್ಮಿಂಟನ್ ಆಟಗಾರ ಕಿಡಂಬಿ ಶ್ರೀಕಾಂತ್ ಇಂಡೋನೇಷ್ಯಾ ಓಪನ್ಸ್‌ನಲ್ಲಿ ಗೆಲುವು ಸಾಧಿಸುವ ಮೂಲಕ ದೇಶದ ಗೌರವವನ್ನು ಹೆಚ್ಚಿಸಿದ್ದಾರೆ. ಈ ಸಾಧನೆಗಾಗಿ ನಾನು ಅವರಿಗೆ ಮತ್ತು ಅವರ ತರಬೇತುದಾರರಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ. ನನಗೆ ಕೆಲ ದಿನಗಳ ಹಿಂದೆ ಅಥ್ಲಿಟ್ ಪಿ ಟಿ ಉಷಾ ಅವರ ಉಷಾ ಸ್ಕೂಲ್ ಆಫ್ ಅಥ್ಲೆಟಿಕ್ಸ್‌ನ ಸಿಂಥೆಟಿಕ್ ಟ್ರ್ಯಾಕ್‌ನ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆತಿತ್ತು. ನಾವು




ಕ್ರೀಡೆಗೆ ಪ್ರೋತ್ಸಾಹ ನೀಡಿದಷ್ಟೂ ಸ್ಪೋರ್ಟ್ಸ್, ಸ್ಪೋರ್ಟ್ಸ್‌ಮನ್ ಸ್ಪಿರಿಟ್ ವೃದ್ಧಿಸುತ್ತದೆ. ಕ್ರೀಡೆ, ವ್ಯಕ್ತಿತ್ವ ವಿಕಸನದಲ್ಲೂ ಮಹತ್ವಪೂರ್ಣ ಪಾತ್ರ ವಹಿಸುತ್ತದೆ. ಓವರ್ ಆಲ್ ಪರ್ಸನಾಲಿಟಿ ಡೆವಲಪ್‌ಮೆಂಟ್‌ನಲ್ಲಿ ಕ್ರೀಡೆಯ ಪಾತ್ರ ಹಿರಿದು. ದೇಶದಲ್ಲಿ ಪ್ರತಿಭೆಗೆ ಬರವಿಲ್ಲ. ನಮ್ಮ ಕುಟುಂಬದಲ್ಲಿ ಮಕ್ಕಳಿಗೆ ಕ್ರೀಡೆಯಲ್ಲಿ ಆಸಕ್ತಿ ಇದ್ದರೆ ಅವರಿಗೆ ಅವಕಾಶ ಕೊಡಲೇಬೇಕು. ಅವರನ್ನು ಮೈದಾನದಿಂದ ಹೊರತಂದು ಕೋಣೆಯಲ್ಲಿ ಕೂಡಿಹಾಕಿ ಪುಸ್ತಕಗಳ ಮುಂದೆ ಕೂರುವಂತೆ ಒತ್ತಾಯಿಸಬಾರದು. ಅವರು ಓದಲಿ, ಅದರಲ್ಲಿ ಮುಂದುವರಿಯುವುದಾದರೆ ಮುಂದುವರಿಯಲಿ. ಆದರೆ ಕ್ರೀಡೆಯಲ್ಲಿ ಅವನ ಸಾಮರ್ಥ್ಯವಿದ್ದರೆ, ಆಸಕ್ತಿಯಿದ್ದರೆ, ಶಾಲೆ, ಕಾಲೇಜು, ಕುಟುಂಬ, ಸುತ್ತಮುತ್ತಲ ಜನರು – ಎಲ್ಲರೂ ಅವನಿಗೆ ಬೆಂಬಲ ನೀಡಬೇಕು, ಪ್ರೋತ್ಸಾಹಿಸಬೇಕು. ಮುಂದಿನ ಒಲಿಂಪಿಕ್‌ಗಾಗಿ ಎಲ್ಲರೂ ಕನಸುಗಳನ್ನು ಹೆಣೆಯಬೇಕು.

ನನ್ನ ಪ್ರಿಯ ದೇಶಬಾಂಧವರೇ, ಮಳೆಗಾಲ, ನಿರಂತರವಾಗಿ ಉತ್ಸವಗಳ ವಾತಾವರಣ, ಒಂದು ಥರದಲ್ಲಿ ಈ ಕಾಲಘಟ್ಟದ ಅನುಭವವೇ ಹೊಸತನದಿಂದ ತುಂಬಿರುತ್ತದೆ. ನಾನು ಮತ್ತೊಮ್ಮೆ ತಮ್ಮೆಲ್ಲರಿಗೂ ಶುಭ ಹಾರೈಸುತ್ತೇನೆ. ಮುಂದಿನ ಮನದ ಮಾತಿನಲ್ಲಿ ಮತ್ತಷ್ಟು ಮಾತಾಡೋಣ. ನಮಸ್ಕಾರ. ❑

## ವನಬಂಧು ಕಲ್ಯಾಣ ಯೋಜನೆ

ಬುಡಕಟ್ಟು ಜನರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ವನಬಂಧು ಕಲ್ಯಾಣ ಯೋಜನೆ ಆರಂಭಿಸಿದೆ. ಆಂಧ್ರಪ್ರದೇಶ, ಮಧ್ಯಪ್ರದೇಶ, ಹಿಮಾಚಲ ಪ್ರದೇಶ, ಒಡಿಶಾ, ಜಾರ್ಖಂಡ, ಛತೀಸ್‌ಗಢ, ರಾಜಸ್ತಾನ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳ ತಲಾ ಒಂದು ತಾಲೂಕಿನಲ್ಲಿ ಪ್ರಾಯೋಗಿಕವಾಗಿ ಈ ಯೋಜನೆ ಪ್ರಾರಂಭಿಸಲಾಗಿದೆ. ಯೋಜನೆಯಡಿ, ಬುಡಕಟ್ಟು ಪ್ರದೇಶದಲ್ಲಿ ವಿವಿಧ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲು ತಲಾ 10 ಕೋಟಿ ರೂಪಾಯಿ ಒದಗಿಸಲಾಗುತ್ತದೆ. ರಾಜ್ಯ ಸರ್ಕಾರಗಳು ಮಾಡುವ ಶಿಫಾರಸಿನಂತೆ, ಅತ್ಯಂತ ಕಡಿಮೆ ಸಾಕ್ಷರತೆ ಇರುವ ತಾಲೂಕುಗಳನ್ನು ಇದಕ್ಕಾಗಿ ಆಯ್ದುಕೊಳ್ಳಲಾಗುತ್ತಿದೆ. ಬುಡಕಟ್ಟು ಜನರು ಮತ್ತು ಇತರ ಜನರ ನಡುವೆ ಇರುವ ಸಾಮಾಜಿಕ ಅಂತರ ತೊಡೆದು ಹಾಕಲು ಗಮನ ಹರಿಸಲಾಗುತ್ತಿದೆ. ಈ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಉತ್ತಮ ಪಡಿಸಲು ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕ ಸುಧಾರಿಸಲು ಆದ್ಯತೆ ನೀಡಲಾಗುತ್ತಿದೆ.

# ವಾಣಿಜ್ಯ ಸಂಸ್ಥೆಗಳ ಸಾಮಾಜಿಕ ಜವಾಬ್ದಾರಿ

* ಎಸ್.ಆರ್. ವಿಜಯಶಂಕರ



ಇಂದು ಗೌರವಾನ್ವಿತ ಕಾರ್ಪೊರೇಟ್‌ಗಳು ಸಾಮಾಜಿಕ ಜವಾಬ್ದಾರಿ ನಿತ್ಯ ನಡೆಯಬೇಕಾದ ಕಾರ್ಯಕ್ರಮ ಎಂದು ಯೋಚಿಸುತ್ತವೆ. ಸಾಮಾಜಿಕ ಜವಾಬ್ದಾರಿ ಎಂಬುದು ಕಂಪೆನಿಯು ಲಾಭ ಮಾಡುವಾಗ ಮಾತ್ರ ನಡೆಸುವ ಕಾರ್ಯಕ್ರಮವಲ್ಲ. ಅದು ಕಂಪೆನಿಗಳ ಲಾಭ ಕಡಿಮೆಯಾದಾಗ ಕೆಲವೊಮ್ಮೆ ನಷ್ಟವೇ ಸಂಭವಿಸಿರುವಾಗಲೂ ನಡೆಯಬೇಕಾದ ಕಾರ್ಯಕ್ರಮ ಎಂದು ಚಿಂತಿಸುತ್ತವೆ.

ಕಾರ್ಪೊರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ ಅಂದರೆ, ವಾಣಿಜ್ಯ ಸಂಸ್ಥೆಗಳ ಸಾಮಾಜಿಕ ಜವಾಬ್ದಾರಿ. ಅದು ಸಿ.ಎಸ್. ಆರ್ ಎಂಬ ಮೂರು ಅಕ್ಷರಗಳಿಂದ ಪರಿಚಿತವಾಗಿದೆ. ಕೇಂದ್ರ ಸರ್ಕಾರ ಕಂಪೆನಿ ಕಾನೂನಿಗೆ ತಿದ್ದುಪಡಿ ತಂದು, ವಾರ್ಷಿಕ ಐದು ಕೋಟಿಗಳಿಗಿಂತ ಹೆಚ್ಚು ಲಾಭ ಮಾಡುವ ಅಥವಾ ಒಟ್ಟು ಐದುನೂರು ಕೋಟಿಗಳಷ್ಟು ರೂಪಾಯಿಗಳ ಆಸ್ತಿ ಹೊಂದಿರುವ ಅಥವಾ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ವಹಿವಾಟು ನಡೆಸುವ ಯಾವುದೇ ಸಂಸ್ಥೆಯ ತನ್ನ ಲಾಭದ ಶೇಕಡಾ ಎರಡರಷ್ಟು ಹಣವನ್ನು ತನ್ನ ಸಿಎಸ್‌ಆರ್ ಕಾರ್ಯಕ್ರಮಗಳಿಗಾಗಿ ವ್ಯಯಿಸಬೇಕು ಎಂಬ ನಿಯಮ ಮಾಡಿತು.

ಕಂಪೆನಿ ಕಾನೂನಿನ ತಿದ್ದುಪಡಿಗೆ ಅನುಸಾರವಾಗಿ ರಚಿತವಾಗಿರುವ ನಿಯಮಗಳಂತೆ ಕಂಪೆನಿಗಳು ತಮ್ಮದೇ ಆದ ಒಂದು ಕಾರ್ಯಕ್ರಮ ಯೋಜನೆ, ಅದಕ್ಕಾಗಿ ಹಿರಿಯ ಅಧಿಕಾರಿಗಳನ್ನು ಒಳಗೊಂಡ ಸಿಎಸ್‌ಆರ್ ಬೋರ್ಡ್ ಇತ್ಯಾದಿಗಳನ್ನು ಕಡ್ಡಾಯಗೊಳಿಸುವ ನಿಯಮಗಳನ್ನು ರೂಪಿಸಿತು. ಈ ಹೊಸ ಕಾನೂನು ಬರುವ ಮೊದಲೇ ಪ್ರತಿಷ್ಠಿತ ಹಲವು ಕಂಪೆನಿಗಳು ತಮ್ಮ ಸಾಮಾಜಿಕ ಜವಾಬ್ದಾರಿಯ ಭಾಗವಾಗಿ ಶೇಕಡಾ ಎರಡು ಅಥವಾ ಕೆಲವು ಸಂಸ್ಥೆಗಳು ಅದಕ್ಕಿಂತಲೂ ಹೆಚ್ಚು ಹಣವನ್ನು ವ್ಯಯಿಸುತ್ತಿದ್ದರು. ಈಗ ಬಂದಿರುವ ಹೊಸ ಕಾನೂನು ಕೇವಲ ಲಾಭವನ್ನು ಮಾತ್ರ ಪರಿಗಣಿಸುವ ಕಂಪೆನಿಗಳೂ ಸಿಎಸ್‌ಆರ್ ಬಗ್ಗೆ ಯೋಚಿಸಬೇಕಾದ ಒತ್ತಡ ತಂದಿದೆ. ಈ ಸೋಶಿಯಲ್ ರೆಸ್ಪಾನ್ಸಿಬಲಿಟಿ ಎಂಬ ಕಲ್ಪನೆಯ ಹಿಂದೆ ಸಮಾಜದಿಂದ ಪಡೆದದ್ದರಲ್ಲಿ ಸ್ವಲ್ಪವನ್ನಾದರೂ ಸಮಾಜಕ್ಕೆ ಹಿಂತಿರುಗಿಸಬೇಕು ಎಂಬ ಆಶಯ ಇದೆ. ಇತರ ಕಾನೂನುಗಳನ್ನು ಸರಿಯಾಗಿ ಪಾಲಿಸಿ, ಕಾನೂನಿಗೆ ತಪ್ಪಿ ನಡೆಯಬೇಡಿ. ಅದುವೇ ನೀವು ಮಾಡುವ ಅತ್ಯಂತ ದೊಡ್ಡ ಸಾಮಾಜಿಕ ಜವಾಬ್ದಾರಿ ಎನ್ನುವ ಚಿಂತಕರು ಹಾಗೂ ಹೋರಾಟಗಾರರೂ ಇದ್ದಾರೆ. ಈ ಲೇಖನದಲ್ಲಿ ಮೇಲೆ ಹೇಳಿದ ಎರಡು ಅಂಶಗಳ ಹಿನ್ನೆಲೆಯಲ್ಲಿ ಸಿಎಸ್‌ಆರ್ ಕಾರ್ಯಕ್ರಮಗಳ ತಾತ್ವಿಕತೆಯನ್ನು ಗಮನಿಸೋಣ.

ಇದರ ಮೊದಲ ಹಂತವಾಗಿ ಸಮಾಜ ಹಾಗೂ ವ್ಯಕ್ತಿಗಳ ನಡುವೆ ಒಡೆತನ ಹೇಗೆ ಬೆಳೆಯಿತೆಂಬುದನ್ನು ಪರೀಕ್ಷಿಸೋಣ. ಒಂದೇ ಕಡೆ ನೆಲೆ ಇಲ್ಲದೆ ಕಾಡಿನಲ್ಲಿ ಮರದಿಂದ ಮರಕ್ಕೆ ಜಾಗದಿಂದ ಜಾಗಕ್ಕೆ ಸಂಚರಿಸುತ್ತಿದ್ದ ಮಾನವ ಪ್ರಾಣಿಗಳ ಚಲನೆಗಳಿಗೆ ಬಹುದೊಡ್ಡ ತಡೆ ಒಡ್ಡಿರಬಹುದಾದ್ದು ಪ್ರಾಕೃತಿಕ ಅಂಶಗಳೇ. ಸಮುದ್ರ, ದಾಟಲಾರದ ದೊಡ್ಡ ನದಿ, ಕಡಿದಾದ ಪರ್ವತಗಳು, ಕ್ರಮಿಸಲಾಗದ ಮರುಭೂಮಿಗಳು ಮೊದಲ ಹಂತದಲ್ಲಿ ಮಾನವ ಸಂಚಾರ ನಿಯಂತ್ರಣದ ಗಡಿರೇಖೆಗಳಾಗಿದ್ದಿರಬಹುದು. ಹೀಗೆ ಅಲ್ಲೇ ಸುತ್ತಾಡುತ್ತಿದ್ದ ಮಾನವ ಪ್ರಾಣಿಗಳಿಗೆ ಖಾಸಗಿ ಒಡೆತನದ ಕಲ್ಪನೆ ಇರಲಿಲ್ಲ. ಇದ್ದ ಜಾಗ ಇದ್ದಷ್ಟು ಹೊತ್ತು ಅಲ್ಲಿದ್ದವರದ್ದು. ಮುಂದೆ ಅವರು ಮರದಿಂದ ಇಳಿದು ಬಿಲ, ಗುಹೆಗಳಲ್ಲಿ ನೆಲೆ ನಿಂತಾಗ ಒಂದು ಗುಂಪು ಇರುವ ಜಾಗವೆಲ್ಲಾ ಅವರದ್ದು. ಹೀಗೆ ಸಮುದಾಯಕ್ಕೆ ಸೇರಿದ್ದ ಒಡೆತನ, ನಾಗರಿಕತೆ, ರಾಜ್ಯವ್ಯವಸ್ಥೆ ಬೆಳೆಯುತ್ತಾ ಹೋದಂತೆ

* ಕನ್ನಡ ವಿಮರ್ಶಕರು ಹಾಗೂ ನಿರ್ದೇಶಕರು, ಇಂಟೆಲ್ ಟೆಕ್ನಾಲಜಿ ಸಂಸ್ಥೆ. E-mail : srvshankar@yahoo.com

ಖಾಸಗಿ ಒಡೆತನಕ್ಕೆ ದಾರಿ ಮಾಡಿಕೊಟ್ಟವು. ಮುಂದೆ ಫ್ಯೂಡಲ್ ಅಂದರೆ ಊಳಿಗಮಾನ್ಯ ವ್ಯವಸ್ಥೆ ಹೋಗಿ ಬಂಡವಾಳಶಾಹಿ ವ್ಯವಸ್ಥೆ ಬಂದಾಗ ಹಣ ಗಳಿಕೆ ಹಣ ಉಳಿಕೆ ಎಲ್ಲಕ್ಕಿಂತ ಮುಖ್ಯವಾಯಿತು. ಮನುಷ್ಯನ ಅಗತ್ಯಕ್ಕೆ ಬೇಕಾದ ಉತ್ಪಾದನೆಗಿಂತಲೂ ಹೆಚ್ಚು ಅಗತ್ಯವಾದ್ದು ಲಾಭ ಗಳಿಕೆಗಾಗಿ ಉತ್ಪಾದನೆ, ಲಾಭ ಗಳಿಕೆಗಾಗಿ ವ್ಯಾಪಾರ ಎಂಬ ಕಲ್ಪನೆ ಈ ಹಂತದಲ್ಲಿ ಹೆಚ್ಚು ಬೆಳೆಯಿತು. ಆ ತನಕ ಹಣಕಾಸಿಗೆ ಸಂಬಂಧಪಟ್ಟಂತೆ ಬೆಳೆಯಬಂದಿದ್ದ ನೈತಿಕತೆ ಒಂದು ಪಲ್ಲಟವನ್ನು ಕಂಡಿತು.

ಮನುಷ್ಯನ ವೈಯಕ್ತಿಕ ಆಸ್ತಿಯ ಹಕ್ಕುಗಳ ಜೊತೆ ಆಧುನಿಕ ಪ್ರಜಾಪ್ರಭುತ್ವದಲ್ಲಿ ಇತರ ವೈಯಕ್ತಿಕ ಹಕ್ಕುಗಳ ತಿಳಿವಳಿಕೆಯೂ ಬೆಳೆಯತೊಡಗಿತು. ಮನುಷ್ಯನ ಘನತೆಗೆ ಇಂತಹ ಹಕ್ಕುಗಳೂ ಅವಶ್ಯಕ ಎಂಬ ಭಾವನೆ ಬೆಳೆಯಿತು. ಅವುಗಳಲ್ಲಿ ಮುಖ್ಯವಾದ್ದು ಸಮಾನತೆ, ಸ್ವಾತಂತ್ರ್ಯದ ಹಕ್ಕುಗಳು. ಭ್ರಾತೃತ್ವದ ಮೌಲ್ಯ. ಫ್ರೆಂಚ್ ಕ್ರಾಂತಿಯ ಬಳಿಕ ಈ ಮೌಲ್ಯಗಳು – ಮಾನವಹಕ್ಕಿನ ಕಲ್ಪನೆಗಳು ಜಗತ್ತಿನಾದ್ಯಂತ ಹೆಚ್ಚು ವೇಗವಾಗಿ ಪಸರಿಸತೊಡಗಿತು. ಜಗತ್ತಿನ ರಾಷ್ಟ್ರಗಳು ಯೂರೋಪಿನ ಪ್ರಮುಖ ರಾಷ್ಟ್ರಗಳ ವಸಾಹತು ಶಾಹಿ ಹಿಡಿತಗಳಿಂದ ಬಿಡುಗಡೆ ಹೊಂದಿ ಸ್ವತಂತ್ರವಾಗುತ್ತಾ ಹೋದ ಹಾಗೆ, ಸಮಾನತೆ, ಸ್ವಾತಂತ್ರ್ಯದ ಹಕ್ಕುಗಳೂ ಜನಮನಗಳಲ್ಲಿ ಬೇರೂರತೊಡಗಿದವು.

ಹೀಗೆ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಮಾನತೆಗಳ ಅಭೀಪ್ಸೆ ಸಮಾಜದಲ್ಲಿ ಹಬ್ಬುತ್ತಾ ಹೋದ ಸಮಯದಲ್ಲೇ ಬಂಡವಾಳ ಶಾಹಿ ವ್ಯವಸ್ಥೆಯೂ ಬೆಳೆಯುತ್ತಾ ಹೋಯಿತು. ಬಂಡವಾಳ ಶಾಹಿ, ಸಂಪತ್ತಿನ ಖಾಸಗೀಕರಣದಲ್ಲಿ ನಂಬಿಕೆ ಇರುವ ವ್ಯವಸ್ಥೆ. ಈ ಬಂಡವಾಳ ಶಾಹಿಗೆ ಎದುರಾಗಿ ಕಾರ್ಮಿಕರ ಸಾಮಾಜಿಕ ಅಧಿಕಾರವನ್ನು ಪ್ರತಿನಿಧಿಸುವ ರಾಜ್ಯದ ಒಡೆತನದಲ್ಲಿ ನಂಬಿಕೆ ಉಳ್ಳ ಕಮ್ಯುನಿಸ್ಟ್ ಸರ್ಕಾರಗಳೂ ಕೂಡಾ ರಷ್ಯಾ, ಚೈನಾ ಹಾಗೂ ಇನ್ನೂ ಹಲವಾರು ರಾಷ್ಟ್ರಗಳಲ್ಲಿ ಭದ್ರವಾಗಿ ಬೇರೂರಿದವು.

ಬಂಡವಾಳ ಶಾಹಿ ವ್ಯವಸ್ಥೆ ಹಣವನ್ನು ಒಟ್ಟುಮಾಡಿ ಉತ್ಪಾದನೆ, ವ್ಯಾಪಾರಗಳನ್ನು ನಡೆಸುವ ಉದ್ದೇಶದಿಂದ, ಬಂಡವಾಳವನ್ನು ಶೇರುಗಳ ರೂಪದಲ್ಲಿ ಒಟ್ಟುಮಾಡಿ – ಹಾಗೆ ಒಟ್ಟಾದ ಬಂಡವಾಳವನ್ನು ಬಳಸಿ ಕಂಪೆನಿಗಳನ್ನು ಸ್ಥಾಪಿಸಿ ವಹಿವಾಟು ನಡೆಸತೊಡಗಿದವು. ಇಂದು ಕಂಪೆನಿಗಳಲ್ಲಿ ಷೇರು ಹೂಡುವ ವ್ಯಕ್ತಿಗೆ 'ಲಿಮಿಟೆಡ್ ಲಯಬಿಲಿಟಿ'. ಅಂದರೆ ತಾನು ಒಪ್ಪಿಕೊಂಡಷ್ಟು ಷೇರಿನ ಹಣ ನೀಡುವುದು ಮಾತ್ರ ಅವನ ಜವಾಬ್ದಾರಿ ಕಂಪೆನಿ ಮಾಡುವ ತಪ್ಪುಗಳಿಗೆ ಷೇರು ನೀಡಿದವನಿಗೆ ಶಿಕ್ಷೆ ಇಲ್ಲ.

ಕಮ್ಯುನಿಸಂ ಬೆಳವಣಿಗೆಯಿಂದ ಸಮಾಜದ ಅಂದರೆ ಸಾಮೂಹಿಕ ಸಂಪತ್ತು ಹಾಗೂ ವೈಯಕ್ತಿಕ ಸಂಪತ್ತು ಇವುಗಳನ್ನು ಹೇಗೆ ವ್ಯತ್ಯಾಸಗೊಳಿಸಬೇಕೆಂಬ ದೊಡ್ಡ ಚರ್ಚೆ ನಡೆಯಿತು. ಅದು ಹಲವು ರೂಪಗಳಲ್ಲಿ ಇನ್ನೂ ನಡೆಯುತ್ತಾ ಇದೆ. ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ರಾಜ್ಯವ್ಯವಸ್ಥೆ ಬೆಳೆಯುತ್ತಾ ಹೋದಂತೆ ಕಾರ್ಪೊರೇಟ್‌ಗಳು ಅಂದರೆ ಷೇರು ಬಂಡವಾಳಗಳಿಂದ ಪ್ರಾರಂಭವಾಗುವ ವ್ಯಾಪಾರಿ ಸಂಸ್ಥೆಗಳು ಇಂದಿನ ವಾಣಿಜ್ಯ ವ್ಯವಹಾರಗಳ ಕೇಂದ್ರಶಕ್ತಿಗಳಾಗಿ ಬೆಳೆದವು. ಒಂದು ಲಕ್ಷ ಕೋಟಿಗಳಿಗೂ ಅಧಿಕ ವ್ಯವಹಾರ ನಡೆಸುವ ಕಂಪೆನಿಗಳು ಇಂದು ಭಾರತದಲ್ಲೂ ಇವೆ.

ಇಂತಹ ಸಂದರ್ಭದಲ್ಲಿ ಸಾಮಾಜಿಕ ಜವಾಬ್ದಾರಿಯ ಪ್ರಶ್ನೆ ಮುನ್ನೆಲೆಗೆ ಬಂತು. ಕೈಗಾರಿಕೆ–ವಾಣಿಜ್ಯ ಸಂಸ್ಥೆಗಳಲ್ಲಿ ಕಾರ್ಮಿಕರು, ಭೂಮಿ, ಬಂಡವಾಳ ಎಲ್ಲವೂ ಸಮಾಜದಿಂದ ಪಡೆದದ್ದು, ಕೈಗಾರಿಕೆಗಳಿಗೆ ಕಂಪೆನಿಗಳಿಗೆ ಸರ್ಕಾರಗಳು ನೀಡುವ ಬೆಂಬಲವೂ ಪ್ರಜೆಗಳೆಂಬ ಸಮಾಜ ನೀಡಿದ ತೆರಿಗೆ ಹಣದಿಂದ ಬಂದುದು. ಕಂಪೆನಿಗಳ ವಸ್ತುಗಳನ್ನು ಕೊಳ್ಳುವವರೂ ಸಮಾಜದ ಭಾಗ. ತೆರಿಗೆಯಿಂದ ಸಂಗ್ರಹಿಸಿದ ಹಣದಿಂದ ನಿರ್ಮಿಸಿದ ಮೂಲಭೂತ ಸೌಕರ್ಯಗಳೇ ರಸ್ತೆ, ವಿಮಾನ ನಿಲ್ದಾಣ, ರೇವುಗಳು, ಶಾಲೆ, ವಿದ್ಯಾಭ್ಯಾಸ, ವೈದ್ಯಕೀಯ ಸಹಾಯ – ಇತ್ಯಾದಿ) ಉಪಯೋಗವನ್ನು ಕಂಪೆನಿಗಳು ಪಡೆಯುತ್ತವೆ. ಹಾಗಾಗಿ ಸಮಾಜದಿಂದ ಸಂಸ್ಥೆಗಳು ಸಾಕಷ್ಟು ಲಾಭ ಪಡೆಯುತ್ತವೆ. ಹೀಗೆ ಪಡೆದದ್ದರಲ್ಲಿ ಸ್ವಲ್ಪವನ್ನಾದರೂ ಸಮಾಜಕ್ಕೆ ಹಿಂತಿರುಗಿಸುವುದು ನಾಗರಿಕ ಜವಾಬ್ದಾರಿ ಎಂಬ ಕಲ್ಪನೆ ಬೆಳೆಯಿತು. ಈ ಕಲ್ಪನೆ ಸಮಾನತೆಗಾಗಿ ರಾಷ್ಟ್ರೀಕರಣವೇ ಆಗಬೇಕಾಗಿಲ್ಲ ಎಂಬ ವಿಚಾರವನ್ನು ಪೋಷಿಸಿತು.

ಆದರೆ, ಕೆಲವು ಕಂಪೆನಿಗಳು ಸಿಎಸ್‌ಆರ್ ಕಾನೂನು ಬರುವುದಕ್ಕೆ



ಮೊದಲೆ ಸಾಕಷ್ಟು ಲಾಭವನ್ನು ಸಾಮಾಜಿಕ ದಾನ, ಧರ್ಮ ಹಾಗೂ ಸಮಾಜದ ಒಟ್ಟು ಏಳಿಗೆಗಾಗಿ ವಿನಿಯೋಗಿಸಬೇಕು ಎಂಬ ಕಲ್ಪನೆ ಹೊಂದಿದ್ದವು. ಅವುಗಳಲ್ಲಿ ಮೊದಲಿಗೆ ನೆನಪಿಗೆ ಬರುವ ಒಂದು ಹೆಸರು ಟಾಟಾ ಸಮೂಹ ಸಂಸ್ಥೆ.

ಸುಮಾರು ಎಂಟು ದಶಕಗಳ ಹಿಂದೆಯೇ ಟಾಟಾ ಸಂಸ್ಥೆ ತನ್ನ ಲಾಭಾಂಶದ ಶೇಕಡಾ 50 ರಷ್ಟನ್ನು ಇಂದು ನಾವು ಗುರುತಿಸುವ ಸಾಮಾಜಿಕ ಜವಾಬ್ದಾರಿಗಾಗಿ ಮೀಸಲಿಟ್ಟಿದೆ ಎಂಬುದನ್ನು ನೆನಪಿಸಿಕೊಳ್ಳಬೇಕು. ಟಾಟಾ ಕಂಪೆನಿಗಳೆಲ್ಲಾ ಟಾಟಾ ಎಂಡ್ ಸನ್ಸ್ ಎಂಬ ಕಂಪೆನಿಯ ನಿಯಂತ್ರಣದಲ್ಲಿರುತ್ತವೆ. ಅದರ ಅಂದರೆ ಟಾಟಾ ಸನ್ಸ್ ಸಂಸ್ಥೆಯ ಶೇಕಡಾ 60ಕ್ಕೂ ಅಧಿಕ ಷೇರುಗಳು ಜಮ್‌ಷೆಡ್‌ಜಿ ಟಾಟಾ ಹಾಗೂ ದೊರಬ್ಜಿ ಟಾಟಾ ಹೆಸರುಗಳಲ್ಲಿ ಕ್ರಮವಾಗಿ 1919ಹಾಗೂ 1932ರಲ್ಲಿ ಪ್ರಾರಂಭವಾದ ಸಮಾಜ ಸೇವಾ ದತ್ತಿಗಳ ಆಸ್ತಿ. ಆ ಷೇರುಗಳ ಲಾಭ ದತ್ತಿಗಳ ಸಮಾಜಸೇವೆಗೆ ಮೀಸಲು. ಅಂದರೆ ಟಾಟಾ ಸಮೂಹ ಸಂಸ್ಥೆಗಳ ಲಾಭದ ಅರ್ಧಕ್ಕೆ ಹೆಚ್ಚು ಭಾಗವನ್ನು ಈ ದತ್ತಿ ಸಂಸ್ಥೆಗಳ ಮೂಲಕ ಸಮಾಜ ಸೇವೆಗಾಗಿ ಮೀಸಲಿಡಲಾಗಿದೆ. ಟಾಟಾ ಸಂಸ್ಥೆಗಳು ನಡೆಸುವ ಹಲವಾರು ಆಸ್ಪತ್ರೆಗಳು, ಹಲವು ಸಂಘಸಂಸ್ಥೆಗಳಿಗೆ, ಸಂಶೋಧನೆಗಳಿಗೆ ನೀಡುವ ಸಹಾಯಧನ ಎಲ್ಲವೂ ಇಂತಹ ಸಾಮಾಜಿಕ ಜವಾಬ್ದಾರಿಯ ಭಾಗವೇ ಆಗಿದೆ.

ಕಂಪೆನಿಗಳು ತಮಗೆ ಬಂದ ಲಾಭದಲ್ಲಿ ಸರ್ಕಾರಕ್ಕೆ ತೆರಿಗೆ ಕೊಡುತ್ತವೆ. ಅವೂ ಕೂಡಾ ಕಾನೂನಿನ ಪ್ರಕಾರ ಒಬ್ಬ ವ್ಯಕ್ತಿಗೆ ಸಮಾನ (Legal Person). ಕಂಪೆನಿಗಳು ಕೂಡಾ ತೆರಿಗೆ ನೀಡುವುದರಿಂದ ಇನ್ನೊಂದು ಶೇಕಡಾ 2ರ ಒತ್ತಡ ಯಾಕೆ ಎಂಬ ಒಂದು ವಾದವೂ ಇದೆ. ವ್ಯಕ್ತಿಗಳಿಗೆ ನೀವು ಇಂತಹ ದಾನಧರ್ಮ ಮಾಡುವಂತಹ ಕಾನೂನಿನ ಒತ್ತಡ ತರುತ್ತೀರೊ? ಎಂದು ಕೇಳುವವರೂ ಇದ್ದಾರೆ. ಯೋಗ್ಯ ಕಾರ್ಪೊರೇಟ್

ನಾಗರಿಕ (Corporate Citizen) ಆಗಬೇಕಾದರೆ ನಾವು ಸಮಾಜದಿಂದ ಪಡೆದದ್ದಕ್ಕೆ ಪ್ರತಿಫಲವಾಗಿ ಪುನಃ ಸಮಾಜಕ್ಕೆ ಯೋಗ್ಯವಾದ ರೀತಿಯಲ್ಲಿ ಏನನ್ನಾದರೂ ಹಿಂತಿರುಗಿಸಬೇಕು ಎನ್ನುವವರು ಈಗ ಹೆಚ್ಚಾಗಿದ್ದಾರೆ.

ಹಲವಾರು ರೀತಿಯ ಸಾಮಾಜಿಕ ಜವಾಬ್ದಾರಿಯ ಕಾರ್ಯಕ್ರಮಗಳನ್ನು ಕಂಪೆನಿಗಳು ಹಮ್ಮಿಕೊಂಡಿವೆ. ಉದಾಹರಣೆಗೆ, ಗೂಗಲ್, ಇಂಟೆಲ್ ಮೊದಲಾದ ಸಂಸ್ಥೆಗಳು ವಿದ್ಯಾರ್ಥಿಗಳಲ್ಲಿ ವಿಜ್ಞಾನ, ಗಣಿತ ಮೊದಲಾದ ಕಲಿಕೆಯನ್ನು ಪ್ರೋತ್ಸಾಹಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಇಂಟೆಲ್ ಸಂಸ್ಥೆ ಡೈರೆಕ್ಟರೇಟ್ ಆಫ್ ಟೆಕ್ನಾಲಜಿ ಜೊತೆ ಸೇರಿ ದೇಶದಾದ್ಯಂತ ವಿದ್ಯಾರ್ಥಿಗಳಿಗೆ ವಿಜ್ಞಾನ ಸ್ಪರ್ಧೆಯನ್ನು ಸಂಸ್ಥೆಯ ಖರ್ಚಿನಲ್ಲಿ ಏರ್ಪಡಿಸುತ್ತದೆ. ಅದಕ್ಕಾಗಿ ಜಿಲ್ಲಾ ಮಟ್ಟಗಳಲ್ಲಿ ವಿಜ್ಞಾನದ ಅಧ್ಯಾಪಕರುಗಳಿಗೆ ತರಬೇತಿಗಳನ್ನು ಏರ್ಪಡಿಸುತ್ತದೆ. ಜಿಲ್ಲೆ, ರಾಜ್ಯ, ರಾಷ್ಟ್ರಮಟ್ಟಗಳಿಂದ ವಿಜ್ಞಾನ ಸ್ಪರ್ಧೆಗಳ ಮೂಲಕ ಮಾಡುತ್ತದೆ. ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ಪಡೆದವರನ್ನು ಅಮೆರಿಕ ದೇಶದಲ್ಲಿ ಪ್ರತಿವರುಷ ನಡೆವ ಜಾಗತಿಕ ಮಟ್ಟದ ಸ್ಪರ್ಧೆಗೆ ಕಂಪೆನಿ ಖರ್ಚಿನಲ್ಲಿ, ಕರೆದುಕೊಂಡು ಹೋಗುತ್ತದೆ. ನಮ್ಮ ರಾಜ್ಯದಲ್ಲಿ ಮಂಡ್ಯ, ಬ್ರಹ್ಮಾವರ ಹಾಗೂ ಬೆಂಗಳೂರು, ಮೈಸೂರು, ಹುಬ್ಬಳ್ಳಿ ನಗರಗಳೂ – ಹೀಗೆ ಸಣ್ಣಪುಟ್ಟ ಊರುಗಳು ಸೇರಿ ಹಲವು ಕಡೆಗಳಿಂದ ವಿಜೇತ ವಿದ್ಯಾರ್ಥಿಗಳನ್ನು ಜಾಗತಿಕ ಸ್ಪರ್ಧೆಗೆ ಕರೆದೊಯ್ದಿದೆ.

ಅದೇ ರೀತಿ ಹಲವು ಸಂಸ್ಥೆಗಳ ವೈದ್ಯಕೀಯ, ವಿದ್ಯಾಭ್ಯಾಸ, ಪ್ರಕೃತಿ ಸಂರಕ್ಷಣೆ, ತಂತ್ರಜ್ಞಾನ ವಿಸ್ತರಣೆ ಸಂಶೋಧನೆ, ಹೊಸ ತಂತ್ರಜ್ಞಾನದ ತಿಳಿವಳಿಕೆ ಹೀಗೆ ಹಲವರು ವಿಚಾರಗಳತ್ತ ಗಮನಹರಿಸಿದೆ. ನಾರಾಯಣ ಹೃದಯಾಲಯದಂತಹ ಸಂಸ್ಥೆಗಳು ಹಲವರಿಗೆ ನೀಡುವ ಉಚಿತ ಚಿಕಿತ್ಸೆ ಇಂತಹ ಸಾಮಾಜಿಕ ಜವಾಬ್ದಾರಿಯ ಭಾಗವಾಗಿದೆ. ಇನ್ನು ಕೆಲವು ಸಂಸ್ಥೆಗಳು ಉಚಿತವಾಗಿ ನೀಡುವ ಸಮವಸ್ತ್ರ, ಕಂಪ್ಯೂಟರ್‌ಗಳು, ಪುಸ್ತಕಗಳು, ಶಾಲಾ ಕಾಲೇಜುಗಳಿಗೆ ನೀಡುವ ಪೀಠೋಪಕರಣಗಳು, ಅಂಗವಿಕಲರಿಗೆ ಮಾಡುವ ಸಹಾಯ, ಉಚಿತ ಸೇವೆಯ ಆಂಬ್ಯುಲೆನ್ಸ್ ಇತ್ಯಾದಿಗಳೆಲ್ಲಾ ಇಂತಹ ಸಾಮಾಜಿಕ ಜವಾಬ್ದಾರಿಯ ಕಾರ್ಯಗಳು ಎಂದು ಪರಿಗಣಿತವಾಗಿವೆ. ಯಾವ ಕೆಲಸಗಳು ಸಾಮಾಜಿಕ ಜವಾಬ್ದಾರಿಯ ಕಾರ್ಯಗಳೆಂದು ಸ್ವೀಕಾರವಾಗಿವೆ ಎಂಬುದನ್ನು ಕೇಂದ್ರಸರ್ಕಾರ ತನ್ನ ನಿಯಮಗಳ ಭಾಗವಾಗಿ, ಕಾನೂನಿನ ಅಡಿಯಲ್ಲಿ ಪ್ರಕಟಿಸಿದೆ. ಕೇಂದ್ರಸರ್ಕಾರ ನೀಡಿದ ಅಂತಹ ಪಟ್ಟಿ ಒಳಗೆ ಬರುವ ಕಾರ್ಯಕ್ರಮಗಳಿಗೆ ಮಾತ್ರ ಸಾಮಾಜಿಕ ಜವಾಬ್ದಾರಿಯ ಕಾರ್ಯಕ್ರಮವೆಂಬ ಸ್ಥಾನಮಾನ ಸಿಗುತ್ತದೆ.

ಆರ್ಥಿಕ ವ್ಯವಸ್ಥೆಯಲ್ಲಿ ಕಾರ್ಪೊರೇಟ್‌ಗಳ ಮೇಲುಗೈಯನ್ನು ವಿರೋಧಿಸುವ ಚಿಂತಕರು, ಕಂಪೆನಿಗಳು ಕಾನೂನು ಪ್ರಕಾರ ಮಾಡಬೇಕಾದ್ದನ್ನು ಮಾಡಿದರೆ ಸಾಕು. ಸಾಮಾಜಿಕ ಜವಾಬ್ದಾರಿಯು ತನ್ನಿಂದ ತಾನೇ ಈಡೇರುತ್ತದೆ ಎಂದು ಹೇಳುತ್ತಾರೆ. ಉದಾಹರಣೆಗೆ ಕೈಗಾರಿಕೆಗಳ ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಹೊರಗೆ ಬಿಡಬೇಕೆಂಬ ಕಾನೂನು ಇದೆ.



ಆದರೆ ಅದಕ್ಕೆ ಹಣ ಖರ್ಚಾಗುತ್ತದೆ. ಹೀಗಾಗಿ ಅನೇಕ ಕಂಪೆನಿಗಳು ಹಣ ಉಳಿತಾಯ ಮಾಡಲು ಕಲುಷಿತ ನೀರನ್ನು ಶುದ್ಧೀಕರಿಸದೆ ಹತ್ತಿರದ ಸರೋವರ ಅಥವಾ ನದಿಗೆ ಬಿಡುತ್ತಾರೆ. ಆಗ ಸಾರ್ವಜನಿಕ ಜಲಸಂಪನ್ಮೂಲ ಮಲಿನ ಆಗುತ್ತದೆ. ಹೀಗಾದ ಮೇಲೆ ಇನ್ನು ಕೆಲವು ಕಂಪೆನಿಗಳು ಹೋಗಿ ಜಲನಿರ್ಮಲೀಕರಣ ಎಂದು ಏನಾದರೂ ಒಂದು ಕಾರ್ಯಕ್ರಮವನ್ನು ಭಾನುವಾರದ ರಜಾದಿನ ಪಿಕ್‌ನಿಕ್‌ನಂತೆ ಮಾಡಿ ಮನೆಗೆ ಹೋದರೆ ಏನು ಪ್ರಯೋಜನ ಎಂದು ಅಂತಹ ವಿಚಾರವಾದಿಗಳು ಕೇಳುತ್ತಾರೆ.

ಬ್ರಿಟಿಷರ ಆಡಳಿತ ಕಾಲದಿಂದಲೇ ಜಾರಿಗೆ ಬಂದ ಹಲವಾರು ಕಾನೂನುಗಳೂ ಸೇರಿಕೊಂಡು ನಮ್ಮ ದೇಶದಲ್ಲಿ ಕೇಂದ್ರ, ರಾಜ್ಯ ಹಾಗೂ ನಗರ ಸಭೆ – ಹೀಗೆ ಮೂರು ಹಂತಗಳಲ್ಲಿ ಕಾನೂನುಗಳಿದ್ದಾವೆ. ಅವುಗಳಲ್ಲಿ ಹಲವು ಕಾನೂನುಗಳು ಪುಸ್ತಕಗಳಲ್ಲಿ ಮಾತ್ರ ಇವೆ. ಅವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದಿಲ್ಲ. ಉದಾಹರಣೆಗೆ ಸ್ಥಳೀಯರಿಗೆ ಉದ್ಯೋಗ ಅವಕಾಶ, ಇನ್ನು ಹಲವು ಕಾನೂನುಗಳು ಸಾಮಾಜಿಕ ಜವಾಬ್ದಾರಿಯ ಭಾಗ. ಉದಾಹರಣೆಗೆ ಪಟ್ಟಣಗಳಲ್ಲಿ ದೊಡ್ಡ ಕಟ್ಟಡ ಕಟ್ಟುವಾಗ ತಳಮನೆ (Basement)ಯನ್ನು ವಾಹನಗಳ ನಿಲುಗಡೆಗೆ ನೀಡಬೇಕೆಂಬ ಕಾನೂನು ಇದೆ. ಆದರೆ ಹಲವು ಸಂಸ್ಥೆಗಳು ಬೇಸ್‌ಮೆಂಟ್‌ನಲ್ಲಿ ವಾಹನ ಪಾರ್ಕಿಂಗ್‌ಗೆ ಅವಕಾಶ ನೀಡದೆ ಅವನ್ನು ಇತರ ವ್ಯಾಪಾರಿಗಳಿಗೆ ಬಾಡಿಗೆಗೆ ನೀಡಿವೆ. ಆಗ ರಸ್ತೆ ಬದಿಯಲ್ಲಿ ವಾಹನ ನಿಲುಗಡೆ ಮಾಡಬೇಕಾಗುತ್ತದೆ. ರಸ್ತೆ ಸಂಚಾರ ಇಕ್ಕಟ್ಟಾಗುತ್ತದೆ. ಹೀಗಾದಾಗ ಇನ್ನು ಕೆಲವು ಸಂಸ್ಥೆಗಳು ಸರಾಗ ವಾಹನ ಚಲನೆಗೆ ಉಚಿತ ಸಿಗ್ನಲ್ ಲೈಟ್‌ಗಳನ್ನು ನೀಡುವ ಮೂಲಕ ಸಾಮಾಜಿಕ ಜವಾಬ್ದಾರಿಯನ್ನು ನೆರವೇರಿಸುತ್ತೇವೆ ಎನ್ನುತ್ತಾರೆ. ಇಂತಹ ವೈರುಧ್ಯಗಳು ಇರಕೂಡದು. ಹಾಗಾಗಿ ಮೊದಲಿಗೆ ಎಲ್ಲರೂ ಕಾನೂನನ್ನು ಸಮಂಜಸವಾಗಿ ಪಾಲನೆ ಮಾಡಿ ಎಂದು ಹಲವು ಸಕ್ರಿಯ ಕಾರ್ಯಕರ್ತರು ಹೇಳುತ್ತಾರೆ.

ಇದು ಅದರ ಒಂದು ಮುಖ. ಆದರೆ ಸಾಮಾಜಿಕ ಜವಾಬ್ದಾರಿಯ ಕಾರ್ಯಕ್ರಮ ಹಾಗೂ ಕಾನೂನು ಸಾರ್ವಜನಿಕರಲ್ಲಿ ಹಾಗೂ ಕಾರ್ಪೊರೇಟ್ ಸಂಸ್ಥೆಗಳಲ್ಲಿ ನಮ್ಮ ಸಾಮಾಜಿಕ ಜವಾಬ್ದಾರಿ ಏನು? ಎಂಬುದನ್ನು ಚಿಂತಿಸಲು ಕಾರಣವಾಗಿದೆ. ನನ್ನ ಗಮನಕ್ಕೆ ಬಂದಿರುವಂತೆ, ಈ ತನಕ ವೈಯಕ್ತಿಕ ಇಚ್ಛೆಯ ಮೇಲೆ ನಡೆಯುತ್ತಿದ್ದ ಸಾಮಾಜಿಕ ಜವಾಬ್ದಾರಿಯ ಕಾರ್ಯಕ್ರಮಗಳಿಗೆ ಒಂದು ಸಾಂಸ್ಥಿಕ ರೂಪ ನೀಡಲು ಹಲವು ಕಂಪೆನಿಗಳು ಕ್ರಮ ಕೈಗೊಂಡಿವೆ.

ಸಂಸ್ಥೆಗಳು ದೊಡ್ಡದಾಗುತ್ತಾ ಹೋದಂತೆ ವ್ಯಕ್ತಿಗಳ ಅಥವಾ ಅಧಿಕಾರಿಗಳ ವೈಯಕ್ತಿಕ ಇಷ್ಟದ ಮೇಲೆ ಸಾಮಾಜಿಕ ಕಾರ್ಯಕ್ರಮ ನಡೆಸುವುದರಿಂದ ನಿರ್ದಿಷ್ಟವಾದ ಹಾಗೂ ವ್ಯವಸ್ಥಿತವಾದ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸಾಧ್ಯವಾಗುವುದಿಲ್ಲ. ಸಮಾಜದಲ್ಲಿ ಸಾಮಾಜಿಕ ಜವಾಬ್ದಾರಿಯ ಕಾರ್ಯಕ್ರಮಗಳು ಉತ್ತಮ ಫಲಿತಾಂಶ ಬೀರಲು ವ್ಯವಸ್ಥಿತವಾದ, ಕ್ರಮಬದ್ಧ ಚಿಂತನೆಗಳಿಂದ ಕೂಡಿದ ಯೋಜನೆಗಳು ಬೇಕಾಗುತ್ತವೆ. ಅಂತಹ ಯೋಜನಾಬದ್ಧ

ವ್ಯವಸ್ಥಿತ ಚಿಂತನೆಗೆ ಸಿಎಸ್‌ಆರ್ ಕಾನೂನು ಅನುವು ಮಾಡಿಕೊಡುತ್ತದೆ.

ಇದರ ಜೊತೆ, ಕೊನೆಯಲ್ಲಿ ಇನ್ನೊಂದು ಮುಖ್ಯ ಮಾತು ಹೇಳಬೇಕಾಗಿದೆ. ಇಂದು ಗೌರವಾನ್ವಿತ ಕಾರ್ಪೊರೇಟ್‌ಗಳು ಸಾಮಾಜಿಕ ಜವಾಬ್ದಾರಿ ನಿತ್ಯ ನಡೆಯಬೇಕಾದ ಕಾರ್ಯಕ್ರಮ ಎಂದು ಯೋಚಿಸುತ್ತವೆ. ಸಾಮಾಜಿಕ ಜವಾಬ್ದಾರಿ ಎಂಬುದು ಕಂಪೆನಿಯು ಲಾಭ ಮಾಡುವಾಗ ಮಾತ್ರ ನಡೆಸುವ ಕಾರ್ಯಕ್ರಮವಲ್ಲ. ಅದು ಕಂಪೆನಿಗಳ ಲಾಭ ಕಡಿಮೆಯಾದಾಗ ಕೆಲವೊಮ್ಮೆ ನಷ್ಟವೇ ಸಂಭವಿಸಿರುವಾಗಲೂ ನಡೆಯಬೇಕಾದ ಕಾರ್ಯಕ್ರಮ ಎಂದು ಚಿಂತಿಸುತ್ತವೆ.

ಅಂತಹ ನಿತ್ಯ ನಡೆಸುವ ಸಾಮಾಜಿಕ ಜವಾಬ್ದಾರಿಯ ಬದ್ಧತೆಗೆ ಈ ಕಾರ್ಯಕ್ರಮಗಳನ್ನು ಅವುಗಳ ವ್ಯಾಪಾರ ವಹಿವಾಟಿನ ಭಾಗವನ್ನಾಗಿ ಮಾರ್ಪಡಿಸಬೇಕು. ನಿತ್ಯದ ಅನಿವಾರ್ಯ ಕೆಲಸಗಳ ಹಾಗೆ ಅವು ಕಂಪೆನಿ ಕಾರ್ಯಗಳ





ಭಾಗವಾಗಿರಬೇಕು. ಕಾರ್ಮಿಕರಿಗೆ ಸಂಬಳ ನೀಡುವುದು ಎಷ್ಟು ಅನಿವಾರ್ಯವೋ ಅಷ್ಟು ಅನಿವಾರ್ಯವಾಗಿ ಅವು ನಡೆಯಬೇಕು ಎಂಬುದಾಗಿ ಕಂಪೆನಿಗಳ ಹಲವು ಮುಖ್ಯಸ್ಥರು ಹೇಳಿದ್ದಾರೆ. ಹಾಗಾಗಿ ಅಂತಹ ಕಂಪೆನಿಗಳು ವ್ಯಾಪಾರ ವಹಿವಾಟುಗಳ ಜೊತೆಗೆ ಸಾಮಾಜಿಕ ಜವಾಬ್ದಾರಿಯ ಕಾರ್ಯಕ್ರಮಗಳನ್ನು ಜೋಡಿಸಬಯಸುತ್ತವೆ.


ಒಟ್ಟಿನಲ್ಲಿ ಸಾಮಾಜಿಕ ಜವಾಬ್ದಾರಿಯ ಅರಿವು ಸಾರ್ವಜನಿಕರಲ್ಲಿ ಹಾಗೂ ಸಂಘಸಂಸ್ಥೆಗಳಲ್ಲಿ ಈಗ ಹೆಚ್ಚಾಗುತ್ತಿದೆ. ಕಂಪೆನಿಗಳಿಗೆ ಇಂತಹ ಜವಾಬ್ದಾರಿಗಳನ್ನು ನಿರ್ವಹಿಸಲು ಸಾರ್ವಜನಿಕರ, ಸಂಘಸಂಸ್ಥೆಗಳ, ಎಸ್‌ಜಿಟಿ ಸಂಸ್ಥೆಗಳ ಸಹಕಾರ ಅನಿವಾರ್ಯವಾಗುತ್ತದೆ.


ಸಾಮಾಜಿಕ ಜವಾಬ್ದಾರಿ ಎಂದರೆ ಕೇವಲ ಚೆಕ್ ಬರೆದು ಹಣ ದಾನ ನೀಡುವ ಕೆಲಸವಲ್ಲ. ಅದು ಸಂಸ್ಥೆಗಳು ಸಾಮಾಜಿಕವಾಗಿ ಭಾಗವಹಿಸಿ ನಾವು ಬದುಕುವ ಸಮಾಜವನ್ನು ನೆರೆಹೊರೆಯನ್ನೂ ಅರಿಯುವ ಕೆಲಸವೂ ಹೌದು ಎಂಬ ತಿಳಿವಳಿಕೆ ಹೆಚ್ಚಾಗುತ್ತಿದೆ. ಪರ ಹಾಗೂ ವಿರೋಧಗಳ ಚರ್ಚೆ ಪ್ರಜಾಪ್ರಭುತ್ವದಲ್ಲಿ ಸಹಜ ಹಾಗೂ ಇರಬೇಕಾದುದೇ ಆಗಿದೆ. ಈ ಹಿನ್ನೆಲೆಯಲ್ಲಿ ಸಿಎಸ್‌ಆರ್ ಕಾರ್ಯಕ್ರಮಗಳು ಹಾಗೂ ಕಾನೂ ಸಹ ಬಾಳ್ವೆಯ ಸಹಕಾರ್ಯಗಳ ಅನೇಕ ಸಾಧ್ಯತೆಗಳಿಗೆ ಅವಕಾಶ ನೀಡಿದೆ. ನಮ್ಮ ಆರ್ಥಿಕ ವ್ಯವಸ್ಥೆ ಕಾರ್ಪೊರೇಟ್ ಸಂಸ್ಥೆಗಳ ಮೂಲಕ ಇಂದು ಬೆಳೆಯುತ್ತಿರುವುದರಿಂದ ಇಂತಹ ಸಾರ್ವಜನಿಕ ಸಹಯೋಗದ ಕೆಲಸಗಳು ಸ್ವಾಗತಾರ್ಹವಾಗಿವೆ. ❑


JEWELS FROM PUBLICATIONS DIVISION







For further Details Please Contact:
Yojana (Kannada)
1st Floor, 'F' Wing, Kendriya Sadana, Koramangala,
BENGALURU - 560 034
Ph.: 080-25537244 E-mail : kannada-yojana@gov.in


PUBLICATIONS DIVISION
MINISTRY OF INFORMATION & BROADCASTING
GOVERNMENT OF INDIA

e-mail : dpd@sb.nic.in, dpd@hub.nic.in
website : publicationsdivision.nic.in

ಜ್ಞಾನಾರ್ಜನೆಗಾಗಿ...

# ಯೋಜನಾ - ಕನ್ನಡ ಮಾಸ ಪತ್ರಿಕೆ

## ಚಂದಾದಾರರಾಗಿ




### ಚಂದಾ ವಿವರ

| | |
|---|---|
| ಒಂದು ವರ್ಷಕ್ಕೆ | ರೂ. 230/- |
| ಎರಡು ವರ್ಷಗಳಿಗೆ | ರೂ. 430/- |
| ಮೂರು ವರ್ಷಗಳಿಗೆ | ರೂ. 610/- |

**ಯೋಜನಾಕ್ಕೆ ಚಂದಾದಾರರಾಗಲು ಮೂರು ಆಯ್ಕೆಗಳಿವೆ**

### 1. ಮನಿ ಆರ್ಡರ್-ಎಂ ಓ ಮೂಲಕ ಚಂದಾ

ಚಂದಾದಾರರು ಎಂ.ಓ. ಮೂಲಕ ಚಂದಾ ಕಳುಹಿಸಬಹುದು. ಎಂ.ಓ. ಕಳುಹಿಸಿದ ಒಂದು ವಾರದ ಒಳಗೆ ನಮ್ಮ ಕಚೇರಿಯನ್ನು ಸಂಪರ್ಕಿಸಿ ನಿಮ್ಮ ವಿಳಾಸ-ವಿವರಗಳನ್ನು ದೃಢೀಕರಿಸಿಕೊಳ್ಳಬೇಕಾಗಿ ಕೋರಲಾಗಿದೆ.

### 2. ಆನ್-ಲೈನ್ ಚಂದಾ

ಈಗ ಆನ್-ಲೈನ್ ಮೂಲಕವೂ ಯೋಜನಾ ಕನ್ನಡ ಮಾಸಪತ್ರಿಕೆಗೆ ಚಂದಾದಾರರಾಗಬಹುದಾಗಿದೆ. ಇದಕ್ಕಾಗಿ ಲಾಗ್-ಆನ್ ಆಗಬೇಕಾದ ವೆಬ್‌ಸೈಟ್ ವಿವರ ಈ ಮುಂದಿನಂತಿದೆ.

**http://publicationsdivision.nic.in/, bharatkosh.gov.in**

### 3. ಡಿಮಾಂಡ್ ಡ್ರಾಫ್ಟ್

ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ಚಂದಾದಾರರು ತಮ್ಮ ವಿಳಾಸ ವಿವರಗಳೊಂದಿಗೆ ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.

ವಿಳಾಸ

**ಯೋಜನಾ - ಕನ್ನಡ**

ಮೊದಲನೆ ಅಂತಸ್ತು,
'ಎಫ್' ವಿಂಗ್, ಕೇಂದ್ರೀಯ ಸದನ,
ಕೋರಮಂಗಲ, ಬೆಂಗಳೂರು - 560 034.

✆ : 25537244

e-mail : kannada-yojana@gov.in

ಪತ್ರಿಕೆ ಸರಿಯಾಗಿ ತಲುಪಲು ಚಂದಾದಾರರು, ಅಂಚೆ ಪಿನ್‌ಕೋಡ್ ಒಳಗೊಂಡ ತಮ್ಮ ಪೂರ್ಣ ವಿಳಾಸ ಒದಗಿಸಬೇಕು.

# ವಾರ್ತಾ ವಿಶೇಷ

ಕೇಂದ್ರ ಸರ್ಕಾರ ಬೆಳೆ ಸಾಲದ ಮೇಲೆ ಶೇಕಡ 2ರ ಬಡ್ಡಿ ವಿನಾಯ್ತಿ ಪ್ರಕಟಿಸಿದ್ದು, ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಮಾಡಿದವರಿಗೆ ಹೆಚ್ಚುವರಿಯಾಗಿ ಶೇಕಡ




3ರ ವಿನಾಯ್ತಿಯನ್ನು ಘೋಷಿಸಿದೆ. 3 ಲಕ್ಷ ರೂಪಾಯಿವರೆಗಿನ ಅಲ್ಪಾವಧಿ ಸಾಲಕ್ಕೆ ಶೇಕಡ 4ರ ಬಡ್ಡಿದರ ಅನ್ವಯವಾಗಲಿದೆ. ಇದರಿಂದ ಸರ್ಕಾರಕ್ಕೆ 20 ಸಾವಿರದ 339 ಕೋಟಿ ರೂಪಾಯಿ ಹೆಚ್ಚುವರಿ ವೆಚ್ಚ ಪ್ರಸ್ತುತ ಹಣಕಾಸು ವರ್ಷದಲ್ಲಿ ಬೀಳಲಿದೆ. ವಿವಿಧ ರಾಜ್ಯಗಳಲ್ಲಿ ರೈತರು ಸಾಲಮನ್ನಾ ಮಾಡುವಂತೆ ತೀವ್ರ ಹೋರಾಟ ನಡೆಸುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಪರಿಹಾರ ಸೂತ್ರ ಪ್ರಕಟಿಸಿದೆ. ರಾಷ್ಟ್ರೀಕೃತ, ಖಾಸಗಿ, ಸಹಕಾರಿ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಂದ ಪಡೆದ ಬೆಳೆ ಸೌಲಭ್ಯ ಈ ಸೌಲಭ್ಯ ದೊರೆಯಲಿದೆ. ರೂ. 3 ಲಕ್ಷದವರೆಗಿನ ಬೆಳೆಸಾಲಕ್ಕೆ ಈ ಸಬ್ಸಿಡಿ ದೊರೆಯಲಿದ್ದು, ಒಂದು ವರ್ಷ ಈ ಯೋಜನೆ ಜಾರಿಯಲ್ಲಿರುತ್ತದೆ.

* ಸಕಾಲದಲ್ಲಿ ಸಾಲ ಮರು ಪಾವತಿಗೆ ಶೇ. 3 ರಷ್ಟು ಹೆಚ್ಚುವರಿ ರಿಯಾಯತಿ * ಬೆಳೆ ಸಾಲ ಪಡೆದ ಎಲ್ಲರಿಗೂ ಶೇ. 2 ರಷ್ಟು ಸಬ್ಸಿಡಿ. * ಒಟ್ಟು ಗರಿಷ್ಠ ಸಬ್ಸಿಡಿ ಶೇ. 5. * ಚಾಲ್ತಿಯಲ್ಲಿರುವ ಬಡ್ಡಿದರ ಶೇ. 9 * ಸಬ್ಸಿಡಿ ನಂತರ ರೈತರು ಪಾವತಿಸಬೇಕಾದ ಬಡ್ಡಿ ಶೇ. 4.

ಅಂಕಿ ಅಂಶ : * ರೂ. 20,339 ಕೋಟಿ ಸರ್ಕಾರದ ಬೊಕ್ಕಸದ ಮೇಲೆ ಬೀಳುವ ಹೊರೆ. * 1 ವರ್ಷ (2017–18) ಸಬ್ಸಿಡಿ ಯೋಜನೆ ಅವಧಿ. * ರೂ 3 ಲಕ್ಷ ಗರಿಷ್ಠ ಅಲ್ಪಾವಧಿ ಬೆಳೆಸಾಲದ ಮೊತ್ತ. ಬೆಳೆಸಾಲ ರೂ. 10 ಲಕ್ಷ ಕೋಟಿ : 2016–17 ರಲ್ಲಿ ರೂ. 9ಲಕ್ಷ ಕೋಟಿಯಷ್ಟಿದ್ದ ಬೆಳೆಸಾಲ 2017–18ರಲ್ಲಿ ರೂ. 10 ಲಕ್ಷ ಕೋಟಿಗೆ ಏರುವ ಸಾಧ್ಯತೆ ಇದೆ.

* * *

ರೈತರು ಸಹಕಾರಿ ಸಂಸ್ಥೆಗಳಲ್ಲಿ ಪಡೆದ ರೂ. 50 ಸಾವಿರವರೆಗಿನ ಅಲ್ಪಾವಧಿ ಕೃಷಿ ಸಾಲವನ್ನು ಮನ್ನಾ ಮಾಡುವುದಾಗಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ವಿಧಾನ ಸಭೆಯಲ್ಲಿ ಪ್ರಕಟಿಸಿದ್ದಾರೆ. ಇಲಾಖಾವಾರು ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಉತ್ತರ ನೀಡಿದ ಅವರು, ರೂ. 25 ಸಾವಿರದಿಂದ ರೂ. 3 ಲಕ್ಷದವರೆಗೆ ರೈತರು ಬಡ್ಡಿರಹಿತ ಅಲ್ಪಾವಧಿ ಸಾಲ ಪಡೆದಿದ್ದಾರೆ. ರೂ. 3 ಲಕ್ಷದ ಮೇಲೆ ಶೇ. 3ರ ಬಡ್ಡಿದರದಲ್ಲಿ ಸಾಲ ನೀಡಲಾಗಿದೆ. ಸಾಲದ ಮೊತ್ತ ಎಷ್ಟೇ ಇದ್ದರೂ ಅವರು ಪಡೆದ ಸಾಲದಲ್ಲಿ ರೂ 50 ಸಾವಿರದವರೆಗೆ ಮಾತ್ರ ಮನ್ನಾ ಮಾಡಲಾಗುವುದು' ಎಂದು ತಿಳಿಸಿದರು.



ಮುಖ್ಯಾಂಶಗಳು : * ಜೂನ್ ತಿಂಗಳು 20 ರವರೆಗೆ ಬಾಕಿ ಇರುವ ಸಾಲ ಮನ್ನಾ. * ಮಧ್ಯಮಾವಧಿ, ದೀರ್ಘಾವಧಿ ಸಾಲಕ್ಕೆ ಅನ್ವಯ ಇಲ್ಲ. * ಸಹಕಾರಿ ಸಂಸ್ಥೆಗಳ ಕೃಷಿ ಸಾಲ ಮಾತ್ರ ಮನ್ನಾ.

ಅಂಕಿ ಅಂಶ : 22 ಲಕ್ಷ ಸಾಲ ಮನ್ನಾ ಫಲಾನುಭವಿಗಳು. * ರೂ. 10,736 ಕೋಟಿ ಸಹಕಾರ ಸಂಸ್ಥೆಗಳಲ್ಲಿನ ಅಲ್ಪಾವಧಿ ಸಾಲದ ಮೊತ್ತ. * ರೂ. 8,165 ಕೋಟಿ ಸಾಲಮನ್ನಾ ವೆಚ್ಚ.

* * *

ವಿದೇಶಿ ಸಂಸ್ಥೆಗಳಿಂದ ಬ್ಯಾಂಕ್ ಮೂಲಕ ಸಹಾಯಧನ, ನೆರವು ಪಡೆಯುತ್ತಿರುವ 3,765 ಸರ್ಕಾರೇತರ ಸಂಸ್ಥೆಗಳಿಗೆ ತಮ್ಮ ಸಂಪೂರ್ಣ ದಾಖಲೆಗಳನ್ನು ಗೃಹ ಸಚಿವಾಲಯಕ್ಕೆ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ. ಈ ಕುರಿತು ಸುತ್ತೋಲೆ ಹೊರಡಿಸಿರುವ ಕೇಂದ್ರ ಸರ್ಕಾರ ಎನ್‌ಜಿಓ ಸಂಸ್ಥೆಗಳು ನೊಂದಣಿ ಮಾಡಿ ವಿದೇಶಿ ನೆರವು ನಿಯಂತ್ರಣ ಕಾಯ್ದೆ ಉಲ್ಲಂಘನೆ ಮಾಡಿರುವ ಹಿನ್ನೆಲೆಯಲ್ಲಿ ದಂಡವನ್ನು ವಿಧಿಸುವ ಬಗ್ಗೆಯೂ ನೋಟೀಸಿನಲ್ಲಿ ಪ್ರಸ್ತಾಪಿಸಲಾಗಿದೆ. ಹಲವಾರು ಎನ್‌ಜಿಓ ಸಂಸ್ಥೆಗಳು ಉಲ್ಲಂಘನೆ ಮಾಡಿರುವ ಜತೆಗೆ ಹಣಕಾಸು ದುರ್ಬಳಕೆ ನಿಯಮಗಳನ್ನು ಮೀರಿರುವ ಅಂಶಗಳನ್ನು ಪರಿಗಣಿಸಿ ವಿವರವನ್ನು ಗೃಹ ಸಚಿವಾಲಯಕ್ಕೆ ನೀಡುವಂತೆ ಕೇಂದ್ರ ಸರ್ಕಾರ ಸೂಚಿಸಿದೆ.

* * *

ಸಂಶಯಾಸ್ಪದ ಹಣಕಾಸು ವ್ಯವಹಾರಗಳಲ್ಲಿ ಭಾಗಿಯಾಗಿರುವ ಹಿನ್ನೆಲೆಯಲ್ಲಿ ನೋಟು ಅಮಾನ್ಯತೆ ನಂತರ 3 ಲಕ್ಷ ಕಂಪನಿಗಳು ಪರೀಕ್ಷೆಗೆ ಒಳಪಟ್ಟಿವೆ ಎಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ತಿಳಿಸಿದ್ದಾರೆ. ಅವರು ದೆಹಲಿಯಲ್ಲಿ ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆಯ ಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿ, ರಿಜಿಸ್ಟ್ರಾರ್ ಆಫ್ ಕಂಪನಿಗಳಿಂದ ಒಂದು ಲಕ್ಷಕ್ಕೂ ಅಧಿಕ ಕಂಪನಿಗಳ ನೊಂದಣಿಗಳನ್ನು ರದ್ದುಗೊಳಿಸಲಾಗಿದೆ. ದೊಡ್ಡ ಸಂಖ್ಯೆಯಲ್ಲಿ ಶೆಲ್ ಕಂಪನಿಗಳು ಅಕ್ರಮವೆಂದು ಗುರುತಿಸಲಾಗಿದ್ದು, ಇವುಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು. ಸರ್ಕಾರ ಭ್ರಷ್ಟಾಚಾರವನ್ನು ನಿಗ್ರಹಿಸಲು ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ. ಸ್ವಿಸ್ ಬ್ಯಾಂಕಿನಲ್ಲಿ




ಭಾರತೀಯರು ಇಟ್ಟಿರುವ ಕಪ್ಪು ಹಣದ ಮೊತ್ತ ಕಳೆದ 3 ವರ್ಷಗಳಲ್ಲಿ ಗಣನೀಯ ಇಳಿಕೆಯಾಗಿರುವುದು ಉತ್ತಮ ಬೆಳವಣಿಗೆ ಎಂದು ಹೇಳಿದರು. ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಲೆಕ್ಕ ಪರಿಶೋಧಕರ ಪಾತ್ರ ಪ್ರಮುಖವಾಗಿದೆ. ಗ್ರಾಹಕರಿಗೆ ತೆರಿಗೆಗಳನ್ನು ಪ್ರಾಮಾಣಿಕವಾಗಿ ಪಾವತಿಸುವಂತೆ ಸಲಹೆ ನೀಡಬೇಕು ಎಂದು ಹೇಳಿದರು. ಲೆಕ್ಕ ಪರಿಶೋಧಕರ ಸಂಸ್ಥೆಯ ಸ್ಥಾಪನಾ ದಿನ, ಸರಕು ಮತ್ತು ಸೇವಾ ತೆರಿಗೆಯ ಆರಂಭವು ಒಟ್ಟೊಟ್ಟಿಗೆ ಆಗಿರುವುದು

ಸಂತಸದ ವಿಚಾರ. ಜಿಎಸ್‌ಟಿಯನ್ನು ಜಾರಿಗೆ ತಂದಿರುವುದರ ಉದ್ದೇಶ ಕಪ್ಪುಹಣ ಚಲಾವಣೆಯನ್ನು ತಡೆಗಟ್ಟುವುದಾಗಿದೆ ಎಂದು ಪ್ರಧಾನಿ ಹೇಳಿದರು. ಕೇಂದ್ರ ಸರ್ಕಾರ ತೆರಿಗೆ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ತರಲೆಂದು ಆನ್‌ಲೈನ್ ಮೂಲಕ ಪಾವತಿ ಮಾಡುವ ವಿಧಾನ ಅದಕ್ಕೆ ಪೂರಕವಾಗಿದೆ ಎಂದು ಇದಕ್ಕೂ ಮುನ್ನ ಮಾತನಾಡಿದ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ ಹೇಳಿದರು.




ಪ್ಯಾನ್‌ಕಾರ್ಡ್‌ನೊಂದಿಗೆ ಆಧಾರ್ ಕಾರ್ಡ್ ಸಂಖ್ಯೆ ಜೋಡಿಸಲು ತೆರಿಗೆ ಪಾವತಿದಾರರಿಗಾಗಿ ಆದಾಯ ತೆರಿಗೆ ಇಲಾಖೆ ಒಂದು ಪುಟದ ಅರ್ಜಿ ನಮೂನೆಯನ್ನು ಬಿಡುಗಡೆ ಮಾಡಿದೆ. ಇದಲ್ಲದೇ ಆನ್ ಲೈನ್ ಮತ್ತು ಎಸ್‌ಎಂಎಸ್ ಸೌಲಭ್ಯ ಮೂಲಕವೂ ಪ್ಯಾನ್‌ನೊಂದಿಗೆ ಆಧಾರ್ ಸಂಖ್ಯೆ ಜೋಡಣೆ ಮಾಡಬಹುದಾಗಿದೆ. ಅರ್ಜಿ ನಮೂನೆಯಲ್ಲಿ ನಮೂದಿಸಿರುವ ಪ್ಯಾನ್ ಸಂಖ್ಯೆ ಹೊರತಾಗಿ ಮತ್ತೊಂದು ಪ್ಯಾನ್‌ಕಾರ್ಡ್ ಹೊಂದಿಲ್ಲವೆಂದು ದೃಢಪಡಿಸಬೇಕಾಗುತ್ತದೆ. ಅರ್ಜಿ ನಮೂನೆಯು ಕಾಗದ ಮೂಲಕ ವಿವರ ಸಲ್ಲಿಸುವ ಮಾಧ್ಯಮವಷ್ಟೇ ಎಂದು ತಿಳಿಸಲಾಗಿದೆ. ಆಧಾರ್ ಸಂಖ್ಯೆ ಹೊಂದಿಲ್ಲದ ತೆರಿಗೆ ಪಾವತಿದಾರರು ಆದಾಯ ತೆರಿಗೆ ವಿವರ ಸಲ್ಲಿಸಲು ಸಾಧ್ಯವಿಲ್ಲ ಎಂದು ಆದಾಯ ತೆರಿಗೆ ಇಲಾಖೆ ಈಗಾಗಲೇ ಸ್ಪಷ್ಟ ಪಡಿಸಿದೆ. ಪ್ಯಾನ್ ದತ್ತಾಂಶದೊಂದಿಗೆ ಇದುವರೆಗೆ 2 ಕೋಟಿ 62 ಲಕ್ಷಕ್ಕೂ ಆಧಾರ್ ಸಂಖ್ಯೆಗಳನ್ನು ಇಲಾಖೆ ಜೋಡಣೆ ಮಾಡಿದೆ.

* * *

ಸರಕು ಮತ್ತು ಸೇವಾ ತೆರಿಗೆ, ಜಿಎಸ್‌ಟಿ ಅನುಷ್ಠಾನ ಹಿನ್ನೆಲೆಯಲ್ಲಿ ಮುಂದಿನ ಮೂರು ತಿಂಗಳಲ್ಲಿ 1 ಲಕ್ಷ




ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಹೈದಾರಾಬಾದ್‌ನಲ್ಲಿ ಕೇಂದ್ರ ಕಾರ್ಮಿಕ ಸಚಿವ ಶ್ರೀ ಬಂಡಾರು ದತ್ತಾತ್ರೇಯ ತಿಳಿಸಿದ್ದಾರೆ. ಜಿಎಸ್‌ಟಿ ಅನುಷ್ಠಾನದಿಂದ ಆರ್ಥಿಕತೆಗೆ ಲಾಭವಾಗಲಿದ್ದು, ಲೆಕ್ಕ ಪರಿಶೋಧನೆ ವಲಯ ಒಂದರಲ್ಲೇ 60 ಸಾವಿರ ಉದ್ಯೋಗಗಳು ಸೃಷ್ಟಿಯಾಗುವ ಸಾಧ್ಯತೆ ಇದೆ ಎಂದು ಹೇಳಿದರು. ಹೊಸ ತೆರಿಗೆ ಪರ್ವ ಆರಂಭ, ಐತಿಹಾಸಿಕ ಎಂದು ಬಣ್ಣಿಸಿದ ಸಚಿವರು ಗಡಿ ಚೆಕ್‌ಪೋಸ್ಟ್‌ಗಳನ್ನು ರದ್ದು ಮಾಡಿರುವುದರಿಂದ ಸರಕುಗಳ ಅಂತಾರಾಜ್ಯ ಸಾಗಾಟ ಚುರುಕಾಗಲಿದೆ. ಇದರಿಂದ ಜಿಡಿಪಿ ಸದ್ಯದ ಶೇಕಡ 7 ರಿಂದ ಶೇಕಡ 9 ರಷ್ಟು ಏರಿಕೆಯಾಗಲಿದೆ. ಅಗತ್ಯ ವಸ್ತುಗಳ ದರ ಇಳಿಕೆಯಾಗಿ ಹಣದುಬ್ಬರ ನಿಯಂತ್ರಣಕ್ಕೆ ಬರಲು ಸಹ ಜಿಎಸ್‌ಟಿ ನೆರವಾಗಲಿದೆ ಎಂದು ಅವರು ಹೇಳಿದರು.

ಖಾಸಗಿಯವರು ನಡೆಸುತ್ತಿರುವ ಆಧಾರ್ ನೊಂದಣಿ ಕೇಂದ್ರಗಳು ಸೇರಿ ಎಲ್ಲ ನೊಂದಣಿ ಕೇಂದ್ರಗಳನ್ನು ಸರ್ಕಾರಿ ಅಥವಾ ಸ್ಥಳೀಯ ಸಂಸ್ಥೆಗಳ ಕಚೇರಿಗಳ ಆವರಣಕ್ಕೆ ಸ್ಥಳಾಂತರಿಸಬೇಕು ಎಂದು ರಾಜ್ಯ ಸರ್ಕಾರಗಳಿಗೆ ವಿಶಿಷ್ಟ ಗುರುತು ಚೀಟಿ ಪ್ರಾಧಿಕಾರ (ಯುಐಡಿಎಐ) ಸೂಚಿಸಿದೆ. ಈ ಸೆಪ್ಟೆಂಬರ್ ಒಳಗೆ ಸ್ಥಳಾಂತರ ಪೂರ್ಣಗೊಳಿಸುವಂತೆ ತಿಳಿಸಲಾಗಿದೆ. ದೇಶದಾದ್ಯಂತ 25 ಸಾವಿರ ಆಧಾರ್ ನೊಂದಣಿ ಕೇಂದ್ರಗಳು ನೇರವಾಗಿ ಸರ್ಕಾರದ ಸುಪರ್ದಿಗೆ ಬರುವಂತೆ ನೋಡಿಕೊಳ್ಳಲು ಸೂಚಿಸಲಾಗಿದೆ. ನೊಂದಣಿ ಮತ್ತು ಪರಿಷ್ಕರಣೆಗೆ ಖಾಸಗಿ ಸಂಸ್ಥೆಗಳು ಹೆಚ್ಚಿನ ಶುಲ್ಕ ವಿಧಿಸುತ್ತಿರುವುದನ್ನು ತಡೆಯುವ ಉದ್ದೇಶದಿಂದ ಪ್ರಾಧಿಕಾರ ಈ ಕ್ರಮ ತೆಗೆದುಕೊಂಡಿದೆ. ಖಾಸಗಿ ನೊಂದಣಿ ಕೇಂದ್ರಗಳ ಸ್ಥಳಾಂತರಕ್ಕಾಗಿ ಸರ್ಕಾರಿ ಕಟ್ಟಡಗಳಲ್ಲಿ ಜುಲೈ 31 ರೊಳಗೆ ಸ್ಥಳ ಗುರುತಿಸುವಂತೆ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀ ಅಜಯ್ ಭೂಷಣ್ ಹೇಳಿದ್ದಾರೆ. ನೊಂದಣಿ ಕೇಂದ್ರಗಳು ಸರ್ಕಾರಿ ಕಚೇರಿಗಳಿಗೆ ಸ್ಥಳಾಂತರವಾದರೆ ಜನರಿಗೆ ಹೆಚ್ಚು ಅನುಕೂಲವಾಗುತ್ತದೆ ಎಂಬ ನಿಲುವನ್ನು ಯುಐಡಿಎಐ ಹೊಂದಿದೆ. ಖಾಸಗಿ ನೊಂದಣಿ ಕೇಂದ್ರಗಳನ್ನು ಪತ್ತೆ ಮಾಡುವುದು ಕಷ್ಟವಾಗುತ್ತದೆ. ಕೇಂದ್ರವನ್ನು ಗುರುತಿಸಿದರೂ ಅಲ್ಲಿ ಹೋದಾಗ ಅದು ಮುಚ್ಚಿರುತ್ತದೆ ಅಥವಾ ಅಲ್ಲಿ ಹೋದಾಗ ಹೆಚ್ಚಿನ ಶುಲ್ಕ ವಿಧಿಸಲಾಗುತ್ತದೆ ಎಂಬ ಹಲವು ದೂರಗಳು ಬಂದಿವೆ. ಹಾಗಾಗಿ ಖಾಸಗಿ ನೊಂದಣಿ ಸಂಸ್ಥೆಗಳ ನಿಯಮಾನುಸಾರವೇ ಕಾರ್ಯನಿರ್ವಹಿಸಲು ಸರ್ಕಾರದ ಕಟ್ಟು ನಿಟ್ಟಿನ ನಿಗಾ ಅಗತ್ಯ ಎಂಬ ಕಾರಣದಿಂದ ಸ್ಥಳಾಂತರಕ್ಕೆ ಸೂಚಿಸಲಾಗಿದೆ ಎಂದು ಶ್ರೀ ಭೂಷಣ್ ಹೇಳಿದರು. ಸರ್ಕಾರದಿಂದ ದೊರೆಯುವ ಸೇವೆ ಮತ್ತು ಸೌಲಭ್ಯಗಳು, ಸಹಾಯಧನಗಳು, ಪ್ಯಾನ್, ಜಿಎಸ್‌ಟಿ ನೊಂದಣಿ, ಬ್ಯಾಂಕ್‌ಖಾತೆ, ಪಾಸ್‌ಪೋರ್ಟ್, ಆಸ್ತಿ ನೊಂದಣಿಗಳೆಲ್ಲದಕ್ಕೂ ಈಗ ಆಧಾರ್ ಸಂಖ್ಯೆ ಹೊಂದಿರುವುದು ಕಡ್ಡಾಯವಾಗಿದೆ. ಹಾಗಾಗಿ ಆಧಾರ್ ನೊಂದಣಿ ಮತ್ತು ಪರಿಷ್ಕರಣೆಗೆ ಸುರಕ್ಷಿತ ಮತ್ತು ಜನರಿಗೆ ಅನುಕೂಲಕರ ಕೇಂದ್ರಗಳನ್ನು ಸರ್ಕಾರ ಸ್ಥಾಪಿಸುವುದು ಅನಿವಾರ್ಯವಾಗಿದೆ. ರಾಜ್ಯ ಸರ್ಕಾರಗಳು ತಮ್ಮದೇ ಕಟ್ಟಡದಲ್ಲಿ ತಮ್ಮದೇ ಸಿಬ್ಬಂದಿ ಹೊಂದಿರುವ ಕೇಂದ್ರಗಳನ್ನು ಆರಂಭಿಸಬಹುದು. ಇಲ್ಲವೇ, ಯುಐಡಿಎಐಯಲ್ಲಿ ನೊಂದಣಿ ಮಾಡಿಕೊಂಡಿರುವ ಖಾಸಗಿ ಸಂಸ್ಥೆಗಳನ್ನೂ ನಿಯೋಜಿಸಬಹುದು. ಆದರೆ ಖಾಸಗಿ ಸಂಸ್ಥೆಗಳ ವಿಶ್ವಾಸಾರ್ಹತೆ ಪರಿಶೀಲಿಸಬೇಕು ಮತ್ತು ಈ ಕೇಂದ್ರಗಳು ಸರ್ಕಾರದ ಕಟ್ಟಡದಲ್ಲಿಯೇ ಕಾರ್ಯನಿರ್ವಹಿಸಲು ವ್ಯವಸ್ಥೆ ಮಾಡಬೇಕು ಎಂದು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಯುಐಡಿಎಐ ಜೂನ್ 28 ರಂದು ಬರೆದ ಪತ್ರದಲ್ಲಿ ತಿಳಿಸಿದೆ. ಸರ್ಕಾರದ ನಿಗಾ ಇರುವ ಕಟ್ಟಡದಲ್ಲಿ ಕಚೇರಿ ತೆರೆಯಲು ಖಾಸಗಿ ಸಂಸ್ಥೆಗಳಿಗೆ ಅವಕಾಶ ಸಿಗದಿದ್ದರೆ ಅಂತಹ ಕೇಂದ್ರಗಳನ್ನು ಮುಚ್ಚಲೇಬೇಕು ಎಂದು ಯುಐಡಿಎಐ ಹೇಳಿದೆ.

## ನಿಮಗಿದು ತಿಳಿದಿದೆಯೇ?

ಭೂಮಿಯ ಮೇಲ್ಮೈ ಗುಣಲಕ್ಷಣಗಳ ಬಗ್ಗೆ ಮಾಹಿತಿ, ವಿವರ ನೀಡುವ ವಿಷಯಕ್ಕೆ – ಟೋಪೊಗ್ರಫಿ ಮೇಲ್ಮೈ ಪರಿಸರ ಅಧ್ಯಯನ ಎಂದು ಕರೆಯುತ್ತಾರೆ. ಇಲ್ಲಿ ಭೂಮಿಯ ಮೇಲಿರುವ ವಾತಾವರಣ ಅಂದರೆ, ಪರ್ವತ, ಶಿಖರ, ಗುಡ್ಡ, ಬೆಟ್ಟ, ಕಣಿವೆ, ನದಿ, ಕೆರೆ, ಸಮುದ್ರ, ಸಾಗರ ಮೊದಲಾದ ನೈಸರ್ಗಿಕ ಸಂಗತಿಗಳಲ್ಲದೆ, ರಸ್ತೆ, ಸೇತುವೆ, ಜಲಾಶಯ, ರೈಲು ಮಾರ್ಗ, ಅಲ್ಲದೆ, ನಗರ ನಿರ್ಮಿತಿ ಸೇರಿದಂತೆ ಎಲ್ಲಾ ಕೃತಕ ನಿರ್ಮಾಣಗಳನ್ನು ಪರಿಗಣಿಸಲಾಗುತ್ತದೆ. ಈ ಭೌತಿಕ ಸಂಗತಿಗಳು ಯಾವ ಯಾವ ಅಕ್ಷಾಂಶ, ರೇಖಾಂಶಗಳಲ್ಲಿ ಬರುತ್ತವೆ ಎಂಬುದನ್ನು ಮೇಲ್ಮೈ ಪರಿಸರ ಅಧ್ಯಯನದಲ್ಲಿ ನಿಖರವಾಗಿ ಕಂಡುಹಿಡಿಯಲಾಗುತ್ತದೆ. ಒಂದು ರೀತಿಯಲ್ಲಿ ಇದು ಒಂದು ಅಂಶವನ್ನು ಮೂಲವಾಗಿಟ್ಟುಕೊಂಡು, ಇನ್ನೊಂದು ಅಂಶಕ್ಕೆ ಸಂಬಂಧ ಕಲ್ಪಿಸುವ, ಆ ಮೂಲಕ ಭೌತಿಕ ಸ್ಥಿತಿ ಅರಿಯುವ ಸಮೀಕ್ಷಾ ಜ್ಞಾನವಾಗಿದೆ. ಸಿವಿಲ್ ಇಂಜಿನಿಯರ್‌ಗಳು ಪರಿಸರ ಪ್ರಬಂಧಕರು, ನಗರ ಯೋಜಕರು, ತುರ್ತು ಸೇವಾ ಏಜೆನ್ಸಿಗಳು ಮತ್ತು ಇತಿಹಾಸಜ್ಞರು ಪರಿಸರ ನಕ್ಷೆಗಳನ್ನು ಬಳಸುತ್ತಾರೆ. ಈ ನಕ್ಷೆಗಳು ಮೂರು ಆಯಾಮದ ಮಾಹಿತಿಗಳನ್ನು ಎರಡು ಆಯಾಮಗಳಲ್ಲಿ ನೀಡುತ್ತವೆ. ಭೌಗೋಳಿಕ ರೇಖೆ, ಬಣ್ಣ, ಸಂಜ್ಞೆಗಳ ಮೂಲಕ, ಭೂ ಮೈಲ್ಮೈಯ ಚಿತ್ರಣವನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗುತ್ತಿದೆ.

ಭೂ ಮೇಲ್ಮೈ ಅಧ್ಯಯನದಲ್ಲಿ ನೇರ ಸಮೀಕ್ಷೆಯನ್ನು ಪ್ರಮುಖವಾಗಿ ಬಳಸಿಕೊಳ್ಳಲಾಗುತ್ತದೆ. ಇದರಲ್ಲಿ ದೂರ ಹಾಗೂ ಕೋನಗಳನ್ನು ಅಳೆಯಲು ಥಿಯೊಡಿಲೈಟ್ಸ್ ಸಾಧನಗಳನ್ನು ಬಳಸಲಾಗುತ್ತದೆ. ಇದರ ಮೂಲಕ ಮೇಲ್ಮೈ ನಕ್ಷೆ ಮತ್ತು ಅಂಕೀಕೃತ ಛಾಯಾ ವ್ಯವಸ್ಥೆ ರೂಪಿಸಲು ಅಗತ್ಯವಾದ ಮೂಲ ಮಾಹಿತಿ ಸಂಗ್ರಹಿಸಲಾಗುತ್ತದೆ. ಈ ಮಾಹಿತಿಯನ್ನು ವೈಮಾನಿಕವಾಗಿ ತೆಗೆಯಲಾಗುವ ಛಾಯಾಚಿತ್ರ ಹಾಗೂ ಉಪಗ್ರಹ ಚಿತ್ರಗಳನ್ನು ಮೇಳೈಸಿ ಒಂದು ನಿರ್ದಿಷ್ಟ ಮಾಹಿತಿಗೆ ಬರಲಾಗುತ್ತದೆ. ಸಮುದ್ರ ಸಾಗರಗಳ ನಕ್ಷೆಗಳನ್ನು ಜಲಾಂತರ್ಗಾಮಿ ಸ್ಪೀಕರ್‌ಗಳ ಮೂಲಕ, ಸೋನಾರ್ ಮ್ಯಾಪಿಂಗ್ ಮೂಲಕ ನಿರ್ಧರಿಸಲಾಗುತ್ತದೆ. ಸಮುದ್ರದ ತಳ, ಹವಳದ ದಿಬ್ಬ ಮೊದಲಾದವುಗಳಿಂದ ಶಬ್ದ ತರಂಗ ಪ್ರತಿಫಲಿಸುವ ಗುಣಲಕ್ಷಣಗಳನ್ನು ಇಲ್ಲಿ ಬಳಸಲಾಗುತ್ತದೆ.

ಈಗ ಅತ್ಯಾಧುನಿಕವಾದ ಜಾಗತಿಕ ಸ್ಥಾನ ವ್ಯವಸ್ಥೆ – ಜಿಪಿಎಸ್ ತಂತ್ರಜ್ಞಾನ ಹಾಗೂ ಯಾನ ನಿರ್ದೇಶಿತ ಉಪಗ್ರಹಗಳ ನೆರವಿನಿಂದ, ಅತಿದೂರದ, ತಲುಪಲು ಅಸಾಧ್ಯವಾದ ಸ್ಥಾನದ ಬಗ್ಗೆ ಕೂಡ, ಅತ್ಯಂತ ನಿಖರವಾದ ಮಾಹಿತಿ ಕಲೆ ಹಾಕಲು ಸಾಧ್ಯವಾಗುತ್ತಿದೆ. ವೈಮಾನಿಕ / ಉಪಗ್ರಹದ ಚಿತ್ರ ಆಧರಿಸಿ ಗಣಕ ತಂತ್ರಾಂಶ ಬಳಸಿ ಮೂರು ಆಯಾಮದ ಚಿತ್ರ ರೂಪಿಸಲಾಗುತ್ತದೆ. ವೈಮಾನಿಕ ಚಿತ್ರ ಹಾಗೂ ಫೋಟೊ ಗ್ರಾಮಿಟಿ ಮೂಲಕ ನಿಗದಿತ ಸ್ಥಾನ, ಖನಿಜ ಸ್ಥಾವರಗಳನ್ನು ಕಂಡು ಹಿಡಿಯಲಾಗುತ್ತದೆ. ಇತ್ತೀಚೆಗೆ ಹಾರಿಬಿಡಲಾದ ಉಪಗ್ರಹಗಳ ಸೂಕ್ಷ್ಮಗ್ರಾಹಕಗಳು ಚಿತ್ರ ಮಾಹಿತಿ ಕಳಿಸಲಾರಂಭಿಸಿದರೆ, ಈ ಕ್ಷೇತ್ರದಲ್ಲಿ ಇನ್ನಷ್ಟು ನಿಖರತೆ ಸುಧಾರಣೆಯಾಗಲಿದೆ. ❑


## Subscription Coupon

**[For New membership /Renewal/Change of Address]**

I want to subscribe to :

Yojana / Kurukshetra / Ajkal / : 1 yr. Rs.230/-; 2 yrs, Rs.430/- ; 3 yrs, Rs.610/-

Bal Bharati : 1 yr. Rs.160/-; 2 yrs, Rs.300/- ; 3 yrs, Rs.420/-

**(Circle the magazine of your choice and the period of subscription)**

DD/PO/MO No.______________________________________ date _______________

Name (in block letters) : ______________________________________

Subscriber's profile : Student / Academician / Institution / Others

Address : ______________________________________

______________________________________

PIN : ______________________________

The amount may kindly be sent in the form of D.D. It should be drawn in favour of ADG (I/C), Publications Division, Min. of I & B, GOI and payable at New Delhi. The D.D. along with duly filled cupon may kindly be sent to The Business Manager (Journals), Publications Division, Ministry of Information & Broadcasting, Room No. 48-53, Soochna Bhawan, CGO Complex, Lodhi Road, New Delhi * 110 003.

Please allow us 4 to 6 weeks for the dispatch of the first issue.

P.S. : For Renewal / change in address, please quote your subscription number

**To Subscribe Online**

*Log on to*

**http://publicationsdivision.nic.in/**,
*in collaboration with* **bharatkosh.gov.in**